● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಸ್ಪರ್ಧಾತ್ಮಕ ಪರೀಕ್ಷೆಗೆ ಓದಿನ ತಯಾರಿಯ ಜೊತೆಗೆ ಪರೀಕ್ಷೆ ಎದುರಿಸುವ ಬಗ್ಗೆ ಪ್ರತ್ಯಕ್ಷ ಅನುಭವವೂ ಅಗತ್ಯ. ಈ ಅನುಭವವನ್ನು ಅಣಕು ಪರೀಕ್ಷೆ ಎದುರಿಸುವ ಮೂಲಕ ಪಡೆಯಬಹುದು.



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,685 ▲	17,166 ▲	₹49,250 (ಬೆಂಗಳೂರು)	₹63,700 (ಬೆಂಗಳೂರು)	74.91 ▲

ಹಿಂದುಳಿದವರ ಹಾಸ್ಟೆಲ್ ಟೆಂಡರ್ ಜಾಲ: ಏಲಕ್ಕಿ ಕೆ.ಜಿಗೆ ಕೇವಲ ₹ 20!

● ರಾಜೇಶ್ ರೈ ಚಟ್ಲ

ಬೆಂಗಳೂರು: ಒಂದು ಕಿಲೋ ಗೋಡಂಬಿಗೆ ₹ 50, ಏಲಕ್ಕಿಗೆ ಕೇವಲ ₹ 20. ಕಾಳುಮೆಣಸು, ಸಾಸಿವೆ, ಜೀರಿಗೆ, ಅರಿಸಿನಪುಡಿಗೆ ತಲಾ ₹ 30, ಒಣ ದ್ರಾಕ್ಷಿಗೆ ₹ 40, ಗಸಗಸೆಗೆ ₹ 30, ಮೆಂತ್ಯೆಗೆ ₹ 10!

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧೀನದ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು, ಆಶ್ರಮ ಶಾಲೆಗಳು ಹಾಗೂ ವಸತಿ ಶಾಲೆಗಳಿಗೆ ಆಹಾರ ಸಾಮಗ್ರಿಗಳನ್ನು ಪೂರೈಸುವ ಟೆಂಡರ್ ಪಡೆಯಲು (ಎಲ್–1) ಗುತ್ತಿಗೆದಾರರೊಬ್ಬರು ಹಣಕಾಸು ಬಿಡ್‌ನಲ್ಲಿ ನಮೂದಿಸಿದ್ದ ದರವಿದು. ಅಚ್ಚರಿಯೆಂದರೆ, ಈ ದರ ಪಟ್ಟಿಯು ಟೆಂಡರ್ ಗಿಟ್ಟಿಸಿ, 'ಕಮಿಷನ್' ಪಡೆಯಲಷ್ಟೇ ಸೀಮಿತ.

ಗುತ್ತಿಗೆ ಪಡೆದಾತ ಆಹಾರ ಸಾಮಗ್ರಿ ಪೂರೈಸುವುದಿಲ್ಲ. ಮೇಲ್ವಿಚಾರಕರೇ ಆಹಾರ ಸಾಮಗ್ರಿಗಳನ್ನು ಮಾರುಕಟ್ಟೆ ದರದಲ್ಲಿ ಖರೀದಿಸಿ ವಿದ್ಯಾರ್ಥಿನಿಲಯ ನಡೆಸುತ್ತಾರೆ. ಟೆಂಡರ್ ದರ ಪಟ್ಟಿಯಲ್ಲಿ 'ಮಾರುಕಟ್ಟೆ ದರ' ನಮೂದಿಸಿದ್ದ ವಸ್ತುಗಳನ್ನು ಅಗತ್ಯಕ್ಕಿಂತ 3–4 ಪಟ್ಟು ಹೆಚ್ಚು ಪ್ರಮಾಣದಲ್ಲಿ ಖರೀದಿಗೆ ಇಂಡೆಂಟ್ ಹಾಕಿಸಿಕೊಂಡು ಬಿಲ್ ಮೊತ್ತ ಮರುಪಾವತಿಸಿಕೊಳ್ಳುವುದಷ್ಟೇ ಗುತ್ತಿಗೆದಾರರನ ಕೆಲಸ. ಒಟ್ಟು ಬಿಲ್‌ನಲ್ಲಿ ತನ್ನ ಕಮಿಷನ್ (ಶೇ 20) ಮತ್ತು ಮೇಲಧಿಕಾರಿಗಳ ಕಮಿಷನ್ ಕಡಿತ ಮಾಡಿ, ಉಳಿಕೆ ಹಣವನ್ನು ಮೇಲ್ವಿಚಾರಕರಿಗೆ ಹಿಂದಿರುಗಿಸುತ್ತಾನೆ. ಆಹಾರ ಸಾಮಗ್ರಿ ಪೂರೈಸದೇ, 'ಕಮಿಷನ್' ನುಂಗುವ ವ್ಯವಹಾರವಿದು' ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ವಿವರಿಸಿದರು.

> ಆಹಾರ ಸಾಮಗ್ರಿ ಖರೀದಿಗೆ ಜಿಲ್ಲಾಮಟ್ಟದ ಸಮಿತಿ ಅನು ಮೋದನೆ ನೀಡುತ್ತದೆ. ಇಷ್ಟೊಂದು ಕನಿಷ್ಠ ದರಕ್ಕೆ ಟೆಂಡರ್ ಅಂಗೀಕಾರ ಆಗಿರುವುದನ್ನು ಗಂಭೀರವಾಗಿ ಪರಿಗಣಿಸುತ್ತೇನೆ
> **ರಶ್ಮಿ ಮಹೇಶ್,** ಪ್ರಧಾನ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಇಷ್ಟೊಂದು ಕಡಿಮೆ ದರ ನಮೂದಿಸಿ ಲಾಭ ಮಾಡಿಕೊಳ್ಳಲು ಹೇಗೆ ಸಾಧ್ಯ?. ಆದರೆ, ಟೆಂಡರ್ ಪಟ್ಟಿಯಲ್ಲಿ ಅತಿ ಕಡಿಮೆ ದರ ನಮೂದಿಸಿದ ಸಾಮಗ್ರಿಗಳನ್ನು ಗುತ್ತಿಗೆದಾರರಿಗೆ ಕಳುಹಿಸುವ ಇಂಡೆಂಟ್‌ನಲ್ಲಿ ಮೇಲ್ವಿಚಾರಕರು ನಮೂದಿಸುವುದೇ ಇಲ್ಲ. ಮಾರುಕಟ್ಟೆ ದರಕ್ಕೆ ಹತ್ತಿರವಾಗಿ ಟೆಂಡರ್‌ನಲ್ಲಿ ನಮೂದಿಸಿರುವ ಆಹಾರ ಪದಾರ್ಥಗಳನ್ನು ಅತೀ ಹೆಚ್ಚು ಪ್ರಮಾಣದಲ್ಲಿ ಬೇಡಿಕೆ ಪಟ್ಟಿಯಲ್ಲಿ ಹಾಕಿ, ಇಂಡೆಂಟ್ ಕಳುಹಿಸುತ್ತಾರೆ. ಉದಾಹರಣೆಗೆ, ಏಲಕ್ಕಿ ಕೆ.ಜಿ.ಗೆ ₹ 20 ನಮೂದಿಸಿದರೂ ಅದನ್ನು ಇಂಡೆಂಟ್‌ನಲ್ಲಿ ತೋರಿಸುವುದೇ ಇಲ್ಲ. ತೊಗರಿ ಬೇಳೆ ಕೆ.ಜಿ.ಗೆ ₹ 80ರಂತೆ ನಮೂದಿಸಿದ್ದು, ಅದನ್ನು ಜಾಸ್ತಿ ಪ್ರಮಾಣದಲ್ಲಿ ಖರೀದಿಸಿದಂತೆ ಇಂಡೆಂಟ್ ಪಡೆದುಕೊಂಡು ಗುತ್ತಿಗೆದಾರರು ಲಾಭ ಮಾಡಿಕೊಳ್ಳುತ್ತಾರೆ!

ಪ್ರಜಾವಾಣಿ ವಿಶೇಷ

ತುಮಕೂರು ಜಿಲ್ಲೆಯ ಎಲ್ಲ 10 ತಾಲ್ಲೂಕುಗಳಿಗೆ 101 ಆಹಾರ ಸಾಮಗ್ರಿ ಪೂರೈಕೆಯ ಟೆಂಡರ್ ಪಡೆದ ಗುತ್ತಿಗೆದಾರ ನಮೂದಿಸಿದ ಈ ದರ ಪಟ್ಟಿ, ಸರಬರಾಜು ಆದೇಶದ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಜಿಲ್ಲಾಧಿಕಾರಿ ಅಧ್ಯಕ್ಷತೆಯ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕರನ್ನೂ ಒಳಗೊಂಡ ಜಿಲ್ಲಾಮಟ್ಟದ ಆಹಾರ ಪದಾರ್ಥಗಳ ಖರೀದಿ ಸಮಿತಿ ಆಹಾರ ಪೂರೈಕೆಯ ದರ ಪಟ್ಟಿಗೆ ಅನುಮೋದನೆ ನೀಡಿದೆ. ವಿವಿಧ ಜಿಲ್ಲೆಗಳಲ್ಲೂ ಇದೇ ರೀತಿ ನಡೆದಿದೆ ಎಂದು ಅಧಿಕಾರಿ ಹೇಳಿದರು.

ಸರ್ಕಾರ ಮೆಟ್ರಿಕ್ ಪೂರ್ವ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ₹ 1,500, ಮೆಟ್ರಿಕ್ ನಂತರ ಪ್ರತಿ ವಿದ್ಯಾರ್ಥಿಗೆ ₹ 1,600 ವೆಚ್ಚ ಮಾಡುತ್ತಿದೆ. 2020–21ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯಲ್ಲಿ 10 ತಾಲ್ಲೂಕುಗಳಿಗೆ ಒಂಬತ್ತು ಟೆಂಡರ್‌ದಾರರು ಬಿಡ್‌ನಲ್ಲಿ ಭಾಗವಹಿಸಿದ್ದರು. ಅಗತ್ಯ ದಾಖಲೆ ಇರದ ಇಬ್ಬರ ಬಿಡ್ ತಿರಸ್ಕೃತವಾಗಿತ್ತು. ಆರ್ಥಿಕ ಬಿಡ್‌ನಲ್ಲಿ ಕಡಿಮೆ ದರ ನಮೂದಿಸಿದ್ದ ಗುತ್ತಿಗೆದಾರನಿಗೆ ಕಾರ್ಯಾದೇಶ ನೀಡಲಾಗಿದೆ.

ಒಂದೇ ತಿಂಗಳಲ್ಲಿ ₹366 ಹೆಚ್ಚಳ: ಗೃಹ ಬಳಕೆಯ ಸಿಲಿಂಡರ್ ದರ ಹೆಚ್ಚಳ ಇಲ್ಲ

ವಾಣಿಜ್ಯ ಎಲ್‌ಪಿಜಿ ದರ ಏರಿಕೆ ಉರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಾದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದುಸ್ಥಾನ್ ಪೆಟ್ರೋಲಿಯಂ ವಾಣಿಜ್ಯ ಬಳಕೆಯ 19 ಕೆ.ಜಿಯ ಅಡುಗೆ ಅನಿಲ (ಎಲ್‌ಪಿಜಿ) ಸಿಲಿಂಡರ್ ದರದಲ್ಲಿ ₹100 ಏರಿಕೆ ಮಾಡಿವೆ. ಡಿಸೆಂಬರ್ 1ರಿಂದ ಇದು ಜಾರಿಗೆ ಬಂದಿದೆ. ಕಳೆದ 30 ದಿನಗಳಲ್ಲಿ ಈ ಸಿಲಿಂಡರ್ ದರದಲ್ಲಿ ₹366 ಏರಿಕೆ ಆಗಿದೆ. ಈ ದರ ಏರಿಕೆಯಿಂದಾಗಿ ಹೋಟೆಲ್‌ನಲ್ಲಿ ಊಟ ಉಪಾಹಾರದ ದರದಲ್ಲಿ ಮತ್ತೆ ಏರಿಕೆ ಆಗುವ ಸಾಧ್ಯತೆ ಇದೆ.

19 ಕೆ.ಜಿ. ವಾಣಿಜ್ಯ ಬಳಕೆಯ ಸಿಲಿಂಡರ್ ದರವು ಬೆಂಗಳೂರಿನಲ್ಲಿ ₹2,164, ದೆಹಲಿಯಲ್ಲಿ ₹2,051, ಮುಂಬೈನಲ್ಲಿ ₹2.174.50, ಕೋಲ್ಕತ್ತದಲ್ಲಿ ₹2,234.50 ಆಗಿದೆ.



ಒಂದು ತಿಂಗಳ ಅವಧಿಯಲ್ಲಿ ಎರಡನೇ ಬಾರಿ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ಏರಿಕೆಯಾಗಿದೆ.

ನವೆಂಬರ್ 1ರಂದು ಸಿಲಿಂಡರ್ ದರದಲ್ಲಿ ₹266 ಏರಿಕೆ ಮಾಡಲಾಗಿತ್ತು.

ವಾಣಿಜ್ಯ ಬಳಕೆಯ ಸಿಲಿಂಡರ್‌ಗಳು ಮುಖ್ಯವಾಗಿ ಹೋಟೆಲ್‌ಗಳು ಮತ್ತು ಸಣ್ಣ ಚಹಾದಂಗಡಿಗಳಲ್ಲಿ ಬಳಕೆ ಆಗುತ್ತವೆ. ಪೆಟ್ರೋಲ್ ಮತ್ತು ಡೀಸೆಲ್ ದರಗಳಲ್ಲಿ ತೀವ್ರ ಏರಿಕೆ ಆಗಿರುವುದರ ನಡುವಲ್ಲಿಯೇ ಎಲ್‌ಪಿಜಿ ಸಿಲಿಂಡರ್‌ಗಳ ದರದಲ್ಲಿ ದೊಡ್ಡ ಏರಿಕೆ ಆಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಇದ್ದ ಎಕ್ಸೈಸ್ ಸುಂಕವನ್ನು ಕೇಂದ್ರ ಮತ್ತು ವ್ಯಾಟ್ ಅನ್ನು ರಾಜ್ಯವು ಇತ್ತೀಚೆಗೆ ಕಡಿತ ಮಾಡಿತ್ತು. ಹೀಗಾಗಿ ಪೆಟ್ರೋಲ್, ಡೀಸೆಲ್ ದರದಲ್ಲಿ ಅಲ್ಪ ಇಳಿಕೆ ಆಗಿದೆ.


ಎಲ್‌ಪಿಜಿ ಸಿಲಿಂಡರ್‌ಗಳ ದರವನ್ನು ಪ್ರತಿ ತಿಂಗಳೂ ಪರಿಷ್ಕರಿಸಲಾಗುತ್ತದೆ.

ಗೃಹ ಬಳಕೆಯ 14.2 ಕೆ.ಜಿ.ಯ ಎಲ್‌ಪಿಜಿ ಸಿಲಿಂಡರ್‌ಗಳ ದರದಲ್ಲಿ ಯಾವುದೇ ಏರಿಕೆ ಆಗಿಲ್ಲ. ಐದು ಕೆ.ಜಿಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿಯೂ ಯಾವುದೇ ವ್ಯತ್ಯಾಸ ಆಗಿಲ್ಲ.

ಜಿಎಸ್‌ಟಿ ವರಮಾನ ಹೆಚ್ಚಳ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ನವೆಂಬರ್‌ನಲ್ಲಿ ₹1.31 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಜಿಎಸ್‌ಟಿ ವ್ಯವಸ್ಥೆಯು 2017ರ ಏಪ್ರಿಲ್‌ನಲ್ಲಿ ಅನುಷ್ಠಾನಕ್ಕೆ ಬಂದ ನಂತರ ಸಂಗ್ರಹ ಆಗಿರುವ ಎರಡನೆಯ ಅತಿಹೆಚ್ಚಿನ ಮೊತ್ತ ಇದಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಬುಧವಾರ ತಿಳಿಸಿದೆ.

ಜಿಎಸ್‌ಟಿ ವರಮಾನ ಸಂಗ್ರಹವು ಜುಲೈ ತಿಂಗಳಿನಿಂದಲೂ ₹1 ಲಕ್ಷ ಕೋಟಿಗಿಂತಲೂ ಹೆಚ್ಚಿನ ಮಟ್ಟದಲ್ಲಿ ಇದೆ. ನವೆಂಬರ್‌ನಲ್ಲಿ ಆಗಿರುವ ಜಿಎಸ್‌ಟಿ ವರಮಾನ ಸಂಗ್ರಹವು ಕಳೆದ ವರ್ಷದ ನವೆಂಬರ್‌ಗೆ ಹೋಲಿಸಿದರೆ ಶೇ 25ರಷ್ಟು ಏರಿಕೆ ಆಗಿದೆ. 2019ರ ನವೆಂಬರ್‌ಗೆ ಹೋಲಿಸಿದರೆ ಶೇ 27ರಷ್ಟು ಹೆಚ್ಚಾಗಿದೆ.



ದರ ಇಳಿಸುವಂತೆ ಪ್ರಧಾನಿಗೆ ಪತ್ರ

ವಾಣಿಜ್ಯ ಸಿಲಿಂಡರ್‌ಗಳ ಬೆಲೆ ಏರಿಕೆ ಮತ್ತೆ ಮಾಡಬಾರದಿತ್ತು. ಈಗಿನ ದರವೇ ಹೋಟೆಲ್ ಉದ್ಯಮಕ್ಕೆ ಹೊರೆಯಾಗಿದೆ. ಹೋಟೆಲ್‌ಗಳ ಉಳಿವಿಗಾಗಿ ಇತ್ತೀಚೆಗಷ್ಟೇ ಆಹಾರಗಳ ದರಗಳನ್ನು ಅನಿವಾರ್ಯವಾಗಿ ಏರಿಸಲಾಗಿದೆ. ಅಗತ್ಯ ವಸ್ತುಗಳು ಹಾಗೂ ಪೆಟ್ರೋಲ್, ಡೀಸೆಲ್ ದರಗಳ ಏರಿಕೆಯಿಂದ ಜನಸಾಮಾನ್ಯರು ಕಂಗಾಲಾಗಿದ್ದಾರೆ. ಹಾಗಾಗಿ, ಮತ್ತೆ ಆಹಾರ ದರಗಳನ್ನು ಏರಿಸುವ ಉದ್ದೇಶವಿಲ್ಲ. ಸಿಲಿಂಡರ್ ದರ ಇಳಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು. ಸಾಮಾನ್ಯವಾಗಿ ಈ ಅವಧಿಯಲ್ಲಿ ಸಿಲಿಂಡರ್ ದರ ಏರುವುದರಿಂದ ಒಂದು ತಿಂಗಳವರೆಗೆ ಕಾಯುತ್ತೇವೆ. ಅಷ್ಟರಲ್ಲಿ ದರ ಇಳಿದರೆ ಒಳ್ಳೆಯದು. ಒಂದು ವೇಳೆ ದರ ಏರಿಕೆ ಇದೇ ರೀತಿ ಮುಂದುವರಿದರೆ, ನಮ್ಮ ಮುಂದಿನ ನಿರ್ಧಾರವೂ ಬದಲಾಗಲಿದೆ.

–**ಚಂದ್ರಶೇಖರ ಹೆಬ್ಬಾರ್,** ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ

ಅಂತರರಾಷ್ಟ್ರೀಯ ವಿಮಾನ ಸೇವೆ 15ರಿಂದ ಮರು ಆರಂಭ ಇಲ್ಲ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ವಿಮಾನ ಸೇವೆಯನ್ನು ಡಿ.15ರಿಂದ ಪುನರಾರಂಭ ಮಾಡದಿರಲು ಕೇಂದ್ರ ಸರ್ಕಾರ ಬುಧವಾರ ನಿರ್ಧರಿಸಿದೆ. ಡಿ. 15ರಿಂದ ಅಂತರರಾಷ್ಟ್ರೀಯ ವಿಮಾನ ಸೇವೆ ಪುನರಾರಂಭಿಸಲು ಕೆಲವೇ ದಿನಗಳ ಹಿಂದೆ ನಿರ್ಧರಿಸಲಾಗಿತ್ತು. ಆದರೆ, ಕೊರೊನಾ ವೈರಸ್‌ನ ಹೊಸ ರೂಪಾಂತರ ತಳಿ ಓಮೈಕ್ರಾನ್ ವಿವಿಧ ದೇಶಗಳಲ್ಲಿ ಪತ್ತೆಯಾಗಿ, ಅದರ ಬಗ್ಗೆ ಕಳವಳ ತೀವ್ರವಾದ ಕಾರಣದಿಂದ ವಿಮಾನ ಸೇವೆ ಪುನರಾರಂಭದ ನಿರ್ಧಾರವನ್ನು ಮರುಪರಿಶೀಲಿಸಲಾಗಿದೆ.

ಅಂತರರಾಷ್ಟ್ರೀಯ ವಿಮಾನ ಸೇವೆಯನ್ನು ಯಾವಾಗ ಆರಂಭಿಸಲಾಗುವುದು ಎಂಬುದನ್ನು ಮುಂದೆ ತಿಳಿಸಲಾಗುವುದು ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು ಹೇಳಿದೆ. ಕೊರೊನಾ ಸಾಂಕ್ರಾಮಿಕದ ಕಾರಣದಿಂದಾಗಿ 2020ರ ಮಾರ್ಚ್ 23ರಿಂದ ಅಂತರರಾಷ್ಟ್ರೀಯ ವಿಮಾನ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು.

ವಿಮಾನ ಸೇವೆಯನ್ನು ಪುನರಾರಂಭಿಸುವ ನಿರ್ಧಾರವನ್ನು ನ. 26ರಂದು ಪ್ರಕಟಿಸಲಾಗಿತ್ತು. ಆದರೆ, ಓಮೈಕ್ರಾನ್ ಪ್ರಕರಣಗಳು ದೃಢಪಟ್ಟ ಕಾರಣ, ಈ ನಿರ್ಧಾರವನ್ನು ಮರುಪರಿಶೀಲಿಸಲು ಪ್ರಧಾನಿ ನರೇಂದ್ರ ಮೋದಿ ಸೂಚಿಸಿದ್ದರು.

> ಕೋವಿಡ್ ಎರಡನೇ ಡೋಸ್ ಲಸಿಕೆ ಹಾಕಿಸಿಕೊಳ್ಳಲು ಸಾರ್ವಜನಿಕರ ಮನವೊಲಿಸಲಾಗುತ್ತದೆಯೇ ಹೊರತು ಕಠಿಣ ಕ್ರಮ ತೆಗೆದುಕೊಳ್ಳುವುದಿಲ್ಲ
> **ಡಾ.ಕೆ.ಸುಧಾಕರ್,** ಆರೋಗ್ಯ ಸಚಿವ

ಕೇಂದ್ರದೊಂದಿಗೆ ಇಂದು ಬೊಮ್ಮಾಯಿ ಚರ್ಚೆ

ಹುಬ್ಬಳ್ಳಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಗುರುವಾರ ದೆಹಲಿಗೆ ಭೇಟಿ ನೀಡಲಿದ್ದು, ಆರೋಗ್ಯ ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ಬೂಸ್ಟರ್ ಡೋಸ್ ನೀಡುವ ಬಗ್ಗೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರೊಂದಿಗೆ ಚರ್ಚಿಸಲಿದ್ದಾರೆ.

ಬುಧವಾರ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು 'ಬೂಸ್ಟರ್ ಡೋಸ್ ನೀಡುವ ಬಗ್ಗೆ ಕೇಂದ್ರದ ಅನಿಸಿಕೆ ಪಡೆಯಲಾಗುವುದು. ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ರಾಜ್ಯ ಕಾರ್ಯಪಡೆಯ ಸಭೆಯಲ್ಲಿ ಕನಿಷ್ಠ ಆರೋಗ್ಯ ಕಾರ್ಯಕರ್ತರಿಗೆ ಬೂಸ್ಟರ್ ಡೋಸ್ ನೀಡಬಹುದು ಎನ್ನುವ ಅಭಿಪ್ರಾಯ ತಜ್ಞರಿಂದ ವ್ಯಕ್ತವಾಗಿದೆ. ಇದರ ಬಗ್ಗೆ ಕೇಂದ್ರ ಸಚಿವರ ಜೊತೆ ಚರ್ಚಿಸುವೆ' ಎಂದು ತಿಳಿಸಿದರು.

ಪ್ರಯಾಣಿಕರ ಮಾಹಿತಿ

ದೇವನಹಳ್ಳಿ: 'ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಿದೇಶಗಳಿಂದ ಬರುವ ಎಲ್ಲಾ ಪ್ರಯಾಣಿಕರ ಸಂಪೂರ್ಣ ಮಾಹಿತಿಯನ್ನು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿ, ಜಿಲ್ಲಾ ಆರೋಗ್ಯ ಅಧಿಕಾರಿಗಳಿಗೆ ಮಾಹಿತಿ ನೀಡಲಾಗುವುದು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಕೆ. ಶ್ರೀನಿವಾಸ್ ತಿಳಿಸಿದ್ದಾರೆ.

ಒಳ ಪುಟಗಳು

ಯುಪಿಎ ಎಲ್ಲಿದೆ: ಮಮತಾ ಪ್ರಶ್ನೆ

ಮುಖ್ಯಾಂಶಗಳು
- ಶರದ್ ಪವಾರ್ ಭೇಟಿಯ ಬಳಿಕ ಮಮತಾ ಹೇಳಿಕೆ
- ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರ

ಮುಂಬೈ (ಪಿಟಿಐ): 'ಯುಪಿಎ ಎಲ್ಲಿದೆ? ಯುಪಿಎ ಎಂಬುದು ಈಗ ಇಲ್ಲ. ಎಲ್ಲಾ ಪ್ರಾದೇಶಿಕ ಪಕ್ಷಗಳು ಒಟ್ಟಾಗುವ ಮೂಲಕ ಮಾತ್ರ ಬಿಜೆಪಿಯನ್ನು ಸೋಲಿಸಬಹುದು' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮತ್ತು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಇಲ್ಲಿ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರನ್ನು ಭೇಟಿ ಮಾಡಿದ ಮಮತಾ ಅವರು ಮಾಧ್ಯಮ ಪ್ರತಿನಿಧಿಗಳಿಗೆ ಹೇಳಿದ ಮಾತಿದು. 'ಶರದ್ ಪವಾರ್ ಅವರು ಯುಪಿಎ ಮುಖ್ಯಸ್ಥರಾಗಬೇಕೇ' ಎಂದು ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಮಮತಾ ಅವರು ನೀಡಿದ ಉತ್ತರವಿದು.

ಕಾಂಗ್ರೆಸ್ ನೇತೃತ್ವದಲ್ಲಿ ವಿರೋಧ ಪಕ್ಷಗಳು ಒಟ್ಟಾಗುವ ಪ್ರಸ್ತಾವವನ್ನು ಈ ಮೂಲಕ ಮಮತಾ ತಿರಸ್ಕರಿಸಿದ್ದಾರೆ. ಮಮತಾ ಅವರು, ಕಾಂಗ್ರೆಸ್ ಇಲ್ಲದ ವಿರೋಧ ಪಕ್ಷಗಳ ಒಕ್ಕೂಟ ರಚನೆಗೆ ಆಸಕ್ತಿ ತೋರಿದ್ದಾರೆ. ಆದರೆ ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ವಿಪಕ್ಷಗಳ ಒಕ್ಕೂಟದಿಂದ ಯಾವ ಪಕ್ಷವನ್ನೂ ಕೈಬಿಡುವ ಪ್ರಶ್ನೆ ಇಲ್ಲ ಎಂದಿದ್ದಾರೆ.

'ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ, ಅದರ ವಿರುದ್ಧ ಕಾಂಗ್ರೆಸ್ ಹೋರಾಡುತ್ತಿಲ್ಲ. ಬಿಜೆಪಿ ವಿರುದ್ಧ ಹೋರಾಡುತ್ತಿರುವವರೆಲ್ಲರೂ ಒಗ್ಗಟ್ಟಾಗಬೇಕು. ಒಬ್ಬರು ಹೋರಾಡದೇ ಇದ್ದಾಗ, ಬೇರೆಯವರು ಏನು ಮಾಡಲು ಸಾಧ್ಯ' ಎಂದು ಮಮತಾ ಅವರು ಹೇಳಿದ್ದಾರೆ.

'ಬಿಜೆಪಿಗೆ ನೆಲೆ ಇಲ್ಲದ ರಾಜ್ಯಗಳಲ್ಲಿ ಅದು ನೆಲೆ ಕಂಡುಕೊಳ್ಳಲು ನಾವು ಬಿಡುವುದಿಲ್ಲ. ಅದಕ್ಕಾಗಿ ಬೀದಿಗಿಳಿದು ಹೋರಾಡಬೇಕು. ಕಾಂಗ್ರೆಸ್ ಆ ಕೆಲಸ ಮಾಡುತ್ತಿಲ್ಲ. ಸದಾ ವಿದೇಶದಲ್ಲಿ ಇರುವುದರಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ' ಎಂದು ಅವರು ರಾಹುಲ್ ಗಾಂಧಿ ಅವರನ್ನು ಪರೋಕ್ಷವಾಗಿ ಟೀಕಿಸಿದ್ದಾರೆ.

'ದೇಶದ ಸ್ಥಿತಿಯ ಬಗ್ಗೆ ಚರ್ಚಿಸಿದೆವು. ಬಿಜೆಪಿಗೆ ಪ್ರಬಲ ಪರ್ಯಾಯವನ್ನು ಸೃಷ್ಟಿಸಲು ಎಲ್ಲಾ ಸಮಾನ ಮನಸ್ಕ ಪಕ್ಷಗಳು ಒಟ್ಟಾಗಬೇಕು. ಬಿಜೆಪಿಯನ್ನು ವಿರೋಧಿಸುವ ಎಲ್ಲರಿಗೂ ಸ್ವಾಗತ. ಆದರೆ ಈಗ ಒಟ್ಟಾಗಿರುವ ಪಕ್ಷಗಳಲ್ಲಿ ಯಾರನ್ನೂ ಕೈಬಿಡುವ ಪ್ರಶ್ನೆಯೇ ಇಲ್ಲ' ಎಂದು ಶರದ್ ಪವಾರ್ ಅವರು ಹೇಳಿದ್ದಾರೆ.

> 'ಸರ್ಕಾರದ ವಿರುದ್ಧ ವಿರೋಧ ಪಕ್ಷಗಳ ಹೋರಾಟದ ದಿಕ್ಕನ್ನು ನಿರ್ಧರಿಸಲು ತಜ್ಞರ ಸಮಿತಿ ರಚಿಸೋಣ ಎಂದು ಕಾಂಗ್ರೆಸ್‌ಗೆ ಹೇಳಿದ್ದೆ. ಆ ಕೆಲಸವಾಗಲೇ ಇಲ್ಲ
> **ಮಮತಾ ಬ್ಯಾನರ್ಜಿ,** ಪಶ್ಚಿಮ ಬಂಗಾಳ ಮುಖ್ಯಮಂತ್ರಿ



ತಿರುಮಲದಲ್ಲಿ ಭೂ ಕುಸಿತ

ತಿರುಮಲದ ವೆಂಕಟೇಶ್ವರ ದೇಗುಲಕ್ಕೆ ಹೋಗುವ ಎರಡನೇ ಘಾಟ್ ರಸ್ತೆಯಲ್ಲಿ ಭೂಕುಸಿತ ಸಂಭವಿಸಿದ್ದು, ಬೃಹತ್ ಬಂಡೆಗಳೂ ಉರುಳಿ ಬೀಳುತ್ತಿವೆ. ಹೀಗಾಗಿ ಈ ರಸ್ತೆಯನ್ನು ಮುಚ್ಚಿ, ಹಳೇ ಘಾಟ್ ರಸ್ತೆಯನ್ನು ತೆರೆಯಲಾಗಿದೆ. ಬುಧವಾರ ಬೆಳಿಗ್ಗೆ ಬಂಡೆಯೊಂದು 20 ಜನರಿದ್ದ ಬಸ್ ಮೇಲೆ ಬೀಳುವುದು ಸ್ವಲ್ಪದರಲ್ಲೇ ತಪ್ಪಿಹೋಯಿತು. ಟಿಟಿಡಿ ಮಂಡಳಿಯ ಅಧ್ಯಕ್ಷ ವೈ.ವಿ.ಸುಬ್ಬಾ ರೆಡ್ಡಿ ಸ್ಥಳ ಪರಿಶೀಲನೆ ನಡೆಸಿದರು –ಪಿಟಿಐ ಚಿತ್ರ

ಡಿ.16,17ರಂದು ಬ್ಯಾಂಕ್ ಮುಷ್ಕರಕ್ಕೆ ಕರೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಎರಡು ಬ್ಯಾಂಕ್‌ಗಳನ್ನು ಖಾಸಗೀಕರಣಗೊಳಿಸುವ ಕೇಂದ್ರ ಸರ್ಕಾರದ ಪ್ರಸ್ತಾವವನ್ನು ವಿರೋಧಿಸಿ ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆಯು (ಯುಎಫ್‌ಬಿಯು) ಡಿ. 16 ಮತ್ತು 17ರಂದು ದೇಶದಾದ್ಯಂತ ಮುಷ್ಕರಕ್ಕೆ ಕರೆ ನೀಡಿದೆ.

ಚಳಿಗಾಲದ ಸಂಸತ್ ಅಧಿವೇಶನದಲ್ಲಿ 'ಬ್ಯಾಂಕಿಂಗ್ ಕಾನೂನು ತಿದ್ದುಪಡಿ ಮಸೂದೆ 2021'ನ್ನು ಮಂಡಿಸಲು ಕೇಂದ್ರ ಸರ್ಕಾರವು ಮುಂದಾಗಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಖಾಸಗೀಕರಣಕ್ಕೆ ವಿರೋಧ ವ್ಯಕ್ತಪಡಿಸಲು ವೇದಿಕೆಯು ನಿರ್ಧರಿಸಿದೆ ಎಂದು ಅಖಿಲ ಭಾರತ ಬ್ಯಾಂಕ್ ಸಿಬ್ಬಂದಿ ಒಕ್ಕೂಟದ (ಎಐಬಿಇಎ) ಪ್ರಧಾನ ಕಾರ್ಯದರ್ಶಿ ಸಿ.ಎಚ್. ವೆಂಕಟಾಚಲಂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಹಿತಿ ನಮೂದು: ಅವಧಿ ವಿಸ್ತರಣೆ

ಬೆಂಗಳೂರು: ಬೆಳೆಹಾನಿ, ಮಳೆ ಮತ್ತು ಪ್ರವಾಹದಿಂದ ಮನೆಗಳು ಹಾನಿಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಎ, ಬಿ ಮತ್ತು ಸಿ ವರ್ಗದ ವರ್ಗವಾರು ವಿವರಗಳನ್ನು ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತದ ತಂತ್ರಾಂಶಕ್ಕೆ ನಮೂದಿಸುವ ಅವಧಿಯನ್ನು ಇದೇ 7ರವರೆಗೆ ವಿಸ್ತರಿಸಲಾಗಿದೆ.

ಈ ಹಿಂದೆ ನ. 30 ಕೊನೆಯ ದಿನವಾಗಿತ್ತು. ಸಾರ್ವಜನಿಕರ ಅನುಕೂಲಕ್ಕಾಗಿ ಅವಧಿ ವಿಸ್ತರಿಸಲಾಗಿದೆ. ಅಲ್ಲದೆ, ಬೆಳೆ ಹಾನಿಯ ವಿವರಗಳನ್ನೂ ಪರಿಹಾರ ತಂತ್ರಾಂಶದಲ್ಲಿ ದಾಖಲಿಸಲು ಕಂದಾಯ ಇಲಾಖೆ ಸೂಚಿಸಿದೆ.

ರಸ್ತೆ ಗುಂಡಿ: ಸ್ಕೂಟರ್ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಗುಂಡಿಯಲ್ಲಿ ಆಯತಪ್ಪಿ ಬಿದ್ದ ಸ್ಕೂಟರ್ ಸವಾರ ಅಜೀಂ ಅಹ್ಮದ್ (21) ಎಂಬುವರಿಗೆ ಗೂಡ್ಸ್ ವಾಹನವೊಂದು ಡಿಕ್ಕಿ ಹೊಡೆದಿದೆ. ಗಂಭೀರವಾಗಿ ಗಾಯಗೊಂಡಿದ್ದ ಅವರು ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ.

'ಅಜೀಂ ಅವರು ನ.27ರ ಮಧ್ಯಾಹ್ನ 1.30ರ ಸುಮಾರಿಗೆ ಥಣಿಸಂದ್ರದಿಂದ ಹೆಗಡೆ ನಗರಕ್ಕೆ ಥಣಿಸಂದ್ರ ಮುಖ್ಯರಸ್ತೆಯ ಮೂಲಕ ಹೋಂಡಾ ಡಿಯೊ ಸ್ಕೂಟರ್‌ನಲ್ಲಿ ಸಾಗುತ್ತಿದ್ದರು. ಪ್ರಕಾಶ್ ಹಾರ್ಡ್‌ವೇರ್ ಮುಂಭಾಗದ ರಸ್ತೆಯ ಎಡಭಾಗದಲ್ಲಿ ಗುಂಡಿ ಬಿದ್ದಿರುವುದು ಅವರ ಗಮನಕ್ಕೆ ಬಂದಿರಲಿಲ್ಲ. ಅದರೊಳಗೆ ಸ್ಕೂಟರ್ ಇಳಿದೊಡನೆ ಆಯತಪ್ಪಿ ಬಿದ್ದಿದ್ದಾರೆ. ಈ ವೇಳೆ ಗೂಡ್ಸ್ ವಾಹನ ಹರಿದಿದೆ. ಅದರಿಂದ ಅವರ ಬಲ ತೊಡೆ ಹಾಗೂ ಬಲಗೈಗೆ ತೀವ್ರ ಗಾಯಗಳಾಗಿದ್ದವು. ತೀವ್ರ ರಕ್ತಸ್ರಾವದಿಂದ ಬಳಲಿದ್ದ ಅವರನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಘಟನೆ ಅದೇ ದಿನ ಸಂಜೆ 4.30ರ ಸುಮಾರಿಗೆ ಮೃತಪಟ್ಟಿದ್ದಾರೆ' ಎಂದು ಸಂಚಾರ ಪೊಲೀಸರ ಪ್ರಕಟಣೆ ತಿಳಿಸಿದೆ.

ಈ ಸಂಬಂಧ ಬಾಣಸವಾಡಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2ನೇ ಪುಟ ನೋಡಿ



ರಸ್ತೆಯಲ್ಲಿ ಗುಂಡಿ ಬಿದ್ದಿರುವುದು –ಸಾಂದರ್ಭಿಕ ಚಿತ್ರ

ಬಿಬಿಎಂಪಿಯಿಂದ ಪರಿಹಾರ ಮರೀಚಿಕೆ

ರಸ್ತೆ ಗುಂಡಿಗಳಿಂದಾಗುವ ಅಪಘಾತಗಳಲ್ಲಿ ಗಾಯಗೊಂಡವರಿಗೆ ಹಾಗೂ ಮೃತರ ಕುಟುಂಬಸ್ಥರಿಗೆ ಪರಿಹಾರ ನೀಡುವಂತೆ ಹೈಕೋರ್ಟ್, 2019ರ ಸೆಪ್ಟೆಂಬರ್‌ನಲ್ಲಿ ಆದೇಶ ನೀಡಿತ್ತು. ಪರಿಹಾರ ನೀಡುವುದಕ್ಕಾಗಿ ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನೂ ರಚಿಸಿದೆ. ಈ ಬಗ್ಗೆ ಬಿಬಿಎಂಪಿ ಆದೇಶ ಹೊರಡಿಸಿ ವರ್ಷ ಕಳೆದಿದೆ. ಆದರೂ ಇದುವರೆಗೂ ಯಾವುದೇ ಗಾಯಾಳುಗಳಿಗೂ ಪರಿಹಾರ ವಿತರಣೆ ಆಗಿಲ್ಲ.

ಹದಗೆಟ್ಟ ರಸ್ತೆಯಿಂದಾಗಿ ಅಥವಾ ರಸ್ತೆಗುಂಡಿಗಳಿಂದಾಗಿ ಸಂಭವಿಸುವ ಅಪಘಾತದಲ್ಲಿ ಮೃತರ ಕುಟುಂಬಕ್ಕೆ ₹ 3 ಲಕ್ಷ ಹಾಗೂ ಗಂಭೀರ ಗಾಯಗೊಂಡವರಿಗೆ ಗರಿಷ್ಠ ₹ 15 ಸಾವಿರದ ವರೆಗೆ ಪರಿಹಾರವನ್ನು ಬಿಬಿಎಂಪಿ ನಿಗದಿಪಡಿಸಿದೆ. ಸಣ್ಣ ಪ್ರಮಾಣದ ಗಾಯಕ್ಕೆ ₹ 5,000 ಹಾಗೂ ಇತರ ಹೆಚ್ಚುವರಿ ಗಾಯಗಳಿಗೆ ತಲಾ ₹ 500ರಂತೆ ಪರಿಹಾರ ಪಡೆಯಬಹುದು. ವೈದ್ಯಕೀಯ ವೆಚ್ಚದ ರೂಪದಲ್ಲಿ ₹ 10 ಸಾವಿರದವರೆಗೆ ಮಧ್ಯಂತರ ಪರಿಹಾರ ಪಡೆಯಲು ಅವಕಾಶವಿದೆ. ಗಾಯದ ನೋವು ಉಳಿದುಕೊಂಡು ಮೂರು–ನಾಲ್ಕು ದಿನಗಳ ಕಾಲ ಚಿಕಿತ್ಸೆ ಪಡೆದರೆ ₹ 10 ಸಾವಿರದವರೆಗೆ ಪರಿಹಾರ ನೀಡಬಹುದು. ಗಾಯಕ್ಕೆ ಒಮ್ಮೆ ಪರಿಹಾರ ಪಡೆದ ಬಳಿಕ ಚಿಕಿತ್ಸೆಗೆ ಪ್ರತ್ಯೇಕವಾಗಿ ಪರಿಹಾರ ನೀಡಲು ಬರುವುದಿಲ್ಲ. ಎಕ್ಸ್‌–ರೇ ಮತ್ತಿತರ ಪರೀಕ್ಷೆಗಳನ್ನು ನಡೆಸಿದ್ದರೆ ಅದರ ವೆಚ್ಚ ಮರುಪಾವತಿ ಮಾಡಬಹುದು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಶಬರಿಮಲೆ: ಗೂಗಲ್ ಪೇ ಮೂಲಕ ಕಾಣಿಕೆ ಸಲ್ಲಿಸಲು ಅವಕಾಶ

ಶಬರಿಮಲೆ (ಪಿಟಿಐ): ಶಬರಿಮಲೆ ಅಯ್ಯಪ್ಪ ಸ್ವಾಮಿ ಭಕ್ತರ ಅನುಕೂಲಕ್ಕಾಗಿ ತಿರುವಾಂಕೂರು ದೇವಸ್ವಂ ಮಂಡಳಿಯು 'ಗೂಗಲ್ ಪೇ' ಮೂಲಕ ಕಾಣಿಕೆ ಸಲ್ಲಿಸಲು ಅವಕಾಶ ಕಲ್ಪಿಸಿದೆ.

ಹಿಂದಿನ ವರ್ಷಗಳಂತೆ ಈ ವರ್ಷವೂ ಟಿಡಿಬಿ ತನ್ನ ಅಧಿಕೃತ ಧನಲಕ್ಷ್ಮಿ ಬ್ಯಾಂಕ್‌ನ ಸಹಯೋಗದಲ್ಲಿ ಡಿಜಿಟಲ್ ಪಾವತಿಯ ಈ ವ್ಯವಸ್ಥೆ ಮಾಡಿದೆ.

ಇದಕ್ಕಾಗಿ ಸನ್ನಿಧಾನಂ, ದೇವಾಲಯದ ಸಂಕೀರ್ಣ ಮತ್ತು ನಿಲಕ್ಕಲ್ ತಪ್ಪಲಿನ ಹಲವು ಸ್ಥಳಗಳಲ್ಲಿ ಕ್ಯೂಆರ್ ಕೋಡ್ ಅನ್ನು ಪ್ರದರ್ಶಿಸಲಾಗಿದೆ ಎಂದು ಟಿಡಿಬಿ ತಿಳಿಸಿದೆ.


ಬಹುರೂಪಿ ಸಮಾರೋಪಕ್ಕೆ ಸೂಲಿಬೆಲೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಇದೇ 10ರಿಂದ 19ರವರೆಗೆ ನಡೆಯಲಿರುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವವನ್ನು ವೃಕ್ಷಮಾತೆ ಎಂದು ಖ್ಯಾತರಾದ ತುಳಸಿಗೌಡ ಉದ್ಘಾಟಿಸಲಿದ್ದಾರೆ. ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅವರು ಸಮಾರೋಪ ಭಾಷಣ ಮಾಡಲಿದ್ದಾರೆ.

ರಂಗಾಯಣ ನಿರ್ದೇಶಕ ಅಡ್ಡಂಡ ಸಿ ಕಾರ್ಯಪ್ಪ ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

'ಆಹ್ವಾನ ಪತ್ರಿಕೆಯಲ್ಲಿ ಸೂಲಿಬೆಲೆ ಅವರಿಗೆ ಸಮಾಜ ಸೇವಕ ಎಂಬ ವಿಶೇಷಣ ಬಳಸಲಾಗಿದೆ. ಅವರ ಸಮಾಜಸೇವೆ ಏನು' ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ, 'ಯಾರು ಏನೇ ಹೇಳಲಿ, ಸೂಲಿಬೆಲೆ ಸಮಾರೋಪ ಭಾಷಣ ಮಾಡಲಿದ್ದಾರೆ. ಅವರ ಭಾಷಣವನ್ನು ಕೇಳಿ, ಆ ಕುರಿತು ಏನು ಬೇಕಾದರೂ ಬರೆಯಿರಿ. ಅವರು ಯುವಜನರಲ್ಲಿ ದೇಶಪ್ರೇಮದ ಜಾಗೃತಿ ಮೂಡಿಸಿ ಸಮಾಜ ಸೇವೆ ಮಾಡುತ್ತಿದ್ದಾರೆ' ಎಂದರು.



ಅಡ್ಡಂಡ ಕಾರ್ಯಪ್ಪ

'ಸೂಲಿಬೆಲೆ ಅವರನ್ನು ಏಕೆ ಕರೆಯಬಾರದು, ಅವರೇನು ದೇಶದ್ರೋಹಿಯೇ' ಎಂದು ಮರು ಪ್ರಶ್ನೆ ಹಾಕಿದರು.

'ಸೂಲಿಬೆಲೆ ಅವರನ್ನು ಮಾಧ್ಯಮದ ಎಲ್ಲರೂ ವಿರೋಧಿಸುತ್ತಿಲ್ಲ. ಮಾಧ್ಯಮದವರಲ್ಲೇ ಗುಂಪುಗಾರಿಕೆ ಇದೆ' ಎಂದೂ ಅಡ್ಡಂಡ ಸಿ. ಕಾರ್ಯಪ್ಪ ಹೇಳಿದರು.

ಸುಧಾ ಭಾರದ್ವಾಜ್‌ಗೆ ಜಾಮೀನು

ಮುಂಬೈ (ಪಿಟಿಐ): ಎಲ್ಗಾರ್ ಪರಿಷತ್–ಮಾವೊವಾದಿ ಸಂಪರ್ಕ ಪ್ರಕರಣದ ಆರೋಪಿ, ವಕೀಲೆ ಸುಧಾ ಭಾರದ್ವಾಜ್ ಅವರಿಗೆ ಬಾಂಬೆ ಹೈಕೋರ್ಟ್ ಬುಧವಾರ ತನಿಖಾಧಿಕಾರಿಯ ಕರ್ತವ್ಯ ಲೋಪದಿಂದ ಸಿಗಬಹುದಾದ ಜಾಮೀನು ಮಂಜೂರು ಮಾಡಿದೆ.

ಮುನವ್ವರ್ ಕಾರ್ಯಕ್ರಮ ರದ್ದಾದ ಬೆನ್ನಲ್ಲೇ ಈ ಬೆಳವಣಿಗೆ

ಬೆಂಗಳೂರಿನಲ್ಲಿ ನಡೆಯಬೇಕಿದ್ದ ಕಾಮ್ರಾ ಕಾರ್ಯಕ್ರಮ ರದ್ದು

ಮುಂಬೈ/ಬೆಂಗಳೂರು (ಪಿಟಿಐ): 'ಬೆದರಿಕೆ ಹಾಗೂ ವಿಶೇಷ ಪರವಾನಗಿ ಸಿಗದ ಕಾರಣಕ್ಕೆ ಬೆಂಗಳೂರಿನಲ್ಲಿ ನಡೆಯಬೇಕಿದ್ದ ನನ್ನ ಕಾರ್ಯಕ್ರಮವನ್ನು ರದ್ದು ಮಾಡಲಾಗಿದೆ' ಎಂದು ಹಾಸ್ಯ ಕಲಾವಿದ ಕುನಾಲ್ ಕಾಮ್ರಾ ಬುಧವಾರ ಹೇಳಿದ್ದಾರೆ.

ಬೆಂಗಳೂರಿನಲ್ಲಿ ನಿಗದಿಯಾಗಿದ್ದ ವಿಡಂಬನಕಾರ ಮುನವ್ವರ್ ಫಾರೂಕಿ ಅವರ ಕಾರ್ಯಕ್ರಮ ರದ್ದಾದ ಬೆನ್ನಲ್ಲೇ, ಈಗ ಕಾಮ್ರಾ ಅವರ ಕಾರ್ಯಕ್ರಮವೂ ರದ್ದಾಗಿದೆ.

'ನನ್ನ ಕಾರ್ಯಕ್ರಮ ನಡೆಯಬೇಕಿದ್ದ ಸ್ಥಳದಲ್ಲಿ 45 ಜನರು ಪಾಲ್ಗೊಳ್ಳುವವರಿದ್ದರು. ಆದರೆ, ಆ ಸ್ಥಳದಲ್ಲಿ ಇದಕ್ಕಿಂತಲೂ ಅಧಿಕ ಸಂಖ್ಯೆಯ ಜನರು ಪಾಲ್ಗೊಳ್ಳಲು ಅವಕಾಶ ಇದ್ದರೂ ವಿಶೇಷ ಪರವಾನಗಿಯನ್ನು ನಿರಾಕರಿಸಲಾಗಿದೆ' ಎಂದು ಕಾಮ್ರಾ ಟ್ವೀಟ್ ಮಾಡಿದ್ದಾರೆ.



ಕುನಾಲ್

'ಹಲೋ ಬೆಂಗಳೂರು ಜನರೇ, 20 ದಿನಗಳ ನಂತರ ಬೆಂಗಳೂರಿನಲ್ಲಿ ನಡೆಯಬೇಕಿದ್ದ ನನ್ನ ಶೋಗಳನ್ನು ರದ್ದುಪಡಿಸಲಾಗಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ' ಎಂದೂ ಟ್ವೀಟ್ ಮಾಡಿದ್ದಾರೆ.

'45 ಜನರು ಪಾಲ್ಗೊಳ್ಳುವುದಕ್ಕೆ ಪರವಾನಗಿ ಸಿಗದಿರುವುದು ಹಾಗೂ ಕಾರ್ಯಕ್ರಮ ನಡೆಯಬೇಕಿದ್ದ ಸ್ಥಳವನ್ನು ಮುಚ್ಚುವಂತೆ ಬೆದರಿಕೆವೊಡ್ಡಿರುವುದೇ ಇದಕ್ಕೆ ಕಾರಣ. ಕೋವಿಡ್ ಹಿನ್ನೆಲೆಯಲ್ಲಿ ಜಾರಿಗೊಳಿಸಿದ ಮಾರ್ಗಸೂಚಿಗಳೂ ಕಾರ್ಯಕ್ರಮ ರದ್ದಾಗಲು ಕಾರಣ ಇರಬಹುದು ಎಂಬುದು ನನ್ನ ಊಹೆ. ಈಗ ನಾನು ಕೊರೊನಾ ವೈರಸ್‌ನ ಒಂದು ತಳಿ ರೀತಿ ಕಾಣುತ್ತಿರಬಹುದು ಎಂದು ಭಾವಿಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಬೆಂಗಳೂರು ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು, 'ಈ ವಿಷಯದಲ್ಲಿ ಇಲಾಖೆಯ ಪಾತ್ರ ಏನೂ ಇಲ್ಲ' ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ನ. 28ರ ಸಂಜೆ ನಿಗದಿಪಡಿಸಿದ್ದ ಮುನವ್ವರ್ ಫಾರೂಕಿ ಅವರ ಸ್ಟ್ಯಾಂಡ್ ಅಪ್ ಕಾಮಿಡಿ ಕಾರ್ಯಕ್ರಮವನ್ನು ಪೊಲೀಸರ ನೋಟಿಸ್ ಹಿನ್ನೆಲೆಯಲ್ಲಿ ದಿಢೀರ್ ರದ್ದು ಮಾಡಲಾಗಿತ್ತು. ಅಶೋಕನಗರ ಬಳಿಯ 'ಗುಡ್ ಶೆಫರ್ಡ್' ಸಭಾಂಗಣದಲ್ಲಿ 'ಡೊಂಗ್ರಿ ಟು ನೋವೇರ್' ಹೆಸರಿನಲ್ಲಿ ಕಾರ್ಯಕ್ರಮ ನಿಗದಿಪಡಿಸಲಾಗಿತ್ತು. 600 ಮಂದಿ ಟಿಕೆಟ್ ಸಹ ಕಾಯ್ದಿರಿಸಿದ್ದರು.

ಕಾರ್ಯಕ್ರಮ ವಿರೋಧಿಸಿದ್ದ ಹಿಂದೂ ಜನಜಾಗೃತಿ ಸಮಿತಿ ಸದಸ್ಯರು, 'ಹಿಂದೂ ವಿರೋಧಿ ಆಗಿರುವ ಮುನವ್ವರ್ ಫಾರೂಕಿ ಕಾರ್ಯಕ್ರಮಕ್ಕೆ ಅವಕಾಶ ನೀಡಬಾರದು' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ದೂರು ಸಲ್ಲಿಸಿದ್ದರು.

ಹುಡುಕಿದರೂ ಗುಂಡಿ ರಹಿತ ರಸ್ತೆಗಳು ಸಿಗುವುದಿಲ್ಲ • ದುಸ್ತರವಾದ ವಾಹನ ಸಂಚಾರ

ಮೊದಲು ಗುಂಡಿ ಮುಚ್ಚಿ: ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲೀಗ ಗುಂಡಿಗಳಿಲ್ಲದ ರಸ್ತೆಗಳೇ ಇಲ್ಲ, ಹುಡುಕಿ–ತಡಕಿದರೂ ಗುಂಡಿ ರಹಿತ ರಸ್ತೆಗಳು ಸಿಗುವುದಿಲ್ಲ. ಗುಂಡಿಗಳನ್ನು ಮುಚ್ಚಿ ವಾಹನ ಸಂಚಾರ ಯೋಗ್ಯಗೊಳಿಸುವ ಬದಲು ವೈಟ್ ಟಾಪಿಂಗ್ ಹಾಗೂ ಅತಿ ದಟ್ಟಣೆಯ 12 ಕಾರಿಡಾರ್‌ಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ₹1,120 ಕೋಟಿ ಖರ್ಚು ಮಾಡಲು ಹೊರಟಿರುವ ಸರ್ಕಾರದ ಕ್ರಮದ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ.

ಒಟ್ಟು 191 ಕಿ.ಮೀ ಉದ್ದದ 12 ಕಾರಿಡಾರ್‌ಗಳ ಉನ್ನತೀಕರಣಕ್ಕೆ ಒಟ್ಟು ₹335.17 ಕೋಟಿ, ದೈನಂದಿನ ನಿರ್ವಹಣೆಗೆ ಮೊದಲ ವರ್ಷಕ್ಕೆ ₹ 142.12 ಕೋಟಿ, ಇನ್ನುಳಿದ ನಾಲ್ಕು ವರ್ಷಗಳ ನಿರ್ವಹಣೆಗೆ ₹643.19 ಕೋಟಿ ವೆಚ್ಚವಾಗುತ್ತದೆ ಎಂದು ಕೆಆರ್‌ಡಿಸಿಎಲ್ ಅಂದಾಜಿಸಿತ್ತು. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಕೈಬಿಟ್ಟಿದ್ದ ಈ ಯೋಜನೆ ಮತ್ತೆ ಮುನ್ನೆಲೆಗೆ ಬಂದಿದೆ.

₹2,191 ಕೋಟಿ ಮೊತ್ತದ ವೈಟ್ ಟಾಪಿಂಗ್ ಎರಡನೇ ಹಂತದ ಯೋಜನೆಗೂ ಚಾಲನೆ ಸಿಕ್ಕಿದೆ. ಒಂದೆಡೆ ಸಾವಿರಾರು ಕೋಟಿ ಮೊತ್ತದ ಯೋಜನೆಗಳಿಗೆ ಆಸಕ್ತಿ ವಹಿಸಿರುವ ಸರ್ಕಾರ, ವಾಹನ ಸಂಚಾರವೇ ಸಾಧ್ಯವಾಗದಷ್ಟು ದುಃಸ್ಥಿತಿಯಲ್ಲಿರುವ ರಸ್ತೆಗಳ ಗುಂಡಿ ಮುಚ್ಚಲು ಮುಂದಾಗುತ್ತಿಲ್ಲ. ಕಾರಿಡಾರ್‌ಗಳ ಉನ್ನತೀಕರಣ ಕೈಬಿಟ್ಟು ಮೊದಲು ರಸ್ತೆ ಗುಂಡಿಗಳನ್ನು ಮುಚ್ಚಿ ಎಂಬುದು ನಗರದ ನಾಗರಿಕ ಸಂಘಟನೆಗಳ ಒತ್ತಾಯ.

‘ಚಿಕ್ಕ ಚಿಕ್ಕ ರಸ್ತೆಗಳ ಸ್ಥಿತಿ ನೋಡಿ’



ದೊಡ್ಡದಾಗಿ ಹಣ ಸಿಗುತ್ತದೆ ಎಂಬ ಕಾರಣಕ್ಕೆ ದೊಡ್ಡ ದೊಡ್ಡ ಯೋಜನೆಗಳನ್ನು ರೂಪಿಸಲಾಗುತ್ತಿದೆ. ನಗರದಲ್ಲಿ ಚಿಕ್ಕ ಚಿಕ್ಕ ರಸ್ತೆಗಳು ಸಾವಿರಾರು ಕಿಲೋ ಮೀಟರ್ ಇವೆ. ಅಲ್ಲಿ ರಸ್ತೆ ಬದಲಿಗೆ ಗುಂಡಿಗಳೇ ಹೆಚ್ಚಾಗಿದ್ದು, ರಸ್ತೆಯೇ ಕಾಣಿಸುತ್ತಿಲ್ಲ. ಇವುಗಳನ್ನು ಸರಿಪಡಿಸುವ ಬದಲು ವೈಟ್ ಟಾಪಿಂಗ್ ಹೆಸರಿನಲ್ಲಿ ಸಾವಿರಾರು ಕೋಟಿ ಖರ್ಚು ಮಾಡಲು ಹೊರಟಿದ್ದಾರೆ. ಈ ರೀತಿಯ ದೊಡ್ಡ ಯೋಜನೆಗಳನ್ನು ನಗರದ ಜನ ಕೇಳುತ್ತಿಲ್ಲ. ಆದರೂ ಭ್ರಷ್ಟಾಚಾರಕ್ಕೆ ಬೇಕಿರುವ ಯೋಜನೆಗಳನ್ನು ಸರ್ಕಾರ ರೂಪಿಸಿಕೊಳ್ಳುತ್ತಿದೆ. ತಳಮಟ್ಟದ ಸಮಸ್ಯೆಗಳಿಗೆ ಈ ಯೋಜನೆಗಳು ಪರಿಹಾರವಲ್ಲ. ನಮಗೆ ನಿಜವಾದ ಸಮಸ್ಯೆ ಪರಿಹಾರವಾಗಬೇಕಿದೆ. ವೈಟ್ ಟಾಪಿಂಗ್ ಮತ್ತು ಕಾರಿಡಾರ್‌ಗಳ ಉನ್ನತೀಕರಣಕ್ಕೆ ನಮ್ಮ ವಿರೋಧವಿಲ್ಲ. ಮೊದಲು ಗುಂಡಿಗಳನ್ನು ಮುಚ್ಚಲು ಆದ್ಯತೆ ನೀಡಬೇಕು.

ಶ್ರೀಕಾಂತ್ ನರಸಿಂಹನ್, ಬಿಎನ್‌ಪಿ ಪ್ರಧಾನ ಕಾರ್ಯದರ್ಶಿ


‘ನಿರ್ವಹಣೆ ಹೆಸರಿನಲ್ಲಿ ಲೂಟಿಗೆ ಯೋಜನೆ’



ಸಾರ್ವಜನಿಕರ ತೆರಿಗೆ ಹಣವನ್ನು ಲೂಟಿ ಮಾಡಲು ಸರ್ಕಾರ ಮತ್ತೊಂದು ದಾರಿ ಹುಡುಕಿಕೊಂಡಿದೆ. ನಗರದಲ್ಲಿ ಗುಂಡಿ ಬೀಳದ ಒಂದು ಕಿಲೋ ಮೀಟರ್ ಉದ್ದದ ರಸ್ತೆ ಯಾವ ದಿಕ್ಕಿಗೆ ಹೋದರೂ ಸಿಗುವುದಿಲ್ಲ. ವಾಹನ ಸಂಚಾರಕ್ಕೆ ಯೋಗ್ಯ ಮಾಡುವ ಯೋಗ್ಯತೆ ಇಲ್ಲದ ಸರ್ಕಾರ ಕಾರಿಡಾರ್‌ಗಳ ಉನ್ನತೀಕರಣಕ್ಕೆ ಮುಂದಾಗಿರುವುದು ಮತ್ತೊಂದು ಲೂಟಿಯ ಪ್ರಯತ್ನ. ಸಾರ್ವಜನಿಕರ ಹಣ ಕೊಳ್ಳೆ ಹೊಡೆಯುವುದು ಒಂದೆಡೆಯಾದರೆ, ಗುಂಡಿಮಯ ರಸ್ತೆಯಲ್ಲಿ ವಾಹನಗಳ ಸಂಚಾರ ವೇಗ ಶೇ 50ರಷ್ಟು ಕಡಿಮೆಯಾಗಿದೆ. ಗುಂಡಿಮಯ ರಸ್ತೆಗಳಿಂದಾಗಿ ವಾಹನಗಳ ಇಂಧನ ಜಾಸ್ತಿ ಖರ್ಚಾಗುತ್ತಿದೆ. ವಾಹನ ಮತ್ತು ಆರೋಗ್ಯ ಎರಡೂ ಹಾಳಾಗುತ್ತಿವೆ. ಗುಂಡಿಗಳಲ್ಲಿ ಬಿದ್ದು ಕೆಲವರು ತಮ್ಮ ಜೀವವನ್ನೇ ಬಲಿಕೊಟ್ಟಿದ್ದಾರೆ. ಯಾರಿಗೂ ಉತ್ತರದಾಯಿತ್ವ ಇಲ್ಲದಿರುವುದು ಇಷ್ಟೆಲ್ಲಾ ಅವಾಂತರಗಳಿಗೆ ಕಾರಣವಾಗಿದೆ. ಎರಡೇ ವರ್ಷಗಳಲ್ಲಿ ಹಾಳಾದ ರಸ್ತೆಗಳನ್ನು ನಿರ್ಮಿಸಿದ ಎಷ್ಟು ಗುತ್ತಿಗೆದಾರರನ್ನು ಜೈಲಿಗೆ ಕಳುಹಿಸಲಾಗಿದೆ? ಬಿಲ್ ಪಾಸ್ ಮಾಡಿದ ಎಂಜಿನಿಯರ್‌ಗಳ ವಿರುದ್ಧ ಏನು ಕ್ರಮವಾಗಿದೆ? ಮುಖ್ಯಮಂತ್ರಿ ಅವರೇ ಸ್ವತಃ ಬೆಂಗಳೂರು ಅಭಿವೃದ್ಧಿಯ ಹೊಣೆ ಹೊತ್ತಿದ್ದು, ಯೋಜನೆಯ ಪುನರ್ ಪರಿಶೀಲನೆ ನಡೆಸಬೇಕು.

ಡಿ.ಎಸ್. ರಾಜಶೇಖರ್, ಬೆಂಗಳೂರು ಪ್ರಜಾ ವೇದಿಕೆ

‘ಲೂಟಿಗೆ ಹೊಸ ದಾರಿ’



ಲೂಟಿ ನಡೆಸಲು ಹೊಸ ಹೊಸ ದಾರಿಗಳನ್ನು ಸರ್ಕಾರ ಹುಡುಕಿಕೊಳ್ಳುತ್ತಿದೆ. ಪಶ್ಚಿಮ ಕಾರ್ಡ್ ರಸ್ತೆಯನ್ನು ಸಿಗ್ನಲ್ ಮುಕ್ತ ಮಾಡುವ ನೆಪದಲ್ಲಿ ಕಿತ್ತು ಹಾಳು ಮಾಡಲಾಯಿತು. ಈಗ ರಾಜ್‌ಕುಮಾರ್ ರಸ್ತೆಯನ್ನು ಹಾಳು ಮಾಡಲಾಗುತ್ತಿದೆ. ಇದ್ದ ರಸ್ತೆಗಳನ್ನು ಅಭಿವೃದ್ಧಿ ಹೆಸರಿನಲ್ಲಿ ಅನಾವಶ್ಯಕವಾಗಿ ಅಗೆದು ಸಂಚಾರಕ್ಕೆ ತೊಂದರೆ ಮಾಡಲಾಗುತ್ತಿದೆ. ವೈಟ್ ಟಾಪಿಂಗ್ ಕಾಮಗಾರಿ ಎಂದರೆ ಹಣ ಮಾಡಲು ಇರುವ ದೊಡ್ಡ ಮಾರ್ಗ. ಗುಣಮಟ್ಟದಲ್ಲಿ ಅವುಗಳನ್ನು ನಿರ್ವಹಿಸುತ್ತಿಲ್ಲ. ಮನೆಯ ಆರ್‌ಸಿಸಿ ರೀತಿ ಕಂಬಿಗಳನ್ನು ಕಟ್ಟಿ ಗುಣಮಟ್ಟ ಕಾಯ್ದುಕೊಳ್ಳಬೇಕು. ಅದ್ಯಾವುದನ್ನೂ ಮಾಡದೆ ಸ್ವಯಂ ಚಾಲಿತ ಯಂತ್ರ ಬಳಸಿ ಕಾಮಗಾರಿ ನಡೆಸಲಾಗುತ್ತಿದೆ. ಉತ್ತರಹಳ್ಳಿಯಿಂದ ಕೆಂಗೇರಿ ತನಕ ₹26 ಕೋಟಿ ಮೊತ್ತದ ವೈಟ್ ಟಾಪಿಂಗ್ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ರಸ್ತೆ ವಿಭಜಕ ಅಳವಡಿಸಿ ಗುಣಮಟ್ಟದ ಡಾಂಬರ್ ರಸ್ತೆ ಮಾಡಿದ್ದರೆ ಸಾಕಿತ್ತು. ದೊಡ್ಡ ಮಟ್ಟದ ಭ್ರಷ್ಟಾಚಾರ ಮಾಡಲು ಈ ರೀತಿಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಜಿ.ವಿ.ಸತೀಶ್, ಬನಶಂಕರಿ 6ನೇ ಹಂತದ 2ನೇ ಬ್ಲಾಕ್ ಹಾಗೂ ಕರಿಯನಪಾಳ್ಯ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ

ಪ್ರವೇಶ ಶುಲ್ಕ ಏರಿಕೆಗೆ ಖಂಡನೆ

ಬೆಂಗಳೂರು: ‘ಸರ್ಕಾರಿ ಕೋಟಾದಡಿ ಎಂಜಿನಿಯರಿಂಗ್ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಏಕಾಏಕಿ ₹10 ಸಾವಿರದವರೆಗೆ ಶುಲ್ಕ ಏರಿಕೆ ಮಾಡಿರುವುದು ಖಂಡನೀಯ’ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಶುಲ್ಕ ಏರಿಕೆ ನಿರ್ಧಾರ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಪ್ರಹಾರ ನಡೆಸಿದಂತಾಗಿದೆ’ ಎಂದು ಹೇಳಿದ್ದಾರೆ.

ರಸ್ತೆ ಗುಂಡಿ: ಸ್ಕೂಟರ್ ಚಾಲಕ ಸಾವು

ಒಂದನೇ ಪುಟದಿಂದ

‘ಬಿಬಿಎಂಪಿ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಸವಿತಾ ಹಾಗೂ ಗೂಡ್ಸ್ ವಾಹನ ಚಾಲಕ ಬಂಡೇಹೊಸೂರು ಗ್ರಾಮದ ರವಿ ಎಂಬುವರನ್ನು ಬಂಧಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ರಸ್ತೆ ಕಾಮಗಾರಿ ನಡೆಸಿದ ಗುತ್ತಿಗೆದಾರನ ನಿರ್ಲಕ್ಷ್ಯವೂ ಘಟನೆಗೆ ಕಾರಣ ಎಂಬುದು ತನಿಖೆಯಿಂದ ಗೊತ್ತಾಗಿದೆ. ಪ್ರಕರಣದ ಮೂರನೇ ಆರೋಪಿಯಾಗಿರುವ ಆತನನ್ನೂ ಬಂಧಿಸಿ ವಿಚಾರಣೆ ನಡೆಸಲಾಗುತ್ತದೆ’ ಎಂದು ಸಂಚಾರ ಪೊಲೀಸರ ಪ್ರಕಟಣೆ ಹೇಳಿದೆ.

ಕಾಲೇಜು ಬಸ್ ಹರಿದು ವಿದ್ಯಾರ್ಥಿನಿ ಸಾವು

ಬೆಂಗಳೂರು: ಆಯತಪ್ಪಿ ಸ್ಕೂಟರ್ ಸಮೇತ ರಸ್ತೆ ಮೇಲೆ ಬಿದ್ದ ವಿದ್ಯಾರ್ಥಿನಿ ಮೇಲೆ ಕಾಲೇಜು ಬಸ್ ಹರಿದಿದ್ದು, ಆಕೆ ಆಸ್ಪತ್ರೆಗೆ ಸಾಗಿಸುವ ವೇಳೆ ಮೃತಪಟ್ಟಿದ್ದಾಳೆ. ಈ ಸಂಬಂಧ ಯಲಹಂಕ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಯಲಹಂಕದ ಶಿವನಹಳ್ಳಿ ನಿವಾಸಿ ಎಂ.ಸಾಯಿ ವೈಷ್ಣವಿ (21) ಮೃತ ಯುವತಿ. ಖಾಸಗಿ ಕಾಲೇಜೊಂದರಲ್ಲಿ ಬಿಎಸ್ಸಿ ವ್ಯಾಸಂಗ ಮಾಡುತ್ತಿದ್ದಳು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಯುವತಿಯು ತಂಗಿಯನ್ನು ಟ್ಯೂಷನ್‌ನಿಂದ ಕರೆತರಲು ಬೆಳಿಗ್ಗೆ 7.40ರ ಸುಮಾರಿಗೆ ಸ್ಕೂಟರ್‌ನಲ್ಲಿ ತೆರಳುತ್ತಿದ್ದಳು. ಯಲಹಂಕ ಸಂತೆ ಸರ್ಕಲ್ ಬಳಿ ಇರುವ ಬಿಡಿಕೆ ಕಲ್ಯಾಣ ಮಂಟಪದ ಮುಂಭಾಗದ ರಸ್ತೆಯಲ್ಲಿ ಸಾಗುವಾಗ ವೈಷ್ಣವಿ ಅವರ ಸ್ಕೂಟರ್, ಸೈಕಲ್‌ಗೆ ತಾಗಿದೆ. ಹೀಗಾಗಿ ಆಕೆ ಆಯತಪ್ಪಿ ಬಿದ್ದಿದ್ದಾಳೆ. ಈ ವೇಳೆ ರೈತರ ಸಂತೆ ಕಡೆಯಿಂದ ಬರುತ್ತಿದ್ದ ಕಾಲೇಜು ಬಸ್ ಆಕೆ ಮೇಲೆ ಹರಿದಿದೆ’ ಎಂದು ಪೊಲೀಸರು ಹೇಳಿದ್ದಾರೆ.

ಒಕ್ಕಲಿಗ ಸಂಘದ ಚುನಾವಣೆ ರದ್ದುಪಡಿಸಲು ಎಎಪಿ ಆಗ್ರಹ

ಬೆಂಗಳೂರು: ‘ಅಕ್ರಮಗಳು ಮಿತಿ ಮೀರಿರುವ ಕಾರಣ ರಾಜ್ಯ ಒಕ್ಕಲಿಗರ ಸಂಘದ ಚುನಾವಣೆಯನ್ನು ರದ್ದುಪಡಿಸಬೇಕು’ ಎಂದು ಚುನಾವಣೆಯ ಅಭ್ಯರ್ಥಿ ಹಾಗೂ ಆಮ್ ಆದ್ಮಿ ಪಕ್ಷದ ಮುಖಂಡ ಚನ್ನಪ್ಪಗೌಡ ನೆಲ್ಲೂರು ಆಗ್ರಹಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಡಿ.12ರಂದು ನಡೆಯಲಿರುವ ಒಕ್ಕಲಿಗರ ಸಂಘದ ನಿರ್ದೇಶಕರ ಸ್ಥಾನದ ಚುನಾವಣೆಗೆ ರಾಜಕಾರಣಿಗಳು, ನಿವೃತ್ತ ಹಾಗೂ ಹಾಲಿ ಸರ್ಕಾರಿ ಅಧಿಕಾರಿಗಳು, ಭ್ರಷ್ಟರು ಸ್ಪರ್ಧಿಸಿದ್ದಾರೆ. ಅವರು ಅಕ್ರಮ ಮಾರ್ಗಗಳಲ್ಲಿ ಗಳಿಸಿದ ಹಣವನ್ನು ಮತದಾರರಿಗೆ ಹಂಚಲು ವಾಮಮಾರ್ಗಗಳನ್ನು ಅನುಸರಿಸುತ್ತಿದ್ದಾರೆ’ ಎಂದು ಆರೋಪಿಸಿದರು.

‘ಈ ಹಣದ ಬಗ್ಗೆ ಯಾವುದೇ ಇಲಾಖೆಗೆ ಸೂಕ್ತ ಲೆಕ್ಕ ಸಲ್ಲಿಸದಿರುವುದು ಮೇಲ್ನೋಟಕ್ಕೆ ತಿಳಿದುಬಂದಿದೆ. ಈ ಬಗ್ಗೆ ಆದಾಯ ತೆರಿಗೆ ಇಲಾಖೆ ಹಾಗೂ ಒಕ್ಕಲಿಗರ ಸಂಘದ ಚುನಾವಣಾಧಿಕಾರಿಗಳಿಗೆ ದೂರು ಸಲ್ಲಿಸಲಾಗಿದೆ’ ಎಂದರು.

ಎಎಪಿ ಬೆಂಗಳೂರು ನಗರ ಘಟಕದ ಉಪಾಧ್ಯಕ್ಷ ಬಿ.ಟಿ.ನಾಗಣ್ಣ, ‘ಮತದಾರರ ಪಟ್ಟಿಯಲ್ಲಿನ ಅಕ್ರಮದ ಬಗ್ಗೆ ಸಾಕ್ಷಿ ಸಮೇತ ದೂರು ನೀಡಿದ್ದರೂ, ಈವರೆಗೆ ಯಾವುದೇ ಕ್ರಮ ಜರುಗಿಲ್ಲ. ಚುನಾವಣೆಯಲ್ಲಿ ಭ್ರಷ್ಟ ಅಭ್ಯರ್ಥಿಗಳು ಗೆದ್ದರೆ, ಮುಂದಿನ ದಿನಗಳಲ್ಲಿ ಸಂಘದ ಆಸ್ತಿ ಪಾಸ್ತಿಗಳಿಗೆ ಧಕ್ಕೆಯಾಗುವ ಸಂಭವವಿದೆ. ಹಾಗಾಗಿ, ಚುನಾವಣೆ ರದ್ದುಪಡಿಸಬೇಕು’ ಎಂದು ಹೇಳಿದರು.

ಆಸ್ತಿ ತೆರಿಗೆ ಪಾವತಿ ವೇಳೆ ವಲಯ ತಪ್ಪಾಗಿ ನಮೂದು ● ಬಿಬಿಎಂಪಿಗೆ ₹ 333.26 ಕೋಟಿ ನಷ್ಟ?

ದಂಡ ಕೈಬಿಡಲು ಪ್ರಸ್ತಾವ ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿ ತೆರಿಗೆ ಪಾವತಿಸುವಾಗ ವಲಯವನ್ನು ತಪ್ಪಾಗಿ ಘೋಷಿಸಿಕೊಂಡಿರುವ ಆಸ್ತಿ ಮಾಲೀಕರಿಗೆ ದುಪ್ಪಟ್ಟು ದಂಡ ವಿಧಿಸುವುದನ್ನು ಕೈಬಿಡಲು ಹಾಗೂ ಬಾಕಿ ತೆರಿಗೆಗೆ ವಿಧಿಸುವ ಬಡ್ಡಿಯನ್ನು ಪರಿಷ್ಕರಿಸಲು ಸಿದ್ಧತೆ ನಡೆದಿದೆ.

ತೆರಿಗೆ ಮೊತ್ತ ವ್ಯತ್ಯಾಸವನ್ನು ವರ್ಷದೊಳಗೆ ಪತ್ತೆ ಹಚ್ಚಿ ಬಾಕಿ ವಸೂಲಿ ಮಾಡಲು ಬಿಬಿಎಂಪಿ ಕಂದಾಯ ವಿಭಾಗವು ವಿಫಲವಾಗಿರುವುದರಿಂದ ತೆರಿಗೆಯ ವ್ಯತ್ಯಾಸದ ಮೊತ್ತಕ್ಕೆ ದಂಡ ಮತ್ತು ಬಡ್ಡಿ ಸೇರಿಸಿ ವಸೂಲಿ ಮಾಡಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ದಂಡ ಹಾಗೂ ಬಡ್ಡಿ ಎರಡನ್ನೂ ಕೈಬಿಟ್ಟದ್ದೇ ಆದಲ್ಲಿ ಪಾಲಿಕೆ ಸುಮಾರು ₹333.26 ಕೋಟಿಯನ್ನು ಕಳೆದುಕೊಳ್ಳಬೇಕಾಗುತ್ತದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 2008-09ರಿಂದ ಸ್ವಯಂಘೋಷಣೆ ಆಸ್ತಿತೆರಿಗೆ ಪದ್ಧತಿಯನ್ನು ಜಾರಿಗೊಳಿಸಲಾಗಿತ್ತು. ತೆರಿಗೆ ಪರಿಷ್ಕರಣೆಗೊಂಡ ಬಳಿಕ ತೆರಿಗೆದಾರರು ಆಯ್ದ ಬ್ಯಾಂಕ್ ಶಾಖೆಗಳಲ್ಲಿ ಅಥವಾ ಆನ್‌ಲೈನ್ ಮೂಲಕ ತೆರಿಗೆ ಪಾವತಿಸಲು 2016-17ರಿಂದ ಅವಕಾಶ ಕಲ್ಪಿಸಲಾಗಿದೆ. ತಮ್ಮ ಸ್ವತ್ತುಗಳ ವಿವರಗಳನ್ನು ಹಾಗೂ ಅನ್ವಯವಾಗುವ ವಲಯ ವರ್ಗೀಕರಣವನ್ನು ಅಧಿಸೂಚನೆಯಲ್ಲಿ ಪರಿಶೀಲಿಸಿಕೊಂಡು ಘೋಷಣೆಯಲ್ಲಿ ನಮೂದಿಸಲು ತೆರಿಗೆದಾರರಿಗೆ ಅವಕಾಶ ಕಲ್ಪಿಸಲಾಗಿತ್ತು.

ತೆರಿಗೆದಾರರು ತಂತ್ರಾಂಶದಲ್ಲಿ ವಲಯ ವರ್ಗೀಕರಣದ ವಿವರಗಳನ್ನು ತಪ್ಪಾಗಿ ನಮೂದಿಸಿದ 78,254 ಪ್ರಕರಣಗಳನ್ನು ಬಿಬಿಎಂಪಿ ಪತ್ತೆ ಹಚ್ಚಿತ್ತು. ವ್ಯತ್ಯಾಸದ ಮೊತ್ತವನ್ನು ದುಪ್ಪಟ್ಟು ದಂಡ ಮತ್ತು ವಾರ್ಷಿಕ ಶೇ 24ರಂತೆ ಬಡ್ಡಿಯೊಂದಿಗೆ ಪಾವತಿಸುವಂತೆ ಮಾಲೀಕರಿಗೆ ಸೂಚನೆ ನೀಡಲು 78,254 ನೋಟಿಸ್‌ಗಳನ್ನು ಸಿದ್ಧಪಡಿಸಿತ್ತು. ಅದರಲ್ಲಿ 11,725 ನೋಟಿಸ್‌ಗಳನ್ನು ಜಾರಿ ಮಾಡಿತ್ತು.

ಆಸ್ತಿ ಮಾಲೀಕರು 2016-17ರಲ್ಲಿ ತೆರಿಗೆ ಮೊತ್ತವನ್ನು ತಪ್ಪಾಗಿ ಘೋಷಿಸಿಕೊಂಡಿದ್ದಲ್ಲಿ, ಆಸ್ತಿ ತೆರಿಗೆ ಪರಿಷ್ಕೃತ ಮೊತ್ತ ಪಾವತಿಸುವಂತೆ 2017-18ರ ಒಳಗೆ ನೋಟಿಸ್ ಜಾರಿ ಮಾಡಬೇಕಾಗಿತ್ತು. ತೆರಿಗೆ ಪಾವತಿಸಿದ ಐದು ವರ್ಷಗಳ ಬಳಿಕ ನೋಟಿಸ್ ಜಾರಿ ಮಾಡಿ ದಂಡ ವಿಧಿಸಲು ಅವಕಾಶ ಇಲ್ಲ ಎಂಬ ಟೀಕೆ ವ್ಯಕ್ತವಾಗಿತ್ತು. ಹಳೆ ಬಾಕಿಯನ್ನು ದಂಡ ಹಾಗೂ ಬಡ್ಡಿ ಸಮೇತ ವಸೂಲಿ ಮಾಡುವುದನ್ನು ವಿರೋಧಿಸಿ ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಭಟನೆಯೂ ನಡೆದಿತ್ತು.

ಈ ಬಗ್ಗೆ ಸರ್ಕಾರದ ಹಂತದಲ್ಲೇ ತೀರ್ಮಾನ ಕೈಗೊಳ್ಳಬೇಕು ಎಂದು ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಗಿತ್ತು. ಪಾಲಿಕೆಯ ಮುಖ್ಯ ಆಯುಕ್ತರು ಸರ್ಕಾರಕ್ಕೆ ಈ ಬಗ್ಗೆ ವಿಸ್ತೃತ ಪ್ರಸ್ತಾವ ಸಲ್ಲಿಸಿದ್ದರು.

ಬಡ್ಡಿ ಅಥವಾ ದಂಡವನ್ನು ಪಾವತಿಸುವುದರಿಂದ ವಿನಾಯಿತಿ ನೀಡಿದಲ್ಲಿ ಬಿಬಿಎಂಪಿಗೆ ಆರ್ಥಿಕ ನಷ್ಟ ಉಂಟಾಗಲಿದ್ದು, ಇದಕ್ಕೆ ಲೆಕ್ಕಪರಿಶೋಧನೆ ವೇಳೆ ಆಕ್ಷೇಪಣೆ ವ್ಯಕ್ತವಾಗುವ ಸಾಧ್ಯತೆ ಇದೆ. ಈ ಲೋಪಕ್ಕೆ ಆಸ್ತಿ ತೆರಿಗೆ ಪಾವತಿದಾರರನ್ನೇ ಸಂಪೂರ್ಣ ಜವಾಬ್ದಾರಿಯನ್ನಾಗಿ ಮಾಡಿದರೆ, ಅದರಿಂದ ಕಾನೂನು ತೊಡಕು ಎದುರಾಗಬಹುದು. ಹಾಗಾಗಿ ಪಾವತಿ ಮಾಡಬೇಕಾದ ಆಸ್ತಿ ತೆರಿಗೆಯ ವ್ಯತ್ಯಾಸದ ಮೊತ್ತಕ್ಕೆ ಬ್ಯಾಂಕ್‌ಗಳು ವಿಧಿಸುವಷ್ಟು ಬಡ್ಡಿ ವಿಧಿಸಬಹುದು ಎಂದು ಶಿಫಾರಸು ಮಾಡಲಾಗಿದೆ ಎಂದು ಗೊತ್ತಾಗಿದೆ.

ದುಪ್ಪಟ್ಟು ದಂಡ ಮತ್ತು ಬಡ್ಡಿಯನ್ನು ಮನ್ನಾ ಮಾಡಿ ವ್ಯತ್ಯಾಸದ ಮೊತ್ತವನ್ನು ಮಾತ್ರ ಸಂಗ್ರಹಿಸುವ ಅಥವಾ ದುಪ್ಪಟ್ಟು ಹಣವನ್ನು ಮನ್ನಾ ಮಾಡಿ ವ್ಯತ್ಯಾಸದ ಮೊತ್ತ ಮತ್ತು wwಅದಕ್ಕೆ ಬಡ್ಡಿಯನ್ನು ಸಂಗ್ರಹಿಸುವ ಪ್ರಸ್ತಾವವಿದೆ. ಒಂದು ವೇಳೆ ವಲಯ ವರ್ಗೀಕರಣದ ವಿವರಗಳನ್ನು ಆಸ್ತಿ ತೆರಿಗೆ ತಂತ್ರಾಂಶದಲ್ಲಿ ನಮೂದಿಸಿ, ಕಂಪ್ಯೂಟರೀಕರಣಗೊಳಿಸುವಾಗ ಬಿಬಿಎಂಪಿಯಿಂದ ವಲಯದ ವಿವರ ತಪ್ಪಾಗಿ ನಮೂದಾಗಿದ್ದರೆ, ಅವುಗಳನ್ನು ರದ್ದುಪಡಿಸುವ ಪ್ರಸ್ತಾವವೂ ಸರ್ಕಾರದ ಮುಂದಿದೆ.

ವಲಯ ವ್ಯತ್ಯಾಸ– ಆಸ್ತಿ ತೆರಿಗೆ ಬಾಕಿ ವಿವರ (₹ ಕೋಟಿಗಳಲ್ಲಿ)

	ಆಸ್ತಿಗಳ ಸಂಖ್ಯೆ	ವ್ಯತ್ಯಾಸದ ಮೊತ್ತ	ದಂಡ	ಬಡ್ಡಿ	ಒಟ್ಟು
ವಲಯ ತಪ್ಪಾಗಿ ನಮೂದಿಸಿದವರು	78,524	120.43	240.86	-	361.30
ಈಗಾಗಲೇ ಬಾಕಿ ಮೊತ್ತ ಪಾವತಿಸಿದವರು	7,891	3.54	7.09	2.69	13.33
ಇನ್ನಷ್ಟೇ ಬಾಕಿ ತೆರಿಗೆ ಪಾವತಿಸಬೇಕಾದವರು	70,633	116.89	233.78	89.71	440.37

₹13.33 ಕೋಟಿ ಬಾಕಿ ಪಾವತಿ

ವಲಯ ವರ್ಗೀಕರಣದ ವಿವರಗಳನ್ನು ತಪ್ಪಾಗಿ ನಮೂದಿಸಿದ ಆಸ್ತಿ ಮಾಲೀಕರಲ್ಲಿ 7,891 ಮಂದಿ ಈಗಾಗಲೇ ಬಾಕಿ ಮೊತ್ತವನ್ನು ದಂಡ ಸಮೇತ ಪಾವತಿಸಿದ್ದಾರೆ. ಇದರಿಂದ ಬಿಬಿಎಂಪಿ ಬೊಕ್ಕಸಕ್ಕೆ ₹ 13.33 ಕೋಟಿ ಸಂದಾಯವಾಗಿದೆ. ಇಂತಹ ಪ್ರಕರಣಗಳಲ್ಲಿ ಹೆಚ್ಚುವರಿ ಮೊತ್ತವನ್ನು ಮುಂಬರುವ ವರ್ಷಗಳ ತೆರಿಗೆಗೆ ಹೊಂದಾಣಿಕೆ ಮಾಡುವಂತೆ ಶಿಫಾರಸು ಮಾಡಲಾಗಿದೆ.

‘ಯುವ ಸಮೃದ್ಧಿ’ ಕಾರ್ಯಪಡೆ ಮಧ್ಯಂತರ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ವರ್ಷಗಳಲ್ಲಿ 1 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವ ಸಂಬಂಧ ರಚಿಸಲಾಗಿರುವ ‘ಯುವ ಸಮೃದ್ಧಿ’ ಕಾರ್ಯಪಡೆಯು ಸರ್ಕಾರಕ್ಕೆ ಬುಧವಾರ ಮಧ್ಯಂತರ ವರದಿ ಸಲ್ಲಿಸಿದ್ದು, ‘ಕರ್ನಾಟಕ ವೃತ್ತಿ ಮಾರ್ಗದರ್ಶನ ಉತ್ಕೃಷ್ಟತಾ ಕೇಂದ್ರ’ವನ್ನು ಸ್ಥಾಪಿಸಲು ಶಿಫಾರಸು ಮಾಡಿದೆ.

ಉನ್ನತ ಶಿಕ್ಷಣ ಮತ್ತು ಐಟಿ, ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾರ್ಯಪಡೆ ಮಧ್ಯಂತರ ವರದಿ ಸಲ್ಲಿಸಿತು. ‘ಇನ್ನು 10 ದಿನಗಳಲ್ಲಿ ಅಂತಿಮ ವರದಿ ಸಿದ್ಧವಾಗಲಿದೆ’ ಎಂದೂ ತಿಳಿಸಿತು.

ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಮಾದರಿಯಲ್ಲೇ ಈ ವೃತ್ತಿ ಮಾರ್ಗದರ್ಶನ ಉತ್ಕೃಷ್ಟತಾ ಕೇಂದ್ರ ಕೂಡಾ ಸರ್ಕಾರಿ– ಖಾಸಗಿ ಪಾಲುದಾರಿಕೆಯಲ್ಲಿ ಅಸ್ತಿತ್ವಕ್ಕೆ ಬಂದು ಸೆಕ್ಷನ್ 8 ರ ಅಡಿ ಕಂಪನಿಯಾಗಿರಬೇಕು ಎಂದು ಕಾರ್ಯಪಡೆ ಅಭಿಪ್ರಾಯಪಟ್ಟಿದೆ. ರಾಜ್ಯದಲ್ಲೀಗ ಯಾವುದೇ ಏಕೀಕೃತ ವೃತ್ತಿ ಮಾರ್ಗದರ್ಶನ ಕೇಂದ್ರ ಇಲ್ಲ. ಆದರೆ, ಶಾಲಾ ಹಂತದಿಂದ ಉದ್ಯೋಗ ಗಳಿಸುವ ಹಂತದವರೆಗೆ ಮಾರ್ಗದರ್ಶನ ನೀಡಲು ಸಾಮಾನ್ಯ ರೂಪರೇಷೆ ಸಿದ್ಧಪಡಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದೆ.

ಡಿಜಿಟಲ್ ಕೌಶಲ್ಯಗಳನ್ನು ಮೈಗೂಡಿಸಿ ಉದ್ಯಮಶೀಲತಾ ಧೋರಣೆ ಬೆಳೆಸುವುದು, ವೃತ್ತಿ ಮಾಹಿತಿ ನೀಡುವುದು ಹಾಗೂ ಮಾರ್ಗದರ್ಶನ, ಜಿಲ್ಲೆಗಳಲ್ಲಿ ಉದ್ಯಮಶೀಲ ಪರಿಸರ ನಿರ್ಮಾಣ, ಕೃಷಿ ಹಾಗೂ ಕೃಷಿ ತಾಂತ್ರಿಕತೆಗೆ ಉತ್ತೇಜನ ನೀಡುವ ಬಗ್ಗೆ ಗಮನ ಕೇಂದ್ರೀಕರಿಸಲು ಸಲಹೆ ನೀಡಿದೆ. 6 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗೆ ಡಿಜಿಟಲ್ ಕೌಶಲ್ಯಗಳನ್ನು ಮತ್ತು 21ನೇ ಶತಮಾನದ ಕೌಶಲಗಳನ್ನು ಕಲಿಸುವುದಕ್ಕಾಗಿ ‘ವೈಡಬ್ಲು ಎನ್‌ಎಕ್ಸ್ ಟಿ ಮತ್ತು ಯುವಾ’ ಕಾರ್ಯಕ್ರಮ ಜಾರಿಗೊಳಿಸಬೇಕೆಂದು ಸಲಹೆ ಕೊಡಲಾಗಿದೆ. ಇದಕ್ಕಾಗಿ ಶಿಕ್ಷಣ ಇಲಾಖೆ, ಪಿಯು ಮಂಡಳಿ, ಐಟಿಐಗಳು ಯುನಿಸೆಫ್ ಜತೆ ಒಪ್ಪಂದಗಳನ್ನು ಮಾಡಿಕೊಳ್ಳಬೇಕು ಎಂದು ಸಚಿವ ಅಶ್ವತ್ಥನಾರಾಯಣ ತಿಳಿಸಿದರು. ಎನ್‌ಇಪಿ ಅಡಿ ಪದವಿ ಮಟ್ಟದಲ್ಲಿ 8 ಕ್ರೆಡಿಟ್ ಕೋರ್ಸ್ ಪ್ರಾರಂಭಿಸಬೇಕು. ಪಠ್ಯಕ್ರಮ ಸಿದ್ಧಪಡಿಸಲು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಇದನ್ನು ಅಳವಡಿಸಲು ಕಾರ್ಯತಂಡ ರಚಿಸಬೇಕೆಂಬ ಸಲಹೆ ವರದಿಯಲ್ಲಿದೆ ಎಂದೂ ಹೇಳಿದರು.

ಜ.26ಕ್ಕೆ ಸಾಮೂಹಿಕ ಗೀತಗಾಯನ

ಬೆಂಗಳೂರು: ದೇಶಭಕ್ತಿ ಗೀತೆ ಗಾಯನ ಮತ್ತು ನೃತ್ಯ ಸ್ಪರ್ಧೆ ಸಮಿತಿಯು ಜನವರಿ 26ರ ಗಣರಾಜ್ಯೋತ್ಸವ ದಿನದಂದು ಬೆಳಿಗ್ಗೆ 10.30ರಿಂದ 11.30ರವರೆಗೆ ಸಾಮೂಹಿಕ ಗೀತಗಾಯನ ಹಾಗೂ ನೃತ್ಯ ಪ್ರದರ್ಶನವನ್ನು ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಅಧ್ಯಕ್ಷ ಎನ್. ಕುಮಾರ್, ‘ಗಣರಾಜ್ಯೋತ್ಸವದಂದು ಹಮ್ಮಿಕೊಂಡಿರುವ ಸಮೂಹ ಗಾಯನ ಮತ್ತು ನೃತ್ಯ ಸಮರ್ಪಣಾ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಜ.10ರೊಳಗೆ www.deshabhakti.com ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು’ ಎಂದು ಹೇಳಿದರು.



ಯಾನದ ನೆನಪು

ಮಲ್ಲೇಪುರಂ ಜಿ.ವೆಂಕಟೇಶ್–70 ಅಭಿನಂದನಾ ಸಮಿತಿ ಹಾಗೂ ಕರ್ನಾಟಕ ಕನ್ನಡ ಬರಹಗಾರರು ಮತ್ತು ಪ್ರಕಾಶಕರ ಸಂಘವು ನಯನ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ‘ಮಲ್ಲೇಪುರಂ ಗ್ರಂಥ ಪ್ರಕಟಣೆಯ 45 ವರ್ಷಗಳ ಯಾನದ ನೆನಪು’ ಕಾರ್ಯಕ್ರಮದಲ್ಲಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ್ ಅವರನ್ನು ಸನ್ಮಾನಿಸಲಾಯಿತು. ಮನು ಬಳಿಗಾರ್, ಪ್ರಕಾಶಕರ ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ಕಾರ್ಯದರ್ಶಿ ದೊಡ್ಡೇಗೌಡ, ಸಿವಿಜಿ ಪ್ರಕಾಶನದ ಸಿವಿಜಿ ಚಂದ್ರ, ರಾಜ್ಯ ಮುದ್ರಣಕಾರರ ಸಂಘದ ಅಧ್ಯಕ್ಷ ಬಿ.ಆರ್.ಅಶೋಕ್ ಕುಮಾರ್, ಸಮಿತಿ ಅಧ್ಯಕ್ಷ ಕೆ.ಜಿ.ಲಕ್ಷ್ಮೀನಾರಾಯಣಪ್ಪ, ವೂಡೇ ಪಿ.ಕೃಷ್ಣ ಹಾಗೂ ಇತರರು ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು ವಿ.ವಿ. ಕುಲಸಚಿವರ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕುಲಸಚಿವರಾಗಿದ್ದ ಜ್ಯೋತಿ ಅವರನ್ನು ವರ್ಗಾವಣೆ ಮಾಡಲಾಗಿದೆ. ಇವರ ಸ್ಥಾನಕ್ಕೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಎಂ. ಕೊಟ್ರೇಶ್ ಅವರನ್ನು ನೇಮಿಸಲಾಗಿದೆ.

ಐಎಎಸ್ ಅಧಿಕಾರಿಯಾಗಿರುವ ಜ್ಯೋತಿ ಅವರನ್ನು ವರ್ಗಾವಣೆ ಮಾಡಿ ನವೆಂಬರ್ 26ರಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್) ಆದೇಶ ಹೊರಡಿಸಿದೆ. ‘ಬುಧವಾರ ಮಧ್ಯಾಹ್ನ 3.30ಕ್ಕೆ ಇ-ಮೇಲ್ ದೊರೆತಿದೆ. ಗುರುವಾರ ಅಧಿಕಾರ ಹಸ್ತಾಂತರಿಸುತ್ತೇನೆ’ ಎಂದು ಜ್ಯೋತಿ ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪ್ರೊ. ಕೊಟ್ರೇಶ್, ‘ಬುಧವಾರ ಬೆಳಿಗ್ಗೆ 11 ಗಂಟೆಗೆ ಅಧಿಕಾರ ಸ್ವೀಕರಿಸಿದ್ದೇನೆ’ ಎಂದು ತಿಳಿಸಿದ್ದಾರೆ. ಜತೆಗೆ, ಕುಲಸಚಿವರ ಹುದ್ದೆಗೆ ಪ್ರಾಧ್ಯಾಪಕರನ್ನು ಡಿಪಿಎಆರ್ ನೇಮಿಸಿರುವುದಕ್ಕೆ ಆಕ್ಷೇಪಗಳು ವ್ಯಕ್ತವಾಗಿವೆ. ಉನ್ನತ ಶಿಕ್ಷಣ ಇಲಾಖೆ ಮಾತ್ರ ಪ್ರಾಧ್ಯಾಪಕರ ನೇಮಕಾತಿ ಮತ್ತು ವರ್ಗಾವಣೆ ಕೈಗೊಳ್ಳಬಹುದು ಎಂದು ಪ್ರತಿಪಾದಿಸಲಾಗಿದೆ.

ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ಅವರು ಈ ವಿಷಯದ ಬಗ್ಗೆ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿದ್ದಾರೆ.

‘ಸಮಾಲೋಚನೆ ನಡೆಸದೆಯೇ ಕುಲಸಚಿವರ ಹುದ್ದೆಗೆ ಪ್ರಾಧ್ಯಾಪಕರನ್ನು ಡಿಪಿಎಆರ್ ನೇಮಿಸಿದೆ. ಈ ಆದೇಶವನ್ನು ರದ್ದುಪಡಿಸಬೇಕು. ಆಡಳಿತದ ಅನುಭವ ಇಲ್ಲದ ವ್ಯಕ್ತಿಯನ್ನು ಈ ಹುದ್ದೆಗೆ ನೇಮಿಸಲಾಗಿದೆ. ಐಎಎಸ್ ಅಥವಾ ಹಿರಿಯ ಶ್ರೇಣಿ ಕೆಎಎಸ್ ಅಧಿಕಾರಿಗಳನ್ನು ಮಾತ್ರ ಆಡಳಿತದ ಹುದ್ದೆಗಳಿಗೆ ನೇಮಿಸಬೇಕು ಎಂದು ತಿದ್ದುಪಡಿ ಮಾಡಲಾಗಿದೆ. ಹೀಗಾಗಿ, ಭವಿಷ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಯಾವುದೇ ನೌಕರ ಅಥವಾ ಅಧಿಕಾರಿಯನ್ನು ವರ್ಗಾವಣೆ ಮಾಡುವಾಗ ಇಲಾಖೆಯನ್ನು ಸಂಪರ್ಕಿಸಬೇಕು ’ ಎಂದು ತಿಳಿಸಿದ್ದಾರೆ.

ಕಸಾಪ ಸದಸ್ಯತ್ವ: ನೋಂದಣಿ ಶುಲ್ಕ ಇಳಿಕೆಗೆ ಕ್ರಮ

ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯತ್ವ ನೋಂದಣಿ ಶುಲ್ಕವನ್ನು ₹500ರಿಂದ ₹250ಕ್ಕೆ ಇಳಿಸಲು ಶೀಘ್ರದಲ್ಲೇ ಕ್ರಮ ಕೈಗೊಳ್ಳಲಾಗುವುದು’ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ತಿಳಿಸಿದ್ದಾರೆ.

‘ಕಸಾಪವನ್ನು ಜನಸಾಮಾನ್ಯರ ಪರಿಷತ್ತನ್ನಾಗಿ ಮಾಡುವುದು ಹಾಗೂ ಸದಸ್ಯರ ಸಂಖ್ಯೆ ಹೆಚ್ಚಿಸುವ ಉದ್ದೇಶದಿಂದ ಶುಲ್ಕ ಕಡಿಮೆ ಮಾಡುವ ಚಿಂತನೆ ಇದೆ. ಹಾಗಾಗಿ, ಮುಂದಿನ ಸಭೆಯಲ್ಲಿ ಶುಲ್ಕ ಕಡಿತಗೊಳಿಸುವ ಬಗ್ಗೆ ನಿರ್ಣಯ ಕೈಗೊಂಡು, ಅನುಮೋದನೆ ಪಡೆಯಲಾಗುವುದು’ ಎಂದಿದ್ದಾರೆ.

‘ಬಿಡಿಎ: ₹15 ಸಾವಿರ ಕೋಟಿ ಸಂಗ್ರಹದ ಗುರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ವರ್ಷದೊಳಗೆ ₹ 15 ಸಾವಿರ ಕೋಟಿ ಕ್ರೋಡಿಕರಿಸಲಿದೆ. ನಗರದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪಾಲುದಾರನಂತೆ ಕಾರ್ಯನಿರ್ವಹಿಸಲಿದೆ’ ಎಂದು ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಹೇಳಿದರು. ಪ್ರಾಧಿಕಾರದಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಅವರು ಮಾತನಾಡಿದರು. ‘ನಗರದಾದ್ಯಂತ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಸ್ವತ್ತುಗಳನ್ನು ಬಿಡಿಎ ಹೊಂದಿದೆ. ಒತ್ತುವರಿಯಾಗಿರುವ ಈ ಸ್ವತ್ತುಗಳನ್ನು ಸ್ವಾಧೀನಪಡಿಸಿ ನಿವೇಶನಗಳನ್ನಾಗಿ ಅಭಿವೃದ್ಧಿಪಡಿಸಲಿದ್ದೇವೆ. ಅವುಗಳನ್ನು ಹರಾಜು ಹಾಕಿ ಪ್ರಾಧಿಕಾರವನ್ನು ಆರ್ಥಿಕ ಸ್ವಾವಲಂಬಿಯನ್ನಾಗಿ ಮಾಡಲಿದ್ದೇವೆ’ ಎಂದು ಹೇಳಿದರು.

‘ಇತ್ತೀಚಿನ ದಿನಗಳಲ್ಲಿ ಸಿಬ್ಬಂದಿಯಿಂದಾಗಿ ಬಿಡಿಎಗೆ ಕೆಟ್ಟ ಹೆಸರು ಬಂದಿದೆ. ಅದನ್ನು ಮೆಟ್ಟಿ ನಿಂತು ಸಂಸ್ಥೆಗೆ ಮತ್ತೆ ಒಳ್ಳೆಯ ಹೆಸರನ್ನು ತರೋಣ. ನಾಗರಿಕಸ್ನೇಹಿ ಸಂಸ್ಥೆಯನ್ನಾಗಿ ರೂಪಿಸುವ ಸಂಕಲ್ಪ ತೊಡೋಣ’ ಎಂದರು.

‘ಬಿಡಿಎ ಸಿಬ್ಬಂದಿಗಾಗಿ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಸುಸಜ್ಜಿತ ಕಲ್ಯಾಣಮಂಟಪವನ್ನು ನಿರ್ಮಿಸಲಿದ್ದೇವೆ’ ಎಂದು ತಿಳಿಸಿದರು. ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಧ್ವಜಾರೋಹಣ ನೆರವೇರಿಸಿದರು. ರಸಮಂಜರಿ ಕಾರ್ಯಕ್ರಮದಲ್ಲಿ ಬಿಡಿಎ ಆಯುಕ್ತ ಎಂ.ಬಿ.ರಾಜೇಶ್ ಗೌಡ ಕನ್ನಡ ಗೀತೆಗಳನ್ನು ಹಾಡಿದರು. ಬಿಡಿಎ ನೌಕರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಜಿ.ಎಂ.ಶಿವಶಂಕರ್ ಇದ್ದರು.

ಓದುವ ಸ್ಪರ್ಧೆ: ಫೈನಲ್‌ಗೆ ಇಬ್ಬರು ಆಯ್ಕೆ

ಬೆಂಗಳೂರು: ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಬೆಳೆಸಿ, ಗ್ರಹಿಕಾ ಕೌಶಲ ಪ್ರೋತ್ಸಾಹಿಸಲು ರೀಡ್ ಇಂಡಿಯಾ ಸೆಲೆಬ್ರೇಷನ್ಸ್ ಆಯೋಜಿಸಿರುವ ‘ರಾಷ್ಟ್ರೀಯ ಓದುವ ಸ್ಪರ್ಧೆ’ಯ ಅಂತಿಮ ಸುತ್ತಿಗೆ ನಗರದ ನಾರಾಯಣ ಇ ಟೆಕ್ನೊ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.

ಸಂಸ್ಥೆಯು ದೇಶದಾದ್ಯಂತ ಸಿಬಿಎಸ್‌ಇ ಶಾಲೆಗಳಲ್ಲಿ ಈ ಸ್ಪರ್ಧೆ ಆಯೋಜಿಸುತ್ತಿದೆ. ಡಿಸೆಂಬರ್ ಎರಡನೇ ವಾರದಲ್ಲಿ ನಡೆಯಲಿರುವ ಅಂತಿಮ ಸುತ್ತಿನ ಸ್ಪರ್ಧೆಗೆ ನಾರಾಯಣ ಇ ಟೆಕ್ನೊ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಅನನ್ಯ ರಾಜೀವ್ ಹಾಗೂ 3ನೇ ತರಗತಿಯ ಕಾಶ್ವಿ ಕೌಲೇಶ್ನಮ್ ಸೇರಿದಂತೆ ಒಟ್ಟು ಆರು ವಿದ್ಯಾರ್ಥಿಗಳನ್ನು ಮಾತ್ರ ಆಯ್ಕೆ ಮಾಡಲಾಗಿದೆ.



ಅನನ್ಯ ರಾಜೀವ್



ಕಾಶ್ವಿ ಕೌಲೇಶ್ನಮ್

ಚಿತ್ರಾವಳಿ



ಕಬ್ಬನ್ ಉದ್ಯಾನದಲ್ಲಿ ಹೂವುಗಳಿಂದ ಮೈದುಂಬಿಕೊಂಡಿರುವ ಟಬೂಬಿಯಾ ಮರದ ಬಳಿ ವ್ಯಕ್ತಿಯೊಬ್ಬರು ಕಸರತ್ತು ಮಾಡುತ್ತಿದ್ದ ದೃಶ್ಯ ಬುಧವಾರ ಕಂಡುಬಂತು



ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಕೆಸಿ ಸಂಸ್ಥೆಯ ‘ವಿಕೆಸಿ ಪ್ರೈಡ್ ಈಝಿ’ ನೂತನ ಬ್ರ್ಯಾಂಡ್ ಅನ್ನು ಯಶವಂತಪುರ ವಿಭಾಗದ ಎಸಿಪಿ ಅರುಣ್ ನಾಗಗೌಡ ಹಾಗೂ ವಿಕೆಸಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ವಿಕೆಸಿ ರಝಾಕ್ ಅನಾವರಣಗೊಳಿಸಿದರು. ನಿರ್ದೇಶಕರಾದ ಕೆ.ಸಿ.ಚಾಕೊ, ವಿ.ರಫೀಕ್ ಹಾಗೂ ವೇಣುಗೋಪಾಲ್ ಇದ್ದಾರೆ.



ನಾಯಂಡಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಕಾಮಗಾರಿಯನ್ನು ವಸತಿ ಸಚಿವ ವಿ.ಸೋಮಣ್ಣ ಬುಧವಾರ ಪರಿಶೀಲಿಸಿದರು. ಬಿಜೆಪಿ ಕಾರ್ಯಕರ್ತರು ಹಾಗೂ ಅಧಿಕಾರಿಗಳು ಇದ್ದರು –ಪ್ರಜಾವಾಣಿ ಚಿತ್ರಗಳು

ಬಿಎಂಟಿಸಿ: ಶುಲ್ಕ ರಶೀದಿ ಇದ್ದರೆ ಪ್ರಯಾಣಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ಬಿಎಂಟಿಸಿ ಬಸ್‌ಗಳಲ್ಲಿ ಶುಲ್ಕ ರಶೀದಿ ಅಥವಾ ಶಿಕ್ಷಣ ಸಂಸ್ಥೆಯ ಗುರುತಿನ ಚೀಟಿಯೊಂದಿಗೆ ಪ್ರಯಾಣಿಸಲು ಡಿ.15ರವರೆಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

‘ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ 2021–22ನೇ ಶೈಕ್ಷಣಿಕ ಸಾಲಿನ 1ರಿಂದ 10ನೇ ತರಗತಿ, ಪಿಯುಸಿ, ಐಟಿಐ, ಪದವಿ, ಸ್ನಾತಕೋತ್ತರ ಪದವಿ, ಸಂಜೆ ಕಾಲೇಜು ಹಾಗೂ ಪಿಎಚ್‌.ಡಿ ವಿದ್ಯಾರ್ಥಿಗಳು ಪಾಸ್ ಪಡೆಯಲು ಸಮಯಾವಕಾಶ ಕಲ್ಪಿಸಲಾಗಿತ್ತು. ವಿದ್ಯಾರ್ಥಿಗಳು ಪಾಸ್ ಬದಲಿಗೆ ರಶೀದಿ, ಗುರುತಿನ ಚೀಟಿ ತೋರಿಸಿ ಡಿ.15ರವರೆಗೆ ಮಾತ್ರ ಪ್ರಯಾಣಿಸಬಹುದು’ ಎಂದು ಪ್ರಕಟಣೆ ತಿಳಿಸಿದೆ.

‘ಭ್ರಷ್ಟಾಚಾರದ ಬೆಳವಣಿಗೆ ಮೂರು ಪಟ್ಟು ಹೆಚ್ಚು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2018ರ ಚುನಾವಣೆಯ ಹೊಸ್ತಿಲಿನಲ್ಲಿ ಪ್ರಧಾನಿ ಮೋದಿ ಅವರು, ಸಿದ್ದರಾಮಯ್ಯನವರದ್ದು 10 ಪರ್ಸೆಂಟ್ ಕಮಿಷನ್ ಸರ್ಕಾರ ಎಂದು ಹೀಯಾಳಿಸಿದ್ದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಮಿಷನ್ ಶೇ 40 ದಾಟಿದ್ದು, ಭ್ರಷ್ಟಾಚಾರದ ಬೆಳವಣಿಗೆ ಮೂರು ಪಟ್ಟು ಹೆಚ್ಚಾಗಿಸಿದ್ದು ಅವರ ಪಕ್ಷದ ಹೆಮ್ಮೆಯ ಸಾಧನೆ’ ಎಂದು ಕೆಪಿಸಿಸಿ ವಕ್ತಾರ ಪ್ರೊ.ಬಿ.ಕೆ. ಚಂದ್ರಶೇಖರ್ ವ್ಯಂಗ್ಯವಾಡಿದ್ದಾರೆ.

‘ರಾಜಕೀಯ ಪಕ್ಷಗಳ ಬದಲು ಕರ್ನಾಟಕದ ಗುತ್ತಿಗೆದಾರರ ಸಂಘವೇ ಪ್ರಧಾನಿಯವರಿಗೆ ಪತ್ರ ಬರೆದು ರಾಜ್ಯದ ವಿವಿಧ ಇಲಾಖೆಗಳಲ್ಲಿ ಶೇ 40ರಷ್ಟು ಲಂಚ ಕೊಡದೇ ಕಾಮಗಾರಿಗಳ ಟೆಂಡರ್ ಹಾಗೂ ಬಿಲ್‌ಗಳನ್ನು ಅನುಮೋದಿಸುತ್ತಿಲ್ಲ ಎಂದು ದೂರಿತ್ತಿದ್ದಾರೆ. ರಾಜ್ಯದ ಚರಿತ್ರೆಯಲ್ಲಿ ಹೊಸ ದಾಖಲೆ. ‘ಬಿಟ್ ಕಾಯಿನ್’ ಹಗರಣದ ಬೆನ್ನಲ್ಲೇ ಬಂದಿರುವ ಈ ನಿರ್ಭೀತ ಆಪಾದನೆ ರಾಜ್ಯದ ಬಿಜೆಪಿ ಸರ್ಕಾರ, ಕೆಲವು ಸಂಸತ್ ಸದಸ್ಯರು, ಕೆಲವು ಶಾಸಕರು ಮತ್ತು ಎಲ್ಲ ಹಂತದ ಅಧಿಕಾರಿಗಳೂ ತಲೆ ತಗ್ಗಿಸುವಂತೆ ಮಾಡಿದೆ’ ಎಂದು ಅವರು ಹೇಳಿದ್ದಾರೆ.

‘ಗುತ್ತಿಗೆದಾರರ ಆರೋಪ ಈ ಹಿಂದಿನ ಸರ್ಕಾರದ ಅವಧಿಗೆ ಸೀಮಿತವಾಗಿರುವುದು ಸರಿಯೇ. ಆದರೆ, ಕಳೆದ ನಾಲ್ಕು ತಿಂಗಳಿನಲ್ಲಿ ಬೊಮ್ಮಾಯಿ ಅವರಿಗೆ ವಿಷಯ ತಿಳಿದಿರಲಿಲ್ಲವೆಂದರೂ, ಅವರು ಯಡಿಯೂರಪ್ಪನವರ ಸಚಿವ ಸಂಪುಟದಲ್ಲಿ ಗೃಹ ಸಚಿವರಾಗಿದ್ದವರು. ಹಾಗಿದ್ದಾಗ ಶೇ 40ರ ಕಮಿಷನ್ ವ್ಯವಹಾರ ಅವರ ಗಮನಕ್ಕೆ ಬರದಿರಲು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿರುವ ಅವರು, ‘ಈ ಬಗ್ಗೆ ಅಧಿಕಾರಿಗಳಿಂದ ತನಿಖೆ ನಡೆಸುವ ಬದಲು, ಆಯೋಗವೊಂದನ್ನು ನೇಮಿಸುವುದು ಸೂಕ್ತ’ ಎಂದು ಅಭಿಪ್ರಾಯಪಟ್ಟಿದ್ದಾರೆ.

ನಗರದಲ್ಲಿ ಇಂದು

ಕನ್ನಡ ರಾಜ್ಯೋತ್ಸವ: ಆಯೋಜನೆ–ಬೆಂಗಳೂರು ವಕೀಲರ ಸಾಹಿತ್ಯ ಕೂಟ, ಸ್ಥಳ–ವಕೀಲರ ಭವನ, ಬೆಳಿಗ್ಗೆ 10

‘ಸಂಭ್ರಮ’–ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿಯ (ಎಫ್‌ಐಸಿಸಿಐ) ಎಫ್‌ಎಲ್‌ಒ ಲೇಡೀಸ್ ಆರ್ಗನೈಸೇಷನ್‌ನ ವಾರ್ಷಿಕೋತ್ಸವ ಹಾಗೂ ‘ವಸ್ತ್ರಂ’ ಟೆಕ್ಸ್‌ಟೈಲ್ಸ್ ಮತ್ತು ಕರಕುಶಲ ವಸ್ತುಗಳ ಪ್ರದರ್ಶನ: ಉದ್ಘಾಟನೆ–ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷೆ ಉಜ್ವಲ ಸಿಂಘಾನಿಯ, ಸ್ಥಳ–ರಾಜ್ ವೆಸ್ಟ್‌ಎಂಡ್, ಬೆಳಿಗ್ಗೆ 10.30

ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಶಿಪ್: ಉದ್ಘಾಟನೆ–ಗೃಹ ಸಚಿವ ಆರಗ ಜ್ಞಾನೇಂದ್ರ, ಅಧ್ಯಕ್ಷತೆ–ಶಾಸಕ ಎನ್.ಎ.ಹ್ಯಾರೀಸ್, ಅತಿಥಿಗಳು–ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನೀಲ್ ಕುಮಾರ್, ಒಳಾಡಳಿತ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಹಾಕಿ ಆಟಗಾರ ಅರ್ಜುನ ಹಾಲಪ್ಪ, ನಟ ಸುದೀಪ್, ಆಯೋಜನೆ–ರಾಜ್ಯ ಪೊಲೀಸ್ ಇಲಾಖೆ, ಸ್ಥಳ–ಹಾಕಿ ಕ್ರೀಡಾಂಗಣ, ಶಾಂತಿನಗರ, ಸಂಜೆ 4

‘ರಾವಿ ನದಿಯ ದಂಡೆಯಲ್ಲಿ’ ನಾಟಕ ಪ್ರದರ್ಶನ: ಪ್ರಸ್ತುತಿ–ರಂಗಾಸ್ಮಿತ ಕಲಾತಂಡ, ಸ್ಥಳ–ರಂಗಶಂಕರ, ಜೆ.ಪಿ. ನಗರ, ಸಂಜೆ 7.30



‘ಗಾರ್ಗಿ’ ನಾಟಕ ದೃಶ್ಯ

ಶಂಕರನಾಗ್ ನಾಟಕೋತ್ಸವ– ‘ಗಾರ್ಗಿ’ ನಾಟಕ ಪ್ರದರ್ಶನ: ಪ್ರಸ್ತುತಿ–ಸಾತ್ವಿಕ, ಆಯೋಜನೆ–ರಂಗಪಯಣ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 6

ಡಿ.6ಕ್ಕೆ ಕಾಲ್ನಡಿಗೆ ಜಾಥಾ

ಬೆಂಗಳೂರು: ‘ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನವನ್ನು ‘ಸ್ವಾಭಿಮಾನಿ ಸಂಕಲ್ಪ ದಿನ’ವಾಗಿ ಆಚರಿಸಬೇಕು ಎಂದು ಒತ್ತಾಯಿಸಿ ಡಿ.6ರಂದು ಬೆಳಿಗ್ಗೆ 11 ಗಂಟೆಗೆ ನಗರದ ಬನ್ನಪ್ಪ ಉದ್ಯಾನದಿಂದ ವಿಧಾನಸೌಧ ಎದುರಿನ ಅಂಬೇಡ್ಕರ್ ಪ್ರತಿಮೆವರೆಗೆ ಜಾಥಾ ನಡೆಸಲಾಗುವುದು’ ಎಂದು ದಲಿತ ಸಂಘರ್ಷ ಸಮಿತಿಯ (ಸಮತಾವಾದ) ಸಂಸ್ಥಾಪಕ ಅಧ್ಯಕ್ಷ ಎಚ್. ಮಾರಪ್ಪ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅಂಬೇಡ್ಕರ್ ಅವರ ಪರಿನಿರ್ವಾಣ ದಿನವನ್ನು ಸ್ವಾಭಿಮಾನಿ ಸಂಕಲ್ಪ ದಿನವನ್ನಾಗಿ ಆಚರಿಸಬೇಕು ಎಂದು ಜಾಥಾ ಮೂಲಕ ಸರ್ಕಾರವನ್ನು ಒತ್ತಾಯಿಸಲಾಗುವುದು. ಅಂದು ಎಲ್ಲ ಸಂಘಟನೆಗಳು ಒಗ್ಗೂಡಿ ಅಂಬೇಡ್ಕರ್ ಅವರ ಪ್ರತಿಮೆವರೆಗೆ ಗುಲಾಬಿ ಹಿಡಿದು ಜಾಥಾ ನಡೆಸಿ, ಪುಷ್ಪನಮನ ಸಲ್ಲಿಸಲಾಗುವುದು’ ಎಂದರು.

ಕಾರು ಡಿಕ್ಕಿ: ರಾಗಿ ಕಣ ಮಾಡುತ್ತಿದ್ದ ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ರಾಗಿ ಕಣ ಮಾಡುತ್ತಿದ್ದವರಿಗೆ ವೇಗವಾಗಿ ಬಂದ ಕಾರೊಂದು ಡಿಕ್ಕಿ ಹೊಡೆದಿದ್ದರಿಂದ ಬಿಂದು (28) ಹಾಗೂ ಗಾಳಿ ಹೊನ್ನಮ್ಮ (68) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹೊಸಕೆರೆಹಳ್ಳಿ ಬಳಿಯ ನೈಸ್ ರಸ್ತೆಯಲ್ಲಿ ಬುಧವಾರ ರಾತ್ರಿ ಘಟನೆ ನಡೆದಿದ್ದು, ಈ ಸಂಬಂಧ ಕುಮಾರಸ್ವಾಮಿ ಲೇಔಟ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತರನ್ನು ಹೊರಸಂದ್ರ ನಿವಾಸಿಗಳೆಂದು ಗುರುತಿಸಲಾಗಿದೆ.

‘ಹೊಸಕೆರೆಹಳ್ಳಿಯಿಂದ ಮೈಸೂರಿಗೆ ಸಂಪರ್ಕ ಕಲ್ಪಿಸುವ ಹೊರಸಂದ್ರ ಬ್ರಿಡ್ಜ್ ಬಳಿ ವಾಹನಗಳ ಸಂಚಾರವೇ ಇರುವುದಿಲ್ಲ. ಹೀಗಾಗಿ ಸ್ಥಳೀಯರು ರಾಗಿ ಬಣವೆ ಹಾಕಿಕೊಂಡಿದ್ದರು. ಏಳು ಮಹಿಳೆಯರು ಕೆಲಸ ಮಾಡುತ್ತಿದ್ದರು. ಬೀದಿ ದೀಪದ ವ್ಯವಸ್ಥೆಯೂ ಇರಲಿಲ್ಲ. ಊಟ ಮುಗಿಸಿ ಎಲ್ಲರೂ ಅಲ್ಲೇ ಕುಳಿತಿದ್ದರು. ರಸ್ತೆಗೆ ಅಡ್ಡಲಾಗಿ ಗಾಡಿಯೊಂದನ್ನು ನಿಲ್ಲಿಸಿದ್ದರು. ಈ ವೇಳೆ ಕಾರೊಂದು ವೇಗವಾಗಿ ಹೋಗಿ ಡಿಕ್ಕಿ ಹೊಡೆದಿದೆ. ಇಬ್ಬರು ಸ್ಥಳದಲ್ಲೇ ಮೃತರಾಗಿದ್ದಾರೆ. ಐವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಕಾರು ಚಾಲಕನನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.



ಆರೋಪಿಯಿಂದ ಜಪ್ತಿ ಮಾಡಿರುವ ಬೈಕ್ ಹಾಗೂ ಮೊಬೈಲ್‌ಗಳು

ಬೈಕ್, ಮೊಬೈಲ್ ಕಳ್ಳನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಕಳ್ಳತನ ಮಾಡುತ್ತಿದ್ದ ಬಾಲಕನನ್ನು ಬಂಧಿಸಿರುವ ಕಲಾಸಿಪಾಳ್ಯ ಠಾಣೆ ಪೊಲೀಸರು ಆತನಿಂದ ₹4.30 ಲಕ್ಷ ಮೌಲ್ಯದ ಮೂರು ದ್ವಿಚಕ್ರ ವಾಹನ ಹಾಗೂ ವಿವಿಧ ಕಂಪನಿಗಳ 10 ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ.

‘ಠಾಣಾ ವ್ಯಾಪ್ತಿಯಲ್ಲಿ ಅಪರಿಚಿತ ಬಾಲಕನೊಬ್ಬ ದ್ವಿಚಕ್ರವಾಹನವೊಂದನ್ನು ಮಾರಲು ಯತ್ನಿಸುತ್ತಿರುವ ಬಗ್ಗೆ ಮಾಹಿತಿ ಲಭಿಸಿತ್ತು. ಸ್ಥಳಕ್ಕೆ ಹೋಗಿ ಆತನನ್ನು ವಶಕ್ಕೆ ಪಡೆಯಲಾಗಿತ್ತು. ಅದು ಕದ್ದು ತಂದಿರುವ ಬೈಕ್ ಎಂಬುದನ್ನು ವಿಚಾರಣೆ ವೇಳೆ ಆತ ಒಪ್ಪಿಕೊಂಡಿದ್ದ’ ಎಂದು ಪೊಲೀಸರು ಹೇಳಿದ್ದಾರೆ.

‘ಪರಪ್ಪನ ಅಗ್ರಹಾರ ಹಾಗೂ ಕುದೂರು ಪೊಲೀಸ್ ಠಾಣೆಗಳ ವ್ಯಾಪ್ತಿಗಳಲ್ಲಿ ಮೊಬೈಲ್ ಹಾಗೂ ಬೈಕ್‌ಗಳನ್ನು ಕಳ್ಳತನ ಮಾಡಿದ್ದಾಗಿಯೂ ಆರೋಪಿ ವಿಚಾರಣೆ ವೇಳೆ ತಿಳಿಸಿದ್ದಾನೆ’ ಎಂದಿದ್ದಾರೆ.

‘ಬ್ಯಾಂಕಿಂಗ್ ಸೇವೆಗಳಲ್ಲಿ ಕನ್ನಡ ಬಳಸಿ’

ಬೆಂಗಳೂರು: ‘ರಾಜ್ಯದ ಎಲ್ಲ ಬ್ಯಾಂಕುಗಳಲ್ಲಿ ಗ್ರಾಹಕ ಸೇವೆಗಳ ಪ್ರಕ್ರಿಯೆ ಕನ್ನಡದಲ್ಲೇ ನಡೆಯಬೇಕು’ ಎಂದು ಜಯ ಕರ್ನಾಟಕ ಜನಪರ ವೇದಿಕೆ ಅಧ್ಯಕ್ಷ ಆರ್.ಚಂದ್ರಪ್ಪ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಕೆಲವು ಬ್ಯಾಂಕುಗಳ ವಿಲೀನದ ನಂತರ ಬ್ಯಾಂಕಿಂಗ್ ಸೇವೆಗಳಲ್ಲಿ ಹಿಂದಿ ಮತ್ತು ಇಂಗ್ಲಿಷ್ ಬಳಕೆ ಹೆಚ್ಚಾಗಿ, ಕನ್ನಡವನ್ನು ಕಡೆಗಣಿಸಲಾಗುತ್ತಿದೆ. ಹೋಟೆಲ್‌ಗಳಲ್ಲೂ ಕನ್ನಡ ಬಳಕೆ ಕಡಿಮೆಯಾಗುತ್ತಿದ್ದು, ಆಹಾರದ ದರಪಟ್ಟಿಯಲ್ಲಿ ಕನ್ನಡ ಕಡ್ಡಾಯಗೊಳಿಸಬೇಕು’ ಎಂದರು.

ಇಂಗುಗುಂಡಿ, ಬಾವಿ ನಿರ್ಮಿಸುವ ಪರಿಣತಿ • ನೀರು ಸಂಗ್ರಹದ ಕಾಯಕದಲ್ಲಿ ತಂಡ ನಿರತ

ಇವರು ಜಲ ಸಂರಕ್ಷಣೆಯ ಯೋಧರು

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಇವರು ಮಳೆ ನೀರು ಸಂಗ್ರಹದ ಕಾಯಕದಲ್ಲಿ ತೊಡಗಿರುವ ಜಲ ಸಂರಕ್ಷಣೆಯ ಯೋಧರು.

‘ಮಳೆ ನೀರಿನ ಪ್ರತಿ ಹನಿಯನ್ನು ಹಿಡಿದು ಮರಳಿ ಭೂಮಿಗೆ ನೀಡಬೇಕು. ಟ್ಯಾಂಕರ್‌ಗಳನ್ನು ಕಡಿಮೆಗೊಳಿಸಿ, ಭೂಮಿ ಮರುಪೂರಣಗೊಳಿಸಬೇಕು’ ಎನ್ನುವ ಆಶಯದೊಂದಿಗೆ ಈ ತಂಡ ಕಾರ್ಯನಿರ್ವಹಿಸುತ್ತಿದೆ.

ಜಾಗ ಎಷ್ಟೇ ಇರಲಿ, ಇಂಗುಗುಂಡಿಗಳನ್ನು ಚೊಕ್ಕದಾಗಿ ವೈಜ್ಞಾನಿಕವಾಗಿ ನಿರ್ಮಿಸಿಕೊಡುವ ಕೈಚಳಕ ಹೊಂದಿದ್ದಾರೆ. ಬೆಂಗಳೂರು ಮಹಾನಗರದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಇಂಗುಗುಂಡಿಗಳನ್ನು ಇವರು ನಿರ್ಮಿಸಿದ್ದಾರೆ.

ನಗರದ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ 20 ಜನರ ಈ ತಂಡ, ಇಂಗುಗುಂಡಿ ಮತ್ತು ಬಾವಿ ತೋಡುವಲ್ಲಿಯೂ ಪರಿಣತಿ ಸಾಧಿಸಿದ್ದಾರೆ. ಯಾವ ಪ್ರದೇಶದಲ್ಲಿ ಎಷ್ಟು ಆಳಕ್ಕೆ ನೀರು ಸಿಗುತ್ತದೆ ಎನ್ನುವುದನ್ನು ವಿಶ್ಲೇಷಣೆ ಮಾಡುವ ಚಾಕಚಕ್ಯತೆಯನ್ನು ಈ ತಂಡ ಹೊಂದಿದೆ. ಮಣ್ಣಿನ ಗುಣಲಕ್ಷಣಗಳನ್ನು ನೋಡಿ ನೀರು ಲಭ್ಯತೆ ಖಚಿತಪಡಿಸುತ್ತಾರೆ.

ಭೋವಿ ಸಮುದಾಯದ ಈ ತಂಡ, ತಲೆತಲಾಂತರಗಳಿಂದ ಬಾವಿ ತೋಡುವ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. 40 ವರ್ಷಗಳ ಅನುಭವ ಇರುವ ಪೆದ್ದಣ್ಣ ಅವರು 5,000ಕ್ಕೂ ಹೆಚ್ಚು ಬಾವಿಗಳನ್ನು ತೋಡಿದ್ದಾರೆ. ಇವರ ಮಗ ವೆಂಕಟೇಶ್ ಪೆದ್ದಣ್ಣ 2,000ಕ್ಕೂ ಹೆಚ್ಚು ಬಾವಿಗಳನ್ನು ತೋಡಿದ್ದಾರೆ.

ಪರಿಸ್ಥಿತಿ ಬದಲಾದಂತೆ ಬಾವಿಗಳನ್ನು ತೋಡುವ ಜತೆಗೆ, ನೀರು ಮರುಪೂರಣ ಕಾರ್ಯದಲ್ಲಿ ತೊಡಗಿದರು. ಇಂಗು ಗುಂಡಿಗಳ ನಿರ್ಮಾಣದ ಜತೆಗೆ, ಕೊಳವೆ ಬಾವಿಗಳ ಮರುಪೂರಣ ಹಾಗೂ ಬಾವಿಗಳ ಹೂಳು ತೆಗೆಯುವ ಕಾರ್ಯ ಕೈಗೊಂಡಿದ್ದಾರೆ. ಬಯೋಮ್- ಎನ್ವಿರಾನ್‌ಮೆಂಟಲ್ ಸಲ್ಯೂಷನ್ಸ್‌ನ ‘ಮಿಲಿಯನ್ ವೆಲ್ಸ್’ ಅಭಿಯಾನದಲ್ಲಿ ಇವರು ಸಕ್ರಿಯವಾಗಿ ಭಾಗವಹಿಸಿದ್ದಾರೆ.


ಇಂಗು ಗುಂಡಿ ಮುಂದೆ ಪೆದ್ದಣ್ಣ

ಹೊಸ ಬೆಳಕು


ವೆಂಕಟೇಶ್

‘ಬಾವಿ ತೋಡುವ ಕಾರ್ಯ ನಮಗೆ ಬಳುವಳಿಯಾಗಿ ಬಂದಿದೆ. ನಮ್ಮದು ಏಳನೇ ಪೀಳಿಗೆ. ನಮ್ಮ ಹಿರಿಯರು ಕೆರೆ ಕಟ್ಟೆಗಳನ್ನು ಕಟ್ಟುವಲ್ಲಿ ನಿಸ್ಸೀಮರಾಗಿದ್ದರು. ಈಗ ಎಲ್ಲೆಡೆ ಕಾಂಕ್ರೀಟ್‌ನಿಂದ ಭೂಮಿಗೆ ನೀರು ಹರಿಯುತ್ತಿಲ್ಲ. ಎಲ್ಲ ಕಡೆ ಇಂಗು ಗುಂಡಿಗಳನ್ನು ಮಾಡಿದರೆ ನೀರು ಭೂಮಿಯಲ್ಲಿ ಇಂಗುತ್ತದೆ. ಜತೆಗೆ ಕೊಳವೆಬಾವಿಗಳು ಮರುಪೂರಣವಾಗುತ್ತದೆ. ಒಂದು ಇಂಚು ನೀರು ಲಭ್ಯವಾಗುವಲ್ಲಿ 2–3 ಇಂಚು ಬರುತ್ತದೆ’ ಎಂದು ವೆಂಕಟೇಶ್ ವಿವರಿಸಿದರು.


ಇಂಗು ಗುಂಡಿ

‘ಇಂಗು ಗುಂಡಿಗೆ 3 ಅಡಿ ಸುತ್ತಳತೆ ಮತ್ತು 15–20 ಅಡಿ ಆಳ ತೆಗೆಯಲಾಗುತ್ತಿದೆ. ಜತೆಗೆ ಕಲ್ಲಿನ ಜೆಲ್ಲಿ ಹಾಕಲಾಗುತ್ತದೆ. ನೀರು ಎತ್ತಲು ಮೋಟಾರ್ ಪಂಪ್ ಬಳಸಬಹುದು. ಇದಕ್ಕೆ ₹30 ಸಾವಿರ ಖರ್ಚಾಗಬಹುದು. ಬಯೋಮ್- ಎನ್ವಿರಾನ್‌ಮೆಂಟಲ್ ಸಲ್ಯೂಷನ್ಸ್‌ನ ಮಾರ್ಗದರ್ಶನದಲ್ಲಿ ಇಂಗು ಗುಂಡಿಗಳನ್ನು ತೆಗೆಯಲಾಗುತ್ತದೆ’ ಎಂದು ತಿಳಿಸಿದರು.

‘ಎಚ್‌ಎಸ್‌ಆರ್ ಲೇಔಟ್‌ನಲ್ಲಿ ವ್ಯಕ್ತಿಯೊಬ್ಬರು 1,200 ಅಡಿ ಕೊಳವೆಬಾವಿ ಕೊರೆದರೂ ನೀರು ಲಭ್ಯವಾಗಿರಲಿಲ್ಲ. ಟ್ಯಾಂಕರ್ ಮೂಲಕ ನೀರು ತಂದು ಅವರು ಮನೆ ನಿರ್ಮಿಸಿದರು. ನಂತರ ನಾವು ಸವಾಲಾಗಿ ಸ್ವೀಕರಿಸಿದೆವು. ಕೇವಲ 15 ಅಡಿ ಬಾವಿ ಕೊರೆದಾಗ ನೀರು ದೊರೆಯಿತು. ನೀರು ಸಿಕ್ಕಿದರೆ ಕಾಸು, ಇಲ್ಲದಿದ್ದರೆ ಬೇಡ ಎಂದು ಮನೆಯ ಮಾಲೀಕರಿಗೆ ಹೇಳಿದ್ದೆ. ನಮ್ಮ ತಿಳಿವಳಿಕೆ ಮತ್ತು ಜ್ಞಾನ ಆಧರಿಸಿ ಇಂತಹ ಸವಾಲು ಸ್ವೀಕರಿಸುತ್ತೇವೆ’ ಎಂದು ವೆಂಕಟೇಶ್ ಹೇಳುತ್ತಾರೆ.

ಸಂಪರ್ಕಕ್ಕೆ: 9080739674, 9655421005

5.59 ಕೆ.ಜಿ. ಚಿನ್ನದ ಗಟ್ಟಿ ಸುಲಿಗೆ: 7 ಮಂದಿ ಬಂಧನ

ನಗದು ಎಂದುಕೊಂಡು ಚಿನ್ನದ ಗಟ್ಟಿ ದೋಚಿದರು..

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನದ ವ್ಯಾಪಾರಿಯೊಬ್ಬರನ್ನು ಅಡ್ಡಗಟ್ಟಿ ಅವರ ಬಳಿ ಇದ್ದ ₹2.56 ಕೋಟಿ ಮೌಲ್ಯದ 5.59 ಕೆ.ಜಿ. ಚಿನ್ನದ ಗಟ್ಟಿಗಳನ್ನು ದೋಚಿಕೊಂಡು ಪರಾರಿಯಾಗಿದ್ದ ಏಳು ಆರೋಪಿಗಳನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸರ್ವಜ್ಞನಗರದ ಮೊಹಮ್ಮದ್ ಫರ್ಹಾನ್ ಯಾನೆ ಶಹಬಾಜ್ (23), ನಾಗವಾರ ಮುಖ್ಯರಸ್ತೆಯ ಮೊಹಮ್ಮದ್ ಹುಸೇನ್ (35), ವೆಂಕಟೇಶಪುರದ ಮೊಹಮ್ಮದ್ ಆರಿಫ್ (34) ಹಾಗೂ ಅಂಜುಂ (39), ಕುಶಾಲನಗರದ ಶಾಹಿದ್ ಅಹಮ್ಮದ್ (24), ಆರ್.ಟಿ.ನಗರದ ಉಮೇಶ್ (54) ಮತ್ತು ಗೋವಿಂದಪುರದ ಸುಹೈಲ್ ಬೇಗ್ (24) ಬಂಧಿತರು. ಇವರಿಂದ ₹ 2.25 ಕೋಟಿ ಮೌಲ್ಯದ 4.98 ಕೆ.ಜಿ.ಗಟ್ಟಿ, ಕೃತ್ಯಕ್ಕೆ ಬಳಸಿದ್ದ ಲಾಂಗ್ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಚಿನ್ನದ ಗಟ್ಟಿ ವ್ಯಾಪಾರಿಯಾಗಿದ್ದ ಸಿದ್ದೇಶ್ವರ್ ಸಿಂಗ್ ಎಂಬುವರು ಸಂಸ್ಕಾರ್ ಎಂಟರ್‌ಪ್ರೈಸಸ್ ಹೆಸರಿನ ಅಂಗಡಿ ನಡೆಸುತ್ತಿದ್ದರು. ನ.19ರ ರಾತ್ರಿ 8.30ರ ಸುಮಾರಿಗೆ ಅಂಗಡಿಯ ಕೆಲಸಗಾರ ಸೂರಜ್ ಜೊತೆ ಬೈಕ್‌ನಲ್ಲಿ ಕ್ವೀನ್ಸ್ ರಸ್ತೆ ಬಳಿಯ ಅಟ್ಟಿಕಾ ಗೋಲ್ಡ್ ಕಂಪನಿಗೆ ಹೋಗಿ ಚಿನ್ನದ ಗಟ್ಟಿಗಳನ್ನು ಖರೀದಿಸಿ ಅಂಗಡಿಗೆ ಹಿಂತಿರುಗುತ್ತಿದ್ದರು. ಈ ವೇಳೆ ಬೈಕ್‌ನಲ್ಲಿ ಬಂದ ಆರೋಪಿಗಳು ಅವರನ್ನು ತಡೆದಿದ್ದರು. ಬಳಿಕ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಲು ಮುಂದಾದಾಗ ಇಬ್ಬರೂ ಬೈಕ್‌ನಿಂದ ಕೆಳಕ್ಕೆ ಬಿದ್ದಿದ್ದರು. ಈ ಸಂದರ್ಭದಲ್ಲಿ ಆರೋಪಿಗಳು ಗಟ್ಟಿ ತುಂಬಿದ ಸೂಟ್‌ಕೇಸ್ ಕಸಿದು ಪರಾರಿಯಾಗಿದ್ದರು’ ಎಂದು ವಿವರಿಸಿದ್ದಾರೆ.

‘ಆರೋಪಿಗಳ ಪತ್ತೆಗೆ ಎರಡು ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಘಟನೆ ನಡೆದ ಸ್ಥಳದ ಸುತ್ತಲಿನ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿದ್ದ ದೃಶ್ಯಗಳನ್ನು ಪರಿಶೀಲಿಸಿದಾಗ ಆರೋಪಿಗಳ ಕುರಿತು ಸುಳಿವು ಸಿಕ್ಕಿತ್ತು’ ಎಂದು ಹೇಳಿದ್ದಾರೆ.

‘ಆರೋಪಿ ಉಮೇಶ್, ಅಟ್ಟಿಕಾ ಗೋಲ್ಡ್ ಕಂಪನಿಯ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ. ಆತ ಅಲ್ಲಿಗೆ ಬರುವವರ ಚಲನವಲನಗಳ ಮೇಲೆ ನಿಗಾ ಇಡುತ್ತಿದ್ದ. ಸಿದ್ದೇಶ್ವರ್ ಮತ್ತು ಸೂರಜ್ ಸೂಟ್‌ಕೇಸ್ ತೆಗೆದುಕೊಂಡು ಹೋಗುತ್ತಿದ್ದುದನ್ನು ಗಮನಿಸಿದ್ದ ಆತ ಮಾಹಿತಿಯನ್ನು ಇತರರಿಗೆ ಮುಟ್ಟಿಸಿದ್ದ. ಅದರಲ್ಲಿ ದೊಡ್ಡ ಮೊತ್ತದ ಹಣ ಇರಬಹುದು ಎಂದು ಭಾವಿಸಿದ್ದ ಆರೋಪಿಗಳು ಸುಲಿಗೆ ಮಾಡಲು ಸಂಚು ರೂಪಿಸಿದ್ದರು’ ಎಂದು ಮಾಹಿತಿ ನೀಡಿದರು.

‘ಬಂಧಿತ ಆರೋಪಿಗಳ ಪೈಕಿ ಇಬ್ಬರ ವಿರುದ್ಧ ಕಾಡುಗೊಂಡನಹಳ್ಳಿ ಠಾಣೆಯಲ್ಲಿ (ಕೆ.ಜಿ.ಹಳ್ಳಿ) ಕೊಲೆ ಪ್ರಕರಣಗಳು ದಾಖಲಾಗಿವೆ’ ಎಂದಿದ್ದಾರೆ.

ಬಹುಮಾನ ಘೋಷಣೆ: ಪ್ರಕರಣ ಬೇಧಿಸಿರುವ ಹಲಸೂರು ಗೇಟ್ ಠಾಣೆ ಪೊಲೀಸರ ತಂಡಕ್ಕೆ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ₹70 ಸಾವಿರ ನಗದು ಬಹುಮಾನ ಪ್ರಕಟಿಸಿದ್ದಾರೆ.

ಇಸ್ರೊ ಯೋಜನೆ ಸ್ಥಳಾಂತರ ವಿರೋಧಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಾನವಸಹಿತ ಗಗನಯಾನ ಯೋಜನೆಯನ್ನು ಬೆಂಗಳೂರಿನಿಂದ ಗುಜರಾತ್‌ಗೆ ಸ್ಥಳಾಂತರಿಸುವ ಪ್ರಸ್ತಾವ ವಿರೋಧಿಸಿ ಎನ್‌ಎಸ್‌ಯುಐ ಕಾರ್ಯಕರ್ತರು ನ್ಯೂ ಬಿಇಎಲ್ ರಸ್ತೆಯಲ್ಲಿರುವ ಇಸ್ರೊ ಕೇಂದ್ರ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು.



ಮಾನವಸಹಿತ ಗಗನಯಾನ ಯೋಜನೆ ಸ್ಥಳಾಂತರ ವಿರೋಧಿಸಿ ಎನ್‌ಎಸ್‌ಯುಐ ಕಾರ್ಯಕರ್ತರು ಇಸ್ರೊ ಕೇಂದ್ರ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು. ಎನ್‌ಎಸ್‌ಯುಐ ರಾಜ್ಯ ಘಟಕದ ಅಧ್ಯಕ್ಷ ಕೀರ್ತಿ ಗಣೇಶ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇದ್ದರು – ಪ್ರಜಾವಾಣಿ ಚಿತ್ರ

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಇಸ್ರೊ ರಾಜ್ಯದ ಹೆಮ್ಮೆಯ ಸಂಸ್ಥೆ. ಇಷ್ಟು ದಿನಗಳ ಕಾಲ ಬೆಂಗಳೂರಿನಿಂದಲೇ ಈ ಯೋಜನೆಯ ಸಿದ್ಧತೆ ನಡೆಯುತ್ತಿತ್ತು. ಈಗ ದಿಢೀರನೆ ಯೋಜನೆಯನ್ನು ಗುಜರಾತ್‌ಗೆ ಸ್ಥಳಾಂತರ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ. ಯೋಜನೆ ಬೆಂಗಳೂರಿನಲ್ಲೇ ಉಳಿಯಬೇಕು. ಅದಕ್ಕಾಗಿ ರಾಜ್ಯದಾದ್ಯಂತ ಹೋರಾಟ ನಡೆಸಲಾಗುವುದು’ ಎಂದರು.

ಕಾಂಗ್ರೆಸ್ ಪಕ್ಷ ಮಾತ್ರವಲ್ಲ ರಾಜ್ಯದ ಎಲ್ಲರೂ ಈ ಹೋರಾಟಕ್ಕೆ ಕೈಜೋಡಿಸಬೇಕು. ರಾಜ್ಯದಿಂದ ಆಯ್ಕೆಯಾದ ಬಿಜೆಪಿಯ 25 ಸಂಸದರು ಇದ್ದಾರೆ. ಅವರು ಧ್ವನಿ ಎತ್ತಬೇಕು. ರಾಜ್ಯ ಮತ್ತು ರಾಜ್ಯದ ವಿಜ್ಞಾನಿಗಳ ಗೌರವದ ಪ್ರಶ್ನೆ ಈ ವಿಷಯದ ಹಿಂದಿದೆ. ಯೋಜನೆಯ ಸ್ಥಳಾಂತರ ರಾಜ್ಯಕ್ಕೆ ಅವಮಾನ ಮಾಡಿದಂತೆ ಎಂದು ಹೇಳಿದರು.

ಶಾಸಕ ಕೃಷ್ಣ ಬೈರೇಗೌಡ, ಎನ್‌ಎಸ್‌ಯುಐ ರಾಜ್ಯ ಘಟಕದ ಅಧ್ಯಕ್ಷ ಕೀರ್ತಿ ಗಣೇಶ್, ಮುಖಂಡರಾದ ಹನುಮಂತೇಗೌಡ, ಜಯಸಿಂಹ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಮಕ್ಕಳ ವಿಚಾರಣೆ: ಪೊಲೀಸರಿಗೆ ನೋಟಿಸ್

ಬೆಂಗಳೂರು: ‘ದೇಶದ್ರೋಹ ಆರೋಪದ ಹಿನ್ನೆಲೆಯಲ್ಲಿ ಬೀದರ್‌ನ ಶಾಹಿನ್ ಶಿಕ್ಷಣ ಸಂಸ್ಥೆಯ ಮಕ್ಕಳನ್ನು ಸಮವಸ್ತ್ರ, ಮತ್ತು ಶಸ್ತ್ರಾಸ್ತ್ರದೊಂದಿಗೆ ವಿಚಾರಣೆ ನಡೆಸಿದ ಐವರು ಪೊಲೀಸ್ ಸಿಬ್ಬಂದಿಗೆ ಷೋಕಾಸ್ ನೋಟಿಸ್ ನೀಡಲಾಗಿದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ವಕೀಲೆ ನಯನ ಜ್ಯೋತಿ ಝಾವರ್ ಹಾಗೂ ಮಾನವ ಹಕ್ಕುಗಳ ಸಂಘಟನೆ ‘ಸಿಕ್ರಮ್’ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಸರ್ಕಾರದ ಪರ ವಕೀಲರು ಜ್ಞಾಪನಾ ಪತ್ರ ಸಲ್ಲಿಸಿ, ‘ಮಕ್ಕಳನ್ನು ವಿಚಾರಣೆಗೆ ಒಳಪಡಿಸುವಾಗ ಬಾಲ ನ್ಯಾಯ ಕಾಯ್ದೆಯ ಸಂಬಂಧಪಟ್ಟ ಕಲಂಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಿ ಈಗಾಗಲೇ ರಾಜ್ಯದ ಎಲ್ಲ ಪೊಲೀಸ್ ಅಧಿಕಾರಿಗಳಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

‘ತಪ್ಪಿತಸ್ಥ ಪೊಲೀಸ್ ಸಿಬ್ಬಂದಿ ಮತ್ತು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಐವರು ಪೊಲೀಸರಿಗೆ ಷೋಕಾಸ್ ನೋಟಿಸ್ ನೀಡಲಾಗಿದೆ. ಅವರಿಂದ ಉತ್ತರ ಬರಬೇಕಾಗಿದೆ. ನಂತರ ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ವಿವರಿಸಿದರು.

ಇದಕ್ಕೆ ಅತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, ‘ಕೇವಲ ಷೋಕಾಸ್ ನೋಟಿಸ್ ನೀಡಿದರೆ ಸಾಕಾಗುವುದಿಲ್ಲ. ಸರ್ಕಾರ ಏನು ಕ್ರಮ ಕೈಗೊಂಡಿದೆ ಎಂಬುದು ಮುಖ್ಯ’ ಎಂದ ನ್ಯಾಯಪೀಠ ವಿಚಾರಣೆಯನ್ನು 2022ರ ಮಾರ್ಚ್‌ಗೆ ಮುಂದೂಡಿದೆ.

ಜೈಲುಗಳಿಗೆ ಇಂಟರ್‌ನೆಟ್: ಮಾಹಿತಿ ಕೇಳಿದ ಹೈಕೋರ್ಟ್



ಬೆಂಗಳೂರು: ‘ರಾಜ್ಯದ ಎಷ್ಟು ಜೈಲುಗಳಿಗೆ ಇಂಟರ್‌ನೆಟ್ ಸಂಪರ್ಕ ಕಲ್ಪಿಸಲಾಗಿದೆ ಮತ್ತು ಎಷ್ಟು ಜೈಲುಗಳಲ್ಲಿ ಹೊಸದಾಗಿ ಸಂಪರ್ಕ ಕಲ್ಪಿಸಬೇಕಿದೆ ಎಂಬ ಬಗ್ಗೆ ಮಾಹಿತಿ ನೀಡಿ’ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

ಜೈಲುಗಳಲ್ಲಿನ ಸ್ಥಿತಿಗತಿ ಕುರಿತಂತೆ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎನ್. ಪಿ.ಅಮೃತೇಶ್, ‘ಬೆಂಗಳೂರು, ಮೈಸೂರು ಸೇರಿದಂತೆ ಪ್ರಮುಖ ನಗರಗಳ ಜೈಲುಗಳಿಗೆ ಹೋಲಿಸಿದರೆ ಇತರೆಡೆಗಳಲ್ಲಿ ಜೈಲುಗಳಿಗೆ ಇಂಟರ್‌ನೆಟ್ ಸಂಪರ್ಕವಿಲ್ಲ’ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಶಿಕ್ಷೆಗೊಳಗಾಗಿರುವ ಬಹಳಷ್ಟು ಕೈದಿಗಳು ಜೈಲಿನಲ್ಲೇ ಕೊಳೆಯುತ್ತಿರುತ್ತಾರೆ, ಅವರಿಗೆ ಯಾರ ನೆರವೂ ಸಿಗುವುದಿಲ್ಲ. ಅಂತಹವರಿಗೆ ಹೈಕೋರ್ಟ್ ಕಾನೂನು ಸೇವಾ ಪ್ರಾಧಿಕಾರಗಳ ಮೂಲಕ ನೆರವು ನೀಡಬಹುದು. ಈಗಾಗಲೇ ಬಹಳಷ್ಟು ರಾಜ್ಯಗಳಲ್ಲಿ ಕಾರಾಗೃಹಗಳಿಗೆ ಇಂಟರ್‌ನೆಟ್ ಸಂಪರ್ಕ ಕಲ್ಪಿಸಿ ಆ ಬಗ್ಗೆ ನಿಗಾ ವಹಿಸಲಾಗುತ್ತಿದೆ. ಜೈಲುಗಳಿಗೆ ವಿಡಿಯೊ ಸಂಪರ್ಕ ಕಲ್ಪಿಸುವುದರಿಂದ ಕೈದಿಗಳ ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸಬಹುದು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

ಕಾನೂನು ಸೇವಾ ಪ್ರಾಧಿಕಾರದ ಪರ ವಕೀಲ ಶ್ರೀಧರ್ ಪ್ರಭು, ‘ಜೈಲುಗಳ ಮೂಲಸೌಕರ್ಯದ ಬಗ್ಗೆ ಪ್ರಾಧಿಕಾರ ಈಗಾಗಲೇ ಗಮನಹರಿಸಿದೆ.

ಆದಾಗ್ಯೂ, ಈಗ ಅರ್ಜಿದಾರರು ಹೇಳುತ್ತಿರುವ ಅಂಶವನ್ನೂ ಪರಗಣಿಸಲಾಗುವುದು’ ಎಂದು ತಿಳಿಸಿದರು. ವಿಚಾರಣೆ ಮುಂದೂಡಲಾಗಿದೆ.

ಉದ್ಯಾನ, ಮಾಲ್, ಚಿತ್ರಮಂದಿರ ಪ್ರವೇಶಕ್ಕೆ ಲಸಿಕೆ ಕಡ್ಡಾಯ ● ಪ್ರತಿ ತಿಂಗಳು ವಿದ್ಯಾರ್ಥಿಗಳಿಗೆ ಕೋವಿಡ್ ಪರೀಕ್ಷೆ

ಲಸಿಕೆ ಪಡೆದವರಿಗಷ್ಟೇ ಪ್ರವೇಶ: ತಜ್ಞರ ಶಿಫಾರಸು

ಪ್ರಜಾವಾಣಿ ವಾರ್ತೆ



ಸಭೆಯಲ್ಲಿ ಗೌರವ್ ಗುಪ್ತ ಮಾತನಾಡಿದರು. ಡಾ.ಕೆ.ವಿ.ತ್ರಿಲೋಕಚಂದ್ರ ಇದ್ದಾರೆ.

ಬೆಂಗಳೂರು: ನಗರದಲ್ಲಿ ಕೋವಿಡ್ ವೈರಾಣುವಿನ ಹೊಸ ರೂಪಾಂತರ ತಳಿ ಓಮೈಕ್ರಾನ್ ಸೇರಿದಂತೆ ಇನ್ನಿತರ ರೂಪಾಂತರಿಗಳು ಹರಡದಂತೆ ಪೂರ್ವಸಿದ್ಧತೆ ಮಾಡಿಕೊಳ್ಳಬೇಕು ಎಂದು ಬಿಬಿಎಂಪಿಯ ಕೋವಿಡ್ ತಜ್ಞರ ಸಮಿತಿ ಸಲಹೆ ನೀಡಿದೆ.

ಕೋವಿಡ್ ರೂಪಾಂತರಗೊಂಡ ವೈರಾಣುಗಳು ಹರಡುವುದನ್ನು ತಡೆಯುವ ಸಲುವಾಗಿ ಉದ್ಯಾನ, ಚಿತ್ರಮಂದಿರ, ಮಾಲ್ ಸೇರಿದಂತೆ ಇನ್ನಿತರೆ ಸಾರ್ವಜನಿಕ ಸ್ಥಳಗಳಿಗೆ ಕೋವಿಡ್‌ನ ಎರಡೂ ಡೋಸ್ ಲಸಿಕೆ ಪಡೆದವರಿಗೆ ಮಾತ್ರ ಪ್ರವೇಶ ನೀಡಬೇಕು. ಶಾಲೆಗಳಲ್ಲಿ ತಿಂಗಳಿಗೊಮ್ಮೆ ಶೇ 10 ರಷ್ಟು ವಿದ್ಯಾರ್ಥಿಗಳನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು ಎಂದೂ ಸಮಿತಿ ಶಿಫಾರಸು ಮಾಡಿದೆ. ತಜ್ಞರ ಸಮಿತಿಯ ಶಿಫಾರಸುಗಳ ಬಗ್ಗೆ ಸರ್ಕಾರದ ನಿರ್ದೇಶನ ಪಡೆದು ಕ್ರಮ ಕೈಗೊಳ್ಳಲು ಬಿಬಿಎಂಪಿ ಮುಂದಾಗಿದೆ.

ಕೋವಿಡ್ ರೂಪಾಂತರಿ ವೈರಾಣು ನಿಯಂತ್ರಣಕ್ಕಾಗಿ ನಗರದಲ್ಲಿ ಯಾವ ರೀತಿ ಕಾರ್ಯೋನ್ಮುಖರಾಬೇಕು, ಯಾವೆಲ್ಲಾ ಬದಲಾವಣೆ ಮಾಡಬೇಕು ಎಂಬ ಬಗ್ಗೆ ಚರ್ಚಿಸಲು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಕೋವಿಡ್ ತಜ್ಞರ ಸಮಿತಿ ಜೊತೆ ಬುಧವಾರ ಸಮಾಲೋಚನೆ ನಡೆಸಿದರು. ತಜ್ಞರು ನೀಡಿರುವ ಸಲಹೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರತಿಯೊಬ್ಬ ಅರ್ಹ ಫಲಾನುವಿಗಳೂ ಕಡ್ಡಾಯವಾಗಿ ಕೋವಿಡ್ ಲಸಿಕೆಯ ಎರಡೂ ಡೋಸ್‌ಗಳನ್ನು ಪಡೆಯುವ ಸಂಬಂಧ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ (ಆರ್‌ಡಬ್ಲ್ಯುಎ), ಹೋಟೆಲ್ ಮಾಲೀಕರ ಸಂಘ, ವರ್ತಕರ ಸಂಘಗಳೂ ಸೇರಿ ವಿವಿಧ ಸಂಘಟನೆಗಳ ಜೊತೆ ಸಮಾಲೋಚನೆ ನಡೆಸುವಂತೆ ಹಾಗೂ ಕೋವಿಡ್ ನಿಯಂತ್ರಣಕ್ಕೆ ಪರಿಷ್ಕೃತ ಮಾರ್ಗ-ಸೂಚಿಗಳನ್ನು ಹೊರಡಿಸಲು ಕ್ರಮ ಕೈಗೊಳ್ಳುವಂತೆ ವಿಶೇಷ ಆಯುಕ್ತ ಕೆ.ವಿ. ತ್ರಿಲೋಕಚಂದ್ರ ಅವರಿಗೆ ಸೂಚನೆ ನೀಡಿದರು.

ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್, ನಿರ್ಮಲಾ ಬುಗ್ಗಿ ಉಪಸ್ಥಿತರಿದ್ದರು.

ತಜ್ಞರ ಸಮಿತಿಯ ಪ್ರಮುಖ ಸಲಹೆಗಳು

- ವಿದೇಶದಿಂದ ಬರುವವರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು. ಕ್ವಾರಂಟೈನ್ ಮಾಡಲು ಕ್ರಮ ಕೈಗೊಳ್ಳಬೇಕು
- ಸಂಗ್ರಹಿಸಿರುವ ಮಾದರಿಗಳನ್ನು ಜಿನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸಬೇಕು
- ನಗರದ ಕಂಟೈನ್ಮೆಂಟ್ ವಲಯಗಳ ಹಾಗೂ ಕ್ಲಸ್ಟರ್‌ಗಳ ಮೇಲೆ ಹೆಚ್ಚಿನ ನಿಗಾ ವಹಿಸಬೇಕು
- ಸಭೆ-ಸಮಾರಂಭ, ಔತಣಕೂಟದಂತಹ ಕಾರ್ಯಕ್ರಮಗಳಲ್ಲಿ ಆದಷ್ಟು ಕಡಿಮೆ ಸಂಖ್ಯೆಯಲ್ಲಿ ಜನ ಭಾಗವಹಿಸುವಂತೆ ನೋಡಿಕೊಳ್ಳಬೇಕು
- ಕಾರ್ಯಕ್ರಮಗಳಲ್ಲಿ ಕೋವಿಡ್ ನಿಯಂತ್ರಣ ನಿಯಮ ಕಟ್ಟುನಿಟ್ಟಾಗಿ ಪಾಲನೆ ಆಗುವಂತೆ ಕ್ರಮವಹಿಸಬೇಕು
- ಕೋವಿಡ್ ಪರೀಕ್ಷೆ ಪ್ರಮಾಣ ಹೆಚ್ಚಿಸಬೇಕು

ಲಸಿಕೆ ಪಡೆಯಲು ಸಾಲುಗಟ್ಟಿ ನಿಂತ ಜನ



ಆವಲಹಳ್ಳಿ ಆರೋಗ್ಯ ಕೇಂದ್ರದ ಮುಂದೆ ನಾಗರಿಕರು ಕೋವಿಡ್ ಲಸಿಕೆ ಪಡೆಯಲು ಬುಧವಾರ ಸಾಲಿನಲ್ಲಿ ನಿಂತಿರುವುದು –ಪ್ರಜಾವಾಣಿ ಚಿತ್ರ

ಬೆಂಗಳೂರು: ಕೆಲವು ರಾಷ್ಟ್ರಗಳಲ್ಲಿ ಓಮೈಕ್ರಾನ್ ವೈರಾಣುವಿನಿಂದ ಕೊರೊನಾ ಸೋಂಕು ಹರಡುತ್ತಿದ್ದಂತೆಯೇ ನಗರದಲ್ಲಿ ಕೋವಿಡ್ ಲಸಿಕೆ ಪಡೆಯುವವರ ಸಂಖ್ಯೆಯಲ್ಲೂ ಹೆಚ್ಚಳ ಕಂಡುಬಂದಿದೆ. ವಾರದಿಂದ ಈಚೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಲಸಿಕೆ ಪಡೆದವರ ಪ್ರಮಾಣವೂ ದುಪ್ಪಟ್ಟಾಗಿದೆ.

ಲಸಿಕಾ ಕೇಂದ್ರಗಳಲ್ಲಿ ಜನ ಮತ್ತೆ ಸಾಲುಗಟ್ಟಿ ನಿಲ್ಲುವ ಸ್ಥಿತಿ ನಿರ್ಮಾಣವಾಗಿದೆ. ಇದುವರೆಗೆ ಒಂದು ಡೋಸ್ ಕೂಡಾ ಪಡೆಯದವರೂ ಲಸಿಕಾ ಕೇಂದ್ರಗಳಿಗೆ ಬರುತ್ತಿದ್ದಾರೆ. ಎರಡನೇ ಡೋಸ್ ಪಡೆಯುವುದಕ್ಕೆ ನಿಗದಿಪಡಿಸಿದ ಅವಧಿಯೊಳಗೆ ಲಸಿಕೆ ಪಡೆಯದವರೂ ಈಗ ಕೇಂದ್ರಗಳತ್ತ ಮುಖ ಮಾಡುತ್ತಿದ್ದಾರೆ.

‘ನಗರದಲ್ಲಿ ಕೋವಿಡ್ ಎರಡನೇ ಕಾಣಿಸಿಕೊಂಡಾಗ ಇದೇ ರೀತಿ ಜನ ಲಸಿಕಾ ಕೇಂದ್ರಗಳಿಗೆ ಮುಗಿಬಿದ್ದಿದ್ದರು’ ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ಡಾ.ಅರುಂಧತಿ ಚಂದ್ರಶೇಖರ್ ಹೇಳಿದರು.

‘ಕಳೆದ ವಾರದವರೆಗೂ ದಿನದಲ್ಲಿ 30 ಸಾವಿರದಿಂದ 40 ಸಾವಿರ ಮಂದಿ ಮಾತ್ರ ಕೋವಿಡ್ ಲಸಿಕೆ ಪಡೆಯುತ್ತಿದ್ದರು. 3–4 ದಿನಗಳಿಂದೀಚೆಗೆ ನಿತ್ಯ 80 ಸಾವಿರಕ್ಕೂ ಅಧಿಕ ಮಂದಿ ಲಸಿಕೆ ಪಡೆದಿದ್ದಾರೆ. ಬುಧವಾರವೂ 85 ಸಾವಿರ ಮಂದಿಗೆ ಲಸಿಕೆ ನೀಡಲಾಗಿದೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಆರೋಗ್ಯ) ಡಾ.ಕೆ.ವಿ.ತ್ರಿಲೋಕಚಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

ಪರೀಕ್ಷೆ ಪ್ರಮಾಣವೂ ಹೆಚ್ಚಳ: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪರೀಕ್ಷೆಯ ಪ್ರಮಾಣವೂ ಹೆಚ್ಚಿದೆ.

‘ಕಳೆದ ವಾರ ನಿತ್ಯ 30 ಸಾವಿರದಷ್ಟು ಮಂದಿಯನ್ನು ಮಾತ್ರ ಕೋವಿಡ್ ಪರೀಕ್ಷೆಗೆ ಒಳಪಡಿಸುತ್ತಿದ್ದೆವು. ಈಗ 60 ಸಾವಿರಕ್ಕಿಂತಲೂ ಹೆಚ್ಚು ಮಂದಿಯನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ವಾರ್ಡ್ ಮಟ್ಟದಲ್ಲಿ ಮೂರು ತಂಡಗಳು ಎಂದಿನಂತೆ ಕೋವಿಡ್ ತಪಾಸಣೆಯಲ್ಲಿ ತೊಡಗಿವೆ. ಜೊತೆಗೆ ರೈಲ್ವೆ ನಿಲ್ದಾಣಗಳು, ಬಸ್ ನಿಲ್ದಾಣಗಳು, ಮಾಲ್‌ಗಳ ಬಳಿಯೂ ಕೋವಿಡ್ ಪರೀಕ್ಷೆ ನಡೆಸಲು ಕ್ರಮ-ಕೈಗೊಂಡಿದ್ದೇವೆ’ ಎಂದು ತ್ರಿಲೋಕಚಂದ್ರ ತಿಳಿಸಿದರು.

‘ಶೀತ, ಜ್ವರ ಹಾಗೂ ಉಸಿರಾಟದ ತೊಂದರೆ ಹೊಂದಿರುವವರನ್ನು ಕಡ್ಡಾಯವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕಿದೆ. ಈ ಕುರಿತು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ’ ಎಂದರು.

ಸಂಸದರ ಅಮಾನತು ವಾಪಸ್‌ಗೆ ಆಗ್ರಹ

ಸಭಾಪತಿ ಸ್ಥಾನದಲ್ಲಿದ್ದ ಭುವನೇಶ್ವರ ಕಟಲ ಅವರು ಸದಸ್ಯರ ವರ್ತನೆಗೆ ಆಕ್ಷೇಪ ವ್ಯಕ್ತಪಡಿಸಿದರು. ‘ನೀವು ಸಭ್ಯತೆಯಿಂದ ನಡೆದುಕೊಳ್ಳಬೇಕು. ಜನರಿಗೆ ಇದು ಒಳ್ಳೆಯ ಸಂದೇಶ ರವಾನಿಸುವುದಿಲ್ಲ’ ಎಂದರು

ಸಂಸತ್ತಿನ ಒಳಗೂ ಹೊರಗೂ ಧರಣಿ


ನವದೆಹಲಿ (ಪಿಟಿಐ): 12 ರಾಜ್ಯಸಭಾ ಸದಸ್ಯರ ಅಮಾನತು ಖಂಡಿಸಿ ಸಂಸತ್ತಿನ ಒಳಗೂ, ಹೊರಗೂ ಬುಧವಾರ ಪ್ರತಿಭಟನೆ ನಡೆಯಿತು. 12 ಸಂಸದರು ಸಂಸತ್ ಭವನದ ಆವರಣದಲ್ಲಿರುವ ಗಾಂಧಿ ಪ್ರತಿಮೆ ಎದುರು ಧರಣಿ ನಡೆಸಿದರು. ತಮ್ಮ ಮೇಲಿನ ಅಮಾನತು ಆದೇಶವನ್ನು ವಾಪಸ್ ಪಡೆಯುವವರೆಗೂ ಪ್ರತಿಭಟನೆ ಮುಂದುರಿಸುವುದಾಗಿ ಅವರು ತಿಳಿಸಿದರು.

‘ವಿರೋಧ ಪಕ್ಷಗಳ ಸಂಸದರು ಉಭಯ ಸದನಗಳಲ್ಲಿ ಪ್ರತಿದಿನ ಬೆಳಿಗ್ಗೆ 10ರಿಂದ 11 ಗಂಟೆವರೆಗೆ ಪ್ರತಿಭಟನೆ ಹಮ್ಮಿಕೊಳ್ಳಲಿದ್ದಾರೆ. ಅಮಾನತುಗೊಂಡ ಸಂಸದರು ಪ್ರತಿದಿನ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆ ವರೆಗೆ ಗಾಂಧಿ ಪ್ರತಿಮೆ ಎದುರು ಧರಣಿ ಕೂರಲಿದ್ದಾರೆ’ ಎಂದು ಅಮಾನತುಗೊಂಡಿರುವ ಸಂಸದ ರಿಪುನ್ ಬೋರಾ ತಿಳಿಸಿದ್ದಾರೆ.

ರೈತರ ಹಾಗೂ ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ದನಿ ಎತ್ತಿದ್ದಕ್ಕೆ ತಮಗೆ ಅಮಾನತು ಶಿಕ್ಷೆ ನೀಡಿದ್ದು ಏಕೆ ಎಂದು ಸಭಾಪತಿ ವೆಂಕಯ್ಯ ನಾಯ್ಡು ಅವರು ವಿವರಣೆ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ನಡೆ ಬದಲಿಸಿದ ಟಿಎಂಸಿ: ತೃಣಮೂಲ ಕಾಂಗ್ರೆಸ್ ಬುಧವಾರ ತನ್ನ ಕಾರ್ಯತಂತ್ರವನ್ನು ಸ್ವಲ್ಪ ಬದಲಾಯಿಸಿತು. ಸದಸ್ಯರ ಅಮಾನತು ಖಂಡಿಸಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಇತರ ಪಕ್ಷಗಳೊಂದಿಗೆ ಕೈಜೋಡಿಸಿತು.

ರಾಜ್ಯಸಭೆಯಲ್ಲಿ ಗದ್ದಲ: ರಾಜ್ಯಸಭೆಯಲ್ಲೂ ಪ್ರತಿಪಕ್ಷಗಳು ಭಾರಿ ಪ್ರತಿಭಟನೆ ನಡೆಸಿದ್ದರಿಂದ ಕಲಾಪವನ್ನು ಹಲವು ಬಾರಿ ಮುಂದೂಡಲಾಯಿತು. ಸಭಾಧ್ಯಕ್ಷರ ಪೀಠದ ಎದುರು ಜಮಾಯಿಸಿದ ಸದಸ್ಯರು, ಮಸೂದೆ ಮಂಡಿಸಲು ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರಿಗೆ ಅವಕಾಶ ನೀಡಲಿಲ್ಲ. ಟಿಆರ್‌ಎಸ್ ಸದಸ್ಯರು ರೈತರ ವಿಷಯ ಮುಂದಿಟ್ಟುಕೊಂಡು ಲೋಕಸಭೆಯಲ್ಲಿ ಪ್ರತಿಭಟನೆ ನಡೆಸಿದರು.



ನವೆಂಬರ್: 5 ವರ್ಷಗಳಲ್ಲೇ ಅತಿ ಹೆಚ್ಚು ಮಳೆ ದಾಖಲು

ನವದೆಹಲಿ (ಪಿಟಿಐ): ‘ನವೆಂಬರ್‌ನಲ್ಲಿ ದೇಶದಾದ್ಯಂತ 645 ಬಾರಿ ಹೆಚ್ಚು ಮಳೆ ಹಾಗೂ 168 ಬಾರಿ ಅತಿಹೆಚ್ಚು ಮಳೆಯಾಗಿದ್ದು, ಐದು ವರ್ಷಗಳಲ್ಲಿ ದಾಖಲಾದ ಅತಿಹೆಚ್ಚು ಮಳೆಯ ಪ್ರಮಾಣವಾಗಿದೆ’ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಬುಧವಾರ ತಿಳಿಸಿದೆ.

‘ನವೆಂಬರ್ ತಿಂಗಳಲ್ಲಿ 204.5 ಮಿ.ಮೀಗಿಂತ ಹೆಚ್ಚಿನ ಮಳೆ 11 ಬಾರಿ ಸುರಿದಿದೆ. ಇದು ಕಳೆದ ವರ್ಷ ವರದಿಯಾದ ಮಳೆಯ ಪ್ರಮಾಣಕ್ಕೆ ಸಮನಾಗಿದೆ. 2019, 2018 ಮತ್ತು 2017ರಲ್ಲಿ ಕ್ರಮವಾಗಿ ಶೂನ್ಯ, 4 ಮತ್ತು ಒಂದು ಸಲ ಮಾತ್ರ ಅತಿಹೆಚ್ಚು ಮಳೆಯಾಗಿದೆ ಎಂದು ಐಎಂಡಿ ಮಾಹಿತಿ ನೀಡಿದೆ.

‘ಬಿಜೆಪಿಗೆ ಬೆಂಬಲದ ಬಗ್ಗೆ ಶೀಘ್ರ ನಿರ್ಧಾರ’

ರಾಮನಗರ: ಪರಿಷತ್ ಚುನಾವಣೆಯಲ್ಲಿ ಬಿಜೆಪಿಗೆ ಬೆಂಬಲ ನೀಡುವಂತೆ ಯಡಿಯೂರಪ್ಪ ಕೇಳಿದ್ದು, ಈ ಬಗ್ಗೆ ಸದ್ಯದಲ್ಲೇ ತೀರ್ಮಾನ ಮಾಡುತ್ತೇವೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಬಿಡದಿಯಲ್ಲಿ ಬುಧವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು ' ಕಾಂಗ್ರೆಸ್ ನಾಯಕರು ನಮಗೆ ಜೆಡಿಎಸ್ ಬೆಂಬಲ ಬೇಡ ಎಂದು ಹೇಳಿದ್ದಾರೆ. ಕರೆಯದೇ ಇರುವವರ ಮನೆಯ ಬಾಗಿಲಿಗೆ ಹೋಗಲು ಆಗದು. ಮತ್ತೊಂದೆಡೆ, ಎಲ್ಲಿ ಜೆಡಿಎಸ್ ಅಭ್ಯರ್ಥಿ ಇಲ್ಲವೋ ಆ ಕ್ಷೇತ್ರಗಳಲ್ಲಿ ಬೆಂಬಲ ನೀಡುವಂತೆ ಯಡಿಯೂರಪ್ಪ ಮನವಿ ಮಾಡಿದ್ದಾರೆ. ಈ ಬಗ್ಗೆ ಚರ್ಚಿಸುತ್ತೇವೆ’ ಎಂದರು.

‘ಮೋದಿ ಅವರಿಗೆ ದೇವೇಗೌಡರ ಮೇಲೆ ಅಪಾರ ವಿಶ್ವಾಸ ಹಾಗೂ ಗೌರವ ಇದೆ. ಹಾಸನದಲ್ಲಿ ಐಐಟಿ ಸ್ಥಾಪನೆ ವಿಚಾರದಲ್ಲಿ ಗೌಡರು ಮೋದಿಯವರನ್ನು ಭೇಟಿ ಮಾಡಿದ್ದಾರೆ. ಮೈತ್ರಿ ಕುರಿತು ಅವರಿಬ್ಬರ ಬಗ್ಗೆ ಮಾತುಕತೆ ನಡೆದಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ದೇವೇಗೌಡರು ದೆಹಲಿಯಿಂದ ಬಂದ ಬಳಿಕ ಈ ಬಗ್ಗೆ ಅವರಲ್ಲಿ ಮಾತನಾಡುತ್ತೇನೆ’ ಎಂದರು.


ಕಲಬುರ್ಗಿ ಆರೋಪಿಗಳು ನ್ಯಾಯಾಲಯಕ್ಕೆ ಹಾಜರು

ಹುಬ್ಬಳ್ಳಿ: ಸಂಶೋಧಕ ಎಂ.ಎಂ. ಕಲಬುರ್ಗಿ ಹತ್ಯೆಯ ಮೂವರು ಆರೋಪಿಗಳನ್ನು ಬುಧವಾರ ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಮುಂದಿನ ವಿಚಾರಣೆಯನ್ನು ಡಿ.28ಕ್ಕೆ ನಿಗದಿ ಮಾಡಲಾಗಿದೆ.

ಕಲಬುರ್ಗಿ ಅವರ ಹತ್ಯೆಯ ಆರೋಪಿಗಳಾದ ವಾಸುದೇವ ಸೂರ್ಯವಂಶಿ, ಅಮಿತ್ ಬದ್ದಿ, ಗಣೇಶ ಮಿಸ್ಕಿನ್ ಮೂವರು ಮುಂಬೈನ ಅರ್ಥರ್ ಜೈಲಿನಲ್ಲಿದ್ದರು. ಮೂವರನ್ನು ಹುಬ್ಬಳ್ಳಿ ಗ್ರಾಮೀಣ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ವಿಚಾರಣೆ ಬಳಿಕ ಮತ್ತೆ ಅವರನ್ನು ಮುಂಬೈ ಜೈಲಿಗೆ ಕರೆದುಕೊಂಡು ಹೋಗಲಾಯಿತು ಎಂದು ಗ್ರಾಮೀಣ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ರಮೇಶ ತಿಳಿಸಿದ್ದಾರೆ.

ಏನಿದು ಪ್ರಕರಣ: ಕಲಬುರ್ಗಿ ಅವರು ಹತ್ಯೆಗೆ ಬೈಕ್ ಬಳಸಲಾಗಿತ್ತು. ಹುಬ್ಬಳ್ಳಿ ತಾಲ್ಲೂಕಿನ ಮಾವನೂರು ಗ್ರಾಮದಲ್ಲಿ ಕಳ್ಳತನ ಮಾಡಿ, ಅದರ ನಂಬರ್ ಪ್ಲೇಟ್ ಬದಲಿಸಲಾಗಿತ್ತು. ತದನಂತರ ಅದನ್ನು ಹತ್ಯೆ ಸಂದರ್ಭದಲ್ಲಿ ಬಳಸಲಾಗಿತ್ತು. ಮಹಾರಾಷ್ಟ್ರದಲ್ಲಿ ಸಿಕ್ಕಿದ್ದ ಬೈಕ್ ಬಗ್ಗೆ ತನಿಖೆ ನಡೆಸಿದಾಗ ಅದು ಹತ್ಯೆಗೆ ಬಳಸಿದ್ದು ಗೊತ್ತಾಗಿದೆ.



ಆಮ್ಲಜನಕ ಉತ್ಪಾದನಾ ಘಟಕವನ್ನು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ವೀಕ್ಷಿಸಿದರು. ಸಚಿವ ಡಾ.ಸುಧಾಕರ್, ಪ್ರಕಾಶನಾಥ ಸ್ವಾಮೀಜಿ ಮತ್ತಿತರರು ಇದ್ದಾರೆ

ಬಿಜಿಎಸ್: ಆಮ್ಲಜನಕ ಘಟಕ ಕಾರ್ಯಾರಂಭ

ಕೆಂಗೇರಿ: ‘ಕೋವಿಡ್ ಪರಿಸ್ಥಿತಿಯಲ್ಲಿ ಉಂಟಾಗುವ ಆಮ್ಲಜನಕ ಕೊರತೆ ನಿಭಾಯಿಸಲು ಬಿಜಿಎಸ್ ಜಿಮ್ಸ್ ಆಸ್ಪತ್ರೆ ಆವರಣದಲ್ಲಿ ಒಂದು ಸಾವಿರ ಲೀಟರ್ ಸಾಮರ್ಥ್ಯದ ಆಮ್ಲಜನಕ ಉತ್ಪಾದನಾ ಘಟಕ ನಿರ್ಮಿಸಲಾಗಿದೆ’ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ನಗರದ ಬಿಜಿಎಸ್ ಜಿಮ್ಸ್ ಆವರಣದಲ್ಲಿ ಆಮ್ಲಜನಕ ಉತ್ಪಾದನಾ ಘಟಕ ಉದ್ಘಾಟಿಸಿ ಅವರು ಮಾತನಾಡಿದರು.

‘ಆಮ್ಲಜನಕ ಉತ್ಪಾದನೆಯಲ್ಲಿ ಸ್ವಾವಲಂಬಿಗಳಾದರೆ ತುರ್ತು ಸಂದರ್ಭದಲ್ಲಿ ಆಮ್ಲಜನಕಕ್ಕಾಗಿ ಬೇರೆ ದೇಶಗಳತ್ತ ನೋಡುವ ಅಗತ್ಯ ಇರುವುದಿಲ್ಲ. ಈ ಘಟಕದಿಂದ ಸಕಾಲದಲ್ಲಿ ರೋಗಿಗಳಿಗೆ ವೈದ್ಯಕೀಯ ಸೌಲಭ್ಯ ಸಿಗಲಿದೆ’ ಎಂದರು.

ಬಿಜಿಎಸ್ ಜಿಮ್ಸ್ ವತಿಯಿಂದ ಆಯೋಜಿಸಲಾಗಿದ್ದ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಕಾಲೇಜಿನ ಪ್ರಾಂಶುಪಾಲ ಎಂ.ವಿ.ಮೋಹನ್, ವೈದ್ಯಕೀಯ ಅಧಿಕಾರಿ ಶ್ರೀಕಾಂತ್ ಕುಲಕರ್ಣಿ ಇದ್ದರು.

ಬೆಳಿಗ್ಗೆಯೇ ನಂದಿಬೆಟ್ಟದ ಬಾಗಿಲಿನಲ್ಲಿ ಪ್ರವಾಸಿಗರು

ಪ್ರಜಾವಾಣಿ ವಾರ್ತೆ



ಬುಧವಾರ ನಂದಿಬೆಟ್ಟಕ್ಕೆ ಬಂದ ಪ್ರವಾಸಿಗರು

ಚಿಕ್ಕಬಳ್ಳಾಪುರ: ಪ್ರಸಿದ್ಧ ನಂದಿಗಿರಿಧಾಮಕ್ಕೆ ಮೂರು ತಿಂಗಳ ನಂತರ ಪ್ರವಾಸಿಗರು ಭೇಟಿ ನೀಡಿದರು. ಬುಧವಾರ ಬೆಳಿಗ್ಗೆ 6ರಿಂದಲೇ ಮುಖ್ಯದ್ವಾರಕ್ಕೆ ಪ್ರವಾಸಿಗರು ಬಂದರು. ಮೊದಲದಿನವಾದ ಕಾರಣ ಪ್ರವಾಸಿಗರ ಸಂಖ್ಯೆ ವಿರಳವಾಗಿತ್ತು. ಮಧ್ಯಾಹ್ನ 12ರವರೆಗೆ 500ಕ್ಕೂ ಹೆಚ್ಚು ಮಂದಿಯಷ್ಟೇ ಗಿರಿಧಾಮಕ್ಕೆ ಬಂದಿದ್ದರು. ವಾಹನ ನಿಲುಗಡೆ ಸ್ಥಳದಲ್ಲಿ ಈ ಹಿಂದಿನಂತೆ ದಟ್ಟಣೆ ಕಂಡು ಬರಲಿಲ್ಲ.

ಕಾರಹಳ್ಳಿ ಕ್ರಾಸ್ ಹಾಗೂ ನಂದಿಬೆಟ್ಟದ ಆಸುಪಾಸಿನಲ್ಲಿ ಹೋಟೆಲ್‌ಗಳು, ಅಂಗಡಿಗಳು ತೆರೆದಿದ್ದವು. ವಾಣಿಜ್ಯ ಚಟುವಟಿಕೆಗಳು ಸಾಮಾನ್ಯ ಸ್ಥಿತಿಯಲ್ಲಿ ಇತ್ತು. ಕಳೆದ ಮೂರು ತಿಂಗಳಿನಿಂದ ಪ್ರವಾಸಿಗರು ಇಲ್ಲದ ಕಾರಣ ಇವು ಬಾಗಿಲು ಮುಚ್ಚಿದ್ದವು.

ಬೆಂಗಳೂರಿನ ವಿನಿತ್, ಶಿಡ್ಲಘಟ್ಟ ತಾಲ್ಲೂಕಿನ ವಿಜಯಪುರದ ಮೋಹನ್ ಹಾಗೂ ಸ್ನೇಹಿತರು ಬೆಳ್ಳಂ ಬೆಳಿಗ್ಗೆ ಬೆಟ್ಟಕ್ಕೆ ಸೈಕ್ಲಿಂಗ್ ಬಂದಿದ್ದರು.

ಗಿರಿಧಾಮದಲ್ಲಿ ದಟ್ಟ ಮಂಜಿನಿಂದ ವಾತಾವರಣವಿತ್ತು. ಕಾರುಗಳ ಚಾಲಕರ ಲೈಟ್ ಹಾಕಿಕೊಂಡು ಸಾಗುತ್ತಿದ್ದರು. ಬೆಟ್ಟಕ್ಕೆ ಬಂದ ಪ್ರವಾಸಿಗರು ಭೂಕುಸಿತವಾದ ಸ್ಥಳವನ್ನು ನೋಡಿ ಅಬ್ಬಾ! ಎಷ್ಟೊಂದು ಭೂ ಕುಸಿತವಾಗಿದೆ ಎಂದು ಅಚ್ಚರಿ ವ್ಯಕ್ತಪಡಿಸುತ್ತಿದ್ದರು. ಕುಸಿತವಾದ ಸ್ಥಳದಲ್ಲಿ ಕ್ಷಣ ಹೊತ್ತು ನಿಂತು ಸೆಲ್ಫಿ ತೆಗೆದುಕೊಳ್ಳುತ್ತಿದ್ದರು.

ಮೊದಲ ದಿನವೇ ಯುವ ಪ್ರೇಮಿಗಳು ಬೆಟ್ಟದಲ್ಲಿ ಕಂಡು ಬಂದರು. ಪರಸ್ಪರ ಕೈಹಿಡಿದು, ಸೆಲ್ಫಿ ತೆಗೆದುಕೊಳ್ಳುತ್ತ ಸಂಭ್ರಮಿಸಿದರು. ಬಹಳಷ್ಟು ಮಂದಿ ಕುಟುಂಬ ಸಮೇತರಾಗಿ ಚಿಕ್ಕಮಕ್ಕಳ ಜತೆ ಗಿರಿಧಾಮಕ್ಕೆ ಬಂದಿದ್ದರು.

‘ಹಂತ ಹಂತವಾಗಿ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗುತ್ತದೆ. ಬಹಳಷ್ಟು ಜನರಿಗೆ ನಂದಿ ಪ್ರವೇಶಕ್ಕೆ ಅವಕಾಶವಿದೆ ಎನ್ನುವುದು ತಿಳಿದಿಲ್ಲ. ಮಾಧ್ಯಮಗಳಲ್ಲಿ ಪ್ರಚಾರವಾದ ನಂತರ ಮತ್ತಷ್ಟು ಜನರು ಭೇಟಿ ನೀಡುವರು. ಫೋಟೊ ಶೂಟ್‌ಗೂ ಅವಕಾಶ ನೀಡಲಾಗಿದೆ’ ಎಂದು ನಂದಿಗಿರಿಧಾಮದ ವಿಶೇಷಾಧಿಕಾರಿ ಗೋಪಾಲ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ.... ಪ್ರಜಾವಾಣಿ ನೋಡಿಯೊ

ಕೋವಿಡ್ ಪರೀಕ್ಷೆ ಹೆಸರಲ್ಲಿ ಶೋಷಣೆ: ಡಿಕೆಶಿ



ಬೆಂಗಳೂರು: ರಾಜ್ಯದ ಗಡಿ ಭಾಗಗಳು ಮತ್ತು ವಿಮಾನ ನಿಲ್ದಾಣಗಳಲ್ಲಿ ಕೋವಿಡ್ ಪರೀಕ್ಷೆಯ ಹೆಸರಿನಲ್ಲಿ ಜನರ ಶೋಷಣೆ ನಡೆಯುತ್ತಿದೆ. ವಿದೇಶದಿಂದ ಬಂದವರಿಂದ ₹ 3,000 ವಸೂಲಿ ಮಾಡಲಾಗುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಜಗತ್ತಿನ ಯಾವ ರಾಷ್ಟ್ರದಲ್ಲೂ ಕೋವಿಡ್ ಪರೀಕ್ಷೆಗೆ ಇಷ್ಟೊಂದು ದುಬಾರಿ ಶುಲ್ಕ ವಿಧಿಸುತ್ತಿಲ್ಲ. ಈಗಾಗಲೇ ಜನರು ಆರ್ಥಿಕ ಸಂಕಷ್ಟದಿಂದ ನೊಂದಿದ್ದಾರೆ. ಈಗ ಸರ್ಕಾರವೇ ದುಬಾರಿ ಶುಲ್ಕ ವಿಧಿಸಿ ಅವರನ್ನು ಕಾಡಬಾರದು’ ಎಂದರು.

ಕೋವಿಡ್ ನಿಯಂತ್ರಣಕ್ಕೆ ಕೇರಳದ ಗಡಿ ಭಾಗಗಳಲ್ಲಿ ಎಚ್ಚರಿಕೆ ವಹಿಸಿದರೆ ಸಾಲದು. ರಾಜ್ಯದಾದ್ಯಂತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು. ಅಂತರ ರಾಷ್ಟ್ರೀಯ ಮಟ್ಟದಲ್ಲಿ ವೈಜ್ಞಾನಿಕವಾಗಿ ಜಾರಿಯಲ್ಲಿರುವ ಮಾರ್ಗ-ಸೂಚಿಗಳನ್ನು ರಾಜ್ಯದಲ್ಲಿ ಪಾಲಿಸಬೇಕು. ಜನರನ್ನು ಗಾಬರಿ-ಗೊಳಿಸಬಾರದು ಎಂದು ಅವರು ಹೇಳಿದರು.

ಓಮೈಕ್ರಾನ್: ವಿದೇಶದಿಂದ ಬಂದ 6 ಜನರಿಗೆ ಕೋವಿಡ್



ನವದೆಹಲಿ (ಪಿಟಿಐ): ಕೊರೊನಾ ವೈರಸ್‌ನ ಓಮೈಕ್ರಾನ್ ತಳಿ ಸೋಂಕು ಪ್ರಸರಣದ ಆತಂಕ ಹೆಚ್ಚುತ್ತಿರುವ ನಡುವೆಯೇ, ‘ಹೆಚ್ಚು ಅಪಾಯ’ದ ದೇಶಗಳಿಂದ ಬಂದ 11 ವಿಮಾನಗಳಲ್ಲಿದ್ದ ಪ್ರಯಾಣಿಕರ ಪೈಕಿ 6 ಜನರಲ್ಲಿ ಕೋವಿಡ್ ಬುಧವಾರ ದೃಢಪಟ್ಟಿದೆ.

ವಿಮಾನಗಳ ಮೂಲಕ ಒಟ್ಟು 3,476 ಪ್ರಯಾಣಿಕರು ಬಂದಿದ್ದಾರೆ. ಎಲ್ಲರನ್ನು ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಪಡಿಸಲಾಗಿದೆ. ವಂಶವಾಹಿ ಸಂರಚನೆ ವಿಶ್ಲೇಷಣೆಗಾಗಿ (ಜಿನೋಮ್ ಸೀಕ್ವೆನ್ಸಿಂಗ್) ಕೋವಿಡ್ ದೃಢಪಟ್ಟಿರುವ ಪ್ರಯಾಣಿಕರ ಗಂಟಲು ದ್ರವ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,56,617 ▲ ಒಟ್ಟು ಸೋಂಕಿತರು (12,56,452 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
4,925 ▲	12,35,353 ▲	16,338 ▲

ದಿನದ ಏರಿಕೆ

ಹೊಸ ಪ್ರಕರಣ	165 ▼
ಗುಣಮುಖ	72 ▼
ಸಾವು	01 ▼

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ

ಆಧಾರ: ಮೈಗೌ.ಇನ್/ ಕೋವಿಡ್19 ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	26.34 ಕೋಟಿ ▲	3.45 ಕೋಟಿ
ಸಕ್ರಿಯ ಪ್ರಕರಣ	2.03 ಕೋಟಿ ▲	99,023 ▼
ಗುಣಮುಖ	23.78 ಕೋಟಿ ▲	3.40 ಕೋಟಿ
ಸಾವು	52.38 ಲಕ್ಷ ▲	4.69 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.96 ಲಕ್ಷ ▲	8,954 ▲
ಗುಣಮುಖ	5.11 ಲಕ್ಷ ▲	10,207 ▲
ಸಾವು	7,896 ▲	267 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 1.06 ಲಕ್ಷ ಅಮೆರಿಕ ▲; 39,716 ಬ್ರಿಟನ್ ▼; 55,880 ಜರ್ಮನಿ ▲

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 94.19 ಅಮೆರಿಕ ▼; 10.21 ಬ್ರಿಟನ್ ▲; 10.32 ರಷ್ಯಾ ▼

ಎಲ್ಲಿ ಹೆಚ್ಚು ಸಾವು: 1.40 ಲಕ್ಷ ಮಹಾರಾಷ್ಟ್ರ; 36,481 ತಮಿಳುನಾಡು ▲; 40,132 ಕೇರಳ ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 66.35 ಮಹಾರಾಷ್ಟ್ರ ▲; 51.41 ಕೇರಳ ▲; 27.26 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

ಐಎಎಸ್ ಅಧಿಕಾರಿ ವರ್ಗಾವಣೆ

ಬೆಂಗಳೂರು: ಕಾಲೇಜು ಶಿಕ್ಷಣ ಇಲಾಖೆಯ ಆಡಳಿತಾಧಿಕಾರಿ ಎಸ್.ಎನ್. ಬಾಲಚಂದ್ರ ಅವರನ್ನು ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಶನಿವಾರಸಂತೆ ವಿಡಿಯೊ ತಿರುಚಿದ ಆರೋಪ

‘ಪೊಲೀಸರ ವಿರುದ್ಧ ಮಾನನಷ್ಟ ಮೊಕದ್ದಮೆ’

ಪ್ರಜಾವಾಣಿ ವಾರ್ತೆ

ಮಡಿಕೇರಿ: ‘ಶನಿವಾರಸಂತೆಯ ಗಲಾಟೆ ಹಾಗೂ ಬಂದ್‌ಗೆ ಸಂಬಂಧಿಸಿದಂತೆ ವಿಡಿಯೊವೊಂದನ್ನು ತಿರುಚಲಾಗಿದೆಯೆಂದು ಸುಳ್ಳು ಆರೋಪ ಮಾಡಿ ಪ್ರಕರಣ ದಾಖಲಿಸಿರುವ ಶನಿವಾರಸಂತೆ ಪೊಲೀಸರ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಲಾಗುವುದು’ ಎಂದು ಶನಿವಾರಸಂತೆ ಗ್ರಾಮ ಪಂಚಾಯಿತಿ ಸದಸ್ಯ ಎಸ್.ಎನ್.ರಘು ಹೇಳಿದರು.

‘ಬಂದ್ ಕೈಬಿಡುವಂತೆ ಪೊಲೀಸರು ಮಾಡಿದ್ದ ಮನವಿಯನ್ನು ನಾವು ತಿರಸ್ಕರಿಸಿದ್ದೆವು. ಅವರ ಪ್ರಯತ್ನ ವಿಫಲವಾದಾಗ ಪಾಕಿಸ್ತಾನ್ ಜಿಂದಾಬಾದ್ ಎಂದು ವಿಡಿಯೊ ತಿರುಚಿದ್ದಾರೆಂದು ವ್ಯವಸ್ಥಿತ ಸಂಚು ರೂಪಿಸಿದರು. ಹೋರಾಟ ಹತ್ತಿಕ್ಕಲು ಮಾಡಿದ ಹುನ್ನಾರಕ್ಕೆ ಬಗ್ಗುವುದಿಲ್ಲ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿಯೇ ನ್ಯಾಯಯುತ ಹಾಗೂ ಸಮಗ್ರ ತನಿಖೆ ನಡೆಯಬೇಕು’ ಎಂದು ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

‘ವಿಡಿಯೊ ತನಿಖೆಯನ್ನೂ ನಡೆಸದೇ, ಎಫ್‌ಎಸ್‌ಐಎಲ್‌ಗೂ ಕಳುಹಿಸದೇ ಮೂವರ ಮೇಲೆ ಪ್ರಕರಣ ದಾಖಲು ಮಾಡಲಾಗಿದೆ. ಇದು ಹೇಗೆ ಸಾಧ್ಯ. ‘ಗುಡುಗಳಲೆ ಜಾತ್ರೆ ಮೈದಾನದಲ್ಲಿ ಬೈಕ್ ಹಾಗೂ ಪಿಕಪ್‌ನಲ್ಲಿ ಬಂದು ಹಲ್ಲೆ ನಡೆಸಿದವರ ಮೇಲೆ ಜಾತಿ ನಿಂದನೆ ದೌರ್ಜನ್ಯ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸುವಂತೆ ಆಗ್ರಹಿಸಿದ್ದೆವು. ಆದರೆ, ಪೊಲೀಸರು ದರೋಡೆ ಪ್ರಕರಣ ಮಾತ್ರ ದಾಖಲಿಸಿದ್ದರು. ಅದನ್ನು ಪ್ರಶ್ನಿಸಿ, ಬಂದ್‌ಗೆ ಕರೆ ನೀಡಿದಾಗ ವಿಡಿಯೊ ವಿಚಾರ ಹೊರಬಿತ್ತು’ ಎಂದು ಹೇಳಿದರು.

‘ನನ್ನ ರಾಜಕೀಯ ಜೀವನದಲ್ಲಿ ಮುಸ್ಲಿಂ ಸಮುದಾಯಕ್ಕೆ ನೆರವು ನೀಡಿದ್ದೇನೆ. ಆದರೆ, ವಿಸಿಎಸ್ ಕುಟುಂಬದಿಂದ ಶನಿವಾರಸಂತೆ ವಾತಾವರಣ ಹಾಳಾಗುತ್ತಿದೆ’ ಎಂದು ದೂರಿದರು.

ಪತ್ರಕರ್ತ ಎಚ್.ಆರ್. ಹರೀಶ್‌ಕುಮಾರ್ ಮಾತನಾಡಿ, ‘ನಾವು ವಿಡಿಯೊ ತಿರುಚಿದ್ದರೆ ಪೊಲೀಸರು ವಿಚಾರಣೆ ನಡೆಸಬೇಕಿತ್ತು. ಆದರೆ ವಿಚಾರಣೆಯನ್ನು ನಡೆಸಿಲ್ಲ. ಮೊಬೈಲ್ ಫೋನ್ ಅನ್ನೂ ವಶಕ್ಕೆ ಪಡೆದಿಲ್ಲ’ ಎಂದರು.

ಮುಖಂಡ ಶಾಂತವೀರ ವಂಸತ್ ಮಾತನಾಡಿ, ‘ಪೊಲೀಸರು ಮತ್ತೊಂದು ಶಾಂತಿಸಭೆ ಕರೆದು ಸೌಹಾರ್ದ ವಾತಾವರಣ ನಿರ್ಮಿಸಬೇಕು’ ಎಂದು ಕೋರಿದರು. ಹಿಂದೂ ಜಾಗರಣಾ ವೇದಿಕೆ ಸೋಮವಾರಪೇಟೆ ತಾಲ್ಲೂಕು ಘಟಕದ ಉಪಾಧ್ಯಕ್ಷ ಕೆ.ಎ.ಸಂದೀಪ್ ಹಾಜರಿದ್ದರು.

ವೃದ್ಧರ ಬೆದರಿಸಿ ಸುಲಿಗೆ: ಆರೋಪಿಗಳ ಸೆರೆ

ಬೆಂಗಳೂರು: ವೃದ್ಧ ದಂಪತಿ ನೆಲೆಸಿದ್ದ ಮನೆಗೆ ರಾತ್ರಿ ವೇಳೆ ನುಗ್ಗಿ, ಚಾಕುವಿನಿಂದ ಬೆದರಿಸಿ ನಗದು ಹಾಗೂ ಚಿನ್ನಾಭರಣ ದೋಚಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳಿಂದ ₹4.5 ಲಕ್ಷ ಮೌಲ್ಯದ 110 ಗ್ರಾಂ ಚಿನ್ನಾಭರಣ ಹಾಗೂ ₹4 ಸಾವಿರ ನಗದು ಜಪ್ತಿ ಮಾಡಲಾಗಿದೆ.

‘ಠಾಣಾ ವ್ಯಾಪ್ತಿಯ ಕೃಷ್ಣಮೂರ್ತಿ ಬಡಾವಣೆಯ ಮನೆಯೊಂದರ ಮೊದಲ ಮಹಡಿಯಲ್ಲಿ ವೃದ್ಧ ದಂಪತಿ ವಾಸವಿದ್ದರು. ನ.26ರ ರಾತ್ರಿ ಮನೆಗೆ ನುಗ್ಗಿದ್ದ ಆರೋಪಿಗಳು ದರೋಡೆ ಮಾಡಿ ಪರಾರಿಯಾಗಿದ್ದರು. ಆರೋಪಿಗಳ ಪತ್ತೆಗಾಗಿ ತಂಡ ರಚಿಸಲಾಗಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ನಿಧನ ವಾರ್ತೆ

ಎನ್.ಎಲ್.ರಮೇಶ



ನೆಲಮಂಗಲ: ಪಟ್ಟಣದ ಮಹಾರಾಷ್ಟ್ರ ಬೀದಿಯ ನಿವಾಸಿ, ವಕೀಲ ಎನ್.ಎಲ್. ರಮೇಶ (51) ಬುಧವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು.

ಮೃತರಿಗೆ ತಾಯಿ, ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಜಕ್ಕಸಂದ್ರದ ಜಮೀನಿನಲ್ಲಿ ಸಂಜೆ ಅಂತ್ಯ ಸಂಸ್ಕಾರ ನಡೆಯಿತು.

ಅನುದಾನ ಕೊರತೆ; ಪೂರೈಕೆಯಾಗದ ಬೇಳೆ, ಎಣ್ಣೆ: ಬೆಲೆ ಏರಿಕೆಯ ಹೊಡೆತ

ಶಿಕ್ಷಕರ ಜೇಬಿಗೆ ಹೊರೆಯಾದ ‘ಬಿಸಿಯೂಟ’

● ಸೂರ್ಯನಾರಾಯಣ ವಿ.

ಚಾಮರಾಜನಗರ: ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಪುನರಾರಂಭಗೊಂಡು ಅಕ್ಷರ ದಾಸೋಹ ಯೋಜನೆ ಆರಂಭಗೊಂಡ ನಂತರ ಶಿಕ್ಷಣ ಇಲಾಖೆಯು ಅಕ್ಕಿ, ಗೋಧಿ ಬಿಟ್ಟು ಇತರ ಆಹಾರ ಪದಾರ್ಥಗಳನ್ನು ಪೂರೈಸದಿರುವುದರಿಂದ ಮುಖ್ಯ ಶಿಕ್ಷಕರು, ಶಿಕ್ಷಕರ ಮೇಲೆ ಆರ್ಥಿಕವಾಗಿ ಹೊರೆ ಬಿದ್ದಿದೆ.

ಶಿಕ್ಷಣ ಇಲಾಖೆಯು ಅಕ್ಕಿ, ಗೋಧಿಯೊಂದಿಗೆ ಬಿಸಿಯೂಟಕ್ಕೆ ಬೇಕಾದ ಬೇಳೆ, ಎಣ್ಣೆ, ಉಪ್ಪನ್ನು ಶಾಲೆಗಳಿಗೆ ಮುಂಚಿತವಾಗಿಯೇ ಪೂರೈಸುತ್ತದೆ. ತರಕಾರಿ, ಸಾಂಬಾರು ಪುಡಿ, ಸಕ್ಕರೆ, ಅಡುಗೆ ಅನಿಲ ಮುಂತಾದ ವಸ್ತುಗಳ ಖರೀದಿಗೆ ಮುಖ್ಯಶಿಕ್ಷಕರ ಖಾತೆಗೆ ಹಣ ಜಮೆ ಮಾಡುತ್ತದೆ.

ಜಿಲ್ಲೆ ಸೇರಿದಂತೆ ರಾಜ್ಯದಾದ್ಯಂತ ಅ.21ರಿಂದ 6ರಿಂದ 8ನೇ ತರಗತಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಪೂರೈಸಲಾಗುತ್ತಿದೆ. ನ.2ರಿಂದ 1ರಿಂದ 5ನೇ ತರಗತಿಯ ಮಕ್ಕಳಿಗೂ ಬಿಸಿಯೂಟ ನೀಡಲಾಗುತ್ತಿದೆ.

ಅನುದಾನದ ಕೊರತೆ ಎದುರಿಸುತ್ತಿರುವ ಶಿಕ್ಷಣ ಇಲಾಖೆ, ಬಿಸಿಯೂಟಕ್ಕಾಗಿ ಅಕ್ಕಿ, ಗೋಧಿ ಮಾತ್ರ ಪೂರೈಸಿದೆ. ತೊಗರಿಬೇಳೆ, ಎಣ್ಣೆ, ಉಪ್ಪು, ತರಕಾರಿ, ಸಾಂಬಾರು ಪುಡಿ ಸೇರಿದಂತೆ ಇತರೆ ವಸ್ತುಗಳನ್ನು ಲಭ್ಯವಿರುವ ಅನುದಾನದಲ್ಲಿ ಖರೀದಿಸುವಂತೆ ಮುಖ್ಯ ಶಿಕ್ಷಕರಿಗೆ ಸೂಚಿಸಿದೆ. ಅನುದಾನ ಲಭ್ಯವಿರದ ಶಾಲೆಗಳಲ್ಲಿ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ತಿಂಗಳಿಗೂ ಹೆಚ್ಚು ಸಮಯದಿಂದ ತಮ್ಮ ಕೈಯಿಂದ ದುಡ್ಡು ಹಾಕಿ ದಿನಸಿ ಸಾಮಗ್ರಿ, ತರಕಾರಿ ಖರೀದಿಸುತ್ತಿದ್ದಾರೆ.

ಇಲಾಖೆಯು ಹಣ ಪಾವತಿಸುವ ಖಾತರಿ ಇದ್ದರೂ, ಖರೀದಿಗೆ ಹಣ ಹೊಂದಿಸಲು ಶಿಕ್ಷಕರು ಪ್ರಯಾಸ ಪಡುತ್ತಿದ್ದಾರೆ. ಅಡುಗೆ ಎಣ್ಣೆ, ಟೊಮೆಟೊ, ಬೀನ್ಸ್ ಸೇರಿದಂತೆ ತರಕಾರಿಗಳ ಬೆಲೆ ಹೆಚ್ಚಿರುವುದು ಇನ್ನಷ್ಟು ಇಕ್ಕಟ್ಟಿಗೆ ಸಿಲುಕಿಸಿದೆ.

‘ಪ್ರತಿ ವಿದ್ಯಾರ್ಥಿಗೆ ನಿಗದಿ ಪಡಿಸಿದ ಖರ್ಚಿನ ಲೆಕ್ಕಾಚಾರದಲ್ಲಿ ಸಾಕಷ್ಟು ತರಕಾರಿ, ಎಣ್ಣೆ ಖರೀದಿಸಲು ಸಾಧ್ಯವಾಗದಿರುವುದರಿಂದ ಬಿಸಿಯೂಟದ ಗುಣಮಟ್ಟದ ಮೇಲೂ ಪರಿಣಾಮ ಬೀರುತ್ತಿದೆ’ ಎಂದು ಹೇಳುತ್ತಾರೆ ಶಿಕ್ಷಕರು.

‘ಟೊಮೆಟೊ, ಬೀನ್ಸ್ ಇಲ್ಲದೆ ತರಕಾರಿ ಸಾಂಬಾರ್ ಮಾಡಲಾಗದು. ವಾರದ ಹಿಂದೆ ಟೊಮೆಟೊ ಬೆಲೆ ಕೆ.ಜಿಗೆ ₹ 100 ಆಗಿತ್ತು. ಬೀನ್ಸ್ ಬೆಲೆಯೂ ₹ 70ರಿಂದ ₹ 80 ಇದೆ. ಬೇಳೆ, ಎಣ್ಣೆಯೂ ದುಬಾರಿ. ಶಾಲೆಯಲ್ಲಿ ಕಡಿಮೆ ಮಕ್ಕಳಿದ್ದರೆ ತೊಂದರೆ ಇಲ್ಲ. ಪ್ರೌಢಶಾಲೆಗಳಲ್ಲಿ ಹೆಚ್ಚು ಮಕ್ಕಳಿರುತ್ತಾರೆ. 400ಕ್ಕಿಂತ ಹೆಚ್ಚಿದ್ದರೆ ಈಗಿನ ಬೆಲೆಯಲ್ಲಿ, ವಸ್ತುಗಳ ಖರೀದಿಗೆ ದಿನಕ್ಕೆ ₹ 1 ಸಾವಿರದಿಂದ ₹ 1,500 ಬೇಕು’ ಎಂದು ಮುಖ್ಯ ಶಿಕ್ಷಕರೊಬ್ಬರು ತಿಳಿಸಿದರು.

ಮುಖ್ಯಾಂಶಗಳು

- ಸರ್ಕಾರಿ, ಅನುದಾನಿತ ಶಾಲೆಗಳಲ್ಲಿ ಬಿಸಿಯೂಟ
- ಅನುದಾನ ಕೊರತೆ, ಬಾರದ ಬೇಳೆ, ಎಣ್ಣೆ, ಉಪ್ಪು
- ಹಣ ಹೊಂದಿಸಲು ಶಿಕ್ಷಕರ ಹರಸಾಹಸ

ಪ್ರತಿ ವಿದ್ಯಾರ್ಥಿಯ ಖರ್ಚಿನ ಲೆಕ್ಕ

ಬಿಸಿಯೂಟಕ್ಕಾಗಿ ಪ್ರತಿ ವಿದ್ಯಾರ್ಥಿಗೆ ಮಾಡುವ ಖರ್ಚನ್ನು ಇಲಾಖೆ ನಿಗದಿ ಪಡಿಸಿದೆ. 1ರಿಂದ 5ನೇ ತರಗತಿವರೆಗಿನ ಪ್ರತಿ ವಿದ್ಯಾರ್ಥಿಗೆ ತೊಗರಿ ಬೇಳೆಗೆ ₹ 2, ಅಡುಗೆ ಎಣ್ಣೆಗೆ 48 ಪೈಸೆ, ತರಕಾರಿಗೆ ₹ 1.36, ಉಪ್ಪಿಗೆ 3 ಪೈಸೆ, ಸಾಂಬಾರು ಪುಡಿಗೆ 35 ಪೈಸೆ ನಿಗದಿಪಡಿಸಲಾಗಿದೆ.

6ರಿಂದ 10ನೇ ತರಗತಿಗಳಲ್ಲಿ ಓದುತ್ತಿರುವ ಪ್ರತಿ ವಿದ್ಯಾರ್ಥಿಗೆ ತೊಗರಿಬೇಳೆಗೆ ₹ 2.95, ಅಡುಗೆ ಎಣ್ಣೆಗೆ 67 ಪೈಸೆ, ತರಕಾರಿಗಳಿಗೆ ₹ 2.04, ಉಪ್ಪಿಗೆ 6 ಪೈಸೆ ಮತ್ತು ಸಾಂಬಾರು ಪುಡಿಗೆ 54 ಪೈಸೆ ಖರ್ಚು ಮಾಡಬಹುದು.

ಲಭ್ಯವಿರುವ ಅನುದಾನದಲ್ಲಿ ಪದಾರ್ಥಗಳನ್ನು ಖರೀದಿಸುವಂತೆ ಸೂಚಿಸಲಾಗಿತ್ತು. ಈಗ ಬೇಳೆ, ಎಣ್ಣೆ, ಉಪ್ಪು ಬಂದಿವೆ. ಶಾಲೆಗಳಿಗೆ ಕಳುಹಿಸಲಾಗುತ್ತಿದೆ

ಗುರುಲಿಂಗಯ್ಯ, ಅಕ್ಷರ ದಾಸೋಹ ಅಧಿಕಾರಿ, ಚಾಮರಾಜನಗರ

ಮಧ್ಯಾಹ್ನದ ಬಿಸಿಯೂಟಕ್ಕಾಗಿ ಇಲಾಖೆ ಈಗ ಬೇಳೆ, ಎಣ್ಣೆ, ಉಪ್ಪು ಪೂರೈಸಿದೆ. ಎಲ್ಲ ಶಾಲೆಗಳಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ

ಎಸ್.ಎನ್. ಮಂಜುನಾಥ್, ಡಿಡಿಪಿಐ, ಚಾಮರಾಜನಗರ

'ಎಂಎಲ್ಎ ಫಿನಿಷ್ ಆಗ್ಬೇಕು, ಕೋಟಿ ಖರ್ಚಾದ್ರೂ ಸರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಮುಖಂಡ ಗೋಪಾಲಕೃಷ್ಣ ಹಾಗೂ ಕುಳ್ಳ ದೇವರಾಜ್ ಮಧ್ಯೆ ನಡೆದ ಸಂಭಾಷಣೆಯ ಸಾರಾಂಶ ಇಲ್ಲಿದೆ.

ಗೋಪಾಲಕೃಷ್ಣ ಅವರ ಮಾತಿನ ಮಧ್ಯೆ, ಡಿಸಿಪಿ ನಾರಾಯಣ ಅವರ ಕರೆ ಮಾಡಿ ರಾಜಕೀಯ ವಿಚಾರಗಳ ಬಗ್ಗೆ ಮಾತನಾಡಿರುವುದೂ ಆಡಿಯೊದಲ್ಲಿದೆ.

ಗೋಪಾಲಕೃಷ್ಣ: ಎಂಎಲ್ಎ ಫಿನಿಷ್ ಆಗಬೇಕು. ಎರಡರಲ್ಲಿ ಯಾವುದನ್ನು ಮಾಡ್ತೀಯಾ ಹೇಳು;

ದೇವರಾಜ್: ಅವ್ನನ್ನ ಫಿನಿಷ್ ಮಾಡೋಕೆ ಹೆಂಡ್ತಿ ಮಕ್ಕಳನ್ನ ಕಂಟ್ರೋಲ್‌ನಿಂದಿಲ್ಲ. ದುಡ್ಡಲ್ಲಿ ಫಿನಿಷ್ ಮಾಡ್ಸೋಕೆ ಇದಲ್ಲ ಬಿಡಣ್ಣ ನೀನು.

ಗೋಪಾಲಕೃಷ್ಣ: ಫಿನಿಷ್ ಮಾಡು ಇಲ್ಲ ಕೋಟಿ ರೂಪಾಯಿ ಕೊಡು. ಏನಾದ್ರೂ ಸರಿ. ನಾನು-ನೀನು ಇದ್ದರೇ ಕೆಲಸ ಮಾಡೋಣ. ಅಷ್ಟೂ ಸೀಕ್ರೆಟ್ ಆಗಿ ಮಾಡಬೇಕು. ಒಬ್ಬರಿಗೂ ಗೊತ್ತಾಗಬಾರದು;

ದೇವರಾಜ್:ಮಾಡ್ಬಹುದು. ಆದರೆ ರಿಯಲ್ ಎಸ್ಟೇಟ್ ಮಾಡಬೇಕು ಕಣಣ್ಣ.

ಗೋಪಾಲಕೃಷ್ಣ: ರಿಯಲ್ ಎಸ್ಟೇಟ್, ಏನಾದ್ರೂ ಸರಿ. ಡಿಸಿಪಿ, ಎಸಿಪಿ, ಚೀಫ್ ಸೆಕ್ರೆಟರಿ ಎಲ್ ಬೇಕಾದ್ರೂ ಅರೆಂಜ್ ಮಾಡ್ತೀನಿ. ಯಾವದನ್ನೂ ಒಳ್ಳೆ ಸಾವಕಾರನ ಪರಿಚಯ ಮಾಡ್ಕೊಳ್ಳೋಣ. ಮುಗಿಸಿದ್ರೆ ಸರಿ. 50 ಲಕ್ಷ, 1 ಕೋಟಿ ಆದ್ರೂ ಸರಿ. ಮುಗಿಸಬೇಕು. ಇಲ್ಲಾ ಸೋಲಿಸಿ ಬಿಸಾಕು;


ದೇವರಾಜ್: ಹತ್ತು ವರ್ಷ ಸರ್ಕಾರ ಇತ್ತು. ಯೂಸ್ ಮಾಡಿಕೊಳ್ಳಲು ಬಿಟ್ಟು ಹೆರ್ ನನ್ನನ್ನ, ಅಂಟಿಗಳನ್ನ ಇಂಟ್ಲೋಂಗ್ ಡಿರೋವ್ನನ್ನ ಜೊತೆಗೆ ಇಟ್ಕೊಂಡು ನೀನು.

ಗೋಪಾಲಕೃಷ್ಣ: ತೋಟದ ಮನೆಯಲ್ಲಿ 6ರಿಂದ 7 ಗಂಟೆ ತನಕ ಒಬ್ಬೇ ಇರ್ತಾನೆ. ಆ ಟೈಮು ಬೆಸ್ಟ್;

ದೇವರಾಜ್: ಪಾಂಡಿಚೇರಿಯಿಂದ ಹುಡುಗರು ಬಂದಾವ್ರೆ. ಇಲ್ಲೇ ಅಟ್ಯಾಂಡ್ ಆಗಿದಾರೆ ಒಳ್ಳೆ ಟೈಮು ನೋಡಣ್ಣ ಎನ್ ಮಾಡೋಣ. ಅವ್ರು ಪಾಂಡಿಚೇರಿಯಲ್ಲಿ ಒಂದ್ ವಿಕೆಟ್ ಹೊಡ್ದು ಬಂದಾವ್ರೆ. ನೀನ್ ಹೂಂ ಅಂದ್ರೆ ಸ್ವಲ್ಪ ಅಡ್ವಾನ್ಸ್ ಕೊಟ್ಟು ಮುಗ್ಸಿ ಎತ್ ಬಿಸಾಕೋಣ.

'ಕೊಲೆ ಸಂಚಿನ ಸುಳಿವು ಲಭಿಸಿತ್ತು'

ಪ್ರಜಾವಾಣಿ ವಾರ್ತೆ





ಎಸ್ಆರ್ ವಿಶ್ವನಾಥ್

ಬೆಂಗಳೂರು: 'ನನ್ನ ಕೊಲೆಗೆ ಸಂಚು ನಡೆಯುತ್ತಿರುವ ಸುಳಿವು ಮೊದಲೇ ಲಭಿಸಿತ್ತು. ಈ ವಿಚಾರವನ್ನು ಗೃಹ ಸಚಿವರ ಗಮನಕ್ಕೂ ತಂದಿದ್ದೆ. ಕುಳ್ಳ ದೇವರಾಜ್ ಮಂಗಳವಾರ ಸಂಜೆ ಕ್ರಮವಾದ ಪತ್ರ ಕಳುಹಿಸಿದ್ದಾರೆ. ತನಿಖೆಯಾಗಬೇಕು' ಎಂದು ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಯಲಹಂಕದಲ್ಲಿ ನನ್ನನ್ನು ರಾಜಕೀಯವಾಗಿ ಸೋಲಿಸಲು ಆಗುತ್ತಿಲ್ಲ ಎಂಬ ಕಾರಣಕ್ಕೆ ಗೋಪಾಲಕೃಷ್ಣ ಈ ಪ್ರಯತ್ನ ಮಾಡಿದ್ದಾನೆ. ಕುಳ್ಳ ದೇವರಾಜ್ ಅಪರಾಧಿ ಹಿನ್ನೆಲೆಯ ವ್ಯಕ್ತಿ. ಆತನನ್ನು ಬಳಸಿಕೊಂಡು ಕಾಂಗ್ರೆಸ್ ಮುಖಂಡ ಗೋಪಾಲಕೃಷ್ಣ ನನ್ನ ಕೊಲೆಗೆ ಸಂಚು ರೂಪಿಸಿದ್ದರು' ಎಂದು ಆರೋಪಿಸಿದರು.

ಹಲ್ಲೆ ನಡೆಯುವ ಅನುಮಾನ ಇತ್ತು. ಇದೇ ಕಾರಣಕ್ಕಾಗಿ ಭದ್ರತೆ ಒದಗಿಸುವಂತೆ ಪೊಲೀಸ್ ಇಲಾಖೆಗೆ ನಾಲ್ಕು ಬಾರಿ ಪತ್ರ ಬರೆಯಲಾಗಿತ್ತು. ಕಾಂಗ್ರೆಸ್ ಸರ್ಕಾರ ಇದ್ದಾಗ ದುರುದ್ದೇಶದಿಂದ ತಮ್ಮ ವಿರುದ್ಧ ಪ್ರಕರಣ ದಾಖಲಿಸಲಾಗಿತ್ತು. ಕಡಬಗೆರೆ ಶ್ರೀನಿವಾಸ್ ತಮ್ಮ ಜತೆಗೆ ಇದ್ದ ವ್ಯಕ್ತಿ. ಆತನ ಹತ್ಯೆಗೂ ತಮಗೂ ಸಂಬಂಧವಿಲ್ಲ. ಎಲ್ಲ ಪ್ರಕರಣಗಳ ಬಗ್ಗೆಯೂ ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಶಾಸಕ ಎಸ್.ಆರ್. ವಿಶ್ವನಾಥ್ ಅವರೊಂದಿಗೆ ಮಾತನಾಡುವೆ. ಅವರ ಹತ್ಯೆಗೆ ಸಂಚು ರೂಪಿಸಿದ್ದರೆ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ವಿಶ್ವನಾಥ್ ಷಡ್ಯಂತ್ರ: ಗೋಪಾಲಕೃಷ್ಣ



ಗೋಪಾಲಕೃಷ್ಣ

'ವಿಡಿಯೊದಲ್ಲಿರುವ ಶೇಕಡ 80ರಷ್ಟು ಭಾಗ ನಕಲಿ. ನನ್ನ ವಿರುದ್ಧ ಆರೋಪ ಮಾಡಿರುವುದರ ಹಿಂದೆ ಶಾಸಕ ಎಸ್.ಆರ್. ವಿಶ್ವನಾಥ್ ಷಡ್ಯಂತ್ರವಿದೆ. ಕುಳ್ಳ ದೇವರಾಜ್ ಮತ್ತು ವಿಶ್ವನಾಥ್ ಮೊಬೈಲ್ ದೂರವಾಣಿಗಳ ಮೂರು ತಿಂಗಳ ಕರೆ ವಿವರ ಪರಿಶೀಲಿಸಿದರೆ ಸತ್ಯ ಬಯಲಾಗುತ್ತದೆ' ಎಂದು ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಎಂ.ಎನ್. ಗೋಪಾಲಕೃಷ್ಣ ಹೇಳಿದರು.

'ಎಂಟು ಎಕರೆ ಜಮೀನಿನ ವಿಷಯದಲ್ಲಿ ಶಾಸಕರಿಂದ ತೊಂದರೆ ಆಗುತ್ತಿದೆ ಎಂದು ದೇವರಾಜ್ ನನ್ನ ಬಳಿ ಬಂದಿದ್ದ. ಆಗ, ₹ 5 ಲಕ್ಷ ತಂದಿದ್ದು, ಅದರಲ್ಲಿ ₹ 2 ಲಕ್ಷ ವಾಪಸ್ ತೆಗೆದುಕೊಂಡು ಹೋಗಿದ್ದ, ದೇವರಾಜ್ ಶಾಸಕರ ಬಲಗೈ ಬಂಟ. ಅವರ ಯೋಜನೆಯಂತೆ ಎಲ್ಲವೂ ನಡೆದಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು. 'ಯಾರ ಕೊಲೆಗೂ ಸುಪಾರಿ ನೀಡಿಲ್ಲ. ಎಲ್ಲ ಆರೋಪಗಳೂ ಸುಳ್ಳು. ದೇವರಾಜ್ ವಿರುದ್ಧ ದೂರು ದಾಖಲಿಸುತ್ತೇನೆ' ಎಂದರು.

'ರೌಡಿಗಳೆಲ್ಲ ವಿಶ್ವನಾಥ್ ಜತೆಗಿದ್ದಾರೆ'

'ಬೆಂಗಳೂರಿನ ಎಲ್ಲ ರೌಡಿಗಳೂ ಶಾಸಕ ಎಸ್.ಆರ್. ವಿಶ್ವನಾಥ್ ಜತೆಗೆ ಇದ್ದಾರೆ. ಚುನಾವಣೆಯಲ್ಲಿ ಪ್ರಬಲ ಸ್ಪರ್ಧೆ ನೀಡುವವರಿಗೆ ಈ ರೀತಿಯಲ್ಲಿ ಒತ್ತಡ ಹಾಕಲಾಗುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು. 'ಚುನಾವಣೆ ಕಾರಣದಿಂದ ಬೆದರಿಸಲು ಈ ರೀತಿಯ ಆರೋಪ ಮಾಡಲಾಗಿದೆ. ತಪ್ಪು ಮಾಡಿದವರನ್ನು ನಾವು ರಕ್ಷಿಸುವುದಿಲ್ಲ. ತಪ್ಪು ಮಾಡಿದವರನ್ನು ವಿಚಾರಣೆ ಮಾಡಲಿ. ಸಾಬೀತಾದರೆ ಶಿಕ್ಷೆ ನೀಡಲಿ' ಎಂದರು.

ಸುದ್ದಿ 2 ನಿಮಿಷ

ಅಕ್ರಮ ಕಸಾಯಿ ಖಾನೆ: ಕಟ್ಟುನಿಟ್ಟಿನ ಕ್ರಮಕ್ಕೆ ನಿರ್ದೇಶನ


ಬೆಂಗಳೂರು: 'ರಾಜ್ಯದ ಯಾವುದೇ ಜಿಲ್ಲೆಯಲ್ಲಿ ಪ್ರಾಣಿಗಳನ್ನು ಅಕ್ರಮವಾಗಿ ವಧೆ ಮಾಡುವುದಾಗಲಿ ಅಥವಾ ಬಲಿ ಕೊಡುವುದಾಗಲಿ ನಡೆಯದಂತೆ ನೋಡಿಕೊಳ್ಳಬೇಕು ಮತ್ತು ಅಕ್ರಮ ಕಸಾಯಿಖಾನೆಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

'ಹಾಸನ ಜಿಲ್ಲೆಯ ಚನ್ನರಾಯಪಟ್ಟಣದಲ್ಲಿ ಅಬ್ದುಲ್ ಹಕ್ ಎಂಬುವರು ಅನಧಿಕೃತವಾಗಿ ಕಸಾಯಿಖಾನೆಗಳನ್ನು ನಡೆಸುತ್ತಿದ್ದಾರೆ. ಇವರು ಬೆಂಗಳೂರು, ರಾಮನಗರ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಿಗೆ ಅಕ್ರಮವಾಗಿ ದನದ ಮಾಂಸ ರಫ್ತು ಮಾಡುತ್ತಿದ್ದಾರೆ' ಎಂದು ಆರೋಪಿಸಿ ನವದೆಹಲಿಯ 'ಗೋ ಜ್ಞಾನ ಫೌಂಡೇಷನ್' ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಈ ಆದೇಶ ನೀಡಿದೆ.

'ಈ ವಿಷಯದಲ್ಲಿ ನಿರ್ಲಕ್ಷ್ಯ ಮಾಡಿದರೆ ಸಂಬಂಧಪಟ್ಟ ಅಧಿಕಾರಿಗಳೇ ಹೊಣೆ ಆಗುತ್ತಾರೆ' ಎಂದು ರಾಜ್ಯ ಸರ್ಕಾರಕ್ಕೆ ತಾಕೀತು ಮಾಡಿದ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.



'ವಿದ್ಯಾಂಜಲಿ' ಯೋಜನೆ ಸ್ವಾಗತಾರ್ಹ: ಪ್ರೊ. ದೊರೆಸ್ವಾಮಿ



ಬೆಂಗಳೂರು: 'ಸರ್ಕಾರಿ ಶಾಲೆಗಳ ಸಬಲೀಕರಣಕ್ಕಾಗಿ ಪ್ರಧಾನಿ ಅವರು ಚಾಲನೆ ನೀಡಿರುವ ವಿದ್ಯಾಂಜಲಿ ಯೋಜನೆ ಸ್ವಾಗತಾರ್ಹವಾಗಿದೆ' ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಎಂ.ಆರ್. ದೊರೆಸ್ವಾಮಿ ತಿಳಿಸಿದ್ದಾರೆ.

'ದೇಶದಾದ್ಯಂತ ಸರ್ಕಾರಿ ಶಾಲೆಗಳನ್ನು ವಿಶ್ವವಿದ್ಯಾಲಯಗಳೊಂದಿಗೆ ಸಂಪರ್ಕಿಸಿ, ಗುಣಮಟ್ಟ ಹೆಚ್ಚಿಸುವ ಈ ಕ್ರಮವು ಶಿಕ್ಷಣ ಕ್ಷೇತ್ರದ ಕ್ರಾಂತಿಕಾರಿ ಬೆಳವಣಿಗೆಗೆ ಸಹಕಾರಿಯಾಗಲಿದೆ. ಕೌಶಲ ಅಭಿವೃದ್ಧಿ ಮತ್ತು ಮೂಲಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು ಸರ್ಕಾರದ ಜತೆ ಕೈಜೋಡಿಸುವ ಈ ಕಾರ್ಯದಿಂದ ಶೈಕ್ಷಣಿಕ ಕ್ಷೇತ್ರದ ಸುಧಾರಣೆಗೆ ಮತ್ತಷ್ಟು ವೇಗ ದೊರೆಯಲಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಗುಣಮಟ್ಟ ವೃದ್ಧಿಸುವ ಕ್ರಮಗಳನ್ನು ಕೈಗೊಳ್ಳಬೇಕು ಎಂದು ರಾಜ್ಯ ಸರ್ಕಾರಕ್ಕೆ ನಾನು ಶಿಫಾರಸು ಮಾಡಿದ್ದೆ. ಈ ಉಪಕ್ರಮವನ್ನು ರಾಜ್ಯ ಸರ್ಕಾರವು 2020ರ ಜುಲೈನಲ್ಲಿ ಜಾರಿಗೆ ಬಂದ ನೂತನ ಶಿಕ್ಷಣ ನೀತಿಗಿಂತ ಮುನ್ನವೇ ಅಳವಡಿಸಿಕೊಂಡಿತ್ತು' ಎಂದು ತಿಳಿಸಿದ್ದಾರೆ. 'ಇದೇ ರೀತಿ ವಿಶೇಷ ಶಿಕ್ಷಣ ಯೋಜನೆಗಳಿಗೆ ಸಂಪನ್ಮೂಲ ಸಂಗ್ರಹಕ್ಕೆ ಸರ್ಕಾರಿ ಕಾರ್ಪೊರೇಟ್ ಹೌಸ್ ಸ್ಥಾಪಿಸುವಂತೆ ಶಿಫಾರಸು ಮಾಡಲಾಗಿತ್ತು. ರಾಜ್ಯ ಸರ್ಕಾರ ಈ ವಿಷಯವನ್ನು ಗಂಭಿರವಾಗಿ ಪರಿಗಣಿಸಿದ್ದು, ಅನುಷ್ಠಾನದ ಹಂತದಲ್ಲಿದೆ' ಎಂದು ತಿಳಿಸಿದ್ದಾರೆ.

ದಾವಣಗೆರೆ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಲಸಿಕಾ ಅಭಿಯಾನ

ಮುಚ್ಚಿದ ಮನೆಗಳ ಕದ ತಟ್ಟಿ ಲಸಿಕೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಹಳೇ ದಾವಣಗೆರೆಯ ಮುಸ್ತಫಾ ನಗರದಲ್ಲಿ ಕೊರೊನಾ ನಿರೋಧಕ ಲಸಿಕೆಗೆ ಹೆದರಿ ಮನೆಗಳ ಬಾಗಿಲು ಹಾಕಿಕೊಂಡು ಒಳಗೆ ಕುಳಿತಿದ್ದರು. ಅವರನ್ನೂ ಬಿಡದೆ ಲಸಿಕೆ ಹಾಕಲಾಗಿದೆ. ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ನೇತೃತ್ವದಲ್ಲಿ ಲಸಿಕಾ ಅಭಿಯಾನ ನಡೆಸಿದ ತಂಡವು ಕದ ತಟ್ಟಿ, ಬಾಗಿಲು ತೆಗೆಸಿ ಲಸಿಕೆ ನೀಡಿದೆ.

ಆಜಾದ್‌ನಗರದಲ್ಲಿ ರಸ್ತೆಯಲ್ಲಿ ಓಡಾಡುತ್ತಿದ್ದ ಯುವಕರನ್ನು ನಿಲ್ಲಿಸಿ ಲಸಿಕೆ ಆಗಿದೆಯೇ ಎಂದು ವಿಚಾರಿಸಿದರು. ಹಾಕಿಸಿಕೊಳ್ಳದವರಿಗೆ ಅಲ್ಲೇ ಲಸಿಕೆ ನೀಡಲಾಯಿತು. ಆಮೇಲೆ ಆಧಾರ್ ಕಾರ್ಡ್ ತಂದು ಕೊಡಿ ಎಂದು ಅವರಿಗೆ ಸಲಹೆ ನೀಡಲಾಯಿತು.

'ನನಗೆ 12 ವರ್ಷ. ಅದಕ್ಕೇ ಲಸಿಕೆ ಹಾಕಿಸಿಕೊಂಡಿಲ್ಲ' ಎಂದು ಯುವಕನೊಬ್ಬ ಸಮಜಾಯಿಷಿ ನೀಡಿದ. ಯುವಕನಿಗೆ ಗಡ್ಡ ಮೀಸೆ ಬಂದಿರುವುದನ್ನು ನೋಡಿ, '12 ವರ್ಷಕ್ಕೇ ಗಡ್ಡ ಬಂದು ಬಿಡ್ತಾ ನಿಂಗೆ' ಎಂದು ಕೇಳಿದ ಜಿಲ್ಲಾಧಿಕಾರಿ, 'ಹಾಕ್ರಿ ಇವನಿಗೆ ಲಸಿಕೆ' ಎಂದು ರಸ್ತೆಯಲ್ಲೇ ಲಸಿಕೆ ಹಾಕಿಸಿದರು.

ಇಂಥ ಹಲವು ಸ್ವಾರಸ್ಯಕರ ಘಟನೆಗಳಿಗೆ ಬುಧವಾರ ಲಸಿಕಾ ಅಭಿಯಾನ ಸಾಕ್ಷಿಯಾಯಿತು. ಪಾಲಿಕೆ ಅಧಿಕಾರಿಗಳು, ಆರೋಗ್ಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.



ದಾವಣಗೆರೆಯ ಆಜಾದ್‌ನಗರದಲ್ಲಿ ಲಸಿಕೆ ಹಾಕಿಸಿದ್ದಕ್ಕಾಗಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರಿಗೆ ವೃದ್ಧೆಯೊಬ್ಬರು ಅಕ್ಕರೆ ತೋರಿದ್ದು ಹೀಗೆ. – ಪ್ರಜಾವಾಣಿ ಚಿತ್ರ

ಬೇಂದ್ರೆ ಸ್ಮೃತಿ ಲೇಖನ ಸ್ಪರ್ಧೆ

ಬೆಂಗಳೂರು: ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿಗಳಿಗಾಗಿ 'ದ.ರಾ.ಬೇಂದ್ರೆ ಸ್ಮೃತಿ ಲೇಖನ ಸ್ಪರ್ಧೆ-14' ಅನ್ನು ದ.ರಾ.ಬೇಂದ್ರೆ ಕಾವ್ಯಕೂಟ ಏರ್ಪಡಿಸಿದೆ.

ಬೇಂದ್ರೆಯವರ 'ಕನ್ನಡ ಮೇಘದೂತ: ಬೆಡಗು ಮತ್ತು ತಾತ್ವಿಕತೆ' ಕುರಿತ ಲೇಖನವನ್ನು ಡಿ. 20ರೊಳಗೆ ಕಳುಹಿಸಬೇಕು ಎಂದು ಕಾವ್ಯಕೂಟದ ಅಧ್ಯಕ್ಷ ಡಾ.ಜಿ. ಕೃಷ್ಣಪ್ಪ ತಿಳಿಸಿದ್ದಾರೆ.

'ಎಲ್ಲ ವಿಶ್ವವಿದ್ಯಾಲಯಗಳ ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಯಾವುದೇ ಪ್ರವೇಶ ಶುಲ್ಕವಿಲ್ಲ. ವಿಶ್ವವಿದ್ಯಾಲಯ ಅಥವಾ ಕಾಲೇಜಿನಿಂದ ಭಾಗವಹಿಸುವ ವಿದ್ಯಾರ್ಥಿಗಳ ಸಂಖ್ಯೆಗೆ ಮಿತಿಯೂ ಇಲ್ಲ. ಲೇಖನ 2,500 ಪದಗಳನ್ನು ಮೀರಬಾರದು. ಸ್ಪರ್ಧೆಯ ವಿಜೇತರಿಗೆ ಪ್ರಥಮ ಬಹುಮಾನವಾಗಿ ₹5 ಸಾವಿರ, ದ್ವಿತೀಯ ಬಹುಮಾನವಾಗಿ ₹4 ಸಾವಿರ, ತೃತೀಯ ಬಹುಮಾನವಾಗಿ ₹3 ಸಾವಿರ ನೀಡಲಾಗುವುದು' ಎಂದು ವಿವರಿಸಿದ್ದಾರೆ.

ಲೇಖನಗಳನ್ನು ಡಾ.ಜಿ. ಕೃಷ್ಣಪ್ಪ, ಅಧ್ಯಕ್ಷರು, ದ.ರಾ. ಬೇಂದ್ರೆ ಕಾವ್ಯಕೂಟ, # 22, ಶ್ರೀ ಗುರುದತ್ತ ನಿಲಯ, 1ನೇ ತಿರುವು, ನೇತಾಜಿ ನಗರ, ಮತ್ತಿಕೆರೆ, ಬೆಂಗಳೂರು-560054 ಕಳುಹಿಸಬೇಕು. ದೂರವಾಣಿ ಸಂಖ್ಯೆ 99721 19209 ಸಂಪರ್ಕಿಸಬಹುದು. ಲೇಖನವನ್ನು ನುಡಿಯಲ್ಲಿ ಟೈಪಿಸಿ ಇ-ಮೇಲ್ (darabendrekavyakoota@gmail.com) ಮಾಡಬಹುದು ಎಂದು ತಿಳಿಸಿದ್ದಾರೆ. ಲೇಖನದ ಜೊತೆಯಲ್ಲಿ ಆಯಾ ಕಾಲೇಜಿನ ಮಾರ್ಗದರ್ಶಕ ಪ್ರಾಧ್ಯಾಪಕರಿಂದ ಪಡೆದ ಅಧಿಕೃತ ಪರಿಚಯ ಪತ್ರ ಲಗತ್ತಿಸಬೇಕು. ವಿದ್ಯಾರ್ಥಿ ತನ್ನ ಹೆಸರು, ಕಾಲೇಜಿನ, ಮನೆಯ ಅಂಚೆ ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದು ಕಳುಹಿಸಬೇಕು. ಲೇಖನ ಸಿದ್ಧಪಡಿಸಲು ಸಹಾಯ ಪಡೆದ ಆಕರ ಗ್ರಂಥಗಳ ಹಾಗೂ ಲೇಖನಗಳ ಪಟ್ಟಿಯನ್ನು ಲೇಖನದ ಕೊನೆಯಲ್ಲಿ ಬರೆಯಬೇಕು ಎಂದು ವಿವರಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಒಂದು, ಮುಂಡಗೋಡದಲ್ಲಿ ಎರಡು ಪ್ರಕರಣಗಳು ಪತ್ತೆ

ಮೂವರು ವಿದ್ಯಾರ್ಥಿಗಳಿಗೆ ಕೋವಿಡ್; ಶಾಲೆಗೆ ರಜೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಆದರ್ಶ ನಗರದ ಜಿ.ವಿ. ಜೋಶಿ ರೋಟರಿ ಇಂಗ್ಲಿಷ್ ಮಾಧ್ಯಮ ಶಾಲೆಯ ಒಬ್ಬ ವಿದ್ಯಾರ್ಥಿಗೆ ಮಂಗಳವಾರ ಕೋವಿಡ್ ದೃಢಪಟ್ಟಿದ್ದು, ಡಿ.4ರವರೆಗೆ ಶಾಲೆಗೆ ರಜೆ ಘೋಷಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಇಬ್ಬರು ಮಕ್ಕಳಿಗೂ ಕೋವಿಡ್ ದೃಢಪಟ್ಟಿದೆ.

ಇತ್ತೀಚೆಗೆ ಎಸ್‌ಡಿಎಂ ಕಾಲೇಜಿನ ಹಲವು ವಿದ್ಯಾರ್ಥಿಗಳಿಗೆ ಕೋವಿಡ್ ಆಗಿತ್ತು. ಈ ವಿದ್ಯಾರ್ಥಿ ಅಲ್ಲಿನವರೊಂದಿಗೆ ಪ್ರಾಥಮಿಕ ಸಂಪರ್ಕ ಹೊಂದಿದ್ದರು.

'ಶಾಲೆಯ ಕೊಠಡಿಗಳನ್ನು ಸ್ಯಾನಿಟೈಸ್ ಮಾಡಲಾಗಿದೆ. ಶಿಕ್ಷಕರು ಹಾಗೂ ಸಿಬ್ಬಂದಿ ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದ ಮಾಹಿತಿ ನೀಡಬೇಕು. ಪಡೆದಿಲ್ಲವಾದರೆ ತಕ್ಷಣವೇ ಲಸಿಕೆ ಪಡೆಯುವಂತೆ ಕ್ರಮ ಕೈಗೊಳ್ಳಬೇಕು ಎಂದು ಶಾಲಾ ಮುಖ್ಯಸ್ಥರಿಗೆ ಸೂಚಿಸಲಾಗಿದೆ' ಎಂದು ಹುಬ್ಬಳ್ಳಿ ನಗರ ತಹಶೀಲ್ದಾರ್ ಶಶಿಧರ ಮಾಡ್ಯಾಳ ತಿಳಿಸಿದರು.

ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನ ಮೈನಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಇಬ್ಬರು ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟಿದ್ದು ಎರಡು ದಿನ ಶಾಲೆಗೆ ರಜೆ ಘೋಷಿಸಲಾಗಿದೆ. ಮುಂಜಾಗ್ರತಾ ಕ್ರಮವಾಗಿ ತರಗತಿಯ ಎಲ್ಲ ಮಕ್ಕಳಿಗೆ ಕೋವಿಡ್ ಪರೀಕ್ಷೆ ಮಾಡಿಸಲಾಗಿದೆ.

'ನ.25ರಂದು ಗ್ರಾಮದ ವ್ಯಕ್ತಿಯೊಬ್ಬರಲ್ಲಿ ಕೋವಿಡ್ ದೃಢಪಟ್ಟಿತ್ತು. ಅವರ ಕುಟುಂಬದ ಮಕ್ಕಳು ಸರ್ಕಾರಿ ಪ್ರಾಥಮಿಕ ಶಾಲೆಯ 3 ಮತ್ತು 4ನೇ ತರಗತಿಯಲ್ಲಿ ಕಲಿಯುತ್ತಿದ್ದರು. ಈ ಹಿನ್ನೆಲೆಯಲ್ಲಿ ಎರಡೂ ತರಗತಿಯ ಎಲ್ಲ ವಿದ್ಯಾರ್ಥಿಗಳಿಗೆ ನ.29ರಂದು ಕೋವಿಡ್ ಪರೀಕ್ಷೆ ಮಾಡಿಸಲಾಗಿತ್ತು. ಅದರಲ್ಲಿ ಸೋಂಕಿತ ವ್ಯಕ್ತಿಯ ಕುಟುಂಬದ ಇಬ್ಬರು ಮಕ್ಕಳಲ್ಲಿ ಕೋವಿಡ್ ಖಚಿತಗೊಂಡಿದ್ದು, ಉಳಿದ ವಿದ್ಯಾರ್ಥಿಗಳ ವರದಿ ನೆಗೆಟಿವ್ ಬಂದಿದೆ' ಎಂದು ಶಿಕ್ಷಕರು ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	5,295	6,926
ಹಾರಂಗಿ	2,859	2,857.18	510	600
ಕಬಿನಿ	2284.00	2,283.83	800	700
ಹೇಮಾವತಿ	2,922	2,913.91	1,869	1,165
ಲಿಂಗನಮಕ್ಕಿ	1,819	1,812.40	1651	-
ಸೂಪಾ (ಮೀ)	564	554.86	000	591
ಮಾಣಿ	594	586.44	86	-
ತುಂಗಭದ್ರಾ	1,633	1,632.99	8,658	8,478
ಮಲಪ್ರಭಾ	2079.5	2,077.15	569	569
ಘಟಪ್ರಭಾ	2175	165.78	173	173
ಭದ್ರಾ	186	185.11	1,815	1,212
ಆಲಮಟ್ಟಿ (ಮೀ)	519.6	518.56	4,063	580
ನಾರಾಯಣಪುರ (ಮೀ)	492.25	492.13	1,333	144

* ನೆಲಮಟ್ಟದಿಂದ

ಮುಂದುವರಿದ ಮಳೆ: ಮನೆ ಕುಸಿತ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಾದ್ಯಂತ ಮಂಗಳವಾರ ರಾತ್ರಿ ಅಕಾಲಿಕವಾಗಿ ಮಳೆ ಸುರಿದಿದೆ. ಗುಡುಗು, ವೇಗವಾದ ಗಾಳಿಯೊಂದಿಗೆ ಜೋರಾಗಿ ವರ್ಷಧಾರೆಯಾಗಿದೆ. ಯಲ್ಲಾಪುರ ತಾಲ್ಲೂಕಿನ ಉಮ್ಮಚಗಿಯಲ್ಲಿ ನಾಣು ಮಂಜಾ ದೇವಾಡಿಗ ಎಂಬುವವರ ಮನೆ ಸಂಪೂರ್ಣವಾಗಿ ಕುಸಿದಿದೆ.

ವಿವಿಧೆಡೆ ಕಟಾವಿಗೆ ಸಿದ್ಧವಾಗಿರುವ ಹಾಗೂ ಒಣಗಲು ಹರವಿಟ್ಟಿದ್ದ ಭತ್ತಕ್ಕೆ ಹಾನಿಯಾಗಿದೆ.

ಒಕ್ಕಲಿಗರ ಸಂಘ: ಆಡಳಿತಾಧಿಕಾರಿ ಹಾಜರಿಗೆ ಆದೇಶ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘದ ಚುನಾವಣೆಯ ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದ ಆಕ್ಷೇಪಣೆಗಳ ಬಗ್ಗೆ ವಿವರಣೆ ನೀಡಲು ಒಕ್ಕಲಿಗರ ಸಂಘದ ಆಡಳಿತಾಧಿಕಾರಿ ನ್ಯಾಯಾಲಯಕ್ಕೆ ಖುದ್ದು ಹಾಜರಾಗುವಂತೆ ಹೈಕೋರ್ಟ್ ಆದೇಶಿಸಿದೆ.

ಸಂಘದ ಸದಸ್ಯ ಸ್ಥಾನ ಮತ್ತು ಮತದಾರರ ಪಟ್ಟಿಗೆ ಸಂಬಂಧಿಸಿದ ತಕರಾರುಗಳ ಬಗ್ಗೆ ಕೆ.ಸಿ. ಜಯರಾಮ್ ಸೇರಿದಂತೆ ಆರು ಜನ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ಆಡಳಿತಾಧಿಕಾರಿಯ ಧೋರಣೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, 'ಬಹುಕೋಟಿ ರೂಪಾಯಿಗಳ ಅವ್ಯವಹಾರದಲ್ಲಿ ಭಾಗಿಯಾದ ಆರೋಪ ಹೊತ್ತ ಕ್ರಿಮಿನಲ್ ಹಿನ್ನೆಲೆ ಹೊಂದಿರುವ ಸದಸ್ಯರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಕೈಬಿಡುವ ವಿಚಾರ ಪರಿಶೀಲಿಸುವಂತೆ ಈ ಹಿಂದೆಯೇ ಹೈಕೋರ್ಟ್ ಸೂಚಿಸಿದೆ. ಆದರೂ ಆಡಳಿತಾಧಿಕಾರಿ ಈ ಸೂಚನೆ ಸೂಚನೆ ಪಾಲಿಸಿಲ್ಲ. ಆದ್ದರಿಂದ, ಆಡಳಿತಾಧಿಕಾರಿ ಇದೇ 4ರಂದು ವಿಚಾರಣೆಗೆ ಖುದ್ದು ಹಾಜರಾಗಿ ವಿವರಣೆ ನೀಡಬೇಕು' ಎಂದು ಆದೇಶಿಸಿದೆ.

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮೊಟ್ಟೆ ವಿತರಣೆ

ಮೊಟ್ಟೆ ಸೇವಿಸಿ ಮಕ್ಕಳು ಸಂಭ್ರಮ

ಪ್ರಜಾವಾಣಿ ವಾರ್ತೆ

ಬೀದರ್: ಜಿಲ್ಲೆಯ ಎಲ್ಲ ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಬುಧವಾರ ಮೊಟ್ಟೆ ಹಾಗೂ ಬಾಳೆಹಣ್ಣು ವಿತರಿಸಲಾಯಿತು. ಮಕ್ಕಳ ಇಚ್ಛೆಗೆ ಅನುಸಾರವಾಗಿ ಮೊಟ್ಟೆಗಳನ್ನು ಕೊಡಲಾಯಿತು.

'ಉರ್ದು ಹಾಗೂ ಮರಾಠಿ ಶಾಲೆಗಳಲ್ಲಿ ಎಲ್ಲ ಮಕ್ಕಳೂ ಮೊಟ್ಟೆ ಸ್ವೀಕರಿಸಿದ್ದಾರೆ. ಕನ್ನಡ ಶಾಲೆಗಳಲ್ಲಿ ಮಾತ್ರ ಕೆಲವರು ಮೊಟ್ಟೆ ಹಾಗೂ ಇನ್ನು ಕೆಲವರು ಬಾಳೆಹಣ್ಣು ಸೇವಿಸಿದರು. ಪಾಲಕರಿಂದಲೂ ಯಾವುದೇ ವಿರೋಧ ವ್ಯಕ್ತವಾಗಿಲ್ಲ' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಗಂಗಣ್ಣ ಸ್ವಾಮಿ ತಿಳಿಸಿದರು.

ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಮಕ್ಕಳಲ್ಲಿ ಅಪೌಷ್ಟಿಕತೆ ಕಡಿಮೆ ಮಾಡಲು ಸರ್ಕಾರ ಮಕ್ಕಳಿಗೆ ವಾರದಲ್ಲಿ ಐದು ದಿನ ಹಾಲು, ಮೂರು ಬಾರಿ ಮೊಟ್ಟೆ ಹಾಗೂ ಬಾಳೆ ಹಣ್ಣು ವಿತರಿಸಲು ಆದೇಶ ಹೊರಡಿಸಿದೆ. ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 85,261 ಹಾಗೂ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ 39,476 ಮಕ್ಕಳು ಇದ್ದಾರೆ.



ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಏಣಕೂರ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಮಕ್ಕಳು ಮೊಟ್ಟೆ ಸೇವಿಸಿದರು

ಪೌಷ್ಟಿಕ ಆಹಾರ ವಿತರಣೆ ಬೆಂಬಲಿಸಿ ಧರಣಿ: ಕಲ್ಯಾಣ ಕರ್ನಾಟಕದ ಪ್ರಾಥಮಿಕ ಶಾಲೆ ಮಕ್ಕಳಿಗೆ ಮೊಟ್ಟೆ, ಬಾಳೆಹಣ್ಣು ವಿತರಣೆ ಸಮರ್ಥಿಸಿ ಭಾರತೀಯ ವಿದ್ಯಾರ್ಥಿ ಸಂಘ, ದಲಿತ ವಿದ್ಯಾರ್ಥಿ ಪರಿಷತ್, ಗೊಂಡ ವಿದ್ಯಾರ್ಥಿ ಸಂಘ ಸೇರಿದಂತೆ 10 ಸಂಘಟನೆಗಳ ಕಾರ್ಯಕರ್ತರು ಬೀದರ್‌ನಲ್ಲಿ ಸಾಂಕೇತಿಕ ಧರಣಿ ನಡೆಸಿದರು.

ಮೊಟ್ಟೆ ವಿತರಣೆ ಸ್ಥಗಿತಗೊಳಿಸುವುದಾದರೆ ಸೈನಿಕ ಶಾಲೆ, ಸೇನೆಯಲ್ಲೂ ಮಾಂಸಾಹಾರಕ್ಕೆ ಅವಕಾಶ ಕೊಡಬಾರದು. ಮೊಟ್ಟೆ ವಿತರಣೆ ವಿಷಯದಲ್ಲಿ ರಾಜಕೀಯ ಬೇಡ. ಸರ್ಕಾರದ ನಿರ್ಧಾರಕ್ಕೆ ಪೂರ್ಣ ಬೆಂಬಲವಿದೆ ಎಂದು ಹೇಳಿದರು.

ಹುಬ್ಬಳ್ಳಿ – ಅಂಕೋಲಾ ಬ್ರಾಡ್‌ಗೇಜ್ ರೈಲು ಮಾರ್ಗ

ಸಮೀಕ್ಷೆ: ಎನ್‌ಡಬ್ಲ್ಯೂಬಿಗೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುಬ್ಬಳ್ಳಿ-ಅಂಕೋಲಾ ಮಧ್ಯದ ಬ್ರಾಡ್‌ಗೇಜ್ ರೈಲು ಮಾರ್ಗ ಯೋಜನೆಯಿಂದ ವನ್ಯಜೀವಿ ಸಂಪತ್ತಿನ ಮೇಲೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಸಮೀಕ್ಷೆ ನಡೆಸಿ, ವರದಿ ಸಲ್ಲಿಸಿ' ಎಂದು ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ (ಎನ್‌ಡಬ್ಲ್ಯುಬಿ) ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ 'ಪ್ರಾಜೆಕ್ಟ್ ವೃಕ್ಷ ಫೌಂಡೇಷನ್' ಮತ್ತು ಗಿರಿಧರ್ ಕುಲಕರ್ಣಿ ಸಲ್ಲಿಸಿರುವ ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

'ಉದ್ದೇಶಿತ ರೈಲ್ವೆ ಯೋಜನೆಯಿಂದ ಪಶ್ಚಿಮ ಘಟ್ಟಗಳ ಅಪರೂಪದ ವನ್ಯಜೀವಿ ಸಂಪತ್ತಿಗೆ ತೊಂದರೆ ಉಂಟಾಗಲಿದೆ ಎಂಬ ಆತಂಕಗಳ ಹಿನ್ನೆಲೆಯಲ್ಲಿ, ಯೋಜನೆಯ ಸಾಧಕ-ಬಾಧಕಗಳ ಬಗ್ಗೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಮೌಲ್ಯಮಾಪನ ನಡೆಸಬೇಕು. ಈಗಾಗಲೇ ಲಭ್ಯವಿರುವ ಸಮೀಕ್ಷೆ ಹಾಗೂ ವರದಿಗಳನ್ನು ಪರಿಶೀಲಿಸಬೇಕು. ಅಗತ್ಯಬಿದ್ದರೆ ತಜ್ಞರ ನೆರವು ಪಡೆದುಕೊಳ್ಳಬಹುದು' ಎಂದು ನ್ಯಾಯಪೀಠ ಹೇಳಿದೆ.

'ಅಭಿವೃದ್ಧಿ ಕಾರ್ಯಗಳು ನಡೆಯಬೇಕು, ಆದರೆ, ಅದರಿಂದ ವನ್ಯಜೀವಿ ಸಂಪತ್ತಿಗೆ ತೊಂದರೆ ಆಗಬಾರದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ನ್ಯಾಯಪೀಠ, 'ಮಂಡಳಿ ಈ ಬಗ್ಗೆ ಸಮೀಕ್ಷೆ ನಡೆಸಿ, ಮುಂದಿನ ವಿಚಾರಣೆ ಒಳಗೆ ವರದಿ ಸಲ್ಲಿಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ.

ಹುಬ್ಬಳ್ಳಿ-ಅಂಕೋಲಾ ಮಧ್ಯದ 164.44 ಕಿ.ಮಿ ಉದ್ದನೆಯ ರೈಲು ಮಾರ್ಗ ನಿರ್ಮಾಣಕ್ಕೆ ಕರ್ನಾಟಕ ವನ್ಯಜೀವಿ ಮಂಡಳಿ 2020ರ ಮಾರ್ಚ್ 20ರಂದು ಅನುಮತಿ ನೀಡಿರುವುದನ್ನು ಆಕ್ಷೇಪಿಸಿ ಪಿಐಎಲ್ ಸಲ್ಲಿಸಲಾಗಿದೆ.

'ರಾಜ್ಯ ವನ್ಯಜೀವಿ ಮಂಡಳಿ ಕೈಗೊಂಡಿರುವ ನಿರ್ಣಯ ಆಧರಿಸಿ ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗ ಯೋಜನೆ ಸಂಬಂಧ ಮುಂದಿನ ಕ್ರಮ ಜರುಗಿಸಬಾರದು' ಎಂದು ಸರ್ಕಾರಕ್ಕೆ ನಿರ್ದೇಶನ ನೀಡಿ ಹೈಕೋರ್ಟ್ ಜೂನ್ 18ರಂದು ಮಧ್ಯಂತರ ಆದೇಶ ನೀಡಿತ್ತು.

ಮುಖ್ಯಾಂಶಗಳು

- 'ವನ್ಯಜೀವಿ ಸಂಪತ್ತಿನ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ಸಮೀಕ್ಷೆ ನಡೆಸಿ'
- ಯೋಜನೆಯ ಸಾಧಕ, ಬಾಧಕಗಳ ಬಗ್ಗೆ ಮೌಲ್ಯಮಾಪನಕ್ಕೆ ಸೂಚನೆ

ಸಾರಿಗೆ ಸಂಸ್ಥೆ ಸುಧಾರಣೆ: ಸಮಿತಿ ನೇಮಕ

ಬೆಂಗಳೂರು: ರಾಜ್ಯ ಸರ್ಕಾರಿ ಸ್ವಾಮ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಪುನರ್ ವಿನ್ಯಾಸ, ಸುಧಾರಣೆ ಮತ್ತು ಆರ್ಥಿಕ ಸ್ವಾವಲಂಬನೆ ತರುವ ಕುರಿತು ಅಧ್ಯಯನ ನಡೆಸಲು ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್. ಶ್ರೀನಿವಾಸಮೂರ್ತಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಸಾರಿಗೆ ಇಲಾಖೆ ಮಂಗಳವಾರ ಆದೇಶ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಗಳಲ್ಲಿ ಸುಧಾರಣೆ ತರುವ ಕುರಿತು ಸಮಿತಿ ಅಧ್ಯಯನ ನಡೆಸಿ, ಮೂರು ತಿಂಗಳೊಳಗೆ ವರದಿ ಸಲ್ಲಿಸಬೇಕು.

ನಾಲ್ಕೂ ಸಂಸ್ಥೆಗಳ ಪುನರ್ ವಿನ್ಯಾಸ, ಜಮೀನು, ಕಟ್ಟಡ ಸೇರಿದಂತೆ ಸ್ಥಿರಾಸ್ತಿಗಳನ್ನು ವಿಲೇವಾರಿ ಮಾಡಿ ಆರ್ಥಿಕ ಸಂಪನ್ಮೂಲ ಕ್ರೋಡೀಕರಿಸುವುದು ಮತ್ತು ಸಾರಿಗೆ ಕ್ಷೇತ್ರದ ಕಾರ್ಯಕ್ಷಮತೆ ಹೆಚ್ಚಿಸುವ ಕುರಿತು ಸಮಿತಿ ಅಧ್ಯಯನ ನಡೆಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆರ್‌ಜಿಯುಎಚ್‌ಎಸ್‌ಗೆ ಡಾ. ರಮೇಶ್ ಕುಲಪತಿ



ಡಾ. ರಮೇಶ್

ಬೆಂಗಳೂರು: ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ನೂತನ ಕುಲಪತಿಯನ್ನಾಗಿ ಡಾ.ಎಂ.ಕೆ. ರಮೇಶ್ ಅವರನ್ನು ನೇಮಿಸಲಾಗಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಮೇಶ್ ಅವರನ್ನು ನೇಮಿಸಿ ಆದೇಶ ಹೊರಡಿಸಿದ್ದಾರೆ.

ರಮೇಶ್ ಅವರು ಇದುವರೆಗೆ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮಂಡಳಿ ಮತ್ತು ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷರಾಗಿದ್ದರು.

ಇದೇ ವಿಶ್ವವಿದ್ಯಾಲಯದಲ್ಲಿ ರಮೇಶ್ ಅವರು ಹಂಗಾಮಿ ಕುಲಪತಿಯಾಗಿ ಮತ್ತು ಕುಲಸಚಿವರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಅಧಿಕಾರ ಸ್ವೀಕರಿಸಿದ ದಿನದಿಂದ ಮೂರು ವರ್ಷಗಳ ಅವಧಿಗೆ ಅಥವಾ 65 ವರ್ಷ ವಯೋಮಿತಿಯಾಗುವವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೂ ಈ ಹುದ್ದೆಯಲ್ಲಿ ಇರಲಿದ್ದಾರೆ.

ಸಮಬಲದ ಪೈಪೋಟಿಗೆ ಕಾಂಗ್ರೆಸ್, ಬಿಜೆಪಿ ಸಜ್ಜು

ಬೆಂಗಳೂರು ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರ: ವ್ಯಕ್ತಿತ್ವ, ಹಣಬಲವೇ ಚರ್ಚೆ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಮಹಾನಗರದ ಸುತ್ತ ಆವರಿಸಿಕೊಂಡಿರುವ ಗ್ರಾಮ ಪಂಚಾಯಿತಿ ಸದಸ್ಯರೇ ಪ್ರಮುಖವಾಗಿರುವ ಬೆಂಗಳೂರು ನಗರ ಸ್ಥಳೀಯ ಸಂಸ್ಥೆಗಳ ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸಮಬಲದ ಪೈಪೋಟಿಗೆ ಸಜ್ಜಾಗಿವೆ.

ಇದುವರೆಗೆ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಈ ಕ್ಷೇತ್ರಕ್ಕೆ ಈ ಬಾರಿ ಬಿಜೆಪಿ ಲಗ್ಗೆ ಹಾಕಲು ಹವಣಿಸುತ್ತಿದೆ. ಪಕ್ಷ ಸಂಘಟನೆ ಮತ್ತು ಅಭ್ಯರ್ಥಿಗಳ 'ಧನ–ಘನ ವ್ಯಕ್ತಿತ್ವ'ದ ಆಧಾರದ ಮೇಲೆ ಮತದಾರರನ್ನು ಸೆಳೆಯಲು ಪ್ರಯತ್ನಗಳು ನಡೆಯುತ್ತಿವೆ.

ಸಂಘಟನೆಯ ಸೂತ್ರ ಹಿಡಿದುಕೊಂಡು ಪ್ರಚಾರ ನಡೆಸುತ್ತಿರುವ ಬಿಜೆಪಿ, ಗ್ರಾಮೀಣ ಪ್ರದೇಶದಲ್ಲಿ ಗಟ್ಟಿಯಾಗಿ ಬೇರೂರುವ ಅವಕಾಶಗಳನ್ನು ಬಳಸಿಕೊಳ್ಳುತ್ತಿದೆ. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಗ್ರಾಮೀಣ ಪ್ರದೇಶದಲ್ಲಿ ನಾಯಕತ್ವದ ಕೊರತೆ ಎದುರಿಸುತ್ತಿದ್ದರೂ ಕಾಂಗ್ರೆಸ್ ತನ್ನ ಮೂಲ ಮತದಾರರನ್ನು ನಂಬಿಕೊಂಡು ಅಬ್ಬರದ ಪ್ರಚಾರ ನಡೆಸುತ್ತಿದೆ.

ಮತದಾರರ ವಿವರ	
ಪುರಸಭೆಗಳು	3
ಪುರುಷರು	54
ಮಹಿಳೆಯರು	35
ಒಟ್ಟು	89
ಒಟ್ಟು ಗ್ರಾಮ ಪಂಚಾಯಿತಿಗಳು	83
ಪುರುಷರು	943
ಮಹಿಳೆಯರು	1041
ಒಟ್ಟು ಗ್ರಾ.ಪಂ. ಮತದಾರರು	1984
ಒಟ್ಟು ಮತದಾರರು	2073

ಚುನಾವಣೆ ನಡೆಯದ ಕಾರಣ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸದಸ್ಯರ ಮತಗಳು ಇಲ್ಲದೆಯೇ ಈ ಮತಕ್ಷೇತ್ರ ಕಿರಿದಾಗಿದೆ.

2015ರಲ್ಲಿ ಬಿಜೆಪಿಯ ದೊಡ್ಡ ಬಸವರಾಜು ವಿರುದ್ಧ ಜಯಗಳಿಸಿದ್ದ ಕಾಂಗ್ರೆಸ್‌ನ ಎಂ. ನಾರಾಯಣಸ್ವಾಮಿ ಈ ಬಾರಿ ಸ್ಪರ್ಧಿಸಲು ನಿರಾಕರಿಸಿದ್ದರಿಂದ ರಿಯಲ್ ಎಸ್ಟೇಟ್ ಉದ್ಯಮಿ ಯೂಸುಫ್ ಷರೀಫ್ (ಕೆಜಿಎಫ್ ಬಾಬು) ಅವರನ್ನು ಕೊನೆಯ ಕ್ಷಣದಲ್ಲಿ ಪಕ್ಷವು ಕಣಕ್ಕಿಳಿಸಿದೆ.

ಇದೇ ಮೊದಲ ಬಾರಿ, ಚುನಾವಣಾ ಕಣಕ್ಕಿಳಿದಿರುವ ಯೂಸೂಫ್ ಷರೀಫ್ ಶ್ರೀಮಂತ ವ್ಯಕ್ತಿ ಎನ್ನುವುದು ಗಮನಸೆಳೆದಿದೆ. 5ನೇ ತರಗತಿ ಓದಿರುವ ಯೂಸುಫ್ ಷರೀಫ್ ಅವರು ₹1743 ಕೋಟಿ ಆಸ್ತಿ ಘೋಷಿಸಿಕೊಂಡಿದ್ದಾರೆ. ರಾಜಕೀಯಕ್ಕೆ ಯೂಸಫ್ ಹೊಸಬರು ಎನ್ನುವ ಆರೋಪವನ್ನು ಕಳಚಿಕೊಂಡು ಪಕ್ಷದ ಮುಖಂಡರೊಂದಿಗೆ ಯೂಸುಫ್ ಷರೀಪ್ ಅಬ್ಬರದ ಪ್ರಚಾರದಲ್ಲಿ ತೊಡಗಿದ್ದಾರೆ.

2009ರಲ್ಲಿ ಸ್ಪರ್ಧಿಸಿ, ಕೇವಲ 9 ಮತಗಳ ಅಂತರದಿಂದ ಪರಾಭವಗೊಂಡಿದ್ದ ಎಚ್.ಎಸ್. ಗೋಪಿನಾಥ್ ಅವರು ಈ ಬಾರಿ ಬಿಜೆಪಿಯಿಂದ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಸೋಲಿನ ಅನುಕಂಪದ ಅಲೆಯನ್ನು ಮತಗಳನ್ನಾಗಿ ಪರಿವರ್ತಿಸುವ ಯತ್ನವನ್ನು ಗೋಪಿನಾಥ್ ಮಾಡುತ್ತಿದ್ದಾರೆ. ಬಿ.ಇ. ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಗೋಪಿನಾಥ್ ಅವರು ಸಹ ₹ 47.84 ಕೋಟಿ ಮೌಲ್ಯದ ಆಸ್ತಿಯನ್ನು ಪ್ರಮಾಣಪತ್ರದಲ್ಲಿ ಘೋಷಿಸಿದ್ದಾರೆ. ಗೋಪಿನಾಥ್ ಅವರು ಪಕ್ಷ ಸಂಘಟನೆ ಜತೆ ಗುರುತಿಸಿಕೊಂಡಿರುವುದು ಸಕಾರಾತ್ಮಕವಾಗಿ ಅಂಶವಾಗಲಿದೆ.

ಜೆಡಿಎಸ್ ಈ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ. ಜಿ.ಎಂ. ಶೀನಪ್ಪ ಪಕ್ಷೇತರರಾಗಿ ಸ್ಪರ್ಧಿಸಿದ್ದಾರೆ.

ಕ್ಷೇತ್ರದ ವ್ಯಾಪ್ತಿಯಲ್ಲಿರುವ ಆರು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಯೇ ಪ್ರಾಬಲ್ಯ ಹೊಂದಿದೆ. ಒಬ್ಬರು ಸಚಿವರು ಮತ್ತು ಮೂವರು ಬಿಜೆಪಿ ಶಾಸಕರು ಈ ಕ್ಷೇತ್ರದಲ್ಲಿದ್ದಾರೆ. ಇಬ್ಬರು ಮಾತ್ರ ಕಾಂಗ್ರೆಸ್‌ನ ಶಾಸಕರಿದ್ದಾರೆ.

ಹಣ ಬಲದ ವಿಷಯವೂ ಬಹಿರಂಗವಾಗಿಯೇ ಈ ಕ್ಷೇತ್ರದಲ್ಲಿ ಚರ್ಚೆಗೆ ಗ್ರಾಸವಾಗಿದ್ದರೂ ಪಕ್ಷದ ವರ್ಚಸ್ಸು ಕಡೆಗಣಿಸುವಂತಿಲ್ಲ ಎನ್ನುವುದು ಮತದಾರರ ವಿಶ್ಲೇಷಣೆ.

ಪರಿಷತ್ ಚುನಾವಣೆ
ಕ್ಷೇತ್ರ ಸಮೀಕ್ಷೆ



ಗ್ರಾ.ಪಂ.ಸದಸ್ಯರು ಮತ್ತು ಅವರ ಕುಟುಂಬದವರಿಗೆ ಆರೋಗ್ಯ ವಿಮೆ ಮಾಡಲಾಗುವುದು. ಗ್ರಾ.ಪಂ. ಸದಸ್ಯರು ಸೂಚಿಸುವ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುವುದು
ಯೂಸುಫ್ ಷರೀಫ್, ಕಾಂಗ್ರೆಸ್ ಅಭ್ಯರ್ಥಿ



ಚುನಾವಣೆಯಲ್ಲಿ ಹಣ ಬಲದಿಂದಲೇ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಪ್ರಸ್ತುತ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸಬೇಕಾಗಿದೆ. ಅಭಿವೃದ್ಧಿಯೇ ಮೊದಲ ಕಾರ್ಯಸೂಚಿಯಾಗಿದೆ.
ಎಚ್.ಎಸ್. ಗೋಪಿನಾಥ್
ಬಿಜೆಪಿ ಅಭ್ಯರ್ಥಿ

ಜಾರಕಿಹೊಳಿ ಸಹೋದರರ ಸವಾಲ್‌ನಿಂದ ಗಮನಸೆಳೆದ ಬೆಳಗಾವಿ ಕ್ಷೇತ್ರ

ಕೈ–ಕಮಲ 'ಒಳಏಟಿ'ನ ಭೀತಿ

• ಎಂ. ಮಹೇಶ



ಎರಡು ಅವಧಿಯಲ್ಲಿ ಮಾಡಿದ ಕೆಲಸಗಳು, ಸರ್ಕಾರದ ಸಾಧನೆಗಳು ಶ್ರೀರಕ್ಷೆಯಾಗಿವೆ. ಪಕ್ಷದ ನಾಯಕರ ಸಹಕಾರದಿಂದ ಹ್ಯಾಟ್ರಿಕ್ ಸಾಧನೆ ಸಾಧ್ಯವಾಗಲಿದೆ
ಮಹಾಂತೇಶ ಕವಟಗಿಮಠ
ಬಿಜೆಪಿ ಅಭ್ಯರ್ಥಿ



ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಸೇರಿದಂತೆ ಎಲ್ಲ ನಾಯಕರ ಬೆಂಬಲ ನನಗಿದೆ. ಯುವಕನಾದ ನನಗೆ ಮತದಾರರು ಅವಕಾಶ ಕೊಡುವ ನಂಬಿಕೆ ಇದೆ
ಚನ್ನರಾಜ ಹಟ್ಟಿಹೊಳಿ
ಕಾಂಗ್ರೆಸ್ ಅಭ್ಯರ್ಥಿ



ನಾನು ಯಾವುದೇ ಪಕ್ಷದ ಬಂಡಾಯ ಅಭ್ಯರ್ಥಿಯಲ್ಲ. ಸ್ವಂತ ಬಲದ ಮೇಲೆ ಸ್ಪರ್ಧಿಸಿದ್ದೇನೆ. ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗಾಗಿ ನನ್ನನ್ನು ಬೆಂಬಲಿಸುತ್ತಾರೆ ಎನ್ನುವ ಭರವಸೆ ಇದೆ
ಲಖನ್ ಜಾರಕಿಹೊಳಿ
ಪಕ್ಷೇತರ ಅಭ್ಯರ್ಥಿ

ಬೆಳಗಾವಿ: ವಿಧಾನಪರಿಷತ್ ದ್ವಿಸದಸ್ಯ ಸ್ಥಾನಗಳಿಗೆ ಡಿ.10ರಂದು ನಡೆಯಲಿರುವ ಚುನಾವಣೆಯು, ಇಲ್ಲಿನ ಪ್ರಭಾವಿಗಳಾದ ಜಾರಕಿಹೊಳಿ ಸಹೋದರರ ನಡುವಿನ ಸವಾಲಿನಿಂದಾಗಿ ರಾಜ್ಯದ ಗಮನಸೆಳೆದಿದೆ.

ಬಿಜೆಪಿಯ ಮಹಾಂತೇಶ ಕವಟಗಿಮಠ ಸತತ 3ನೇ ಬಾರಿಗೆ ಆಯ್ಕೆ ಬಯಸಿದ್ದಾರೆ. ಕಾಂಗ್ರೆಸ್ ಕುಟುಂಬ ರಾಜಕಾರಣಕ್ಕೆ ಮಣೆ ಹಾಕಿದ್ದು, ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಅವರ ತಮ್ಮ ಚನ್ನರಾಜ ಹಟ್ಟಿಹೊಳಿ ಅವರಿಗೆ ಟಿಕೆಟ್ ಕೊಟ್ಟದೆ. ಆಮ್ ಆದ್ಮಿ ಪಕ್ಷದಿಂದ ಶೇಖರ ಹೆಗಡೆ ಸ್ಪರ್ಧಿಸಿದ್ದಾರೆ. ಗೋಕಾಕದ ಉದ್ಯಮಿ ಜಾರಕಿಹೊಳಿ ಮನೆತನದ ಲಖನ್ ಜಾರಕಿಹೊಳಿ, ಜೊತೆಗೆ ಶಂಕರ ಕುಡಸೋಮಣ್ಣವರ ಮತ್ತು ಕಲ್ಮೇಶ ಗಾಣಗಿ ಪಕ್ಷೇತರರಾಗಿ ಕಣದಲ್ಲಿದ್ದಾರೆ.

ಸಮ ಪಾಲಿಗೆ ಕಲ್ಲು!: ಆರು ಅಭ್ಯರ್ಥಿಗಳು ಇದ್ದಾರಾದರೂ ಬಿಜೆಪಿ–ಕಾಂಗ್ರೆಸ್ ಮತ್ತು ಪಕ್ಷೇತರ ಲಖನ್ ನಡುವೆ ತ್ರಿಕೋನ ಹಣಾಹಣಿ ಕಂಡುಬಂದಿದೆ. ಒಬ್ಬೊಬ್ಬರೆ ಕಣಕ್ಕಿಳಿಯುವುದರಿಂದ 'ಸಮ ಪಾಲು' ಖಚಿತ ಎಂಬ ಯೋಚನೆಯಲ್ಲಿದ್ದ ಕಾಂಗ್ರೆಸ್ ಹಾಗೂ ಬಿಜೆಪಿಯವರ ಕನಸಿಗೆ ಲಖನ್ 'ಕೊಳ್ಳಿ' ಇಟ್ಟಿದ್ದಾರೆ. ಕಣ ಹಿಂದೆಂದಿಗಿಂತಲೂ ರಂಗೇರಿದೆ. ಹಣ, ಚಿನ್ನದುಂಗುರ, ಅಡುಗೆ ಒಲೆ ಮೊದಲಾದವುಗಳ ಆಮಿಷ–ಹಂಚಿಕೆಯ ಮಾತುಗಳು ಕೇಳಿಬರುತ್ತಿವೆ.

ತಮ್ಮನನ್ನು ಗೆಲ್ಲಿಸಿಕೊಳ್ಳುವ ಜೊತೆಗೆ ಕಾಂಗ್ರೆಸ್ ಸೋಲಿಸಲೇಬೇಕೆಂಬ 'ಶಪಥ' ಮಾಡಿರುವ ಗೋಕಾಕದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಹೋದರ ಕೆಎಂಎಫ್ ಅಧ್ಯಕ್ಷರೂ ಆಗಿರುವ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಸಾಥ್ ಕೊಟ್ಟಿದ್ದಾರೆ. ಪಕ್ಷದ ವೇದಿಕೆಗಳಲ್ಲಿ ಕಾಣಿಸಿಕೊಳ್ಳದೆ ತಮ್ಮದೇ 'ರೀತಿಯಲ್ಲಿ' ಪ್ರಚಾರ ನಡೆಸುತ್ತಿದ್ದಾರೆ. ಸಹಕಾರ ಕ್ಷೇತ್ರದವರ ಮೂಲಕವೂ ಮತದಾರರ ಮನವೊಲಿಕೆಗೆ ತಂತ್ರ ರೂಪಿಸಿದ್ದಾರೆ. ಅವರಿಗೆ, ಕಳೆದ ಚುನಾವಣೆಯಲ್ಲಿ ಪಕ್ಷೇತರರಾಗಿ ಗೆದ್ದಿದ್ದ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ಅಧ್ಯಕ್ಷ ವಿವೇಕರಾವ್ ಪಾಟೀಲ ಕೈಜೋಡಿಸಿದ್ದರಿಂದ ಅವರ ಬಲ ವೃದ್ಧಿಸಿದಂತಾಗಿದೆ.

ಗುಟ್ಟಾಗಿ ಉಳಿದಿಲ್ಲ: 'ಲಖನ್ ಅನ್ನು ಪಕ್ಷದ 2ನೇ ಅಭ್ಯರ್ಥಿಯನ್ನಾಗಿ ಪರಿಗಣಿಸಿ, ಬೆಂಬಲಿಸಬೇಕು' ಎಂದು ರಮೇಶ ವರಿಷ್ಠರ ಮನೆಯ ಬಾಗಿಲು ಬಡಿದಿದ್ದಾರೆ. ಇನ್ನೂ 'ಹಸಿರು ನಿಶಾನೆ' ಸಿಕ್ಕಿಲ್ಲವಾದರೂ ಒಳಗೊಳಗೆ ಬೆಂಬಲ ಕೊಡುತ್ತಿರುವುದು ಗುಟ್ಟಾಗಿಯೇನೂ ಉಳಿದಿಲ್ಲ. ಅವರಿಗೆ ತಿರುಗೇಟು ಕೊಡಲು ಲಕ್ಷ್ಮಿ ಕೂಡ ತಂತ್ರ ಹೆಣೆದಿದ್ದಾರೆ.

ಈ ಚುನಾವಣೆಯು ರಮೇಶ ಜಾರಕಿಹೊಳಿ–ಲಕ್ಷ್ಮಿ ಹೆಬ್ಬಾಳಕರ ನಡುವಿನ ಹಣಾಹಣಿ ಎಂದೂ ಬಿಂಬಿತವಾಗುತ್ತಿದೆ. ಇನ್ನೊಂದೆಡೆ, ತಮ್ಮ ಭವಿಷ್ಯ ಭದ್ರಪಡಿಸಿಕೊಳ್ಳಲು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅಭ್ಯರ್ಥಿ ಚನ್ನರಾಜ ಪರ ಸಕ್ರಿಯವಾಗಿ ಪ್ರಚಾರ ನಡೆಸುತ್ತಿದ್ದಾರೆ. ಸ್ವತಃ ಏಜೆಂಟ್ ಆಗಲೂ ಮುಂದಾಗಿದ್ದಾರೆ!

13 ಶಾಸಕರು ಮತ್ತು ಮೂವರು ಸಂಸದರ ಬಲ ಬಿಜೆಪಿಗಿದೆ. ಕಾಂಗ್ರೆಸ್ ಶಾಸಕರಿರುವುದು ಐವರು ಮಾತ್ರ. ಗ್ರಾ.ಪಂ. ಚುನಾವಣೆಯಲ್ಲಿ 'ನಮ್ಮ ಬೆಂಬಲಿತರು' ಹೆಚ್ಚು ಗೆದ್ದಿದ್ದಾರೆ ಎಂದು ಬಿಜೆಪಿಯವರು ಹೇಳಿಕೊಂಡಿದ್ದರು. ಈ ಸಂಖ್ಯೆಯು ಆ ಪಕ್ಷದ ಬಲ ಹೆಚ್ಚಿಸಿದೆ; ಲಖನ್ ಸ್ಪರ್ಧೆಯಿಂದಾಗಿ ಮತ ವಿಭಜನೆ ಭೀತಿಯೂ ಅವರಿಗಿದೆ.

'ಪ್ರಥಮ ಪ್ರಾಶಸ್ತ್ಯದಲ್ಲೆ ಗೆಲ್ಲಬಹುದಾದಷ್ಟು ಮತಗಳು ನಮ್ಮೊಂದಿಗಿವೆ' ಎನ್ನುವ ವಿಶ್ವಾಸದಲ್ಲಿರುವ ಕಾಂಗ್ರೆಸ್ ನಾಯಕರು, ಅವರನ್ನು ಹಿಡಿದಿಟ್ಟುಕೊಳ್ಳಲು ಹರಸಾಹಸ ಪಡುತ್ತಿದ್ದಾರೆ.

ಕಳೆದ ಚುನಾವಣೆಯಲ್ಲಿ, ಪಕ್ಷೇತರ ಅಭ್ಯರ್ಥಿ ಪ್ರಥಮ ಪ್ರಾಶಸ್ತ್ಯದ ಮತಗಳಿಂದಲೇ ಗೆದ್ದಿದ್ದ ನಿದರ್ಶನವೂ ಕ್ಷೇತ್ರದ್ದಾಗಿದೆ. ಈ ಬಾರಿಯ ಚಿತ್ರಣವು ಬಿಜೆಪಿ–ಕಾಂಗ್ರೆಸ್ ಜಗಳದಲ್ಲಿ 3ನೇಯವರಿಗೆ ಲಾಭವಾಗುವ ಸಾಧ್ಯತೆಯ ಚರ್ಚೆಗೂ ಗ್ರಾಸವಾಗಿದೆ.

ಮತದಾರರು ಎಲ್ಲ ಪ್ರಚಾರ ಸಭೆಯಲ್ಲೂ ಕಾಣಿಸಿಕೊಳ್ಳುತ್ತಿದ್ದಾರೆ. ಮತದಾನದ ಮುನ್ನಾ ದಿನ, ಜಾರಕಿಹೊಳಿ ಸಹೋದರರು ಬೆಂಬಲಿಗರಿಗೆ ನೀಡುವ 'ಸಂದೇಶ'ದ ಮೇಲೆ ಚಿತ್ರಣ ನಿರ್ಧಾರವಾಗಲಿದೆ. ಯಾರಿಗೆ ಬೇಕಾದರೂ 'ಒಳಏಟು' ಬೀಳಬಹುದು ಎಂಬ ಮಾತುಗಳಿವೆ.

ಮುಖ್ಯಾಂಶಗಳು

- ಸಹೋದರರ ನಡುವೆ ಸವಾಲು
- 'ಹ್ಯಾಟ್ರಿಕ್' ಹೊಸ್ತಿಲಲ್ಲಿ ಕವಟಗಿಮಠ
- ಇನ್ನಿಬ್ಬರು ಪ್ರಮುಖರು ಹೊಸಮುಖಗಳು

ಮತದಾರರ ವಿವರ	
ಪುರುಷರು	4,231
ಮಹಿಳೆಯರು	4,644
ಒಟ್ಟು	8,875
ಮತಗಟ್ಟೆಗಳು	511

ಪತ್ನಿಯರ ಜತೆ ಸುದ್ದಿಗೋಷ್ಠಿ: ಕಣ್ಣೀರಿಟ್ಟ ಕಾಂಗ್ರೆಸ್ ಅಭ್ಯರ್ಥಿ

ಸೋಮಶೇಖರ್‌ರಿಂದ ಅಪಪ್ರಚಾರ: ಯುಸೂಫ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಗಳ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದೇನೆ ಎಂಬುದು ಸುಳ್ಳು. ನನ್ನ ಜತೆ ಮನಸ್ತಾಪ ಹೊಂದಿರುವ ಬಿಲ್ಡರ್ ನವೀದ್ ಅವರ ಚಿತಾವಣೆಯಿಂದ ಸಚಿವ ಎಸ್.ಟಿ.ಸೋಮಶೇಖರ್ ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ವಿಧಾನ ಪರಿಷತ್ತಿನ ಬೆಂಗಳೂರು ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯುಸೂಫ್ ಷರೀಫ್ (ಕೆಜಿಎಫ್ ಬಾಬು) ದೂರಿದ್ದಾರೆ.

'ಮಗಳು ಮತ್ತು ಪತ್ನಿ ಮೇಲೆಯೇ ಯುಸೂಫ್ ಅತ್ಯಾಚಾರ ನಡೆಸಿರುವ ಆರೋಪ ಸೇರಿ 40 ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳಿವೆ. ಇವುಗಳ ಬಗ್ಗೆ ದಾಖಲೆಗಳನ್ನು ಬಿಡುಗಡೆ ಮಾಡುತ್ತೇನೆ' ಎಂದು ಸಚಿವ ಸೋಮಶೇಖರ್ ಇತ್ತೀಚೆಗೆ ಶ್ರೀರಂಗಪಟ್ಟಣದಲ್ಲಿ ಹೇಳಿದ್ದರು. ಈ ಸಂಬಂಧ ಯುಸೂಫ್ ತಮ್ಮ ಪತ್ನಿಯರು ಹಾಗೂ ಮಗಳ ಜತೆ ಸೇರಿ ಸುದ್ದಿಗೋಷ್ಠಿ ನಡೆಸಿದರು.

'ಪತ್ನಿ ಮತ್ತು ಮಗಳು ಎಂದರೆ ಪ್ರಾಣ. ನವೀದ್ ನನ್ನಿಂದ ₹300 ಕೋಟಿ ಮೌಲ್ಯದ ಆಸ್ತಿ ಖರೀದಿ ಮಾಡಿದ್ದ. ಆದರೆ, ಆತ ₹6 ಲಕ್ಷ ಕೊಟ್ಟು ಉಳಿದ ಹಣ ಕೊಡದೇ ಮೋಸ ಮಾಡಿದ್ದ. ಈ ಸಂಬಂಧ ನಮ್ಮಿಬ್ಬರ ಮಧ್ಯೆ ಮನಸ್ತಾಪವಾಗಿತ್ತು. ಆತ ನನ್ನ ಹೆಂಡತಿಯ ಬ್ರೈನ್‌ವಾಶ್ ಮಾಡಿ, ಹೆಂಡತಿ ಮತ್ತು ಮಗಳನ್ನು ಅಪಹರಣ ಮಾಡಿದ್ದ' ಎಂದು ಯುಸೂಫ್ ದೂರಿದರು.

'ಹೆಂಡತಿ ಮತ್ತು ಮಗಳನ್ನು ಮೈಸೂರು, ಬೆಂಗಳೂರು, ತಮಿಳುನಾಡಿನಲ್ಲಿ ಸುಮಾರು ಆರು ತಿಂಗಳು ಬಚ್ಚಿಟ್ಟಿದ್ದ. ನನ್ನ ಹಣವನ್ನು ಹೊಡೆಯಲು ಈ ಕೃತ್ಯ ಮಾಡಿದ್ದ. ನನ್ನ ಮೇಲೆ ಕೌಟುಂಬಿಕ ದೌರ್ಜನ್ಯ ಕೇಸ್ ಹಾಕಿಸಿದರು. ₹1,000 ಕೋಟಿ ಪರಿಹಾರ ಕೇಳಿದರು. ಹೆಂಡತಿಗೆ ಬುದ್ಧಿವಾದ ಹೇಳಿದೆ. ಬಳಿಕ ಹೆಂಡತಿ ಪ್ರಕರಣವನ್ನು ಹಿಂದಕ್ಕೆ ಪಡೆದಳು' ಎಂದು ಹೇಳುತ್ತಾ ಬಾಬು ಕಣ್ಣೀರು ಹಾಕಿದರು.

ಯುಸೂಫ್ ಅವರ ಇಬ್ಬರು ಪತ್ನಿಯರು ಮಾತನಾಡಿ, 'ಯಾರ ಮನೆಯಲ್ಲಿ ಜಗಳ ಆಗುವುದಿಲ್ಲ ಹೇಳಿ. ನಮ್ಮ ಮನೆಯಲ್ಲೂ ಜಗಳ ಆಗಿತ್ತು. ಗಂಡನ ವಿರುದ್ಧ ನನ್ನ ಕೈಯಿಂದಲೇ ಕೇಸ್ ಹಾಕಿಸಿದರು. ಬಳಿಕ ನಾವಿಬ್ಬರೂ ಮಾತನಾಡಿಕೊಂಡು ಕೇಸ್ ವಾಪಸ್ ಪಡೆದೆವು. ನನ್ನ ಗಂಡ ದೇವರ ಸಮಾನ. ಸಂಸಾರದ ವಿಚಾರ ರಾಜಕೀಯಕ್ಕೆ ಎಳೆದು ತರುವುದು ಸರಿಯಲ್ಲ' ಎಂದರು.

ಯುಸೂಫ್ ಪುತ್ರಿ ಮಾತನಾಡಿ, 'ನನ್ನ ತಂದೆಯ ಮೇಲೆ ವೃಥಾ ಆರೋಪ ಮಾಡಿದ್ದಾರೆ. ನಮ್ಮ ತಂದೆ ತುಂಬಾ ಒಳ್ಳೆಯವರು. ಅತ್ಯಾಚಾರಕ್ಕೆ ಯತ್ನಿಸಿದರು ಎಂಬ ಆರೋಪದಿಂದ ನೋವಾಗಿದೆ' ಎಂದರು.

'ಕೆಜಿಎಫ್ ಬಾಬು ವಿರುದ್ಧ 60 ಎಫ್‌ಐಆರ್'

ಚಾಮರಾಜನಗರ: 'ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣಗೆ ಕೆಜಿಎಫ್ ಬಾಬು(ಯುಸೂಫ್) ಬಗ್ಗೆ ಎಬಿಸಿಡಿ ಗೊತ್ತಿಲ್ಲ. ಕೆಜಿಎಫ್ ಬಾಬು ವಿರುದ್ಧ 60 ಎಫ್‌ಐಆರ್ ದಾಖಲಾಗಿವೆ. ಅವರ ಪತ್ನಿ ಹಾಗೂ ಮಗಳೇ ದೂರು ನೀಡಿದ್ದಾರೆ. ಅಧಿಕೃತ ಮಾಹಿತಿ ಇಲ್ಲದೆ ನಾನು ಮಾತನಾಡುವುದಿಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಬುಧವಾರ ಇಲ್ಲಿ ಹೇಳಿದರು.

ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ನನ್ನ ಮೊಬೈಲ್ ಫೋನ್‌ನಲ್ಲಿಯೇ 24 ಎಫ್‌ಐಆರ್ ಪ್ರತಿಗಳಿವೆ. ಧ್ರುವನಾರಾಯಣ ಅವರಿಗೆ ಬೇಕಿದ್ದರೆ ಕಳುಹಿಸುತ್ತೇನೆ. ಅದನ್ನು ಓದಿದ ನಂತರ ಅವರು ಬಾಬು ಅವರ ಬಗ್ಗೆ ಮಾತನಾಡಲಿ. ಧ್ರುವನಾರಾಯಣ ಅವರಿಗೆ ಬೆಂಗಳೂರು ರಾಜಕೀಯ ಗೊತ್ತಿಲ್ಲ. ಮೈಸೂರು ರಾಜಕೀಯ ಮಾತ್ರ ಗೊತ್ತು' ಎಂದರು.

ಪತ್ರ ತಲುಪಿಲ್ಲ: 'ಜೆಡಿಎಸ್ ಅಭ್ಯರ್ಥಿ ಮಂಜೇಗೌಡ ಕಿಡ್ನಿ ಮಾರಾಟ ಮಾಡುತ್ತಾರೆ ಎಂದು ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಅವರು ಬರೆದಿರುವ ಯಾವುದೇ ಪತ್ರ ನನಗೆ ತಲುಪಿಲ್ಲ. ಪತ್ರ ಬಂದ ಮೇಲೆ ಅವರ ಎಲ್ಲ ಪ್ರಶ್ನೆಗಳಿಗೂ ಸಮರ್ಥವಾಗಿ ಉತ್ತರಿಸುತ್ತೇನೆ' ಎಂದು ಹೇಳಿದರು.

ಬ್ಲಾಕ್‌ಮೇಲ್ ಮಾಡುತ್ತಿರುವವರು ಯಾರು ಎನ್ನುವುದನ್ನು ತಿಳಿಸುತ್ತೇನೆ

'14ರಂದು ಯುದ್ಧವೇ ಆದರೂ ಉತ್ತರ ಕೊಡುವೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ನನ್ನ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತುಗಳಿಗೆ ಡಿ.14ರಂದು ವಿಧಾನಪರಿಷತ್ ಚುನಾವಣೆ ಫಲಿತಾಂಶದ ನಂತರ ಪ್ರತ್ಯುತ್ತರ ನೀಡುತ್ತೇನೆ. ಅವರ ಶಬ್ದಗಳಿಗಿಂತಲೂ ಕಠೋರವಾದ ಮಾತುಗಳಲ್ಲಿ ಉತ್ತರ ಕೊಡುತ್ತೇನೆ' ಎಂದು ಗೋಕಾಕ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ತಾಲ್ಲೂಕಿನ ಬೆಳಗುಂದಿಯಲ್ಲಿ ಬುಧವಾರ ನಡೆದ ಚುನಾವಣಾ ಪ್ರಚಾರ ಸಭೆಗೆ ಮುನ್ನ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ನಾವು ಚುನಾವಣೆ ಮೂಡ್‌ನಲ್ಲಿದ್ದೇವೆ. ಹತಾಶರಾಗಿ ಮಾತನಾಡುವ ಸ್ಥಿತಿಯಲ್ಲಿಲ್ಲ' ಎಂದು ತಿರುಗೇಟು ನೀಡಿದರು.

'ಡಿ.14ರಂದು ಒಂದು ತಾಸು ಬೇಕಾದರೂ ಪತ್ರಿಕಾಗೋಷ್ಠಿ ನಡೆಸಿ, ಎಲ್ಲ ವಿವರವನ್ನೂ ಕೊಡುತ್ತೇನೆ. 1985ರಿಂದ ಹಿಡಿದು ಈವರೆಗೂ ನನ್ನ ವ್ಯಕ್ತಿತ್ವ ಏನಿತ್ತು, ಅವರ ವ್ಯಕ್ತಿತ್ವ ಹೇಗಿತ್ತು? ನಮ್ಮ ಕುಟುಂಬ ಹೇಗಿತ್ತು, ಶಿವಕುಮಾರ್ ಕುಟುಂಬ ಯಾವ ರೀತಿಯಲ್ಲಿತ್ತು ಎನ್ನುವುದನ್ನು ಬಹಿರಂಗಪಡಿಸುತ್ತೇನೆ. ಅವತ್ತು ಯುದ್ಧವೇ (ಓಪನ್ ವಾರ್) ಆಗಲಿ' ಎಂದು ಗುಡುಗಿದರು.

'ಮಹಾಂತೇಶ ಕವಟಗಿಮಠ ಅವರಿಗೆ ಒಂದೇ ಮತ ಕೇಳುತ್ತಿದ್ದೇವೆ. 2ನೇ ಅಭ್ಯರ್ಥಿಗೆ ಕೇಳಿಲ್ಲ. ಕಾಂಗ್ರೆಸ್ ಸೋಲಿಸಲು ಏನೇನು ಅಗತ್ಯವೋ ಅದೆಲ್ಲವನ್ನೂ ಮಾಡುತ್ತೇನೆ' ಎಂದರು.

'ಬಿಜೆಪಿ ವರಿಷ್ಠರು ಹಾಗೂ ಆರ್‌ಎಸ್‌ಎಸ್ ಪ್ರಮುಖರ ಆಶೀರ್ವಾದ ನನ್ನ ಮೇಲಿದೆ. ಅವರಿಂದಾಗಿಯೇ ಜೀವಂತವಿದ್ದೇನೆ. ಇಲ್ಲವಾಗಿದ್ದಲ್ಲಿ ಷಡ್ಯಂತ್ರ ಮಾಡಿ ನನ್ನನ್ನು ಮುಗಿಸಿಬಿಡುತ್ತಿದ್ದರು. ವರಿಷ್ಠರು ಹಾಗೂ ಸಂಘ ಪರಿವಾರದವರ ಆಶೀರ್ವಾದದಿಂದಾಗಿ ಬಿಜೆಪಿಯಲ್ಲಿ ಪ್ರಮುಖ ನಾಯಕನಾಗಿ ಹೊರಹೊಮ್ಮಿದ್ದೇನೆ' ಎಂದು ಪ್ರತಿಕ್ರಿಯಿಸಿದರು.

'ಬ್ಲಾಕ್‌ಮೇಲ್ ಮಾಡುತ್ತಿರುವವರು ಯಾರು ಎನ್ನುವುದನ್ನು ಡಿ.14ರಂದು ತಿಳಿಸುತ್ತೇನೆ. ಅವರು (ಶಿವಕುಮಾರ್) ಶಾಸಕ ಸ್ಥಾನ ಉಳಿಸಿಕೊಳ್ಳಲಿ, ಮುಂದೆ ನೋಡೋಣ' ಎಂದು ಹೇಳಿದರು.

ರಮೇಶ ಅವರನ್ನು ಕೊಳೆಗೆ ಹೋಲಿಸಿದ್ದ ಶಿವಕುಮಾರ್, 'ಅವರ್‍ಯಾವ ಸಾಹುಕಾರ? ಅವರಂತಹ ಬಂಡುಕೋರರನ್ನು ನಮ್ಮ ಪಕ್ಷದಲ್ಲಿ ಒಂದು ತಾಸು ಕೂಡ ಇಟ್ಟುಕೊಳ್ಳುತ್ತಿರಲಿಲ್ಲ' ಎಂದು ಈಚೆಗೆ ಇಲ್ಲಿ ಹೇಳಿಕೆ ನೀಡಿದ್ದರು.

ಬಿಜೆಪಿ ಸಭೆಯಲ್ಲಿ ಶಾಸಕರ ಜಟಾಪಟಿ

ಹುಬ್ಬಳ್ಳಿ: ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಬುಧವಾರ ಇಲ್ಲಿ ನಡೆದ ಬಿಜೆಪಿ ಸಭೆಯಲ್ಲಿ ರಾಣೆಬೆನ್ನೂರು ಶಾಸಕ ಅರುಣಕುಮಾರ ಪೂಜಾರ ಹಾಗೂ ವಿಧಾನ ಪರಿಷತ್ ಸದಸ್ಯ ಆರ್.ಶಂಕರ್ ನಡುವೆ ಜಟಾಪಟಿ ನಡೆಯಿತು.

ಧಾರವಾಡ, ಹಾವೇರಿ ಮತ್ತು ಗದಗ ಜಿಲ್ಲೆಗಳ ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಪಕ್ಷದ ಪ್ರಮುಖರ ಸಭೆ ಆಯೋಜನೆಯಾಗಿತ್ತು. ಮೊದಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಭೆ ನಡೆಸಿ ಹೋದರು. ಬಳಿಕ ನಡೆದ ಇನ್ನೊಂದು ಸಭೆಯಲ್ಲಿ ಇಬ್ಬರೂ ಶಾಸಕರು ಚುನಾವಣಾ ಉಸ್ತುವಾರಿ ಸಲುವಾಗಿ ಪರಸ್ಪರ ಗಲಾಟೆ ಮಾಡಿಕೊಂಡಿದ್ದಾರೆ.

ಇದರಿಂದ ಆಕ್ರೋಶಗೊಂಡು ಸಭೆಯ ಹಾಲ್‌ನಿಂದ ಹೊರಬಂದ ಶಾಸಕರ ಬೆಂಬಲಿಗರು ಕೈ ಕೈ ಮಿಲಾಯಿಸುವ ಹಂತಕ್ಕೆ ಹೋದರು. ಗಲಾಟೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ ಶಾಸಕ ಜಗದೀಶ ಶೆಟ್ಟರ್ ಎಲ್ಲರನ್ನೂ ಸಮಾಧಾನ ಪಡಿಸಿದರು.

ಈ ವೇಳೆ ಪ್ರತಿಕ್ರಿಯಿಸಿದ ಶಂಕರ್ ಅವರು, 'ಯಾವ ಗಲಾಟೆಯೂ ಆಗಿಲ್ಲ. ಅರುಣ ರಾಜೀನಾಮೆ ಕೊಡುವುದಾದರೆ ಕೊಡಲಿ; ಅದನ್ನು ಅಂಗೀಕಾರ ಮಾಡಬೇಕು' ಎಂದರು.

ಗಲಾಟೆಯಾಗಿಲ್ಲ: ಸಭೆಯಲ್ಲಿ ಯಾವುದೇ ಜಟಾಪಟಿಯಾಗಿಲ್ಲ. ಕ್ಷೇತ್ರದ ಸಮಸ್ಯೆಗಳ ಬಗ್ಗೆ ಚರ್ಚೆಯಾಗಿದೆಯಷ್ಟೇ ಎಂದು ಜಗದೀಶ ಶೆಟ್ಟರ್ ಪ್ರತಿಕ್ರಿಯಿಸಿದರು.

'ನಿಮ್ಮ ಸಮ್ಮುಖದಲ್ಲಿಯೇ ಗಲಾಟೆ ಆಗಿದೆಯಲ್ಲ' ಎನ್ನುವ ಪ್ರಶ್ನೆಗೆ, 'ರಾಜ್ಯ ಘಟಕದ ಅಧ್ಯಕ್ಷರು ನೋಡಿಕೊಳ್ಳುತ್ತಾರೆ' ಎಂದರು.

'ರಾಣೆಬೆನ್ನೂರು ಕ್ಷೇತ್ರದಲ್ಲಿ ಹಲವು ಸಮಸ್ಯೆಗಳಿದ್ದು, ಅದಕ್ಕೆ ಸಂಬಂಧಿಸಿದಂತೆ ಪರಸ್ಪರ ಚರ್ಚಿಸಿದ್ದಾರೆ. ಇಬ್ಬರೂ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಚುನಾವಣೆ ನಂತರ ರಾಜ್ಯ ಘಟಕದ ಅಧ್ಯಕ್ಷರ ನೇತೃತ್ವದಲ್ಲಿ ಸಮಸ್ಯೆ ಪರಿಹರಿಸಲಾಗುವುದು' ಎಂದರು.

'ವಿಮಾನ ಸೇವೆ ಒದಗಿಸದಿದ್ದರೆ, ಸಂಸ್ಥೆ ಬದಲು'

ಬೀದರ್: 'ಟ್ರುಜೆಟ್ ಕಂಪನಿಯವರು ಸಕಾಲದಲ್ಲಿ ಪ್ರಯಾಣಿಕರಿಗೆ ವಿಮಾನ ಸೇವೆ ಕೊಡದಿದ್ದರೆ ಸೇವಾ ಸಂಸ್ಥೆಯನ್ನೇ ಬದಲಿಸಲು ಸರ್ಕಾರಕ್ಕೆ ಪತ್ರ ಬರೆಯಲಾಗುವುದು' ಎಂದು ಜಿಲ್ಲಾಧಿಕಾರಿ ರಾಮಚಂದ್ರನ್ ಆರ್ ಹೇಳಿದರು.

'ಜಿಎಂಆರ್ ಅಧಿಕಾರಿಗಳೊಂದಿಗೆ ವಿಡಿಯೊ ಸಂವಾದ ನಡೆಸಲಾಗಿದ್ದು, ವಿಮಾನ ಸೇವೆ ಶೀಘ್ರ ಆರಂಭಿಸುವುದಾಗಿ ಟ್ರುಜೆಟ್ ಕಾರ್ಯಾಚರಣೆ ವಿಭಾಗದ ವ್ಯವಸ್ಥಾಪಕ ಪ್ರಸಾದ ನ.29ರಂದು ದೃಢಪಡಿಸಿದ್ದರು. ಆದರೆ, ಅವರು ಜಿಲ್ಲಾಡಳಿತಕ್ಕೆ ಈವರೆಗೆ ಲಿಖಿತ ಮಾಹಿತಿ ಕೊಟ್ಟಿಲ್ಲ' ಎಂದು ತಿಳಿಸಿದರು.

ಬೆಳಗಾವಿ ಅಧಿವೇಶನ ರದ್ದತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ತಳಿಯ ಓಮೈಕ್ರಾನ್ ಕೊರೊನಾ ವೈರಾಣುವಿನ ಭೀತಿ ಇರುವುದರಿಂದ ಬೆಳಗಾವಿಯಲ್ಲಿ ನಡೆಯಲಿರುವ ವಿಧಾನಮಂಡಲದ ಅಧಿವೇಶನವನ್ನು ರದ್ದುಗೊಳಿಸಬೇಕು ಎಂದು ಸಚಿವಾಲಯ ನೌಕರರ ಸಂಘ, ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಆಗ್ರಹಿಸಿದೆ.

ಈ ಕುರಿತು ವಿಧಾನಸಭೆ ಅಧ್ಯಕ್ಷರಿಗೆ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಗುರುಸ್ವಾಮಿ, 'ಬೆಳಗಾವಿಯು ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳ ಗಡಿಯಲ್ಲಿದೆ. ಅಲ್ಲಿಗೆ ವಿದೇಶಿ ಪ್ರಯಾಣಿಕರು ಮತ್ತು ಅಂತರ್ ರಾಜ್ಯ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಅಂತಹ ಸ್ಥಳದಲ್ಲಿ ಶಾಸಕರು, ಸರ್ಕಾರಿ ಅಧಿಕಾರಿಗಳು, ನೌಕರರು ಬೃಹತ್ ಸಂಖ್ಯೆಯಲ್ಲಿ ಒಂದೇ ಕಡೆಯಲ್ಲಿ ಸೇರುವುದು ಓಮೈಕ್ರಾನ್ ವೈರಾಣು ಸೋಂಕು ಹರಡಲು ಕಾರಣವಾಗಬಹುದು. ಆದ್ದರಿಂದ ಮತ್ತೊಮ್ಮೆ ಪರಿಶೀಲಿಸಿ, ಡಿಸೆಂಬರ್ 13ರಿಂದ ಆರಂಭವಾಗಬೇಕಿರುವ ಅಧಿವೇಶನವನ್ನು ರದ್ದುಗೊಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ವಿಧಾನಮಂಡಲ ಅಧಿವೇಶನ ನಡೆಸಲು ಉದ್ದೇಶಿಸಿರುವುದು ಸ್ವಾಗತಾರ್ಹ ನಿರ್ಧಾರ. ಆದರೆ, ಹೊಸ ತಳಿಯ ಕೊರೊನಾ ವೈರಾಣು ಹರಡುವ ಭೀತಿ ಇರುವುದರಿಂದ ಹೆಚ್ಚಿನ ಎಚ್ಚರಿಕೆ ವಹಿಸುವಂತೆ ಮತ್ತು ಕಟ್ಟುನಿಟ್ಟಿನ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ತಜ್ಞರು ಸಲಹೆ ನೀಡಿದ್ದಾರೆ. ಸದ್ಯದ ಪರಿಸ್ಥಿತಿಯನ್ನು ಆಧರಿಸಿ ಅಧಿವೇಶನ ರದ್ದು ಮಾಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

'ಅಧಿವೇಶನ: ಬೆಂಗಳೂರಿನಲ್ಲೇ ಸೂಕ್ತ'



ದೇಶಪಾಂಡೆ

ಕಾರವಾರ: 'ರಾಜ್ಯದ ಗಡಿಜಿಲ್ಲೆಗಳಲ್ಲಿ ಕೋವಿಡ್ ದೃಢಪಡುತ್ತಿರುವುದು ಹೆಚ್ಚಾಗುತ್ತಿವೆ. ಬೆಳಗಾವಿಯಲ್ಲಿ ಅಧಿವೇಶನ ಹಮ್ಮಿಕೊಳ್ಳುವ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪುನಃ ಪರಿಶೀಲಿಸಲಿ. ಸದ್ಯದ ಸ್ಥಿತಿಯಲ್ಲಿ ಬೆಂಗಳೂರಿನಲ್ಲೇ ನಡೆಸುವುದು ಸೂಕ್ತ' ಎಂದು ಹಳಿಯಾಳ ಶಾಸಕ ಆರ್.ವಿ.ದೇಶಪಾಂಡೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೆಳಗಾವಿಯು ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿದೆ. ಇದರಿಂದ ಸಮಸ್ಯೆ ಎದುರಾಗಬಹುದು. ಅಧಿವೇಶನಕ್ಕೆ ಸಾವಿರಾರು ಜನರು ಬರುತ್ತಾರೆ. ಕೋವಿಡ್ ಆತಂಕವು ಈಗಾಗಲೇ ಇದೆ. ಹಾಗಾಗಿ ಸುವರ್ಣಸೌಧದಲ್ಲಿ ಅಧಿವೇಶನ ಆಯೋಜಿಸುತ್ತಿರುವ ಬಗ್ಗೆ ಸರ್ಕಾರ ಯೋಚಿಸಬೇಕು' ಎಂದು ಮನವಿ ಮಾಡಿದರು.

ಇದೇ ವೇಳೆ, ರಾಜ್ಯಸಭೆಯಲ್ಲಿ ವಿರೋಧ ಪಕ್ಷದ 12 ಸದಸ್ಯರನ್ನು ಅಮಾನತು ಮಾಡಿರುವುದನ್ನು ಖಂಡಿಸಿದ ಅವರು, ಆದೇಶವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

'ಈಶ್ವರಪ್ಪ ಹೇಳಿಕೆ ತಪ್ಪಾಗಿ ಅರ್ಥೈಸಲಾಗಿದೆ'

ಚಾಮರಾಜನಗರ: 'ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಯಾಗಲಿದ್ದಾರೆ ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆಯೇ ವಿನಾ, ಈ ಅವಧಿಯಲ್ಲಿ ಅಲ್ಲ. ಈಶ್ವರಪ್ಪ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿರೋಧ ಪಕ್ಷಗಳು ಜನರನ್ನು ದಿಕ್ಕು ತಪ್ಪಿಸುತ್ತಿದ್ದು, ಮುಖ್ಯಮಂತ್ರಿ ಬೊಮ್ಮಾಯಿ ನೇತೃತ್ವದ ಸರ್ಕಾರ ಸುಭದ್ರವಾಗಿದ್ದು ಅವಧಿ ಪೂರೈಸಲಿದೆ' ಎಂದರು.

'ವಿಧಾನ ಪರಿಷತ್‌ಗೆ ಚುನಾವಣೆಯ 15ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಲಿದೆ' ಎಂದು ವಿಜಯೇಂದ್ರ ಅವರು ಹೇಳಿದರು.

'ಜಾತಿಗಣತಿ ವರದಿ: ಬೆಲೆ ಇಲ್ಲದ ರದ್ದಿ ಕಾಗದ'

ಪ್ರಜಾವಾಣಿ ವಾರ್ತೆ

ಮೈಸೂರು: 'ಜಾತಿ ಜನಗಣತಿ ವರದಿ ಕುರಿತು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಜೊತೆ ಮಾತನಾಡಿದ್ದೇನೆ. ಸಂಬಂಧಪಟ್ಟ ಸದಸ್ಯ ಕಾರ್ಯದರ್ಶಿಯೇ ವರದಿಗೆ ಸಹಿ ಮಾಡಿಲ್ಲ. ಅದು ಯಾವುದೇ ಬೆಲೆ ಇಲ್ಲದ ರದ್ದಿ ಕಾಗದ' ಎಂದು ಸಚಿವ ಕೆ.ಎಸ್.ಈಶ್ವರಪ್ಪ ಬುಧವಾರ ಇಲ್ಲಿ ಪ್ರತಿಪಾದಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಆಯೋಗ ಸ್ವಾಯತ್ತ ಸಂಸ್ಥೆ. ಅದಕ್ಕೆ ಸಮಯ ನಿಗದಿಪಡಿಸಲು ನಮಗೆ ಅಧಿಕಾರವಿಲ್ಲ. ಆಯೋಗ ಜಾತಿಗಣತಿ ವರದಿಗೆ ಒಂದು ರೂಪ ಕೊಡಲಿ ಎಂದು ಪ್ರಾರ್ಥಿಸುವೆ. ವರದಿ ಸರಿ ಇದ್ದರೆ ಹೊರಗೆ ತರಲಿ, ಇಲ್ಲವೇ ಮರುಸಮೀಕ್ಷೆ ಮಾಡಿ ಹೊಸದಾಗಿ ರಚಿಸಲಿ. ವರದಿ ಸಲ್ಲಿಸಿದ ತಕ್ಷಣ ಜಾರಿಗೊಳಿಸುವ ಹೊಣೆ ಸರ್ಕಾರದ್ದು. ಸಿದ್ದರಾಮಯ್ಯ ರೀತಿ ಯಾರೂ ಮೋಸ ಮಾಡಬಾರದಷ್ಟೆ' ಎಂದರು.

'ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಜಾತಿಗಣತಿ ವರದಿ ಬಿಡುಗಡೆ ಮಾಡಲಿಲ್ಲ. ಅವರಿಗೆ ಅಧಿಕಾರವೂ ಬೇಕು, ಹಿಂದುಳಿದ ವರ್ಗ, ದಲಿತರ ಹೆಸರೂ ಬೇಕು. ಹೀಗಾಗಿ, ಆ ಸಮುದಾಯದವರು 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆದರು. ಚಾಮುಂಡೇಶ್ವರಿಯಲ್ಲಿ ಸಿದ್ದರಾಮಯ್ಯ ಅವರನ್ನು ಸೋಲಿಸಿದರು' ಎಂದರು.

'ವಿರೋಧ ಪಕ್ಷದ ನಾಯಕ ಅಥವಾ ಮುಂದೆ ಮುಖ್ಯಮಂತ್ರಿ ಸ್ಥಾನ ಕೊಡಲ್ಲವೆಂದರೆ ಸಿದ್ದರಾಮಯ್ಯ ಒಂದು ದಿನವೂ ಕಾಂಗ್ರೆಸ್‌ನಲ್ಲಿ ಇರಲ್ಲ. ಅವರು ಅಧಿಕಾರದ ಲಾಲಸೆಯುಳ್ಳ ಸ್ವಾರ್ಥಿ. ದೊಡ್ಡ ಸುಳ್ಳುಗಾರ. ಅವರು ತಮ್ಮ ಇಡೀ ಜೀವನದಲ್ಲಿ ಜನರನ್ನು ದಾರಿ ತಪ್ಪಿಸಿದರು. ಎಚ್.ಡಿ.ದೇವೇಗೌಡರಿಗೆ ಮೋಸ ಮಾಡಿ ಹೊರಬಂದರು. ಜನ ಜಾಗೃತರಾಗಿದ್ದು, ಅಂಥವರು ರಾಜಕೀಯದಲ್ಲಿ ಬಹಳ ದಿನ ಉಳಿಯುವುದಿಲ್ಲ' ಎಂದು ಟೀಕಿಸಿದರು.

'ಸಿದ್ದರಾಮಯ್ಯ ಅವರಿಗೆ ಈಗ ಗತಿ ಇಲ್ಲ. ಬಾದಾಮಿಯಲ್ಲಿ ಜನ ಸೋಲಿಸುತ್ತಾರೆ ಹೇಗಾದರೂ ಮಾಡಿ ರಕ್ಷಿಸಿ ಎಂದು ಜಿ.ಟಿ.ದೇವೇಗೌಡರಲ್ಲಿ ಕೇಳಿಕೊಂಡು ಸ್ನೇಹ ಬೆಳೆಸಿದ್ದಾರೆ. ಜಿ.ಟಿ. ದೇವೇಗೌಡರು ಅವಕಾಶವಾದಿಯಾಗಬಾರದು. ಸಿದ್ದರಾಮಯ್ಯ ಅವರನ್ನು ಸೋಲಿಸಲು ಎಲ್ಲರೂ ದೇವೇಗೌಡರನ್ನು ಬೆಂಬಲಿಸಿದ್ದರು' ಎಂದು ನೆನಪಿಸಿದರು.

'ರಾಜಕಾರಣಿಗಳು ಪರಸ್ಪರ ಗೌರವಿಸಬೇಕು ಎಂಬುದನ್ನು ಪ್ರಧಾನಿ ಮೋದಿ ಹಾಗೂ ಎಚ್.ಡಿ.ದೇವೇಗೌಡರ ಭೇಟಿ ತೋರಿಸಿದೆ. ಅದನ್ನು ಸಿದ್ದರಾಮಯ್ಯ ಕೂಡ ನೋಡಿದ್ದರೆ, ಮೋದಿ ಅವರನ್ನು ಏಕವಚನದಲ್ಲಿ ಕರೆಯುವುದು, ನಳಿನ್ ಕುಮಾರ್ ಕಟೀಲ್ ಅವರನ್ನು ಉಗ್ರಗಾಮಿ ಎನ್ನುವುದು, ವಾಪಸ್ ಬೈಯಿಸಿಕೊಳ್ಳುವುದು ತಪ್ಪುತ್ತದೆ' ಎಂದು ಪ್ರತಿಕ್ರಿಯಿಸಿದರು.

'ಬಿಜೆಪಿ–ಜೆಡಿಎಸ್ ಅಕ್ರಮ ಸಂಬಂಧವಲ್ಲ'



ಕೆ.ಎಸ್.ಈಶ್ವರಪ್ಪ

ಮೈಸೂರು: 'ವಿಧಾನ ಪರಿಷತ್ ಚುನಾವಣೆಯಲ್ಲಿ ಬೆಂಬಲಿಸುವಂತೆ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ, ಎಚ್.ಡಿ.ಕುಮಾರಸ್ವಾಮಿ ಅವರಲ್ಲಿ ಕೋರಿಕೊಂಡಿದ್ದಾರೆ. ಅದು ಅಕ್ರಮ ಸಂಬಂಧವೂ ಅಲ್ಲ, ಒಳಒಪ್ಪಂದವೂ ಅಲ್ಲ. ಎಲ್ಲಿ ಜೆಡಿಎಸ್ ಸ್ಪರ್ಧಿಸಿಲ್ಲವೋ ಅಲ್ಲಿ ಬಿಜೆಪಿಯನ್ನು ಬೆಂಬಲಿಸುವಂತೆ ಬಹಿರಂಗವಾಗಿಯೇ ಸಹಕಾರ ಕೋರಿದ್ದಾರೆ' ಎಂದು ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

'ಬ್ರಾಹ್ಮಣರ ಪಕ್ಷವೆಂದು ಕರೆಯಲಾಗುತ್ತಿದ್ದ ಬಿಜೆಪಿಯ ಜೊತೆಗೆ ದಲಿತರು, ಹಿಂದುಳಿದ ವರ್ಗದವರು ಗುರುತಿಸಿಕೊಂಡು ಕಾಂಗ್ರೆಸ್ ಪಕ್ಷವನ್ನು ದೂರವಿಡುತ್ತಿರುವುದರಿಂದಲೇ ಎಲ್ಲಾ ಚುನಾವಣೆಗಳಲ್ಲಿ ಪಕ್ಷ ಗೆಲ್ಲುತ್ತಿದೆ' ಎಂದರು.

ರಸ್ತೆ ಕುಸಿತ; ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿದ ತಜ್ಞರ ಸಮಿತಿ

ಚಾಮುಂಡಿ ಬೆಟ್ಟಕ್ಕೆ ಟ್ರೆಕ್ಕಿಂಗ್ ಪಾಥ್ ನಿರ್ಮಿಸಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಚಾಮುಂಡಿಬೆಟ್ಟದಲ್ಲಿ ಕುಸಿದಿರುವ ರಸ್ತೆಯನ್ನು ದುರಸ್ತಿಗೊಳಿಸುವುದು ಹಾಗೂ ಸಂಪೂರ್ಣವಾಗಿ ಮರುನಿರ್ಮಾಣ ಮಾಡುವುದರ ಬದಲು ಟ್ರೆಕ್ಕಿಂಗ್ ಪಾಥ್ ನಿರ್ಮಿಸುವುದು ಒಳಿತು' ಎಂದು ಎಂಜಿನಿಯರುಗಳ ಸಂಸ್ಥೆಯ ತಜ್ಞರ ತಂಡ ಅಭಿಪ್ರಾಯಪಟ್ಟಿದೆ.

ಈ ಕುರಿತ 7 ಪುಟಗಳ ವರದಿಯನ್ನು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರಿಗೆ ತಂಡದ ಸದಸ್ಯರು ಬುಧವಾರ ಸಲ್ಲಿಸಿದರು. 'ವ್ಯೂ ಪಾಯಿಂಟ್‌ನಿಂದ ನಂದಿಗೆ ಹೋಗುವ 1.4 ಕಿ.ಮೀ ರಸ್ತೆಯು ಪದೇ ಪದೇ ಕುಸಿಯುತ್ತಿದೆ. ಅದನ್ನು ಮತ್ತೆ ಮತ್ತೆ ದುರಸ್ತಿಗೊಳಿಸುವುದು ದುಬಾರಿ. ಹೀಗಾಗಿ, ಅಂದಾಜು ₹ 30 ಕೋಟಿ ವೆಚ್ಚದಲ್ಲಿ ಸಂಪೂರ್ಣವಾಗಿ ಮರುನಿರ್ಮಿಸಬೇಕು' ಎಂದು ಹೇಳಿದರು.

'ದೊಡ್ಡ ಯೋಜನೆಯ ಬದಲಿಗೆ ಟ್ರೆಕ್ಕಿಂಗ್ ಪಾಥ್ ನಿರ್ಮಿಸಿದರೆ ಹಣದ ಉಳಿತಾಯವಾಗುತ್ತದೆ. ಬೆಟ್ಟ ಹತ್ತುವವರಿಗೆ ಪ್ರಕೃತಿ ಸೌಂದರ್ಯ ಸವಿಯಲು ಅವಕಾಶ ಸಿಗುತ್ತದೆ' ಎಂದು ತಂಡದ ಡಾ.ಎಸ್.ಜಿ.ಒಂಬತ್ಕೆರೆ ಪ್ರತಿಪಾದಿಸಿದರು.

'1903ರಲ್ಲಿ ಬೆಟ್ಟವನ್ನೇ ಕೊರೆದು ರಸ್ತೆಯನ್ನು ನಿರ್ಮಿಸಿದ್ದು ನೀರು ಹರಿಯಲು ವ್ಯವಸ್ಥೆಯಿಲ್ಲ. ಚರಂಡಿಗಳಲ್ಲಿ ಹೂಳು ತುಂಬಿದೆ. ನೀರು ರಭಸವಾಗಿ ಹರಿದು ಕುಸಿತ ಉಂಟಾಗುತ್ತಿದೆ. ರಸ್ತೆ ಮರುನಿರ್ಮಾಣಕ್ಕೆ ಕೆಳಭಾಗದಿಂದ 800 ಮೀಟರ್ ಉದ್ದದ ರಸ್ತೆಯ ಭಾರವನ್ನು ಹೊರುವಂತಹ ಗೋಡೆಯನ್ನು ನಿರ್ಮಿಸದಿದ್ದರೆ ಅಪಾಯ ಖಚಿತ' ಎಂದರು.

'ಹವಾಮಾನ ವೈಪರೀತ್ಯ ಮತ್ತು ಬದಲಾವಣೆಗೆ ಸಂಬಂಧಿಸಿದಂತೆ ವಿಶ್ವ ಸಂಸ್ಥೆಯ ಐಪಿಸಿಸಿ (ಇಂಟರ್ ಗವರ್ನ್‌ಮೆಂಟಲ್ ಫ್ಯಾನಲ್ ಆನ್ ಕ್ಲೈಮೇಟ್ ಚೇಂಜ್) ಈಗಾಗಲೇ ಹವಮಾನ ಬದಲಾವಣೆಯಿಂದ ಮುಂದಿನ ದಿನಗಳಲ್ಲಿ ಅಧಿಕ ಮಳೆ ಬೀಳುವ ಕುರಿತು ವರದಿಗಳನ್ನು ನೀಡಿದೆ. ಹೀಗಾಗಿ, ಹೊಸದಾಗಿ ನಿರ್ಮಿಸುವ ರಸ್ತೆಯಲ್ಲೂ ಮತ್ತೆ ಕುಸಿತ ಉಂಟಾಗಿ, ನಿರ್ವಹಣಾ ವೆಚ್ಚ ಅಧಿಕವಾಗಲಿದೆ' ಎಂದು ಹೇಳಿದರು.

ತಂಡದ ಎಂಜಿನಿಯರ್‌ಗಳಾದ ಬಿ.ಎಸ್.ಪ್ರಭಾಕರ, ಎಚ್.ಕಿಶೋರ ಚಂದ್ರ, ಎಚ್.ಎಸ್.ಸುರೇಶ್‌ಬಾಬು, ಎಂ.ಕೆ.ನಂಜಯ್ಯ ಹಾಗೂ ಎಂ.ಲಕ್ಷ್ಮಣ ಇದ್ದರು.



ಚಾಮುಂಡಿಬೆಟ್ಟದ ಕುಸಿತಕ್ಕೆ ಸಂಬಂಧಿಸಿದ ಶಿಫಾರಸು ವರದಿಯನ್ನು ಎಂಜಿನಿಯರುಗಳ ಸಂಸ್ಥೆಯ ತಾಂತ್ರಿಕ ತಜ್ಞರ ತಂಡದ ಸದಸ್ಯರು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅವರಿಗೆ ಬುಧವಾರ ಸಲ್ಲಿಸಿದರು. ಎಂ.ಕೆ.ನಂಜಯ್ಯ, ಡಾ.ಎಸ್‌.ಜಿ.ಒಂಬತ್ಕೆರೆ, ಬಿ.ಎಸ್‌.ಪ್ರಭಾಕರ, ಎಂ.ಲಕ್ಷ್ಮಣ, ಎಚ್‌.ಎಸ್‌.ಸುರೇಶ್‌ಬಾಬು ಇದ್ದಾರೆ

ಗ್ರೂಪ್-ಸಿ (ತಾಂತ್ರಿಕೇತರ) ಹುದ್ದೆ

ಭಾರತೀಯ ಸಮಾಜ ಮತ್ತು ಅದರ ಕ್ರಿಯಾಶೀಲತೆ

1) ಕೆಳಗಿನ ಹೇಳಿಕೆಗಳನ್ನು ಗಮನಿಸಿ

1. ಭಾರತೀಯ ಸಮಾಜವು ವರ್ಣಾಶ್ರಮ ಧರ್ಮದ ಮೇಲೆ ನಿಂತಿದೆ. ವರ್ಣಗಳು ಗುಣ , ಕರ್ಮ, ವೃತ್ತಿ, ಮತ ಮತ್ತು ಭಾಷೆ ದೇಶ ಮುಂತಾದವುಗಳನ್ನು ಅನುಸರಿಸಿಯೇ ವಿನಾ ಮನುಷ್ಯ ವರ್ಗವನ್ನು ಅನುಸರಿಸಲ್ಲ. ಒಂದೇ ಗೋತ್ರದಲ್ಲಿ ಬ್ರಾಹ್ಮಣ ಕ್ಷತ್ರಿಯ, ವೈಶ್ಯರೂ, ಇದ್ದಾರೆ.

2) ಅನಾದಿಕಾಲದಿಂದಲೂ ಭಾರತೀಯ ಸಮಾಜದಲ್ಲಿದ್ದ ಜಾತಿ ಅಥವಾ ವರ್ಣವು ಮೂಲತ: ಸ್ವ-ಸಾಮರ್ಥ್ಯದ ಫಲವಾಗಿ ಹುಟ್ಟಿರಬಹುದು, ಆದರೆ ಜಾತಿಯು ಬಹುಬೇಗನೆ ಜನ್ಮವನ್ನು ಆಧರಿಸಿದ ಸಾಮಾಜಿಕ ಸ್ತರವಿನ್ಯಾಸವಾಗಿ ಹಾಳಾಯಿತು.

3) ಭಾರತದಲ್ಲಿ ಬ್ರಾಹ್ಮಣರಿಗೊಂದು ಕಾಯ್ದೆಯಿದ್ದರೆ, ಶೂದ್ರರಿಗೆ ಇನ್ನೊಂದು ಕಾಯ್ದೆ ಅಸ್ತಿತ್ವಕ್ಕೆ ಬಂದವು, ಪಠಾಣರೆಂದು ಸುಪರಿಚರಾದ ಟರ್ಕರೂ ಹಾಗೂ ಮೊಗಲರೂ, ತಮ್ಮ ಅಧಿಪತ್ಯವನ್ನು ಸ್ಥಾಪಿಸಿದ ನಂತರವೂ ಪರಿಸ್ಥಿತಿಗಳು ಸುಧಾರಿಸಲಿಲ್ಲ. ಪಠಾಣರ ಆಡಳಿತದ ಕಾಲದಲ್ಲಿ ಇತರ ಪ್ರಜೆಗಳಿಗಿಂತ ಪಠಾಣನಿಗೆ ಶ್ರೇಷ್ಠವಾದ ಹಕ್ಕುಗಳಿದ್ದವು. ಇದೇ ರೀತಿಯಲ್ಲಿ ಮೊಗಲರ ಕಾಲದಲ್ಲಿ ಮೊಗಲರು ಉಳಿದೆಲ್ಲ ವರ್ಗದ ಜನರಿಗಿಂತ ಅಗ್ರಮಾನ್ಯತೆಯನ್ನು ಪಡೆದರು.

4) ಬ್ರಿಟಿಷರು, ಪ್ರಜೆಗಳೆಲ್ಲರೂ ಸರಿಸಮಾನರು ಎಂಬ 'ನ್ಯಾಯದ ಪ್ರಭುತ್ವ'ದ ಕಲ್ಪನೆಗೆ ತಾವು ಬದ್ಧವಾಗಿರುವುದಾಗಿ ಸಾರಿದರು. ಆದರೆ ಆರೋಪಿಯಾದ ಐರೋಪ್ಯನಿಗೆ ವಿಶೇಷ ನ್ಯಾಯನಿರ್ಣಾಯಕರ (ಜ್ಯೂರಿ) ಸೌಲಭ್ಯವನ್ನು ಕೊಡುವುದರ ಮೂಲಕ ಅವರು ಸಮಾಜದಲ್ಲಿ ಅಸಮಾನತೆಯನ್ನು ಜೀವಂತ ಇಟ್ಟರು ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿದ್ದವು?

ಎ) ಹೇಳಿಕೆ 1ರಿಂದ 4ರ ತನಕ ಎಲ್ಲವೂ ಸರಿಯಾಗಿವೆ
ಬಿ) ಹೇಳಿಕೆ 3 ಮತ್ತು 4 ಮಾತ್ರ ಸರಿಯಾಗಿವೆ
ಸಿ) ಹೇಳಿಕೆ 1, 2 ಮತ್ತು 3 ಮಾತ್ರ ಸರಿಯಾಗಿವೆ
ಡಿ) ಯಾವ ಹೇಳಿಕೆಯೂ ಸರಿಯಾಗಿಲ್ಲ

ಉತ್ತರ:- ಎ

2) 19ನೇ ಶತಮಾನದ ಆದಿಭಾಗದಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಸಾರ್ವಜನಿಕ ಶಿಕ್ಷಣಕ್ಕಾಗಿ ಹಣ ಒದಗಿಲು ಪ್ರಾರಂಭಿಸಿತು ಅದು ಈ ಕೆಳಗಿನ ಯಾವುದರ ಕಲಿಕೆಗಾಗಿ ಹೆಚ್ಚು ಮಹತ್ವವನ್ನು ಆರಂಭದಲ್ಲಿ ನೀಡಿತು?

ಎ) ಸಂಸ್ಕೃತ, ಅರಬ್ಬೀ ಮತ್ತು ಪರ್ಸಿಯನ್ ಭಾಷೆಗಳ ಅಧ್ಯಯನಕ್ಕೆ ಹೆಚ್ಚು ಮಹತ್ವ ನೀಡಿತು
ಬಿ) ಕಲೆ ಮತ್ತು ವಿಜ್ಞಾನದ ಅಧ್ಯಯನಕ್ಕೆ ಹೆಚ್ಚು ಮಹತ್ವ ನೀಡಿತು
ಸಿ) ಕಲೆ ಮತ್ತು ವಾಣಿಜ್ಯ ವಿಷಯಗಳ ಅಧ್ಯಯನಕ್ಕೆ ಹೆಚ್ಚು ಮಹತ್ವ ನೀಡಿತು
ಡಿ) ಕಲೆ, ವಿಜ್ಞಾನ, ತಂತ್ರಜ್ಞಾನ ಮತ್ತು ವೈದ್ಯಕೀಯ ಕ್ಷೇತ್ರದ ಅಧ್ಯಯನಕ್ಕೆ ಹೆಚ್ಚು ಮಹತ್ವ ನೀಡಿತು

ಉತ್ತರ:- ಎ

3) ಹೇಳಿಕೆಗಳನ್ನು ಗಮನಿಸಿ

1) ದಕ್ಷಿಣ ಭಾರತದಲ್ಲಿ ಪ್ರಥಮ ಇಂಗ್ಲಿಷ್ ಮಾಧ್ಯಮದ ಶಾಲೆಯು 1717ರಲ್ಲಿ ಕಡಲೂರಿನಲ್ಲಿ ಪ್ರಾರಂಭವಾಯಿತು,

2) ರಿಚಾರ್ಡ್ ಕಾಬ್ ಎಂಬವನು ಬಡ ಯೂರೋಪಿಯನ್ ಹಾಗೂ ಆಂಗ್ಲೊ ಇಂಡಿಯನ್ ಮಕ್ಕಳಿಗಾಗಿ ಮುಂಬಯಿಯಲ್ಲಿ ಒಂದು ಧರ್ಮಾರ್ಥ ಶಾಲೆಯನ್ನು 1719ರಲ್ಲಿ ಸ್ಥಾಪಿಸಿದನು ಅದನ್ನು ಮುಂದೆ 1815ರಲ್ಲಿ ಭಾರತೀಯ ಮಕ್ಕಳ ಪ್ರವೇಶಕ್ಕೂ ಮುಕ್ತಗೊಳಿಸಲಾಯಿತು.

3) ಕ್ರಿ. ಶ. 1720ರಲ್ಲಿ ಧರ್ಮಾರ್ಥ ಶಾಲೆಯೊಂದು ಕೋಲ್ಕತ್ತದಲ್ಲಿ ಸ್ಥಾಪಿಸಲಾಯಿತು.

4) ಕೋಲ್ಕತ್ತದ ಅಲೆಕ್ಸಾಂಡರ್ ಡಫ್, ಮುಂಬಯಿಯ ಜಾನ್ ವಿಲ್ಸನ್ ಮತ್ತು ಮದ್ರಾಸಿನ ವಿಲಿಯಂ ಮಿಲ್ಲರ್ ಈ ಮೂವರ ಹೆಸರುಗಳು ಭಾರತದ ಪಾಶ್ಚಿಮಾತ್ಯ ಶಿಕ್ಷಣದ ಇತಿಹಾಸದಲ್ಲಿ ಎಂದೆಂದಿಗೂ ಗೌರವದ ಸ್ಥಾನವನ್ನು ಪಡೆಯುತ್ತವೆ.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ) ಹೇಳಿಕೆ 1ರಿಂದ 4ರ ತನಕ ಎಲ್ಲವೂ ಸರಿಯಾಗಿವೆ.
ಬಿ) ಹೇಳಿಕೆ 3 ಮತ್ತು 4 ಮಾತ್ರ ಸರಿಯಾಗಿವೆ.
ಸಿ) ಹೇಳಿಕೆ 1, 2 ಮತ್ತು 3 ಮಾತ್ರ ಸರಿಯಾಗಿವೆ.
ಡಿ) ಯಾವ ಹೇಳಿಕೆಯೂ ಸರಿಯಾಗಿಲ್ಲ.

ಉತ್ತರ:- ಎ

4) 1944ರಷ್ಟು ಹಿಂದೆಯೇ ....ಸಮಿತಿಯು ಅಮೆರಿಕದ ಸಂಯುಕ್ತ ರಾಜ್ಯದಲ್ಲಿರುವ ಮ್ಯಾಸೆಚುಟಸೆಟ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಜ್ಯೂರಿಚ್‌ದಲ್ಲಿರುವ ಟೆಕ್ನಿಕ್ ಹಾಕ್ ಸ್ಕೂಲ್ ಇವುಗಳ ಮಾದರಿಯಲ್ಲಿ ಭಾರತದಲ್ಲಿ ತಂತ್ರಜ್ಞಾನ ಸಂಸ್ಥೆಗಳನ್ನು ತೆರೆಯಲು ಶಿಫಾರಸು ಮಾಡಿತ್ತು.

ಎ) ನಲಿನಿ ರಂಜನ ಸರ್ಕಾರ್ ಬಿ) ಮೇಜರ್ ರಾಯಲ್ ಡಾಲ್ಫಿನ್
ಸಿ) ಜದುನಾಥ್ ಸರ್ಕಾರ್ ಡಿ) ಬ್ರಿಚಿತ್ರಾನಂದ ದೇ

ಉತ್ತರ:- ಎ

5) 1901ರಲ್ಲಿ ನಡೆದ ಜನಗಣಿತಿಯ ಸಂದರ್ಭದಲ್ಲಿ ನಿರ್ದೇಶನ ನೀಡಿ ಭಾರತದಲ್ಲಿ ಜಾತಿಯ ಮಹತ್ವದ ಕುರಿತು ಅಂಕಿಅಂಶಗಳನ್ನು ಕಲೆಹಾಕಲು ತಿಳಿಸಲಾಯಿತು. ಅಂದರೆ ಯಾವ ಪ್ರದೇಶದಲ್ಲಿ ಯಾವ ಜಾತಿಗೆ ಯಾವ ಸ್ಥಾನಮಾನವಿದೆ? ಎಂಬುದನ್ನು ಕಲೆ ಹಾಕಲು ತಿಳಿಸಲಾಯಿತು. ಇದು ಭಾರತೀಯ ಸಮಾಜದ ಮೇಲೆ ಸಾಕಷ್ಟು ಪರಿಣಾಮವನ್ನು ಬೀರಿತು. ಪ್ರತಿಯೊಂದು ಜಾತಿಯೂ ಸಮಾಜದಲ್ಲಿ ತನ್ನ ಸ್ಥಾನವು ಯಾವ ಉಚ್ಚಮಟ್ಟದ್ದು ಎಂದು ತಿಳಿಸಲು ಪೈಪೋಟಿಗೆ ಇಳಿಯಿತು. ಅದಕ್ಕಾಗಿ ಐತಿಹಾಸಿಕ ದಾಖಲೆಗಳನ್ನು, ಶಾಸನ, ಗ್ರಂಥ/ಪುಸ್ತಕಗಳಲ್ಲಿ ಇರುವ ಉಲ್ಲೇಖಗಳನ್ನು ಹಿಂದಿನಿಂದ ಸಮಾಜದಲ್ಲಿ ಆಯಾ ಜಾತಿಗಿದ್ದ ಮಾನ ಸಮ್ಮಾನಗಳನ್ನು ವೈಭವಿಕರಿಸಿ ಬ್ರಿಟಿಷ್ ಅಧಿಕಾರಿಗಳ ಮುಂದೆ ಇಡಲು ಪ್ರಯತ್ನಿಸಿತು.

ಹಾಗಾದರೆ ಈ ನಿರ್ದೇಶನ ನೀಡಿದವರು ಯಾರು?

ಎ) ಹರ್ಬರ್ಟ್ ರಿಸ್ಲೆ ಬಿ) ಅಲೆಕ್ಸಾಂಡರ್ ಡಫ್
ಸಿ) ಜಾನ್ ವಿಲ್ಸನ್ ಡಿ) ವಿಲಿಯಂ ಮಿಲ್ಲರ್

ಉತ್ತರ:- ಎ

6) ಹೇಳಿಕೆಗಳನ್ನು ಗಮನಿಸಿ

1) ಬ್ರಿಟಿಷ್ ಸಾಮ್ರಾಜ್ಯದ ಕೊನೆಯ ಹಂತದಲ್ಲಿ ಅಂದರೆ 1935ರ ಹೊತ್ತಿಗೆ Government of India Act of 1935 ಜಾರಿಗೆ ತರಲಾಯಿತು ಅದರಲ್ಲಿ ಶೆಡ್ಯೂಲ್ ಕಾಸ್ಟ್ ಮತ್ತು ಶೆಡ್ಯೂಲ್ ಟ್ರೈಬ್ಸ್‌ಗೆ ರಿಕೆಗ್ನಿಷನ್/ಮಾನ್ಯತೆ ನೀಡಿತು ಅದಕ್ಕಾಗಿಯೇ ಒಂದು ಶೆಡ್ಯೂಲ್ ಅನ್ನು ಕಾಯ್ದೆಯಲ್ಲಿ ನಿರ್ಮಿಸಿದ ಪರಿಣಾಮ ಶೆಡ್ಯೂಲ್ ಕಾಸ್ಟ್ ಮತ್ತು ಶೆಡ್ಯೂಲ್ ಟ್ರೈಬ್ಸ್ ಪದಗಳು ಜನಜನಿತವಾದವು.

2) ದೇಶದ ಶೇ 85ರಷ್ಟು ಬುಡಕಟ್ಟು (ಗುಡ್ಡಗಾಡು) ಜನರು ಮಧ್ಯಭಾರತದಲ್ಲಿಯೇ ವಾಸವಾಗಿದ್ದಾರೆ. ಗುಜರಾತ್ ಮತ್ತು ರಾಜಸ್ಥಾನದಿಂದ ಪಶ್ಚಿಮ ಬಂಗಾಳ ಮತ್ತು ಒರಿಸ್ಸಾವರೆಗೆ ಈ ಸಮುದಾಯದವರ ಸಂಖ್ಯೆ ಹೆಚ್ಚಿಗೆ ಇರುವುದನ್ನು ನೋಡುತ್ತೇವೆ.

3) ಅಸ್ಪೃಶ್ಯತೆ ವಿರುದ್ದವಾಗಿ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಡ್ರಿಪ್ರೆಸ್ಡ್ ಕ್ಲಾಸ್ ಮೂವ್‌ಮೆಂಟ್ ಆರಂಭವಾಯಿತು. ಇದಲ್ಲದೇ ಉಚ್ಚ ಜಾತಿಯಲ್ಲಿರುವ ವಿಚಾರವಾದಿಗಳು ಹಾಗೂ ಅಸ್ಪೃಶ್ಯ ಸಮಾಜದಲ್ಲಿರುವ ಧುರಿಣರು ಹೀಗೆ ಎರಡೂ ಕಡೆಯಿಂದಲೂ ಅಸ್ಪೃಶ್ಯತೆ ವಿರುದ್ದವಾಗಿ ಚಳವಳಿ ಆರಂಭವಾಯಿತು. ಮಹಾತ್ಮ ಜ್ಯೋತಿ ಫುಲೆ, ಸಂತ ನಾರಾಯಣ ಗುರು, ಪೆರಿಯಾರ್ ಇವಿ ರಾಮಸ್ವಾಮಿ ನಾಯ್ಕರ್, ಮಹಾತ್ಮಗಾಂಧಿ, ಹಾಗೂ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ನಾಯಕತ್ವದಲ್ಲಿ ಈ ಆಂದೋಲನ ನಡೆಯಿತು.

4) ಗುಲಾಮರ ಒಡೆತನದ ಬಗೆಗಿನ ಬೇಡಿಕೆಗಳನ್ನು ನಾಗರಿಕ ನ್ಯಾಯಾಲಯಗಳು ಗಮನಕ್ಕೆ ತೆಗೆದುಕೊಳ್ಳಬಾರದೆಂದು 1843ರ ಕಾಯ್ದೆಯ ಮೇರೆಗೆ ಅವಕಾಶ ಕಲ್ಪಿಸಲಾಯಿತು. ಈ ಕ್ರಮದಿಂದ ದಾಸ್ಯತ್ವದ ಮೇಲಿನ ಒಡೆತನದ ಹಕ್ಕು ನಷ್ಟವಾಯಿತು ಹಾಗೂ ಸಾಮಾಜಿಕ ಅನಿಷ್ಟ ಸಂಪ್ರದಾಯವನ್ನು ಉಚ್ಚಾಟನೆ ಮಾಡುವುದಕ್ಕೆ ಹಾದಿಯನ್ನು ಹಾಕಿಕೊಟ್ಟಿತು.

ಮೇಲಿನ ಯಾವೆಲ್ಲಾ ಹೇಳಿಕೆಗಳು ತಪ್ಪಾಗಿವೆ?

ಎ) ಹೇಳಿಕೆ 1 ರಿಂದ 3ರ ತನಕ ಮಾತ್ರ ತಪ್ಪಾಗಿವೆ
ಬಿ) ಹೇಳಿಕೆ 1, 3 ಮತ್ತು 4 ಮಾತ್ರ ತಪ್ಪಾಗಿವೆÉ
ಸಿ) ಹೇಳಿಕೆ 2 ಮತ್ತು 3 ಮಾತ್ರ ತಪ್ಪಾಗಿವೆ ಡಿ) ಯಾವ ಹೇಳಿಕೆಯೂ ತಪ್ಪಾಗಿಲ್ಲ

ಉತ್ತರ:- ಡಿ

7) ರಾಯಿ ಸಾಹೇಬ ಹರವಿಲಾಸ ಶಾರದಾ ಅವರ ಹೆಸರಿನಿಂದಲೇ ಪ್ರಸಿದ್ಧಿ ಪಡೆದ 'ಶಾರದಾ ವಿಧೇಯಕ' ಎಂಬ ಬಾಲವಿವಾಹ ಪ್ರತಿಬಂಧಕ ಕಾಯ್ದೆಯು ....ರಲ್ಲಿ ಅಂಗೀಕೃತವಾಯಿತು. ವಧುವಿನ ವಯಸ್ಸು ಹದಿನಾಲ್ಕಕ್ಕಿಂತ ಕಡಿಮೆ ಮತ್ತು ವರನ ವಯಸ್ಸು ಹದಿನೆಂಟಕ್ಕಿಂತ ಕಡಿಮೆ ಇದ್ದ ಮದುವೆಗೆ ಕಾರಣರಾದವರನ್ನು ಶಿಕ್ಷಿಸುವಂತೆ ಇದರಲ್ಲಿ ವಿಧಿಸಲಾಗಿದ್ದಿತ್ತು

ಎ) 1939 ಬಿ)1929
ಸಿ)1940 ಡಿ) 1945

ಉತ್ತರ:- ಬಿ

8) ಭಾರತ ಸಂವಿಧಾನ ಯಾವ ಆರ್ಟಿಕಲ್, ನಮ್ಮ ಸಮಾಜದಲ್ಲಿ ಅಸ್ಪೃಶ್ಯತೆಯನ್ನು ಆಚರಿಸುವುದು ಅಪರಾಧ ಎಂದು ಘೋಷಿಸುತ್ತದೆ ಹಾಗೂ ಅಸ್ಪೃಶ್ಯತೆಯನ್ನು ನಿಷೇಧಿಸುತ್ತದೆ?

ಎ) 19 ಬಿ) 30
ಸಿ) 17 ಡಿ) 27

ಉತ್ತರ:- ಸಿ

9) ವಿಧವಾ ಪುನರ್ವಿವಾಹ ಬಗ್ಗೆ ರಾಮಮೋಹನ ರಾಯ್ ಅವರು ಆಂದೋಲನ ಆರಂಭಿಸಿದ್ದರು. ಈಶ್ವರಚಂದ್ರ ವಿದ್ಯಾಸಾಗರ ಅವರು ತೀವ್ರ ಪ್ರಯತ್ನದಿಂದ. 'ಹಿಂದೂ ವಿಧವೆಯ ಪುನರ್ವಿವಾಹ ಕಾಯ್ದೆ'ಯನ್ನು 1856ರಲ್ಲಿ ಅಂಗೀಕರಿಸಲಾಯಿತು. ಹಾಗಾದರೆ ಈ ಕೆಳಗಿನ ಯಾವ ಸ್ಥಳದಲ್ಲಿ ಹಿಂದು ವಿಧವಾ ಸುಧಾರಣಾ ಲೀಗ್ ಸ್ಥಾಪಿಸಿ ಹೋರಾಟ ಮಾಡಲಾಗಿತ್ತು?

ಎ) ಚಂಡಿಗಢ ಬಿ) ಲಖನೌ
ಸಿ) ಭುವನೇಶ್ವರ ಡಿ) ಮೈಸೂರು

ಉತ್ತರ:- ಬಿ

10) ಕೇಳಗಿನ ಹೇಳಿಕೆಗಳನ್ನು ಗಮನಿಸಿ

1) ಬ್ರಿಟಿಷ್ ಅಧಿಕಾರಿ ಸರ್ ಬಾರ್ಟರ್ ಫ್ರೆರೆ ಪ್ರಕಾರ ಬ್ರಿಟಿಷ್ ಭಾರತದಲ್ಲಿ(ಬ್ರಿಟಿಷ್ ಇಂಡಿಯಾದಲ್ಲಿ) 8 ರಿಂದ 9 ದಶಲಕ್ಷ ಜನರು ದಾಸ್ಯಕ್ಕೆ ಒಳಗಾಗಿ ದುಡಿಯುತ್ತಿದ್ದರು.

2) ಬ್ರಿಟಿಷ್ ಕಾಲದಲ್ಲಿ ಕೊಲ್ಕತ್ತಾದಂತಹ ಕಡೆಗಳಲ್ಲಿ ಬೀದಿ ಬೀದಿಯಲ್ಲಿ ಕೂಗಿ ಕೂಗಿ ಮಕ್ಕಳನ್ನು ಮಾರಾಟ ಮಾಡಲಾಗುತ್ತಿತ್ತು. ಗುಲಾಮರನ್ನು ಒಂದು ಜಿಲ್ಲೆಯಿಂದ ಖರೀದಿಸಿ ತಂದು ಇನ್ನೊಂದು ಜಿಲ್ಲೆಯಲ್ಲಿ ಮಾರಾಟ ಮಾಡಲಾಗುತಿತ್ತು

3) ಸಾಲ ತೀರಿಸದ ಕಾರಣಕ್ಕಾಗಿ ಜೀತ ಮಾಡುತ್ತಿದ್ದವವರೂ ಸೇರಿದಂತೆ ಇತರ ಕಾರಣಗಳಿಗಾಗಿ ದಾಸ್ಯತ್ವದಿಂದ ಬದುಕುತ್ತಿದ್ದ 1200 ಜನರನ್ನು ಬ್ರಿಟಿಷರು ಅಸ್ಸಾಂನ ಕಾಮರೂಪದಿಂದ ಮುಕ್ತರನ್ನಾಗಿ ಮಾಡಿದ ಅಂಶ ಬ್ರಿಟಿಷ್ ದಾಖಲೆಗಳಿಂದ ತಿಳಿದು ಬರುತ್ತದೆ.


4) ರಾಜಮನೆತನಗಳ ದಬ್ಬಾಳಿಕೆಯಿಂದ ರಾಜಪುಟಾಣದಿಂದ ಬಂದ ಜನರನ್ನು ಪುಣೆ ಮತ್ತು ದಕ್ಷಿಣ ಭಾರತಕ್ಕೆ ನಿರ್ಯಾತ ಮಾಡಲಾಗುತ್ತಿತ್ತು. ಆ ಪ್ರದೇಶದಲ್ಲಿ ಬೆಲೆಯೂ ಹೆಚ್ಚಾಗಿತ್ತು. ಹೀಗಾಗಿ, ಆ ವ್ಯಾಪಾರದಲ್ಲಿ ತೊಡಗಿದ್ದ ಮರಾಠ ಬ್ರಾಹ್ಮಣರಿಗೆ ಲಾಭವಾಗುತಿತ್ತು.

ಮೇಲಿನ ಹೇಳಿಕೆಗಳಲ್ಲಿ ಯಾವೆಲ್ಲಾ ಹೇಳಿಕೆಗಳು ಸರಿಯಾಗಿವೆ?

ಎ) ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿವೆ.
ಬಿ) ಹೇಳಿಕೆ 3 ಮತ್ತು 4 ಮಾತ್ರ ಸರಿಯಾಗಿವೆ.
ಸಿ) ಹೇಳಿಕೆ 1, 3 ಮತ್ತು 4 ಮಾತ್ರ ಸರಿಯಾಗಿವೆ
ಡಿ) ಹೇಳಿಕೆ 1ರಿಂದ 4ರ ತನಕ ಎಲ್ಲವೂ ಸರಿಯಾಗಿವೆ.

ಉತ್ತರ:- ಡಿ

ಮಾಹಿತಿ :- YouTube Chanel :- ಸ್ಪರ್ಧಾ ಭಾರತಿ, ಯುಪಿಎಸ್‌ಸಿ



ಪ್ರಜಾವಾಣಿ

ಉದ್ಯೋಗ ವಾರ್ತೆ

ಡಿಆರ್‌ಡಿಒದಲ್ಲಿ ಅಪ್ರೆಂಟಿಸ್ ಹುದ್ದೆಗಳು

ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಆರ್ಗನೈಜೇಷನ್(ಡಿಆರ್‌ಡಿಒ) ವಿವಿಧ ಅಪ್ರೆಂಟಿಸ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆಗಳು: ಅಪ್ರೆಂಟಿಸ್
- ಸ್ಥಳ: ಭಾರತದಾದ್ಯಂತ
- ಹುದ್ದೆಗಳ ಸಂಖ್ಯೆ: 12
- ವಿದ್ಯಾರ್ಹತೆ: ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ ಡಿಪ್ಲೋಮಾ ಇನ್ ಕಂಪ್ಯೂಟರ್ ಸೈನ್ಸ್, ಮೆಡಿಕಲ್ ಲ್ಯಾಬೊರೇಟರಿ ಟೆಕ್ನಾಲಜಿ, ಲೈಬ್ರರಿ ಸೈನ್ಸ್, ಮೆಕ್ಯಾನಿಕಲ್ ಎಂಜಿನಿಯರಿಂಗ್, ಮಾರ್ಡನ್ ಆಫೀಸ್ ಪ್ರಾಕ್ಟೀಸ್, ಕಚೇರಿ ನಿರ್ವಹಣೆ ವಿಷಯದಲ್ಲಿ ವ್ಯಾಸಂಗ ಮುಗಿಸಿರಬೇಕು.
- ವಯೋಮಿತಿ: ಕನಿಷ್ಠ 18 ವರ್ಷ ಹಾಗೂ ಗರಿಷ್ಠ 28 ವರ್ಷ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 3 ವರ್ಷ, ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷ ವಯೋಮಿತಿ ಸಡಿಲಿಕೆ ಇದೆ.
- ನೇಮಕಾತಿ ಪ್ರಕ್ರಿಯೆ: ಕಂಪ್ಯೂಟರ್ ಆಧಾರಿತ ಪರೀಕ್ಷೆ ಹಾಗೂ ಮೆರಿಟ್ ಆಧಾರದ ಮೇಲೆ
- ಅರ್ಜಿ ಶುಲ್ಕ: ₹ 100. ಎಸ್‌ಸಿ, ಎಸ್‌ಟಿ, ಮಹಿಳೆಯರು ಹಾಗೂ ಮಾಜಿ ಯೋಧರಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 14, 2021
- ಹೆಚ್ಚಿನ ಮಾಹಿತಿಗೆ: https://www.drdo.gov.in/careers

ಆಯಿಲ್ ಇಂಡಿಯಾದಲ್ಲಿ 146 ಹುದ್ದೆಗಳು

ಆಯಿಲ್ ಇಂಡಿಯಾ ಸಂಸ್ಥೆ ತನ್ನಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆ: ಡಿಪ್ಲೋಮಾ ಅಪ್ರೆಂಟಿಸ್
- ಹುದ್ದೆಗಳ ಸಂಖ್ಯೆ: 146
- ಸ್ಥಳ: ಭಾರತದೆಲ್ಲೆಡೆ
- ವಿದ್ಯಾರ್ಹತೆ: ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ 10 ಅಥವಾ 12ನೇ ತರಗತಿ ಹಾಗೂ ಡಿಪ್ಲೋಮಾ ಉತ್ತೀರ್ಣರಾಗಿರಬೇಕು.
- ವಯೋಮಿತಿ: ವಿವಿಧ ಹುದ್ದೆಗಳಿಗೆ ಅನುಗುಣವಾಗಿ ಕನಿಷ್ಠ 18 ವರ್ಷ ಹಾಗೂ ಗರಿಷ್ಠ 30 ವರ್ಷ. ಎಸ್‌ಸಿ ಹಾಗೂ ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ ಹಾಗೂ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷಗಳ ವಯೋಮಿತಿ ಸಡಿಲಿಕೆ ಇದೆ.
- ಅರ್ಜಿ ಶುಲ್ಕ: ₹ 200. ಎಸ್‌ಸಿ, ಎಸ್‌ಟಿ, ಅಂಗವಿಕರಲರು ಹಾಗೂ ಮಾಜಿಯೋಧರಿಗೆ ಯಾವುದೇ ಅರ್ಜಿ ಶುಲ್ಕವಿಲ್ಲ.
- ನೇಮಕಾತಿ ಪ್ರಕ್ರಿಯೆ: ಕಂಪ್ಯೂಟರ್ ಆಧಾರಿತ ಪರೀಕ್ಷೆ, ಕೌಶಲ ಪರೀಕ್ಷೆ, ಲಿಖಿತ ಪರೀಕ್ಷೆ ಹಾಗೂ ವೈಯಕ್ತಿಕ ಸಂದರ್ಶನ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 9, 2021
- ಹೆಚ್ಚಿನ ಮಾಹಿತಿಗೆ: https://register.cbtexams.in/OIL/HRAQ25/Applicant/Register



ಎಚ್‌ಎಎಲ್‌ನಲ್ಲಿ ಅಪ್ರೆಂಟಿಸ್ ಹುದ್ದೆಗಳು

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನಲ್ಲಿ ಟ್ರೇಡ್ ಅಪ್ರೆಂಟಿಸ್ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆಗಳು: ಸ್ಟಾಫ್ ನರ್ಸ್, ಫಾರ್ಮಾಸಿಸ್ಟ್, ಪಿಜಿಯೋಥೆರಪಿಸ್ಟ್, ಡ್ರೆಸ್ಸರ್
- ಒಟ್ಟು ಹುದ್ದೆಗಳು: 11
- ಸ್ಥಳ: ಬೆಂಗಳೂರು
- ವಿದ್ಯಾರ್ಹತೆ: ಹುದ್ದೆಗಳಿಗೆ ಅನುಗುಣವಾಗಿ ಅಭ್ಯರ್ಥಿಗಳು ಡಿಪ್ಲೋಮಾ, ಜಿಎನ್‌ಎಂ, ಡಿಫಾರ್ಮಾ ಮುಗಿಸಿರಬೇಕು. ಪಿಯುಸಿ ಜೊತೆಗೆ ಜನರಲ್ ನರ್ಸಿಂಗ್ ಮತ್ತು ಮಿಡ್‌ವೈಫರಿಯಲ್ಲಿ 3 ವರ್ಷಗಳ ಡಿಪ್ಲೋಮಾ ಮಾಡಿರಬೇಕು. ಫಾರ್ಮಾಸಿಸ್ಟ್: ಪಿಯುಸಿ ಜೊತೆಗೆ 2 ವರ್ಷಗಳ ಪಿಜಿಯೋಥೆರಪಿ ಡಿಪ್ಲೋಮಾ ಮಾಡಿರಬೇಕು. ಫಿಜಿಯೋಥೆರಪಿಸ್ಟ್: ಪಿಯುಸಿ ಜೊತೆಗೆ 2 ವರ್ಷಗಳ ಡಿ. ಫಾರ್ಮಾ ಮಾಡಿರಬೇಕು. ಡ್ರೆಸ್ಸರ್: ಪಿಯುಸಿ ಜೊತೆಗೆ ಭಾರತೀಯ ರೆಡ್ ಕ್ರಾಸ್ ಅಥವಾ ಸೇಂಟ್ ಜಾನ್ಸ್ ಆಂಬ್ಯುಲೆನ್ಸ್ ಅಸೋಸಿಯೇಷನ್ ಅಥವಾ ಅಂತಹ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಿಂದ ಪ್ರಥಮ ಚಿಕಿತ್ಸೆಯಲ್ಲಿ ತರಬೇತಿಯ ಪ್ರಮಾಣಪತ್ರ ಹೊಂದಿರಬೇಕು.
- ವಯೋಮಿತಿ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳಿಗೆ ಗರಿಷ್ಠ 28 ವರ್ಷ ಮೀರಿರಬಾರದು.
- ಅರ್ಜಿ ಶುಲ್ಕ: ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ₹ 200 ಅರ್ಜಿ ಶುಲ್ಕ ಪಾವತಿಸಬೇಕು.
- ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ, ದಾಖಲಾತಿ ಪರಿಶೀಲನೆ ಹಾಗೂ ವೈಯಕ್ತಿಕ ಸಂದರ್ಶನ
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 14, 2021
- ಹೆಚ್ಚಿನ ಮಾಹಿತಿಗೆ: https://hal-india.co.in/Careers/M__206



ಪರೀಕ್ಷೆಯ ಮುನ್ನೋಟಕ್ಕೆ ಅಣಕು ಪರೀಕ್ಷೆ

ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವ ಮೊದಲು ಸಿದ್ಧತೆ ಬಹಳ ಮುಖ್ಯ. ಓದಿನ ತಯಾರಿಯ ಜೊತೆಗೆ ಪರೀಕ್ಷೆ ಎದುರಿಸುವ ಬಗ್ಗೆ ಪ್ರತ್ಯಕ್ಷ ಅನುಭವವೂ ಅಗತ್ಯ. ಈ ಅನುಭವವನ್ನು ಅಣಕು ಪರೀಕ್ಷೆ ಎದುರಿಸುವ ಮೂಲಕ ಪಡೆಯಬಹುದು.

ಪ್ರಣೀತಾ ಆರ್. ವನಹಳ್ಳಿ

ಸ್ಪರ್ಧಾತ್ಮಕ ಪರೀಕ್ಷೆ ಎಂದ ಕೂಡಲೇ ಸಾಕಷ್ಟು ಸಿದ್ಧತೆ ಬೇಕಾಗುತ್ತದೆ ಎಂಬುದು ಗೊತ್ತೇ ಇರುವ ಸಂಗತಿ. ಆದರೆ ಈ ಸಿದ್ಧತೆ ಅಂದರೆ ಕೇವಲ ಅಧ್ಯಯನ ಸಾಮಗ್ರಿ ಸೇರಿಸಿಕೊಂಡು ಓದುವುದು ಮಾತ್ರವಲ್ಲ, ಪರೀಕ್ಷೆಯನ್ನು ಹೇಗೆ ಎದುರಿಸುವುದು ಎಂಬುದರ ಕುರಿತು ಪ್ರತ್ಯಕ್ಷ ಅನುಭವವೂ ಬೇಕಾಗುತ್ತದೆ. ಈ ಅನುಭವವನ್ನು ಅಣಕು ಪರೀಕ್ಷೆ ಎದುರಿಸಿ ಪಡೆಯಬಹುದು. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿದ ಲಕ್ಷಾಂತರ ಸ್ಪರ್ಧಾರ್ಥಿಗಳಲ್ಲಿ ಯಶಸ್ಸು ಪಡೆದ ಕೆಲವೇ ಅಭ್ಯರ್ಥಿಗಳನ್ನು ಕೇಳಿದರೆ ಅವರಲ್ಲಿ ಕೆಲವರಾದರೂ ಈ ಅಣಕು ಪರೀಕ್ಷೆಯನ್ನು ಎದುರಿಸಿರುವುದು ಗೊತ್ತಾಗುತ್ತದೆ.

ಹಾಗಾದರೆ ಈ ಅಣಕು ಪರೀಕ್ಷೆ ಎಂದರೇನು? ನಿಜವಾದ ಪರೀಕ್ಷೆಯ ನಿಯಮಗಳು, ಮಾದರಿಯಲ್ಲೇ ಅಭ್ಯಾಸಕ್ಕಾಗಿ ಪರೀಕ್ಷೆ ಎದುರಿಸುವ ಈ ಅಣಕು ಪರೀಕ್ಷೆಯಲ್ಲಿ ಸ್ಪರ್ಧಾರ್ಥಿಯು ತನ್ನ ಸಾಧನೆಯನ್ನು ವಿಶ್ಲೇಷಿಸಬಹುದು. ಮಾಡಿದ ತಪ್ಪುಗಳನ್ನು ಸರಿಪಡಿಸಿಕೊಂಡು ನಿಜವಾದ ಪರೀಕ್ಷೆಯಲ್ಲಿ ಚೆನ್ನಾಗಿ ಬರೆಯಬಹುದು. ಪೇಪರ್ ಯಾವ ಮಾದರಿಯಲ್ಲಿ ಇರುತ್ತದೆ, ಯಾವ ರೀತಿಯ ಪ್ರಶ್ನೆಗಳನ್ನು ಕೇಳುತ್ತಾರೆ, ಪ್ರಶ್ನೆಗಳು ಕಷ್ಟಕರವೇ, ಎಷ್ಟು ಸಮಯ ಅವಶ್ಯಕ.. ಹೀಗೆ ಹಲವಾರು ವಿಷಯಗಳನ್ನು ಮನದಟ್ಟು ಮಾಡಿಕೊಳ್ಳಬಹುದು.



ಅಣಕು ಪರೀಕ್ಷೆ ತೆಗೆದುಕೊಳ್ಳದಿದ್ದರೆ ನಿಮ್ಮ ಸಿದ್ಧತೆ ಮಟ್ಟ ಎಷ್ಟಿದೆ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಇಂತಹ ಪರೀಕ್ಷೆಗೆ ಹಾಜರಾದರೆ ಅಧ್ಯಯನಕ್ಕೆ ಯೋಜನೆ ರೂಪಿಸಿಕೊಂಡು ಅಂದುಕೊಂಡಿದ್ದನ್ನು ಸಾಧಿಸಬಹುದು.

1. ಪರೀಕ್ಷೆಯಲ್ಲಿ ಏನನ್ನು ನಿರೀಕ್ಷಿಸಬಹುದು ಎಂಬುದರ ಬಗ್ಗೆ ಮುನ್ನೋಟ ಸಿಗುತ್ತದೆ. ಈ ಅಣಕು ಪರೀಕ್ಷೆ ಎನ್ನುವುದು ನಿಜವಾದ ಪರೀಕ್ಷೆ ಇದ್ದಂತೆ. ಅಣಕು ಪರೀಕ್ಷೆಯಲ್ಲಿ ನೀವು ಎದುರಿಸುವ ಪ್ರಶ್ನೆಗಳು ನಿಜವಾದ ಪರೀಕ್ಷೆಯಲ್ಲಿ ಯಾವ ಮಾದರಿಯ ಪ್ರಶ್ನೆಗಳು ಎದುರಾಗಬಹುದು ಎಂಬುದನ್ನು ಸೂಚಿಸುತ್ತವೆ.

2. ನಿಮ್ಮ ಸಿದ್ಧತೆ ಮತ್ತು ಪರೀಕ್ಷೆಯಲ್ಲಿ ಹೇಗೆ ಮಾಡಿದ್ದೀರಿ ಎಂಬುದನ್ನು ವಿಶ್ಲೇಷಿಸಬಹುದು. ಇದು ನಿಮ್ಮ ತಯಾರಿಯನ್ನು ಒಂದು ರೀತಿ ರಿಯಾಲಿಟಿ ಚೆಕ್ ಮಾಡಿದಂತೆ. ನೀವು ಕಲಿತ ಮತ್ತು ಮನನ ಮಾಡಿಕೊಂಡ ವಿಷಯಗಳು ಮರೆತು ಹೋಗದಂತೆ ನೆನಪಿಸುತ್ತವೆ. ಸಿಲಬಸ್ ಅನ್ನು ಪುನರಾವರ್ತನೆ ಮಾಡಲು ಸಹಾಯಕ.

3. ವಿವಿಧ ರೀತಿಯ ಯೋಜನೆಗಳನ್ನು ರೂಪಿಸಿ, ಪರೀಕ್ಷಿಸಲು ನೆರವಾಗುತ್ತದೆ. ನಿಜವಾದ ಪರೀಕ್ಷೆ ಎದುರಿಸುವಾಗ ಅತ್ಯುತ್ತಮವಾಗಿ ಬರೆಯಲು ಸಹಾಯಕ. ಪರೀಕ್ಷೆಗೆ ಮುನ್ನವೇ ಬೇರೆ ಬೇರೆ ರೀತಿಯಲ್ಲಿ ಪ್ರಯೋಗ ನಡೆಸಲು ಅಣಕು ಪರೀಕ್ಷೆಗಿಂತ ಉತ್ತಮವಾದದ್ದು ಬೇರೆ ಇಲ್ಲ.

4. ಸಮಯದ ನಿರ್ವಹಣೆಯನ್ನು ಕಲಿಯಬಹುದು. ಪ್ರತಿ ದಿನ ಒಂದು ಅಣಕು ಪರೀಕ್ಷೆ ಎದುರಿಸುವುದರಿಂದ ನೀವು ವೇಗವಾಗಿ ಉತ್ತರಿಸುವುದನ್ನು ರೂಢಿ ಮಾಡಿಕೊಳ್ಳಬಹುದು. ಯಾವ ವಿಭಾಗಕ್ಕೆ ಹೆಚ್ಚು ಸಮಯ ನೀಡಬೇಕು ಅಥವಾ ಕಡಿಮೆ ಅವಧಿಯಲ್ಲಿ ಉತ್ತರಿಸಬಹುದು ಎಂಬುದನ್ನು ಕಲಿಯಬಹುದು. ಇದರಿಂದ ನಿಗದಿತ ಅವಧಿಯಲ್ಲಿ ಪ್ರಶ್ನೆಗಳಿಗೆ ಉತ್ತರಿಸಿ, ಕೆಲವು ಪ್ರಶ್ನೆಗಳಿಗೆ ಹೆಚ್ಚುವರಿ ಸಮಯ ಉಳಿಸಬಹುದು.

5. ನಿಮಗೆ ಯಾವ ವಿಭಾಗದಲ್ಲಿ ಹೆಚ್ಚು ಸಾಮರ್ಥ್ಯವಿದೆ ಅಥವಾ ಯಾವುದರಲ್ಲಿ ಹಿಂದೆ ಉಳಿದಿದ್ದೀರಿ ಎಂಬುದನ್ನು ಇದರಿಂದ ತಿಳಿದುಕೊಳ್ಳಬಹುದು. ಹಾಗೆಯೇ ಯಾವ ವಿಭಾಗ ಸುಲಭ ಅಥವಾ ಕಷ್ಟ ಎಂಬುದನ್ನು ಅರಿಯಬಹುದು. ಕಷ್ಟವಾಗಿರುವ ವಿಷಯದ ಮೇಲೆ ಹೆಚ್ಚು ಗಮನಹರಿಸಲು ಇದರಿಂದ ಸಾಧ್ಯ.

6. ಪರೀಕ್ಷೆಯ ಕುರಿತ ಹಿಂಜರಿಕೆಯನ್ನು ಕಡಿಮೆ ಮಾಡುತ್ತದೆ.

7. ನಿಮ್ಮ ಪ್ರಗತಿ ಹೇಗಿದೆ ಎಂಬುದರ ಮೇಲೆ ನಿಗಾ ಇಡಬಹುದು. ತಪ್ಪುಗಳನ್ನು ಗುರುತಿಸಿ ಅದನ್ನು ಸರಿಪಡಿಸಿಕೊಳ್ಳಬಹುದು.





ಸುಭಾಷಿತ
ನಿಮ್ಮ ಜೀವನವನ್ನು ನೀವೇ ವ್ಯಾಖ್ಯಾನಿಸಿಕೊಳ್ಳಿ.
–ಓಪ್ರಾ ವಿನ್‌ಫ್ರೇ

ಇಎಸ್‌ಐ ಆಸ್ಪತ್ರೆ: ನಿಸ್ಸೀಮ ನಿರ್ಲಕ್ಷ್ಯ ತುರ್ತಾಗಿ ಬೇಕಿದೆ ಕಾಯಕಲ್ಪ

ಬೆಂಗಳೂರಿನ ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯಲ್ಲಿ ಕೋವಿಡ್‌ನಿಂದ ಮೃತಪಟ್ಟ ಇಬ್ಬರ ಪಾರ್ಥಿವ ಶರೀರಗಳು 15 ತಿಂಗಳ ಕಾಲ ಶವಾಗಾರದಲ್ಲೇ ಉಳಿದು ಕೊಳೆತಿರುವುದು ನಾಗರಿಕ ಸಮಾಜವೇ ತಲೆ ತಗ್ಗಿಸುವಂತಹ ಅಮಾನವೀಯ ಘಟನೆ. ಈ ಆಸ್ಪತ್ರೆ ಎಷ್ಟೊಂದು ನಿರ್ಲಕ್ಷ್ಯದಿಂದ ಕೆಲಸ ಮಾಡುತ್ತಿದೆ ಎನ್ನುವುದಕ್ಕೂ ಇದು ದ್ಯೋತಕ. 2020ರ ಜುಲೈನಲ್ಲಿ ಕೋವಿಡ್ ಸೋಂಕಿನಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟ ದುರ್ಗಾ ಎಂಬ ಮಹಿಳೆ ಮತ್ತು ಮುನಿರಾಜು ಅವರ ಪಾರ್ಥಿವ ಶರೀರಗಳು ಯಾರ ಗಮನಕ್ಕೂ ಬಾರದೆ 15 ತಿಂಗಳು ಶವಾಗಾರದಲ್ಲೇ ಉಳಿದಿದ್ದವು. ಸಂಬಂಧಪಟ್ಟ ಅಧಿಕಾರಿಗಳು ಏನೇ ಸಬೂಬು ಹೇಳಿದರೂ ಇಂತಹ ಹೊಣೆಗೇಡಿತನ ಅಕ್ಷಮ್ಯ. 2020ರಲ್ಲಿ ಕೋವಿಡ್‌ನ ಮೊದಲ ಅಲೆಯ ಸಂದರ್ಭದಲ್ಲಿ ಸರ್ಕಾರ ಮತ್ತು ಮಹಾನಗರ ಪಾಲಿಕೆಯು ಶವ ಸಂಸ್ಕಾರಕ್ಕೆ ಕಠಿಣ ನಿಯಮಗಳನ್ನು ಪಾಲಿಸುತ್ತಿದ್ದವು. ಕೋವಿಡ್‌ನಿಂದ ಮೃತಪಟ್ಟವರ ದೇಹಗಳನ್ನು ಮೃತರ ವಾರಸುದಾರರಿಗೆ ಒಪ್ಪಿಸದೆ ಮಹಾನಗರ ಪಾಲಿಕೆಯಿಂದಲೇ ಅಂತ್ಯಸಂಸ್ಕಾರ ನಡೆಸಲಾಗುತ್ತಿತ್ತು. ಈ ಇಬ್ಬರೂ ಮೃತರ ಸಂಬಂಧಿಕರಿಗೆ ಇಎಸ್‌ಐ ಆಸ್ಪತ್ರೆಯ ಸಿಬ್ಬಂದಿಯು ಸಾವಿನ ಸುದ್ದಿಯನ್ನು ಮುಟ್ಟಿಸಿದ್ದಲ್ಲದೆ, ಅಂತ್ಯಸಂಸ್ಕಾರವನ್ನು ಪಾಲಿಕೆಯ ಸಿಬ್ಬಂದಿಯೇ ನಡೆಸಿದ್ದಾರೆ ಎಂದೂ ತಿಳಿಸಿದ್ದರು. ಮೃತರ ಸಂಬಂಧಿಕರ ಮನೆಯನ್ನು ಇದೇ ಸಂದರ್ಭದಲ್ಲಿ ಪಾಲಿಕೆಯವರು 'ಸೀಲ್' ಮಾಡಿದ್ದರಿಂದ ಸಂಬಂಧಿಕರು ಯಾರೂ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವಂತಿರಲಿಲ್ಲ. ಅಂತ್ಯಕ್ರಿಯೆಯೇ ನಡೆದಿಲ್ಲ ಎನ್ನುವುದು ತಿಳಿದಾಗ ಆ ಮನೆಯವರು ಎಷ್ಟು ಸಂಕಟ ಪಟ್ಟಿರಬಹುದು ಎನ್ನುವುದನ್ನು ಊಹಿಸುವುದೂ ಕಷ್ಟ. ಅಂತ್ಯಸಂಸ್ಕಾರ ನಡೆದಿದೆ ಎಂದು ನಂಬಿ ಆ ಬಳಿಕದ ಉತ್ತರಕ್ರಿಯೆಗಳನ್ನೂ ನೆರವೇರಿಸಿದ್ದ ಕುಟುಂಬದ ಸದಸ್ಯರು ಆಸ್ಪತ್ರೆಯ ನಿಸ್ಸೀಮ ನಿರ್ಲಕ್ಷ್ಯದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿರುವುದು ಸಹಜವಾಗಿಯೇ ಇದೆ. ಸರ್ಕಾರದ ವ್ಯವಸ್ಥೆಯ ಮೇಲೆ ನಂಬಿಕೆಯಿಟ್ಟ ಜನರಿಗೆ ಪಾಲಿಕೆ ಮತ್ತು ಆಸ್ಪತ್ರೆಯವರು ಈ ರೀತಿಯ ನಂಬಿಕೆದ್ರೋಹ ಎಸಗಿರುವುದನ್ನು ಕ್ಷಮಿಸುವುದಾದರೂ ಎಂತು? 'ಮೃತರ ಸಂಖ್ಯೆ ತೀವ್ರವಾಗಿ ಏರಿ ಶವಾಗಾರದಲ್ಲಿ ಸ್ಥಳಾಭಾವ ಉಂಟಾದ್ದರಿಂದ ಹೊಸ ಶವಾಗಾರ ಕಟ್ಟಿಸಲಾಗಿತ್ತು. ಈ ಶವಗಳು ಹಳೆಯ ಶವಾಗಾರದಲ್ಲಿ ಉಳಿದುಕೊಂಡದ್ದು ಯಾರ ಗಮನಕ್ಕೂ ಬಂದಿರಲಿಲ್ಲ' ಎಂದು ಇಎಸ್‌ಐ ನಿಗಮದ ಅಧಿಕಾರಿಗಳು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಹಳೆಯ ಶವಾಗಾರವನ್ನು ಶುದ್ಧೀಕರಣ ಮಾಡುತ್ತಿದ್ದ ಸ್ವಚ್ಛತಾ ಸಿಬ್ಬಂದಿಯ ಮೂಗಿಗೆ ದುರ್ವಾಸನೆ ಬಡಿದು, ತಪಾಸಣೆ ನಡೆಸಿದಾಗ ಈ ಶವಗಳು ಉಳಿದುಕೊಂಡಿದ್ದು ಗಮನಕ್ಕೆ ಬಂದಿದೆ. 'ಈ ಎರಡೂ ಶವಗಳನ್ನು ಮಹಾನಗರ ಪಾಲಿಕೆಯವರ ವಶಕ್ಕೆ ಒಪ್ಪಿಸಿದ ವಿವರಗಳು ದಾಖಲೆಯಲ್ಲಿ ನಮೂದಾಗಿದ್ದು ಬಹುಶಃ ಪಾಲಿಕೆಯವರು ಶವ ಸಾಗಿಸಲು ಮರೆತದ್ದರಿಂದ ಈ ಪ್ರಮಾದ ಸಂಭವಿಸಿರಬಹುದು' ಎಂದು ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿರುವುದೂ ವರದಿಯಾಗಿದೆ. ಘಟನೆಯ ಕುರಿತು ಸಮಗ್ರ ತನಿಖೆ ನಡೆಸುವುದಾಗಿ ಇಎಸ್‌ಐಸಿ ಪ್ರಾದೇಶಿಕ ನಿರ್ದೇಶಕರು ಭರವಸೆ ನೀಡಿದ್ದಾರೆ. ತನಿಖೆ ನಿಷ್ಪಕ್ಷಪಾತವಾಗಿ ನಡೆದು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಬೇಕು.



ಕಾರ್ಮಿಕ ಸಮುದಾಯಕ್ಕೆ ಆರೋಗ್ಯ ಸೇವೆ ನೀಡುವ ಇಎಸ್‌ಐ ಆಸ್ಪತ್ರೆಗಳಿಗೆ ಬಲ ತುಂಬಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜತೆಗೂಡಿ ಕೆಲಸ ಮಾಡಬೇಕಾಗಿದೆ

ಕಾರ್ಮಿಕರ ರಾಜ್ಯ ವಿಮಾ ನಿಗಮದ (ಇಎಸ್‌ಐಸಿ) ಅಧೀನದಲ್ಲಿ ದೇಶದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಈ ಆಸ್ಪತ್ರೆಗಳನ್ನು ಸುಸಜ್ಜಿತಗೊಳಿಸಲು ಈ ಹಿಂದಿನ ಯುಪಿಎ ಸರ್ಕಾರದ ಅವಧಿಯಲ್ಲಿ ಪ್ರಯತ್ನಗಳಾಗಿದ್ದವು. ಅದರಲ್ಲೂ ರಾಜ್ಯದವರೇ ಆದ ಮಲ್ಲಿಕಾರ್ಜುನ ಖರ್ಗೆ ಅವರು ಕಾರ್ಮಿಕ ಮತ್ತು ಉದ್ಯೋಗ ಖಾತೆಯ ಸಚಿವರಾಗಿದ್ದಾಗ ಕರ್ನಾಟಕದ ಬೆಂಗಳೂರು ಮತ್ತು ಕಲಬುರಗಿಯಲ್ಲಿ ಇಎಸ್‌ಐ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಿ ಹಲವು ಸೌಲಭ್ಯಗಳನ್ನು ಒದಗಿಸಲಾಗಿತ್ತು. ಆದರೆ ಎನ್‌ಡಿಎ ನೇತೃತ್ವದ ಈಗಿನ ಸರ್ಕಾರದಲ್ಲಿ ಇಎಸ್‌ಐ ಆಸ್ಪತ್ರೆಗಳಿಗೆ ಅನುದಾನದ ಕೊರತೆ ಕಾಡುತ್ತಿದೆ. ಬೆಂಗಳೂರಿನಲ್ಲಿ ಈಗ ಇಎಸ್‌ಐ ಆಸ್ಪತ್ರೆಗೆ ಬರುವ ಕಾರ್ಮಿಕರಿಗೆ ರೋಗ ಬಾಧೆಗಿಂತ ಸುತ್ತಾಟದ ಸುಸ್ತೇ ಜಾಸ್ತಿಯಾಗಿದೆ. ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆಯುವ ದುಃಸ್ಥಿತಿ ಎದುರಾಗಿದೆ. ಚಿಕಿತ್ಸೆಯಲ್ಲಿ ವಿಳಂಬ ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ ತೆರಳಲು ಬೇಕಾದ ಅನುಮತಿ ಪತ್ರ ನೀಡಲೂ ಸತಾಯಿಸುತ್ತಿರುವುದರಿಂದ ಕಾರ್ಮಿಕರು ಹೈರಾಣಾಗಿದ್ದಾರೆ ಎಂದು ವರದಿಯಾಗಿದೆ. ಇಎಸ್‌ಐ ಆಸ್ಪತ್ರೆಗಳಿಗೆ ತುರ್ತಾಗಿ ಕಾಯಕಲ್ಪ ಬೇಕಿರುವುದನ್ನು ಮೇಲಿನ ಘಟನೆಗಳು ಒತ್ತಿ ಹೇಳುತ್ತವೆ. ಈ ಆಸ್ಪತ್ರೆಗಳ ಸ್ಥಾಪನೆ ಮತ್ತು ನಿಯಂತ್ರಣವು ಇಎಸ್‌ಐ ನಿಗಮದ ಆಧೀನದಲ್ಲಿದ್ದರೂ ವೈದ್ಯರು ಮತ್ತು ಸಿಬ್ಬಂದಿಯ ನೇಮಕಕ್ಕೆ ರಾಜ್ಯ ಸರ್ಕಾರದ ನೆರವನ್ನು ಕೋರಲಾಗುತ್ತಿದೆ. ರಾಜ್ಯ ಸರ್ಕಾರವೇ ತನ್ನ ಆಸ್ಪತ್ರೆಗಳಿಗೆ ಬೇಕಾದಷ್ಟು ವೈದ್ಯರು ಮತ್ತು ಸಿಬ್ಬಂದಿಯನ್ನು ಹೊಂದಿಸಿಕೊಳ್ಳಲಾಗದೆ ಹೆಣಗಾಡುತ್ತಿದ್ದು, ಇಎಸ್‌ಐಗೆ ವೈದ್ಯರ ಎರವಲು ಸೇವೆಯನ್ನು ಸಕಾಲಕ್ಕೆ ಒದಗಿಸಲು ಸಾಧ್ಯವಾಗುತ್ತಿಲ್ಲ. ನಿಗಮ ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ಕಾರ್ಯನಿರ್ವಹಣೆಯಲ್ಲಿ ಹೊಂದಾಣಿಕೆ ಇಲ್ಲದೇ ಇರುವುದರಿಂದ ಔಷಧ ಪೂರೈಕೆಯೂ ಸಮರ್ಪಕವಾಗಿ ಆಗುತ್ತಿಲ್ಲ. ಅದರ ದುಷ್ಪರಿಣಾಮ ಆಸ್ಪತ್ರೆಯ ರೋಗಿಗಳ ಮೇಲೆ ಆಗುತ್ತಿದೆ. ಕೋವಿಡ್ ಸಂಕಷ್ಟ ಇನ್ನೂ ಪೂರ್ಣ ಪ್ರಮಾಣದಲ್ಲಿ ಪರಿಹಾರವಾಗಿಲ್ಲ. ದೊಡ್ಡ ಪ್ರಮಾಣದಲ್ಲಿರುವ ಕಾರ್ಮಿಕ ಸಮುದಾಯಕ್ಕೆ ಆರೋಗ್ಯ ಸೇವೆ ನೀಡುವ ಈ ಆಸ್ಪತ್ರೆಗಳಿಗೆ ಬಲ ತುಂಬಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಜತೆಗೂಡಿ ಕೆಲಸ ಮಾಡಬೇಕಿರುವುದು ಇಂದಿನ ತುರ್ತಾಗಿದೆ.

ದಿನದ ಟ್ವೀಟ್

ನಿಲ್ಲಿಸುವುದು ತರವೇ?



ಶಾಲೆಯಲ್ಲಿ ಮೊಟ್ಟೆ ತಿನ್ನಲು ಬಯಸುವ ಮಕ್ಕಳಿಗೆ ಮೊಟ್ಟೆ ಕೊಡುವ ಏರ್ಪಾಡು ಮಾಡಿ. ತಿನ್ನದ ಮಕ್ಕಳಿಗೆ ಕಾಳು- ತರಕಾರಿಯಲ್ಲಿ ಅದೇ ಕಸುವು ಸಿಗುವಂತಹ ಆಹಾರ ಕೊಡಿ. ಮಕ್ಕಳ ಅಪೌಷ್ಟಿಕತೆಯ ಪರಿಹಾರಕ್ಕೆ ಮೊಟ್ಟೆ ಸಹಾಯ ಮಾಡುತ್ತೆ ಅಂತ ಗೊತ್ತಿದ್ದೂ, ಯಾರೋ ಕೆಲವರು ವಿರೋಧಿಸಿದ ತಕ್ಷಣ ಅದನ್ನು ನಿಲ್ಲಿಸಲು ಹೋಗಬೇಡಿ ಮಾನ್ಯ ಮುಖ್ಯಮಂತ್ರಿಗಳೇ.

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ



ಪ್ರಶ್ನೆ ಕೇಳಿದ್ದಕ್ಕೆ, ಚರ್ಚೆಗೆ ಸಮಯ ಕೊಡಿ ಅಂದದ್ದಕ್ಕೆ ನಾವು ಸರ್ಕಾರದ ಕ್ಷಮೆ ಕೇಳಬೇಕು ಎಂದು ನೀವು ಭಾವಿಸುವಿರಾ? ತನ್ನ ನಿರಂಕುಶ ಧೋರಣೆಗಾಗಿ ಈ ಸರ್ಕಾರವೇ ಕ್ಷಮೆ ಯಾಚಿಸಬೇಕು. ನಾವು ಬಿಕ್ಕಟ್ಟಿನ ಹಂತಕ್ಕೆ ತಲುಪಿದ್ದೇವೆ. ದೇಶದಲ್ಲಿ ಪ್ರಜಾಪ್ರಭುತ್ವದ ಕಾರ್ಯನಿರ್ವಹಣೆಗೆ ಅಡ್ಡಿಯಾಗಿರುವುದು ಸರ್ಕಾರವೇ ಆಗಿರುವುದರಿಂದ ಸರ್ಕಾರವೇ ಜನರ ಕ್ಷಮೆ ಕೇಳಬೇಕು.

ಸಯ್ಯದ್ ನಾಸಿರ್ ಹುಸೇನ್
ರಾಜ್ಯಸಭೆಯಿಂದ ಅಮಾನತಾಗಿರುವ ಕಾಂಗ್ರೆಸ್ ಸಂಸದ

25 ವರ್ಷಗಳ ಹಿಂದೆ
ಸೋಮವಾರ, 2-12-1996

• ದಳ ವೈಫಲ್ಯ: ಬಿಜೆಪಿ ಚಳವಳಿ ಬೆದರಿಕೆ

ಬೆಂಗಳೂರು, ಡಿ. 1– ಜೆ.ಎಚ್.ಪಟೇಲ್ ನೇತೃತ್ವದ ಜನತಾದಳ ಸರ್ಕಾರದ ವೈಫಲ್ಯಗಳ ವಿರುದ್ಧ ರಾಜ್ಯದಾದ್ಯಂತ ಚಳವಳಿ ನಡೆಸುವುದಾಗಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಬಿ.ಎಸ್.ಯಡಿಯೂರಪ್ಪ ಅವರು ಇಂದು ಇಲ್ಲಿ ಎಚ್ಚರಿಕೆ ನೀಡಿದರು.

ಪಕ್ಷದ ಬೇಡಿಕೆಗಳನ್ನು ಪುನರುಚ್ಚರಿಸಿದ ಅವರು, 'ಹದಿನೈದು ದಿನಗಳ ಒಳಗಾಗಿ ತಮ್ಮ ಬೇಡಿಕೆಗಳನ್ನು ಪರಿಗಣಿಸದೇ ಇದ್ದರೆ ಚಳವಳಿ ನಿಶ್ಚಿತ' ಎಂದು ನುಡಿದರು.

ರಾಜ್ಯ ಘಟಕದ ಕಾರ್ಯಕಾರಿ ಸಮಿತಿ ಸಭೆಯನ್ನು ಉದ್ಘಾಟಿಸಿದ ಅವರು, 'ಮೊದಲಿಗೆ ಕಾಂಗ್ರೆಸ್‌ನಿಂದ ನಂತರ ಜನತಾದಳ ಸರ್ಕಾರದ ಆಡಳಿತದಿಂದ ಜನ ಹತಾಶರಾಗಿದ್ದಾರೆ. ಈಗ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಜನ ಬಿಜೆಪಿ ಕಡೆಗೆ ನೋಡುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎರಡೂ ದಿನಗಳನ್ನು ಎಣಿಸುತ್ತಿವೆ. ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅಸಮರ್ಥ ಎನಿಸಿಕೊಂಡಿರುವ ಪಟೇಲ್ ನೇತೃತ್ವದ ಸರ್ಕಾರ ಜನರ ನಗೆಪಾಟಲಿಗೆ ಗುರಿಯಾಗಿದೆ' ಎಂದು ಹೇಳಿದರು.

50 ವರ್ಷಗಳ ಹಿಂದೆ
ಗುರುವಾರ, 2-12-1971

• ದೆಹಲಿಯಲ್ಲಿ ಕೇಂದ್ರ ಸಚಿವರ ಆಸ್ತಿ– ಪಾಸ್ತಿ

ನವದೆಹಲಿ, ಡಿ. 1– ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಇಂದು ಲೋಕಸಭೆಯಲ್ಲಿ ತಮ್ಮ ಸಂಪುಟದ ಸಚಿವರುಗಳು ದೆಹಲಿಯಲ್ಲಿ ಹೊಂದಿರುವ ಆಸ್ತಿಪಾಸ್ತಿಯ ವಿವರ ನೀಡಿದರು.

ರಾವ್ ಬೀರೇಂದ್ರಸಿಂಗ್ ಅವರ ಪ್ರಶ್ನೆಗೆ ಪ್ರಧಾನಿಯವರು ಲಿಖಿತ ಉತ್ತರದಲ್ಲಿ ತಿಳಿಸಿರುವ ಆಸ್ತಿಪಾಸ್ತಿ ವಿವರ ಹೀಗಿದೆ: ಪ್ರಧಾನಮಂತ್ರಿ ಇಂದಿರಾ ಗಾಂಧಿ, 72,675 ರೂ. ಬೆಲೆ ಬಾಳುವ ಕೃಷಿ ಯೋಗ್ಯ ಭೂಮಿ, ಕೃಷಿ ಸಚಿವ ಫಕ್ರುದ್ದಿನ್ ಆಲೀ ಅಹ್ಮದ್ ಮತ್ತು ಅವರ ಪತ್ನಿಯವರ ಸಂಯುಕ್ತ ಒಡೆತನದಲ್ಲಿ 2,75,000 ರೂ. ಬೆಲೆ ಬಾಳುವ ಕಟ್ಟಡ, ಸಂಸದೀಯ ವ್ಯವಹಾರಗಳ ಸಚಿವ ರಾಜ ಬಹದ್ದೂರ್ ಮತ್ತು ಅವರ ಪತ್ನಿಯ ಸಂಯುಕ್ತ ಒಡೆತನದಲ್ಲಿ 1,91,444 ರೂ. ಬೆಲೆ ಬಾಳುವ ಮನೆ, ನಾಗರಿಕ ವಿಮಾನಯಾನ ಶಾಖೆ ಸಚಿವ ಕರಣ್‌ಸಿಂಗ್: 4,99,507 ರೂಪಾಯಿ ಬೆಲೆ ಬಾಳುವ ಮನೆ, ಕರಣ್‌ಸಿಂಗ್ ಅವರ ಪುತ್ರ 1,88,791 ರೂ. ಬೆಲೆ ಬಾಳುವ ಮನೆ ಹೊಂದಿದ್ದಾರೆ.

ಮರಳು ಗಣಿಗಾರಿಕೆ: ಪರಿಸರದ ಮೇಲೆ ಆಗಿರುವ ಪರಿಣಾಮಗಳ ಬಗ್ಗೆ ಅಧ್ಯಯನ ಆಗಲಿ

ಎಂಥ 'ಮರಳಯ್ಯ' ಇದು!



ವಿಶ್ಲೇಷಣೆ
ಟಿ.ಆರ್.ಅನಂತರಾಮು

ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಸಂಭ್ರಮದ ಮಾಸದಲ್ಲೇ ಮಹತ್ತರ ತೀರ್ಮಾನವೊಂದನ್ನು ಪ್ರಕಟಿಸಿದೆ. ಮರಳು ಗಣಿಗಾರಿಕೆ ನೀತಿಯಲ್ಲಿ ಮತ್ತೆ ಭಾರಿ ಬದಲಾವಣೆ ತಂದಿದೆ. ಲೋಕೋಪಯೋಗಿ ಇಲಾಖೆಯ ಕೈಲಿದ್ದ ಮರಳು ಗಣಿಗಾರಿಕೆಯ ನಿಯಂತ್ರಣ ಮತ್ತು ನಿರ್ವಹಣೆಯ ಅಧಿಕಾರವನ್ನು ಹಿಂಪಡೆದು 2016ರಲ್ಲೇ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ನೀಡಿತ್ತು. ರಾಜ್ಯದಲ್ಲಿ ಮರಳು ಗಣಿಗಾರಿಕೆಗಾಗಿ ಈಗ 183 ಬ್ಲಾಕುಗಳನ್ನು ಗುರುತಿಸಿದೆ. ಪಂಚಾಯಿತಿ ಮಟ್ಟದಲ್ಲಿ ಟನ್ನಿಗೆ ₹300, ನಗರದಲ್ಲಿ ಮಾರಲು ಟನ್ನಿಗೆ ₹700 ದರವನ್ನು ನಿಗದಿಪಡಿಸಿದೆ. ಜೊತೆಗೆ ರಾಯಧನದ ಶೇ 25ರಷ್ಟು ಭಾಗವನ್ನು ಆಯಾ ಪಂಚಾಯಿತಿಗೆ ಸಂಪದಭಿವೃದ್ಧಿಗಾಗಿ ನೀಡುವ ನಿರ್ಣಯವನ್ನೂ ಪ್ರಕಟಿಸಿದೆ.

ರಾಜ್ಯದಲ್ಲಿ ಅಕ್ರಮ ಮರಳು ಗಣಿಗಾರಿಕೆ ಪರಾಕಾಷ್ಠೆಯನ್ನು ಮುಟ್ಟಿತ್ತು. ಕಳೆದ ವರ್ಷದಲ್ಲೇ ಇಂಥ 3,451 ಪ್ರಕರಣಗಳನ್ನು ಪತ್ತೆಹಚ್ಚಲಾಗಿತ್ತು. ಮರಳಿಗೆ ಬೇಡಿಕೆ ಎಷ್ಟಿದೆಯೆಂದರೆ ಜನಸಾಮಾನ್ಯರಿಗೆ ನೇರವಾಗಿ ಚಿನ್ನ, ಮ್ಯಾಂಗನೀಸ್, ಕ್ರೋಮಿಯಮ್ ಬೇಕಾಗದು. ಇವೆಲ್ಲಕ್ಕಿಂತ ಮುಖ್ಯ ಕಟ್ಟಡ ನಿರ್ಮಾಣ, ಮರಳಿಲ್ಲದೆ ಅದು ಹೇಗೆ ತಾನೇ ಸಾಧ್ಯ?

ರಾಷ್ಟ್ರ ಮಟ್ಟದಲ್ಲಿ ವಾರ್ಷಿಕ 70 ಕೋಟಿ ಟನ್ನು ಮರಳಿಗೆ ಬೇಡಿಕೆ ಇದೆಯೆಂದು ಕೇಂದ್ರ ಪರಿಸರ ಇಲಾಖೆಯೇ ಅಂಕಿ ಅಂಶವನ್ನು ಮುಂದಿಟ್ಟಿದೆ. ಎಲ್ಲ ರಾಜ್ಯಗಳಲ್ಲೂ ಮರಳಿನ ಪೂರೈಕೆಯ ಸಮಸ್ಯೆ ದೊಡ್ಡ ಮಟ್ಟದಲ್ಲೇ ಇದೆ. ಕರ್ನಾಟಕದಲ್ಲಿ ವಾರ್ಷಿಕ 4.5 ಕೋಟಿ ಟನ್ನು ಮರಳಿಗೆ ಬೇಡಿಕೆ ಇದೆ. ಆಘಾತಕಾರಿ ಅಂಶವೆಂದರೆ, ಇದರಲ್ಲಿ ಮೂರು ಕೋಟಿ ಟನ್ನು ಮರಳು ಬರುತ್ತಿರುವುದು ನದಿಗಳ ಮೂಲದಿಂದಲ್ಲ, ಬದಲು ಎಂ- ಸ್ಯಾಂಡ್ ಎಂದು ಕರೆಯುವ, ಕಲ್ಲುಗಣಿಗಳಿಂದ ಪುಡಿ ಮಾಡಿ ತೆಗೆದ ಮರಳು. ಸಿವಿಲ್ ಎಂಜಿನಿಯರ್‌ಗಳು, 'ಸಿಮೆಂಟಿನಲ್ಲಿ ನದಿ ಮರಳಿಗಿಂತ ಎಂ– ಸ್ಯಾಂಡ್ ಹೆಚ್ಚು ಬಂಧಕ ಗುಣವುಳ್ಳದ್ದು' ಎಂದು ದೃಢೀಕರಿಸಿದ ಮೇಲೆ ಕಲ್ಲು ಗಣಿಗಳ ಚಟುವಟಿಕೆ ಜೊತೆಗೆ ಅಕ್ರಮ ಗಣಿಗಾರಿಕೆ ಎಗ್ಗಿಲ್ಲದೆ ಸಾಗಿತು. ಸರ್ಕಾರ ತಂದಿರುವ ಈಗಿನ ತಿದ್ದುಪಡಿಯು ಅಕ್ರಮ ಮರಳು ಗಣಿಗಾರಿಕೆಗೆ ಲಗಾಮು ಹಾಕುತ್ತದೆ ಎಂದು ವ್ಯಾಖ್ಯಾನ ಮಾಡಲಾಗುತ್ತಿದೆ. ಆದರೆ ಇಲ್ಲಿ ಬೇರೆಯದೇ ಆದ ಸಮಸ್ಯೆ ಮುನ್ನೆಲೆಗೆ ಬರುತ್ತದೆ.

ಮರಳು ಗಣಿಗಾರಿಕೆಯನ್ನು ನಿಯಂತ್ರಿಸುವ ದೊಡ್ಡ ಪಡೆಯನ್ನೇ ಸರ್ಕಾರ ಸೃಷ್ಟಿಸಿದೆ. ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯಿತಿ ಸಿಇಒ, ಪೊಲೀಸ್ ಸೂಪರಿಂಟೆಂಡೆಂಟ್, ಜಲಸಂಪನ್ಮೂಲ ಅಧಿಕಾರಿಗಳು, ಲೋಕೋಪಯೋಗಿ, ಅರಣ್ಯ ಇಲಾಖೆ ಅಧಿಕಾರಿಗಳು ಮುಂತಾಗಿ ಹನ್ನೊಂದು ಮಂದಿ ಸದಸ್ಯರ ತಂಡ ಇರುತ್ತದೆ. ಅಕ್ರಮ ಗಣಿಗಾರಿಕೆ ನಡೆದರೆ ಅಂಥವರ ಮೇಲೆ ಕಣ್ಗಾವಲು ಇಡಬೇಕಾದ ಹೊಣೆಯೂ ಈ ತಂಡಕ್ಕಿದೆ. ಪ್ರತೀ ಎರಡು ತಿಂಗಳಿಗೊಮ್ಮೆ ಸಭೆ ಕೂಡಬೇಕು. ಈ ತಂಡಕ್ಕೆ ಮರಳು ಗಣಿಗಾರಿಕೆಯಿಂದ ಪರಿಸರಕ್ಕಾಗುವ ಧಕ್ಕೆ ಕುರಿತು ಮೌಲ್ಯಮಾಪನ ಮಾಡಲು ತಜ್ಞರನ್ನು ನೇಮಿಸುವ ಅಧಿಕಾರವನ್ನೂ ಕೊಡಲಾಗಿದೆ. ಇಲ್ಲೇ ಗೊಂದಲವಿರುವುದು. ಪರಿಸರಕ್ಕೆ ಧಕ್ಕೆಯಾಗುವವರೆಗೂ ಕಾದು ಆನಂತರ ವರದಿ ಕೊಡಬೇಕೆ? ಈಗಾಗಲೇ ಮರಳು ಮಾಫಿಯಾ ಮಾಡಿರುವ ದಂಧೆ, ಅಧ್ವಾನವನ್ನು ಸರಿಪಡಿಸಲು ದಶಕಗಳೇ ಬೇಕು. ಸಕಾಲಿಕ, ಅಕಾಲಿಕ ಮಳೆಯನ್ನು ಒಯ್ಯಲಾರದೆ ನದಿಗಳು ಹೊರಳುತ್ತಿವೆ. ಪದೇಪದೇ ನೆರೆ ಏಳುತ್ತಿದೆ. ನದಿಪಾತ್ರದಲ್ಲಿನ ಮರಳು ಸ್ಪಂಜಿನಂತೆ ನೀರು ಹಿಡಿದಿಡುವ ತನ್ನ ಸಹಜ ಗುಣವನ್ನು ಬಿಟ್ಟುಕೊಡುತ್ತಿದೆ.

ಮರಳಿನ ಅತಿಯಾದ ಗಣಿಗಾರಿಕೆಯಿಂದ ಆಸುಪಾಸಿನ ಅಂತರ್ಜಲ ಭಂಡಾರಕ್ಕೆ ಧಕ್ಕೆಯಾಗುತ್ತಿರುವುದು ಹೊಸ ಪ್ರಸಂಗವೇನಲ್ಲ. ಇದರ ನಿಜವಾದ ಮೌಲ್ಯಮಾಪನ ಈ ಹೊತ್ತಿಗೆ ಆಗಬೇಕಿತ್ತು. ನದಿ ಹೊರಳಿದರೆ ಎಷ್ಟು ಭಾಗ ಕೊಚ್ಚಿ ಹೋಗುತ್ತದೆ ಎಂಬುದನ್ನು ನಿಯೋಜಿತ ತಂಡದ ಯಾವ ಸದಸ್ಯರೂ ಅಳೆಯಲಾರರು; ನೀರಾವರಿ ತಜ್ಞರೇ ಆ ಕೆಲಸ ಮಾಡಬೇಕು. ಅಂತರ್ಜಲ ಭಂಡಾರ ಎಷ್ಟು ಕೆಳಗಿಳಿದಿದೆ ಎಂಬುದನ್ನು ಸಣ್ಣ ನೀರಾವರಿ ಇಲಾಖೆಯಡಿ ಇರುವ ಅಂತರ್ಜಲ ಪ್ರಾಧಿಕಾರವೇ ಅಧ್ಯಯನ ಮಾಡಬೇಕು. ಇಂಥ ವರದಿಗಳನ್ನು ಆಧರಿಸಿದ ನಂತರವಷ್ಟೇ ಬ್ಲಾಕುಗಳನ್ನು ಆಧರಿಸಿ, ಎಲ್ಲಿ ಪರಿಸರಕ್ಕೆ ಧಕ್ಕೆಯಾಗುವುದಿಲ್ಲವೋ ಅಂಥ ಬ್ಲಾಕುಗಳಲ್ಲಿ ಮಾತ್ರ ಮರಳು ಗಣಿಗಾರಿಕೆಗೆ ಅವಕಾಶ ಕಲ್ಪಿಸಿದ್ದರೆ ಅದೊಂದು ವೈಜ್ಞಾನಿಕ ವಿಧಾನ ಎನ್ನಿಸಿಕೊಳ್ಳುತ್ತಿತ್ತು. ಅಘನಾಶಿನಿ, ತುಂಗಾ ಮುಂತಾದ ನದಿಗಳಲ್ಲಿ ಜೀವವೈವಿಧ್ಯವು ಮರಳು ಗಣಿಗಾರಿಕೆಯಿಂದಾಗಿ ಎಷ್ಟು ನರಳುತ್ತಿದೆ ಎಂಬುದರ ನಿಜಸ್ಥಿತಿ ತಿಳಿಯಬೇಕಾದರೆ ರಾಜ್ಯದ ಜೈವಿಕ ವೈವಿಧ್ಯ ಮಂಡಳಿಯ ವರದಿಯನ್ನೇ ಆಧರಿಸಬೇಕು. ಅಂಥ ಅಧ್ಯಯನಗಳು ಆಗಿವೆಯೇ ಎಂಬುದೇ ಅನುಮಾನ.

ತೀರ್ಥಹಳ್ಳಿಯ ಬಳಿ ತುಂಗಾ ನದಿಯಲ್ಲಿ ಮತ್ಸ್ಯೋದ್ಯಾನವೇ ಇದೆ. ಸ್ವತಃ ಮೀನುಗಾರಿಕೆ ಇಲಾಖೆಯೇ ಅಲ್ಲಿ ಮರಳು ಗಣಿಗಾರಿಕೆ ನಿಲ್ಲಿಸಿ ಎಂದು ಸರ್ಕಾರಕ್ಕೆ ಮೊರೆಹೋದದ್ದುಂಟು. ಪರಿಸರ ನಾಶ ಕುರಿತು ಸರ್ಕಾರಿ ಅಧಿಕಾರಿಗಳು ಹೀಗೆ ವಾಸ್ತವಾಂಶಗಳನ್ನು ಸರ್ಕಾರದ ಮುಂದಿಡುವ ಧೈರ್ಯ ತೋರಿಸುವರೇ? ಸರ್ಕಾರ ಒಪ್ಪುತ್ತದೆಯೇ?

ಇಡೀ ಕರ್ನಾಟಕವು ಕಟ್ಟಡ ನಿರ್ಮಾಣಕ್ಕೆ ಶೇ 70 ಭಾಗಕ್ಕಿಂತ ಹೆಚ್ಚು ಉತ್ಪಾದಿತ ಮರಳನ್ನೇ ಅವಲಂಬಿಸಿದೆ; ನದಿ ಮರಳನ್ನಲ್ಲ ಎಂಬ ಸತ್ಯವನ್ನು ಜೀರ್ಣಿಸಿಕೊಳ್ಳುವುದೇ ಕಷ್ಟ. 2019ರಲ್ಲಿ ರಾಜ್ಯದ ಮರಳಿನ ಬೇಡಿಕೆಯನ್ನು ಭಾಗಶಃ ಪೂರೈಸಲು ಮಲೇಷ್ಯಾದಿಂದ 8,000 ಟನ್ನು ಮರಳನ್ನು ಆಮದು ಮಾಡಿಕೊಳ್ಳುವ ಪರಿಸ್ಥಿತಿ ಉಂಟಾಗಿತ್ತು. ಮರಳಿಗೆ ಬೇಡಿಕೆ ಹೆಚ್ಚಿದಷ್ಟೂ ಅಕ್ರಮ ಕಲ್ಲು ಗಣಿಗಾರಿಕೆಯೂ ಹೆಚ್ಚುತ್ತದೆ ಎಂದು ಊಹಿಸುವುದು ಕಷ್ಟವೇನಲ್ಲ. ಇದರ ಜೊತೆ ಇನ್ನೊಂದು ಅಂಶವೂ ತಗಲಿ ಹಾಕಿಕೊಂಡಿದೆ. ಲೋಹ ಗಣಿಗಳ ಕಾರ್ಮಿಕರಂತೆ ಮರಳು ಗಣಿಗಾರಿಕೆಯಲ್ಲಿ ವಿಶೇಷವಾಗಿ ಕಲ್ಲು ಗಣಿಗಳಲ್ಲಿ ಕಾರ್ಮಿಕರು ಸಿಲಿಕೋಸಿಸ್ ಎಂಬ ರೋಗಕ್ಕೆ ಬಲಿಯಾಗುತ್ತಾರೆ. ಶ್ವಾಸಕೋಶದಲ್ಲಿ ಸಿಲಿಕಾ ದೂಳು ಸೇರಿ ಕ್ಷಯಕ್ಕೆ ಅದು ಎಡೆಗೊಡುತ್ತದೆ. ಇಂಥವರ ಬಗ್ಗೆ ಲೆಕ್ಕವೇ ಸಿಕ್ಕುತ್ತಿಲ್ಲ. ಗಣಿ ಮಾಲೀಕರಿಗೆ ಇದು ಆದ್ಯತೆ ಅಲ್ಲ. ನಮ್ಮ ಆರೋಗ್ಯ ಇಲಾಖೆಯಲ್ಲಿ ಇಂಥ ಸಂಶೋಧನೆಗೆ ಒಂದು ಅಂಗವಿದೆಯೇ? ಇನ್ನು ಶಬ್ದಮಾಲಿನ್ಯಕ್ಕಂತೂ ಕಲ್ಲುಗಣಿಯ ಕಾರ್ಮಿಕರಷ್ಟೇ ಅಲ್ಲ, ಆಸುಪಾಸಿನಲ್ಲಿ ವಾಸವಿರುವ ಜನರೂ ಹೊಂದಿಕೊಂಡುಬಿಟ್ಟಿದ್ದಾರೆ. ಆದ್ದರಿಂದ ಅದನ್ನು ಕುರಿತು ದೂರುಗಳು ಬರುವುದೇ ಇಲ್ಲ. ಮಾಲಿನ್ಯ ನಿಯಂತ್ರಣ ಮಂಡಳಿಗೆ ಅಷ್ಟರಮಟ್ಟಿಗೆ ಕೆಲಸ ಕಡಿಮೆಯಾಯಿತು.

ಸದ್ಯದಲ್ಲಿ ರಾಜ್ಯದ ಹದಿನೆಂಟು ಜಿಲ್ಲೆಗಳಲ್ಲಿ ಎಂ-ಮರಳಿನ ಉತ್ಪಾದನೆ ನಡೆದಿದೆ. ಇಲ್ಲೆಲ್ಲ, ವಿಶೇಷವಾಗಿ ಗ್ರಾನೈಟ್ ಬೆಟ್ಟಗಳು ಮೈಸುಲಿಸಿಕೊಂಡು ಬಿಳುಚಿಕೊಂಡಿರುವುದು ಎದ್ದು ಕಾಣುತ್ತದೆ. ಡ್ರೋನ್ ಕಣ್ಗಾವಲಿನಲ್ಲಿ, ಇಂಥ ಗಣಿಗಾರಿಕಾ ಪ್ರದೇಶದಲ್ಲಿ ಅಕ್ರಮವೆಸಗದಂತೆ ನೋಡಿಕೊಳ್ಳಲು ಸರ್ಕಾರ 25 ಕೋಟಿ ರೂಪಾಯಿ ವಿನಿಯೋಗಿಸುತ್ತಿದೆ. ಆದರೆ ಈಗಾಗಲೇ ಆಗಿರುವ ನೆಲಮಾಲಿನ್ಯದ ಬಗ್ಗೆ ಕ್ರಮವೇನು? ಎಷ್ಟು ಮಂದಿ ಗುತ್ತಿಗೆದಾರರಿಗೆ ದಂಡ ವಿಧಿಸಲಾಗಿದೆ ಅಥವಾ ಶಿಕ್ಷೆಯಾಗಿದೆ?

ಮರಳನ್ನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರವು ಉಪಖನಿಜ ಎಂಬ ವಿಭಾಗಕ್ಕೆ ಸೇರಿಸಿವೆ- ಅಂದರೆ ಚಿನ್ನ, ಬೆಳ್ಳಿ, ನಿಕ್ಕಲ್, ತಾಮ್ರದಂತೆ ದೊಡ್ಡ ಮಾರುಕಟ್ಟೆ ಸೃಷ್ಟಿಸುವ ದೊಡ್ಡ ಬಾಬತ್ತು ಇದಲ್ಲ ಎಂದು ಭಾವಿಸಿವೆ. ಆದರೆ ಈಗಿನ ಪರಿಸ್ಥಿತಿಯಲ್ಲಿ ಈ ಉಪಖನಿಜವೇ ನಿತ್ಯ ಬಳಕೆಗೆ ಬರುವ ಮಹಾ ಸಂಪತ್ತಾಗಿ ಇಡೀ ನಿರ್ಮಾಣ ಕ್ಷೇತ್ರವನ್ನೇ ಆಳುತ್ತಿದೆ. ಇವೆಲ್ಲ ಚಟುವಟಿಕೆಗಳ ನಡುವೆ ಪರಿಸರ ಉಳಿಯುವುದು ಹೇಗೆ? ಆಡಳಿತಾಧಿಕಾರಿಗಳು ಅಕ್ರಮ ಮರಳು ಗಣಿಗಾರಿಕೆಯ ಬಗ್ಗೆ ಕಣ್ಗಾವಲಿಡಲಿ, ಅಪರಾಧಿಗಳಿಗೆ ದಂಡ ವಿಧಿಸಲಿ, ಶಿಕ್ಷೆಗೆ ಗುರಿ ಮಾಡಲಿ. ಆದರೆ ಮರಳು ಗಣಿಗಾರಿಕೆಯು ಪರಿಸರದ ಮೇಲೆ ಬೀರುವ ದುಷ್ಪರಿಣಾಮದ ಮೌಲ್ಯಮಾಪನ ಮಾಡಲು ಆಯಾ ಕ್ಷೇತ್ರದ ತಜ್ಞರೇ ಬೇಕು. ಊರು ಕೊಳ್ಳೆಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರೆ ಪ್ರಯೋಜನವೇನು?



ಚುರುಮುರಿ



ಪರಾಗ್‌ನ ಸಂಬಳ

• ಆನಂದ

'ರೀ, ನಿಮಗೆ ಎಷ್ಟು ಸಂಬಳ ಬರ್ತಿತ್ತು?' ಎಂದು ಹೆಂಡತಿ ಕೇಳಿದಾಗ ನಾನು 'ಸೇರಿಕೊಂಡಾಗ 175 ರೂಪಾಯಿ, ನಿವೃತ್ತಿ ಆದಾಗ 28,000 ರೂಪಾಯಿ' ಎಂದು ನಿಜವನ್ನೇ ಘೋಷಿಸಿದೆ.

'ನಿಮ್ಮ 40 ವರ್ಷ ಸರ್ವೀಸ್‌ನಲ್ಲಿ ಎಷ್ಟು ಸಂಪಾದಿಸಿರಬಹುದು?'

'ಬಂದಿದ್ದೆಲ್ಲ ಖರ್ಚಾಗುತ್ತಿತ್ತು. ನಿವೃತ್ತಿ ಆದಾಗ ಪಿಎಫ್ ಹಣ 15 ಲಕ್ಷ ಬಂತು. ಅದನ್ನೇ ಪೋಸ್ಟ್ ಆಫೀಸಿನಲ್ಲಿ ಈಗ ಇಟ್ಟಿರೋದು' ಎಂದು ಕ್ಲಿಯರ್ ಮಾಡಿದೆ.

'ಮೇಲು ಸಂಪಾದನೆ?'

'ಮೇಲೂ ಇಲ್ಲ, ಕೆಳಗೂ ಇಲ್ಲ. ಒಂದನೇ ತಾರೀಖು ಬ್ಯಾಂಕ್‌ಗೆ ಜಮಾ ಆಗ್ತಿದ್ದಷ್ಟೇ ಕಮಾಯಿ. ವೆರಿ ಕ್ಲೀನ್ ರೆಕಾರ್ಡ್. ಅದ್ಸರಿ, ಈಗೇಕೆ ಅದನ್ನೆಲ್ಲಾ ಕೆದಕ್ತಾ ಇದೀಯ?'

'ಅದ್ಯಾರೊ ಪರಾಗ್ ಅಗರವಾಲ್ ಅಂತೆ. ಟ್ವಿಟರ್ ಸಿಇಒ. ಅವರ ಸಂಬಳ ವರ್ಷಕ್ಕೆ 10 ಲಕ್ಷ ಡಾಲರ್. ಅಂದರೆ 7.5 ಕೋಟಿ ರೂಪಾಯಿ. ತಿಂಗಳಿಗೆ 70 ಲಕ್ಷ...'

'ಅವರಿಗೀಗ ಎಷ್ಟು ವರ್ಷ?'

'ಇನ್ನೂ 37 ವರ್ಷ. ನೀವು 40 ವರ್ಷದಲ್ಲಿ ಉಳಿಸಿದ್ದು 15 ಲಕ್ಷ. ಪರಾಗ್‌ಗೆ ತಿಂಗಳಿಗೆ ಸಂಬಳಾನೇ 70 ಲಕ್ಷ. ನಿಮಗೂ ತಿಂಗಳಿಗೆ ಒಂದು ಲಕ್ಷಾನಾದರೂ ಸಂಬಳ ಇರಬೇಕಿತ್ತಲ್ವೇ?'

'ಕೆಲಸಕ್ಕೆ ಸೇರಿಕೊಂಡಾಗಲೋ ಅಥವಾ ರಿಟೈರ್ ಆಗೋವಾಗಲೋ?'

'ಸದ್ಯ ಕೊನೆಕೊನೇಲಾದರೂ ಅಷ್ಟು ಬಂದಿದ್ದರೆ ನನ್ನ ಗಂಡನಿಗೆ ಒಂದು ಲಕ್ಷ ಸಂಬಳ ಅಂತ ಹೆಮ್ಮೆ ಪಟ್ಟುಕೊಳ್ಳಬಹುದಿತ್ತು' ಎಂದು ಪರಿತಪಿಸಿದ್ದಲ್ಲದೆ 'ತಿಂಗಳಿಗೆ 70 ಲಕ್ಷ ಹೇಗೆ ಖರ್ಚು ಮಾಡ್ತಾರೆ?' ಎಂದು ಕೇಳಿದಳು.

'ಅದು ಅವರ ಸಮಸ್ಯೆ, ನಾವ್ಯಾಕೆ ತಲೆ ಕೆಡಿಸ್ಕೋಬೇಕು? ನನಗೆ ಒಂದು ಲಕ್ಷ ಸಂಬಳ ಬಂದಿದ್ದರೆ ಹೇಗೆ ಖರ್ಚು ಮಾಡ್ತಿದ್ದೆ?'

'ಈಗ ಕನಸು ಕಂಡರೆ ಏನು ಪ್ರಯೋಜನ?'

'ಮತ್ತೆ ನನಗೂ ತಿಂಗಳಿಗೆ ಒಂದು ಲಕ್ಷಾನಾದರೂ ಸಂಬಳ ಇರಬೇಕಿತ್ತಲ್ವೇ ಅಂತ ಕೇಳಿದೆ?'

'ಕೇಳಿದೆ ಸರಿ, ಬೇರೆಯವರ ಸಂಬಳ ಕೇಳಿದರೆ ಹಾಗನ್ನಿಸೊಲ್ವೆ? ಅದೂ ನಾನು ನಿಮಗೆ ಬರಲಿ ಅಂತ ಕೇಳಿದ್ದಷ್ಟೇ, ನನಗಲ್ಲ...' ಎಂದು ಮಾತು ಮುಗಿಸಿದಳು.

ಸಂಗತ

ಮಾಲಿನ್ಯ: ಸೆರಗಿನೊಳಗಿನ ಕೆಂಡ

ವಿಶ್ವವನ್ನೇ ನಡುಗಿಸಿದ ಭೋಪಾಲ್ ಅನಿಲ ದುರಂತದಿಂದ ನಾವು ಪಾಠ ಕಲಿತಿಲ್ಲ ಎಂಬುದು ಪದೇಪದೇ ಸಾಬೀತಾಗುತ್ತಲೇ ಇದೆ

• ಗುರುರಾಜ್ ಎಸ್. ದಾವಣಗೆರೆ

ಅದು, 1984ರ ಡಿಸೆಂಬರ್ 2ರ ಸರಿರಾತ್ರಿ. ಭೋಪಾಲ್‌ನ ಯೂನಿಯನ್ ಕಾರ್ಬೈಡ್ ಕಾರ್ಖಾನೆಯಲ್ಲಿ ಕ್ರಿಮಿ- ಕೀಟನಾಶಕ ತಯಾರಿಸಲು ಶೇಖರಿಸಿಟ್ಟಿದ್ದ ದ್ರವರೂಪಿ ಮೀಥೈಲ್ ಐಸೋಸಯನೇಟ್ ಸಂಯುಕ್ತದಿಂದ ಸೋರಿದ ವಿಷಾನಿಲ ಒಂದೇ ತಾಸಿನಲ್ಲಿ ಕಾರ್ಖಾನೆಯ ಸುತ್ತಮುತ್ತಲಿನ ಮೂರೂವರೆ ಸಾವಿರ ಜನರ ಜೀವ ತೆಗೆದಿತ್ತು. ಔದ್ಯೋಗಿಕ ರಂಗದ ಇತಿಹಾಸದಲ್ಲಿ ಪ್ರಪಂಚವೇ ಕಂಡರಿಯದ ಘೋರ ದುರಂತ ಇದಾಗಿತ್ತು.

ಎಳೆಯ ಕಂದಮ್ಮಗಳು, ಯುವಕರು, ಹೆಂಗಸರು, ವಯಸ್ಸಾದವರು ಕೊಟ್ಟಿಗೆಯ ದನಕರುಗಳ ಸಹಿತ ಬೆಂಕಿಗೆ ಸಿಲುಕಿದ ಹುಳಗಳಂತೆ ಸತ್ತುಬಿದ್ದಿದ್ದರು. ವಿಷಗಾಳಿಯು ಮರ–ಗಿಡಗಳನ್ನೂ ಕೊಂದುಹಾಕಿತ್ತು. ಸತ್ತವರ ಒಟ್ಟು ಸಂಖ್ಯೆ 20 ಸಾವಿರಕ್ಕೂ ಹೆಚ್ಚು. ಕಾಯಿಲೆಗೆ ತುತ್ತಾದವರು ಆರು ಲಕ್ಷ ಜನ. ಪರಿಮಿತಿಗೂ ಮೀರಿ ರಾಸಾಯನಿಕ ತುಂಬಿಟ್ಟಿದ್ದರಿಂದ ಹೀಗಾಗಿತ್ತು. ಅನಿಲ ಸೋರಿಕೆ ತಡೆಯುವ ಸುರಕ್ಷಾ ಕ್ರಮಗಳೂ ವ್ಯವಸ್ಥಿತವಾಗಿರಲಿಲ್ಲ. ಈ ದುರಂತದ ಕರಾಳ ನೆನಪಿಗೆ ಡಿಸೆಂಬರ್ 2 ಅನ್ನು ಪ್ರತಿವರ್ಷ 'ರಾಷ್ಟ್ರೀಯ ಮಾಲಿನ್ಯ ನಿಯಂತ್ರಣ ದಿನ' ಎಂದು ಆಚರಿಸುತ್ತೇವೆ.

'ಭೋಪಾಲ್ ಅನಿಲ ದುರಂತ' ಎಂದೇ ವಿಶ್ವದಾದ್ಯಂತ ಕರೆಯಲಾಗುವ ಈ ದುರ್ಘಟನೆಯಿಂದ ನಾವು ಪಾಠ ಕಲಿಯಲಿಲ್ಲ ಎಂಬುದು ಪದೇಪದೇ ಸಾಬೀತಾಗುತ್ತಿದೆ. ಜನವಸತಿ ಪ್ರದೇಶದಲ್ಲಿ ಅಪಾಯಕಾರಿ ರಾಸಾಯನಿಕ ಕಾರ್ಖಾನೆಗಳನ್ನು ಸ್ಥಾಪಿಸುವಂತಿಲ್ಲ ಎಂಬ ಕಾನೂನಿದೆ. ಆದರೆ ದೇಶದ ಹಲವು ನಗರ, ಪಟ್ಟಣ ಪ್ರದೇಶಗಳಲ್ಲಿ ಕಾರ್ಖಾನೆಗಳು ತಲೆ ಎತ್ತಿ ಅಪಾಯವನ್ನು ಮಡಿಲಲ್ಲಿಟ್ಟುಕೊಂಡೇ ನಡೆಯುತ್ತಿವೆ. ಅದಕ್ಕೆ ಕಳೆದ ಒಂದು ವರ್ಷದ ಅವಧಿಯಲ್ಲಿ ನಡೆದ ಅವಘಡಗಳೇ ಸಾಕ್ಷಿ.

ವಿಶಾಖಪಟ್ಟಣದಲ್ಲಿರುವ ಎಲ್‌ಜಿ ಪಾಲಿಮರ್ಸ್ ಕಾರ್ಖಾನೆಯಲ್ಲಿ ಅಪಾಯಕಾರಿ ಸ್ಟೈರೀನ್ ಅನಿಲ ಸೋರಿ 11 ಜನರ ಪ್ರಾಣ ತೆಗೆದಿತ್ತು. ಅನಿಲದ ಪ್ರಭಾವಕ್ಕೆ ಸಿಲುಕಿದ ನೂರಾರು ಜನ ಈಗಲೂ ಒಂದಿಲ್ಲೊಂದು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ತನಿಖೆ ಮಾಡಿದಾಗ, ಕಂಪನಿಯು ಉತ್ಪಾದನೆಗೆ ಸಂಬಂಧಿಸಿದಂತೆ ಪರಿಸರ ಅನುಮತಿ ಇಲ್ಲದೆಯೇ ಕೆಲಸ ನಿರ್ವಹಿಸುತ್ತಿದ್ದುದು ಕಂಡುಬಂತು. ಕಂಪನಿಯ ನಿರ್ಲಕ್ಷ್ಯದ ವಿರುದ್ಧ ಆಂಧ್ರಪ್ರದೇಶದ ಹೈಕೋರ್ಟ್‌ನಲ್ಲಿ ಮೊಕದ್ದಮೆ ಹೂಡಲಾಗಿದೆ. ಘಟನೆ ನಡೆದ ಬೆನ್ನಲ್ಲೇ ರಾಜ್ಯ ಸರ್ಕಾರವು ಕಾರ್ಖಾನೆಯನ್ನು ಮುಚ್ಚಿಸಿದೆ.

ಕಾರ್ಖಾನೆಯಲ್ಲಿ ನಡೆಯುವ ಅಪಘಾತಗಳು ಕಾರ್ಖಾನೆಗಷ್ಟೇ ಸೀಮಿತವಾಗಿರುವುದಿಲ್ಲ. ಅವುಗಳ ಮಾಲಿನ್ಯ ಸುತ್ತಲಿನ ಜನರಿಗೂ ಅಪಾಯ ತಂದೊಡ್ಡುತ್ತದೆ. ತಮಿಳುನಾಡಿನ ಕಡಲೂರು ಜಿಲ್ಲೆಯ ನೈವೇಲಿ ಲಿಗ್ನೈಟ್ ಕಾರ್ಪೊರೇಷನ್ ಕಾರ್ಖಾನೆಯಲ್ಲಿ ಕಳೆದ ಮೇ ಮತ್ತು ಜುಲೈ ತಿಂಗಳುಗಳಲ್ಲಿ ಸಂಭವಿಸಿದ ಬಾಯ್ಲರ್ ಸ್ಫೋಟಗಳಲ್ಲಿ ಕನಿಷ್ಠ 20 ಜನ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದರು. ಕೋವಿಡ್ ಲಸಿಕೆ ಉತ್ಪಾದಿಸಿ ದೇಶಕ್ಕೆಲ್ಲಾ ಹಂಚುತ್ತಿರುವ ಪುಣೆಯ 'ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ'ದಲ್ಲಿ ಇದೇ ವರ್ಷ ಜನವರಿ 21ರಂದು ಅಗ್ನಿ ಅವಘಡ ಸಂಭವಿಸಿ ಐವರು ಕಾರ್ಮಿಕರು ಸಾವನ್ನಪ್ಪಿದ್ದರು. ಬೆಂಕಿಯು ಲಸಿಕೆ ತಯಾರಿಕೆ ವಿಭಾಗಕ್ಕೆ ವ್ಯಾಪಿಸಿದ್ದರೆ ಭಾರಿ ಅನಾಹುತ ಸಂಭವಿಸುತ್ತಿತ್ತು.

ಗುಜರಾತ್‌ನಲ್ಲಿ ಯುನೈಟೆಡ್ ಫಾಸ್ಫರಸ್ ಕಾರ್ಖಾನೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್ ಸಂಭವಿಸಿ ನಾಲ್ಕು ಜನರ ಪ್ರಾಣ ಹೋಗಿತ್ತು. ಕಾರ್ಖಾನೆಯಿಂದ ಹೊಮ್ಮಿದ ಹೊಗೆ ಅತೀವ ಮಾಲಿನ್ಯ ಉಂಟು ಮಾಡಿದ್ದರಿಂದ ಗುಜರಾತ್ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕಾರ್ಖಾನೆಯನ್ನು ಮುಚ್ಚಿಸಿಬಿಟ್ಟಿತು. ಮಾರ್ಚ್‌ನಲ್ಲಿ ರಿಲಯನ್ಸ್ ಸಿಮೆಂಟ್ ಒಡೆತನದ ಗೋಗ್ರಿ ಕಲ್ಲಿದ್ದಲು ಗಣಿಯಲ್ಲಿ ಚಾವಣಿ ಕುಸಿದು ಇಬ್ಬರು ಸಾವನ್ನಪ್ಪಿ ನಲವತ್ತಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು. ಫೆಬ್ರುವರಿಯಲ್ಲಿ ತಮಿಳುನಾಡಿನ ವಿರುಧುನಗರದ ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿ 24ಕ್ಕೂ ಹೆಚ್ಚು ಜನ ಅಸುನೀಗಿದ್ದರು.



ಗೋಡಂಬಿ ಬೆಳೆಗೆ ತಗಲುತ್ತಿದ್ದ ಕೀಟಗಳನ್ನು ನಿಯಂತ್ರಿಸಲು 80ರ ದಶಕದಲ್ಲಿ ಸಿಂಪಡಿಸಿದ ಎಂಡೊಸಲ್ಫಾನ್‌ನ ಅಡ್ಡ ಪರಿಣಾಮಗಳು ಕೇರಳ ಹಾಗೂ ನಮ್ಮ ರಾಜ್ಯವನ್ನು ಈಗಲೂ ಕಾಡುತ್ತಿವೆ. ಕಳೆದೊಂದು ವರ್ಷದಲ್ಲಿ ಗಣಿ ಮತ್ತು ರಾಸಾಯನಿಕ ಉದ್ಯಮಗಳಲ್ಲಿ ನೂರಕ್ಕೂ ಹೆಚ್ಚು ಅಪಘಾತಗಳು ಸಂಭವಿಸಿದ್ದು 300ಕ್ಕೂ ಹೆಚ್ಚು ಜನ ಸತ್ತಿದ್ದಾರೆ. 140 ದೇಶಗಳ 50 ಕೋಟಿ ಕಾರ್ಮಿಕರ ಪ್ರತಿನಿಧಿ ಎನಿಸಿರುವ 'ಇಂಡಸ್ಟ್ರಿಆಲ್' ಸಂಸ್ಥೆಯು ತರಬೇತಿ ಇಲ್ಲದ ಕಾರ್ಮಿಕರು, ದೋಷಪೂರಿತ ತಪಾಸಣಾ ವಿಧಾನಗಳು ಮತ್ತು ಸುರಕ್ಷಾ ಕ್ರಮಗಳ ಅಸಮರ್ಪಕ ಅನುಷ್ಠಾನವೇ ಅಪಘಾತಗಳಿಗೆ ಕಾರಣ ಎನ್ನುತ್ತದೆ.

ಅಪಘಾತದಲ್ಲಿ ಕಾರ್ಮಿಕರಷ್ಟೇ ಸಾಯುವುದಿಲ್ಲ. ವಿಷಾನಿಲ, ಬೆಂಕಿ, ವಿದ್ಯುತ್ ಶಾಕ್‌ನಿಂದ ಕಾರ್ಖಾನೆಯ ಹೊರಗಿನ ಅಮಾಯಕರೂ ಬಲಿಯಾಗಿ ಅಪಾರ ಪ್ರಮಾಣದ ಪ್ರಾಣ–ಆಸ್ತಿ ಹಾನಿಯಾಗುತ್ತದೆ. ಕೃಷಿಗೆ ತೊಂದರೆ ಕೊಡುವ ಕೀಟಗಳ ನಿಯಂತ್ರಣಕ್ಕೆ ವಿಷ ಬೇಕೇ ಬೇಕು. ತಯಾರಿಕೆ ಜಾಗವು ಜನವಸತಿಯಿಂದ ದೂರವಿರಬೇಕು. ಅಷ್ಟಾದರೆ ಕೆಲಸ ಮುಗಿದಂತಲ್ಲ. ದುರಂತಗಳಾದಾಗ ಜನ ತಕ್ಷಣ ಸಾಯುವುದಿಲ್ಲ. ಕಾರ್ಖಾನೆಗಳು ಹೊಮ್ಮಿಸುವ, ಹರಿಬಿಡುವ ತ್ಯಾಜ್ಯ ನೆಲ- ನೀರು– ಗಾಳಿಯಲ್ಲಿ ಸೇರಿ ಮಾಲಿನ್ಯ ಆಗೇ ಆಗುತ್ತದೆ. ಅದನ್ನು ನಿಯಂತ್ರಣದಲ್ಲಿ ಇಡಬೇಕು. ಮಾಲಿನ್ಯ ನಿಯಂತ್ರಣ ಮಂಡಳಿ ಎಲ್ಲ ಸುರಕ್ಷಾ ಕ್ರಮ ಕೈಗೊಳ್ಳಬೇಕೆಂಬ ಕಟ್ಟುನಿಟ್ಟಿನ ನಿಯಮ ವಿಧಿಸಿ ಆಗಾಗ ತಪಾಸಣೆ ಮಾಡುತ್ತಲೇ ಇರಬೇಕು.

ವಾಚಕರ ವಾಣಿ

ಮುಗಿದುಹೋದ ವಿಷಯ ಮತ್ತೆ ಕೆದಕುವುದೇಕೆ?

'ಅವಿತಿಟ್ಟ ಅಂಬೇಡ್ಕರ್' ಎನ್ನುವ ಪುಸ್ತಕವನ್ನು ಕಳೆದ ಭಾನುವಾರ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿ ಮಾತನಾಡಿದ ನಟ, ನಿರ್ದೇಶಕ ಪ್ರಕಾಶ್ ಬೆಳವಾಡಿ ಅವರು, 'ಅಂಬೇಡ್ಕರ್ ಸೋಲಿಗೆ ಕಾಂಗ್ರೆಸ್ ಪ್ರಯತ್ನಿಸಿದ್ದೇಕೆ' ಎನ್ನುವ ಪ್ರಶ್ನೆ ಈಗಲೂ ಕಾಡುತ್ತಿದೆ ಎಂದಿರುವ ಬಗ್ಗೆ ವರದಿಯಾಗಿದೆ. ಹಾಗೆಯೇ 'ಶ್ಯಾಮ್ ಪ್ರಸಾದ್ ಮುಖರ್ಜಿ ಅವರು ಕಾಶ್ಮೀರಕ್ಕೆ ಹೋದಾಗ ಅವರನ್ನು ಹಿಡಿದು ಜೈಲಿಗಟ್ಟಲಾಗಿತ್ತು. ವಾರದ ನಂತರ ಅವರ ನಿಧನದ ಸುದ್ದಿ ಹೊರಬಿದ್ದಿತ್ತು. ಅವರ ಬಲಿದಾನದ ಬಗ್ಗೆ ಶಾಲಾ ಪಠ್ಯ ಸೇರಿದಂತೆ ಎಲ್ಲಿಯೂ ಕಾಣುವುದಿಲ್ಲ' ಎನ್ನುವ ಆರೋಪವನ್ನು ಕೂಡ ಅವರು ಮಾಡಿದ್ದಾರೆ.

ಒಂದು ರಾಜಕೀಯ ಪಕ್ಷವಾಗಿ ತನ್ನ ಎಲ್ಲ ಶಕ್ತಿಯನ್ನೂ ಬಳಸಿ ಚುನಾವಣೆಯಲ್ಲಿ ಎದುರಾಳಿಯನ್ನು ಸೋಲಿಸುವ ಹಕ್ಕು ಯಾವುದೇ ಪಕ್ಷಕ್ಕೆ ಇರುತ್ತದೆ. ಆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಎದುರಾಗಿ ನಿಂತವರು ಅಂಬೇಡ್ಕರ್. ಪ್ರಜಾಪ್ರಭುತ್ವ ಮಾರ್ಗದಲ್ಲಿ ತನಗಿರುವ ಹಕ್ಕನ್ನು ಬಳಸಿಯೇ ಕಾಂಗ್ರೆಸ್ ಪಕ್ಷವು ಡಾ. ಅಂಬೇಡ್ಕರ್ ಅವರನ್ನು ಸೋಲಿಸಿತ್ತು. ಶ್ಯಾಮ್ ಪ್ರಸಾದ್ ಮುಖರ್ಜಿ ಅವರ ಅನುಮಾನಾಸ್ಪದ ಸಾವು ಮುಗಿದುಹೋದ ಅಧ್ಯಾಯ. ಇಂತಹ ವಿಷಯಗಳನ್ನು ಮತ್ತೊಮ್ಮೆ ಕೆದಕಿ ವಿವಾದ ಸೃಷ್ಟಿಸುವುದು ತರವಲ್ಲ. ಅವಿತಿಟ್ಟ ಅಂಬೇಡ್ಕರ್ ಕೃತಿಯ ಲೇಖಕರು ಕೂಡ ಹಳೆಯ ವಿಷಯಗಳನ್ನು ಮುಂದಿಟ್ಟು, ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಪಕ್ಷದ ವಿರುದ್ಧ ಪಥದಲ್ಲಿ ನಿಲ್ಲಿಸುವ ಕೆಲಸ ಮಾಡಿದ್ದಾರೆ. ಸಮಾಜದ ಸ್ವಾಸ್ಥ್ಯ ಕೆಡಿಸುವ ಕೆಲಸ ಬೇಡ.

ಚಂದನ್, ದಾವಣಗೆರೆ

ಗಗನಯಾನ ಯೋಜನೆ ಸ್ಥಳಾಂತರ ಸಲ್ಲ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) 2023ರ ಮಾನವಸಹಿತ ಗಗನಯಾನ ಯೋಜನೆಯನ್ನು ಬೆಂಗಳೂರಿನಿಂದ ಗುಜರಾತ್‌ಗೆ ಸ್ಥಳಾಂತರಿಸುವ ಪ್ರಸ್ತಾವ ಕೈಬಿಡುವಂತೆ ಒತ್ತಾಯಿಸಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವುದು (ಪ್ರ.ವಾ., ನ. 29) ಸ್ವಾಗತಾರ್ಹ ನಡೆ. ಏಕೆಂದರೆ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಇಸ್ರೊದ ಕೇಂದ್ರ ಕಚೇರಿಯಿದೆ. ಅಲ್ಲದೆ ರಾಜ್ಯದಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), ಭಾರತೀಯ ವಿಜ್ಞಾನ ಸಂಸ್ಥೆಯಂತಹ (ಐಐಎಸ್‌ಸಿ) ರಾಷ್ಟ್ರ ಮಟ್ಟದ ಸರ್ಕಾರಿ ಸಂಸ್ಥೆಗಳಿವೆ. ಈ ಕಾರಣಕ್ಕೆ ಇಡೀ ಜಗತ್ತು ಇಂದು ರಾಜ್ಯದತ್ತ ನೋಡುವಂತೆ ಆಗಿದೆ. ಇನ್ನೊಂದೆಡೆ, ಜಗತ್ತಿನ ಸಾಫ್ಟ್‌ವೇರ್ ಕ್ಷೇತ್ರದ ಪ್ರಸಿದ್ಧ ಕಂಪನಿಗಳು ಸೇರಿದಂತೆ ನೂರಾರು ಕಂಪನಿಗಳು ಬೆಂಗಳೂರಿನಲ್ಲಿ ಬೀಡುಬಿಟ್ಟಿವೆ. ಹೀಗಿರುವಾಗ ಇಸ್ರೊದ ಉದ್ದೇಶಿತ ಮಾನವಸಹಿತ ಗಗನಯಾನ ಯೋಜನೆಯನ್ನು ಬೆಂಗಳೂರಿನಿಂದ ಗುಜರಾತ್‌ಗೆ ಸ್ಥಳಾಂತರಿಸುವುದು ಎಷ್ಟರಮಟ್ಟಿಗೆ ಸರಿ?

ಈ ದಿಸೆಯಲ್ಲಿ ಶಿವಕುಮಾರ್ ಅವರು ಈ ಕುರಿತು ಪ್ರಧಾನಿ ಬಳಿಗೆ ರಾಜ್ಯದಿಂದ ನಿಯೋಗ ಕೊಂಡೊಯ್ಯುವಂತೆ ಮುಖ್ಯಮಂತ್ರಿಯನ್ನು ಆಗ್ರಹಿಸಿರುವುದು ಕನ್ನಡಿಗರೆಲ್ಲರೂ ಸಂತೋಷಪಡುವ ವಿಚಾರ. ಇಂತಹ ಸನ್ನಿವೇಶದಲ್ಲಿ ಮುಖ್ಯಮಂತ್ರಿ ಆದ್ಯತೆ ಮೇರೆಗೆ ತುರ್ತು ಗಮನಹರಿಸಿ ಕಾರ್ಯಪ್ರವೃತ್ತರಾಗಬೇಕು ಹಾಗೂ ರಾಜ್ಯದ ಸರ್ವ ಪಕ್ಷಗಳು ಕಾಳಜಿ, ಇಚ್ಛಾಶಕ್ತಿ ತೋರಬೇಕಿದೆ.

ಶ್ರೀಧರ್ ಡಿ. ರಾಮಚಂದ್ರಪ್ಪ, ತುರುವನೂರು, ಚಿತ್ರದುರ್ಗ

ಆಹಾರ ವ್ಯವಸ್ಥೆಗೆ ಪ್ರತ್ಯೇಕ ಸಿಬ್ಬಂದಿ ಇರಲಿ

ಶಾಲಾ ಮಕ್ಕಳಿಗೆ ಕೋಳಿಮೊಟ್ಟೆ ಅಥವಾ ಬಾಳೆಹಣ್ಣು ನೀಡುವ ಯೋಜನೆ ಏಕೋಪಾಧ್ಯಾಯ ಶಾಲಾ ಶಿಕ್ಷಕರಿಗೆ ತುಂಬಾ ಹೊರೆ ಆಗಲಿದೆ. ಶಾಲೆ ಮತ್ತು ಅಂಗನವಾಡಿಗಳಲ್ಲಿ ನೀಡುವ ಎಲ್ಲಾ ಬಗೆಯ ಆಹಾರ ವ್ಯವಸ್ಥೆಗೆ ಪ್ರತ್ಯೇಕ ಸಿಬ್ಬಂದಿ ಮತ್ತು ಪ್ರತ್ಯೇಕ ವ್ಯವಸ್ಥೆ ನಿಗದಿಪಡಿಸುವುದು ಒಳಿತು. ಇದರಿಂದ ಶಾಲಾ ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮಕ್ಕಳ ಕಲಿಕೆ ಕಡೆಗೆ ಗಮನಹರಿಸಲು ಅನುಕೂಲ ಆಗುತ್ತದೆ.

ಮಂಜುನಾಥ ದುಬಲಗುಂಡೆ, ಚಿಮ್ಮನಚೋಡ, ಚಿಂಚೋಳಿ

ಬಾಂಗ್ಲಾ ವಿಮೋಚನೆಯಲ್ಲಿ 'ರಾ' ಮಹತ್ವದ ಪಾತ್ರ

'ಇಂದಿರಾ ಬೆನ್ನಿಗಿದ್ದ ಚಾಣಕ್ಯ' ಎಂಬ ಸುಧೀಂದ್ರ ಬುಧ್ಯ ಅವರ ಲೇಖನದಲ್ಲಿ (ಪ್ರ.ವಾ., ಡಿ. 1), ಬಾಂಗ್ಲಾ ದೇಶದ ಉದಯದಲ್ಲಿ 'ರಾ'ದ ಕೊಡುಗೆಯನ್ನೂ ಸೇರಿಸಬೇಕಿತ್ತು. ಪ್ರಧಾನಿ ಇಂದಿರಾ ಗಾಂಧಿಯವರು ಪೂರ್ವ ಪಾಕಿಸ್ತಾನವನ್ನು ಬೇರ್ಪಡಿಸುವ ನಿರ್ಧಾರ ಮಾಡಿದ್ದಕ್ಕೆ ಕಾರಣ, ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆಯಾದ ಐಎಸ್‌ಐ ಭಾರತದ ಸಾರ್ವಭೌಮತೆಯ ವಿರುದ್ಧ ಪೂರ್ವೋತ್ತರ ಭಾಗದಲ್ಲಿ ನಡೆಸುತ್ತಿದ್ದ ಕಾರ್ಯಾಚರಣೆ. ಇಂದಿರಾ ಗಾಂಧಿ ಅವರ ನಡೆಯ ಸೂಚನೆ ಪಾಕಿಸ್ತಾನ, ಚೀನಾ ಮತ್ತು ಅಮೆರಿಕಗೆ ಮನದಟ್ಟಾಯಿತು. ಈ ಮೂರು ರಾಷ್ಟ್ರಗಳೂ ಭಾರತದ ವಿರುದ್ಧ ಸಂಚು ನಡೆಸುತ್ತಿದ್ದವು. ಭಾರತಕ್ಕೆ ರಷ್ಯಾದ ಸ್ನೇಹ ಮಾತ್ರ ನೆರವಾಗಿತ್ತು. ಅಮೆರಿಕವು ಚೀನಾದೊಡನೆ ಸೇರಿ ನಾಗಾಲ್ಯಾಂಡ್ ಮತ್ತು ಮಿಜೊರಾಂನಲ್ಲಿ, ಪಾಕಿಸ್ತಾನ ಮತ್ತು ಚೀನಾ ಸೇರಿ ಪಂಜಾಬ್‌ನಲ್ಲಿ ಖಲಿಸ್ತಾನ್ ಸಿಖ್ಖರೊಡನೆ ಸೇರಿ ಭಾರತವನ್ನು ಇಕ್ಕಟ್ಟಿಗೆ ಸಿಲುಕಿಸಿ, ಇಂದಿರಾ ಗಾಂಧಿ ಪೂರ್ವ ಪಾಕಿಸ್ತಾನವನ್ನು ಬೇರ್ಪಡಿಸುವ ನಿರ್ಧಾರಕ್ಕೆ ಅಡ್ಡಿ ತರುತ್ತಿದ್ದವು. ಆದರೆ, ಇಂದಿರಾ ಅವರು ಪೂರ್ವ ಪಾಕಿಸ್ತಾನದಲ್ಲಿ ನಡೆಯುತ್ತಿದ್ದ ಬಂಗಾಲಿಗಳ ನರಮೇಧಕ್ಕೆ ಜಾಗತಿಕ ಮಟ್ಟದಲ್ಲಿ ಹೆಚ್ಚು ಪ್ರಚಾರ ಕೊಟ್ಟು, ಪಾಕಿಸ್ತಾನದ ಷಡ್ಯಂತ್ರದ ವಿರುದ್ಧ ಮನವರಿಕೆ ಮಾಡಿಸಿ, ಪೂರ್ವ ಪಾಕಿಸ್ತಾನದಲ್ಲಿ ನರಮೇಧ ತಪ್ಪಿಸಲು ಅದನ್ನು ಪಾಕಿಸ್ತಾನದಿಂದ ಬೇರ್ಪಡಿಸುವುದೇ ಉತ್ತಮ ಎಂಬ ಭಾವನೆಯನ್ನು ಮೂಡಿಸಲಾಯಿತು. ಇದನ್ನು ಕಾರ್ಯರೂಪಕ್ಕೆ ತಂದಿದ್ದು ರಾ ಸಂಸ್ಥೆ.

ಈ ಬೇಹುಗಾರಿಕೆ ಸಂಸ್ಥೆಯು ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನದಲ್ಲಿ, ವಿದೇಶಗಳಲ್ಲಿ ನೆಲೆಸಿದ್ದ ಬಂಗಾಲಿ ಪ್ರಜ್ಞಾವಂತರು, ಸರ್ಕಾರಿ ಅಧಿಕಾರಿಗಳು ಮತ್ತು ಪೂರ್ವ ಪಾಕಿಸ್ತಾನದಲ್ಲಿ ಪಾಕಿಸ್ತಾನದ ವಿರುದ್ಧವಿದ್ದ ಸಮೂಹದೊಡನೆ ಕೈ ಜೋಡಿಸಿ ಭಾರತದ ಕಡೆಯಿಂದ ಆಗಬಹುದಾದ ಕಾರ್ಯಾಚರಣೆಗೆ ಮಾನಸಿಕವಾಗಿ ಬೆಂಬಲ ಸಿಗುವಂತೆ ನೋಡಿಕೊಂಡಿತು. ಇದರ ಜೊತೆ, ಪಾಕಿಸ್ತಾನದ ವಿಮಾನಗಳು ಭಾರತದ ಮೇಲೆ ಹಾರಾಡುವುದನ್ನು ನಿಷೇಧಿಸಿದ್ದುದು ಮತ್ತು ಶ್ರೀಲಂಕಾವು ಪಾಕಿಸ್ತಾನದ ವಿಮಾನಗಳಿಗೆ ತೈಲ ತುಂಬಿಸುವುದಕ್ಕೆ ಅವಕಾಶ ಕೊಡಬಾರದೆಂಬ ಇಂದಿರಾ ಅವರ ಕೋರಿಕೆಯನ್ನು ಕಾರ್ಯಗತ ಮಾಡಿದ್ದುದು, ಇವುಗಳನ್ನು 'ದಿ ಕಾವ್‌ಬಾಯ್ಸ್ ಆಫ್ ರಾ' ಪುಸ್ತಕದಲ್ಲಿ 'ರಾ'ದಲ್ಲಿ ಹಿರಿಯ ಅಧಿಕಾರಿಯಾಗಿದ್ದ ಬಿ.ರಾಮನ್ ವಿವರಿಸಿದ್ದಾರೆ. ರಾ ಸಂಸ್ಥೆಯ ಕೊಡುಗೆಯೂ ಐತಿಹಾಸಿಕ.


ಪಿ.ಸಿ.ಕೇಶವ, ಬೆಂಗಳೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸ್ವಚ್ಛ ಭಾರತ ಅಭಿಯಾನ ಜಾಲತಾಣದ ಮಾಹಿತಿಗೆ ವ್ಯತಿರಿಕ್ತವಾದ ಎನ್‌ಎಫ್‌ಎಚ್‌ಎಸ್ ವರದಿ

ಶೇ 18 ಮಂದಿಗೆ ಶೌಚಾಲಯವಿಲ್ಲ

ಕರ್ನಾಟಕದ ಜನರಲ್ಲಿ ಶೌಚಾಲಯ ಲಭ್ಯತೆ ಇರುವವರಿಗಿಂತ, ಮೊಬೈಲ್ ಫೋನ್ ಮತ್ತು ಟಿ.ವಿ. ಹೊಂದಿರುವವರ ಪ್ರಮಾಣ ಅಧಿಕವಾಗಿದೆ ಎನ್ನುತ್ತವೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5ರ (ಎನ್‌ಎಫ್ ಎಚ್‌ಎಸ್) ವರದಿಯ ದತ್ತಾಂಶಗಳು. ರಾಜ್ಯದ ಸಮಸ್ತ ಜನರಿಗೂ ಶೌಚಾಲಯ ಲಭ್ಯವಿದೆ. ರಾಜ್ಯವು ಬಯಲು ಬಹಿರ್ದೆಸೆ ಮುಕ್ತವಾಗಿದೆ ಎಂದು ಸ್ವಚ್ಛ ಭಾರತ ಅಭಿಯಾನದ ಜಾಲತಾಣ ಹೇಳುತ್ತದೆ. ಆದರೆ ಕೇಂದ್ರ ಸರ್ಕಾರವೇ ಬಿಡುಗಡೆ ಮಾಡಿರುವ ಎನ್‌ಎಫ್‌ಎಚ್‌ಎಸ್ ವರದಿಯಲ್ಲಿ ರಾಜ್ಯದ ಶೇ 18ರಷ್ಟು ಜನರಿಗೆ ಶೌಚಾಲಯವಿಲ್ಲ ಎಂದು ಹೇಳಲಾಗಿದೆ





- ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯ ಹೊಂದಿರುವ ಜನರ ಪ್ರಮಾಣಕ್ಕಿಂತ ಮೊಬೈಲ್ ಫೋನ್ ಇರುವವರ ಪ್ರಮಾಣವೇ ಹೆಚ್ಚು. ಮೊಬೈಲ್ ಫೋನ್ ಹೊಂದಿರುವವರಿಗೆ ಹೋಲಿಸಿದರೆ ಶೌಚಾಲಯ ಲಭ್ಯತೆ ಇಲ್ಲದೇ ಇರುವವರ ಸಂಖ್ಯೆಯು 15.2 ಶೇಕಡಾವಾರು ಅಂಶಗಳಷ್ಟು ಕಡಿಮೆ
- ರಾಜ್ಯದ ನಗರ ಪ್ರದೇಶದಲ್ಲಿಯೂ ಶೌಚಾಲಯ ಹೊಂದಿರುವವರಿಗಿಂತ ಹೆಚ್ಚಿನ ಪ್ರಮಾಣದ ಜನರು ಮೊಬೈಲ್ ಫೋನ್ ಹೊಂದಿದ್ದಾರೆ. ಶೌಚಾಲಯ ಲಭ್ಯತೆ ಇಲ್ಲದೇ ಇರುವವರ ಪ್ರಮಾಣವು ಮೊಬೈಲ್ ಫೋನ್ ಹೊಂದಿರುವವರಿಗೆ ಹೋಲಿಸಿದರೆ 2.2 ಶೇಕಡಾವಾರು ಅಂಶಗಳಷ್ಟು ಕಡಿಮೆ
- ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಟಿ.ವಿ. ಹೊಂದಿರುವವರ ಪ್ರಮಾಣಕ್ಕೆ ಹೋಲಿಸಿದರೆ ಶೌಚಾಲಯ ಲಭ್ಯ ಇಲ್ಲದವರ ಪ್ರಮಾಣವು 4.1 ಶೇಕಡಾವಾರು ಅಂಶಗಳಷ್ಟು ಕಡಿಮೆ

ಶೌಚಾಲಯ: ಪರಿಶಿಷ್ಟ ಜಾತಿಯವರು ಹಿಂದೆ

ರಾಜ್ಯದಲ್ಲಿ ಪ್ರತಿ ಮನೆಗೂ ಶೌಚಾಲಯ ನಿರ್ಮಿಸುವ ಯೋಜನೆಯನ್ನು ಸರ್ಕಾರ ಹಾಕಿಕೊಂಡಿತ್ತು. ಕರ್ನಾಟಕವನ್ನು 'ಬಯಲು ಬಹಿರ್ದೆಸೆ ಮುಕ್ತ ರಾಜ್ಯ' ಎಂದೂ ಕೇಂದ್ರ ಸರ್ಕಾರ ಘೋಷಿಸಿತ್ತು. ಆದರೆ ರಾಜ್ಯದ ಶೇ 18ರಷ್ಟು ಜನರು ಶೌಚಾಲಯಗಳನ್ನು ಬಳಸುತ್ತಿಲ್ಲ. ಅವರು ಈಗಲೂ ಬಹಿರ್ದೆಸೆಗೆ ಬಯಲನ್ನೇ ಅವಲಂಬಿಸಿದ್ದಾರೆ.

ರಾಜ್ಯದ ಶೇ 83ರಷ್ಟು ಕುಟುಂಬಗಳಲ್ಲಿ ಶೌಚಾಲಯ ಸೌಲಭ್ಯವಿದೆ. ಶೇ 1ರಷ್ಟು ಜನರಿಗೆ ಸೌಲಭ್ಯ ಇದ್ದರೂ ಅವರು ಬಳಕೆ ಮಾಡಿಕೊಳ್ಳುತ್ತಿಲ್ಲ. ನಗರ ಭಾಗದ ಶೇ 93ರಷ್ಟು ಹಾಗೂ ಗ್ರಾಮೀಣ ಭಾಗದ ಶೇ 76ರಷ್ಟು ಮನೆಗಳಲ್ಲಿ ಶೌಚಾಲಯಗಳು ಬಳಕೆಯಾಗುತ್ತಿವೆ. ಪರಿಶಿಷ್ಟ ಜಾತಿಯ ಶೇ 76ರಷ್ಟು ಕುಟುಂಬಗಳು ಶೌಚಾಲಯ ಸವಲತ್ತು ಬಳಸುತ್ತಿವೆ. ಆದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಥವಾ ಇತರೆ ಹಿಂದುಳಿದ ವರ್ಗಕ್ಕೆ (ಒಬಿಸಿ) ಸೇರದ ಜಾತಿಗಳ ಶೇ 88ರಷ್ಟು ಕುಟುಂಬಗಳು ಈ ಸೌಲಭ್ಯ ಹೊಂದಿವೆ. ಅಂದರೆ ಈ ಎರಡರ ನಡುವೆ ಶೇ 12ರಷ್ಟು ಅಂತರವಿದ್ದು, ಪರಿಶಿಷ್ಟ ಜಾತಿ ಜನರು ಈ ಸೌಲಭ್ಯ ಪಡೆಯುವಲ್ಲಿ ಹಿಂದೆ ಉಳಿದಿದ್ದಾರೆ.

ಜಿಲ್ಲೆಗಳ ಪೈಕಿ ಯಾದಗಿರಿಯಲ್ಲಿ ಕೇವಲ ಶೇ 47ರಷ್ಟು ಕುಟುಂಬಗಳು ಈ ಸೌಲಭ್ಯಕ್ಕೆ ಒಳಪಟ್ಟಿವೆ. ದಕ್ಷಿಣ ಕನ್ನಡದಲ್ಲಿ ಶೇ ನೂರರಷ್ಟು ಸಾಧನೆಯಾಗಿದೆ. ದಕ್ಷಿಣ ಕನ್ನಡ, ಕೊಡಗು ಹಾಗೂ ಉಡುಪಿ ಜಿಲ್ಲೆಗಳ ನಗರ ಪ್ರದೇಶದ ಎಲ್ಲ ಮನೆಗಳಲ್ಲಿ ಶೌಚಾಲಯಗಳಿವೆ.

ಗಂಡನಿಂದ ಹಲ್ಲೆ: ಶೇ 77 ಸ್ತ್ರೀಯರ ಸಮರ್ಥನೆ

ವಿವಿಧ ಕಾರಣಗಳಿಗೆ ವಿವಾಹಿತ ಮಹಿಳೆಯ ಮೇಲೆ ಪತಿ ನಡೆಸುವ ಹಲ್ಲೆ, ಬೈಗುಳದಂತಹ ಕೌಟುಂಬಿಕ ದೌರ್ಜನ್ಯವನ್ನು ಸಮರ್ಥಿಸಿಕೊಳ್ಳುವ ಪುರುಷರ ಪ್ರಮಾಣ ಶೇ 82ರಷ್ಟಿದೆ. ಆದರೆ ಶೇ 77ರಷ್ಟು ಮಹಿಳೆಯರೂ, ವಿವಾಹಿತ ಮಹಿಳೆಯ ಮೇಲೆ ಆಕೆಯ ಪತಿ ಹಲ್ಲೆ ನಡೆಸುವುದು ಸರಿ ಎಂದು ಹೇಳಿದ್ದಾರೆ. ದ್ವಿತೀಯ ಪಿಯುಸಿ ಮತ್ತು ಅದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದ ಮಹಿಳೆಯರಲ್ಲಿಯೂ ಇಂತಹ ಹಲ್ಲೆಯನ್ನು ಸಮರ್ಥಿಸಿಕೊಳ್ಳುವವರ ಪ್ರಮಾಣ ಶೇ 72ರಷ್ಟಿದೆ.

ಪತಿಯ ತಂದೆ–ತಾಯಿ ಮತ್ತು ಸೋದರ–ಸೋದರಿಯರಿಗೆ ಗೌರವ ನೀಡದಿದ್ದಾಗ ತಮ್ಮ ಮೇಲೆ ಪತಿ ಹಲ್ಲೆ ನಡೆಸುವುದು ಸರಿ ಎಂದು ಶೇ 59ರಷ್ಟು ಮಹಿಳೆಯರು ಹೇಳಿದ್ದಾರೆ. ಇದನ್ನು ಸಮರ್ಥಿಸಿಕೊಳ್ಳುವ ಪುರುಷರ ಪ್ರಮಾಣ ಶೇ 71ರಷ್ಟಿದೆ.

ಮನೆಯ ಕೆಲಸ ಮತ್ತು ಮಕ್ಕಳ ಲಾಲನೆ–ಪಾಲನೆ ಕಡೆಗಣಿಸಿದಾಗ ಪತಿಯು ಪತ್ನಿಗೆ ಹೊಡೆಯಬಹುದು ಎಂದು ಶೇ 52ರಷ್ಟು ಮಹಿಳೆಯರು ಹೇಳಿದ್ದಾರೆ. ಗಮನಾರ್ಹ ಸಂಗತಿಯೆಂದರೆ ಮನೆಯ ಕೆಲಸ ಮತ್ತು ಮಕ್ಕಳ ಲಾಲನೆ–ಪಾಲನೆ ಕಡೆಗಣಿಸಿದಾಗ ಪತಿಯು ಪತ್ನಿಯ ಮೇಲೆ ಹಲ್ಲೆ ನಡೆಸಬಹುದು ಎಂಬುದನ್ನು ಒಪ್ಪಿಕೊಳ್ಳುವ ಪುರುಷರ ಪ್ರಮಾಣವು ಶೇ 48ರಷ್ಟಿದೆ. ಇಂತಹ ಹಲ್ಲೆಯನ್ನು ಸಮರ್ಥಿಸಿಕೊಳ್ಳುವ ಪುರುಷರಿಗಿಂತ, ಮಹಿಳೆಯರ ಪ್ರಮಾಣವೇ ಹೆಚ್ಚು.

ದೇಶದಲ್ಲಿ ಶೇ 75ರಷ್ಟು ಮಹಿಳೆಯರು ಇಂತಹ ಹಲ್ಲೆಯನ್ನು ಸಮರ್ಥಿಸಿಕೊಂಡಿದ್ದಾರೆ. ಆದರೆ ರಾಜ್ಯದಲ್ಲಿ ಇದನ್ನು ಸಮರ್ಥಿಸಿಕೊಳ್ಳುವ ಮಹಿಳೆಯರ ಪ್ರಮಾಣವು (ಶೇ 77) ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು. ಒಟ್ಟಾರೆ ರಾಜ್ಯದಲ್ಲಿ ಇಂತಹ ಕೌಟುಂಬಿಕ ದೌರ್ಜನ್ಯವನ್ನು ಸಮರ್ಥಿಸುವವರ ಪ್ರಮಾಣವು, ಇದನ್ನು ವಿರೋಧಿಸುವವರ ಪ್ರಮಾಣಕ್ಕಿಂತ ಅಧಿಕ.



ನಿರ್ಧಾರ ತೆಗೆದುಕೊಳ್ಳುವಿಕೆ ಪುರುಷರ ಪಾಲ್ಗೊಳ್ಳುವಿಕೆ ಅಧಿಕ



ರಾಜ್ಯದಲ್ಲಿ ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರಿಗೂ ಪ್ರಮುಖ ಸ್ಥಾನ ನೀಡಲಾಗುತ್ತಿದೆ ಎನ್ನುತ್ತದೆ ಈ ವರದಿಯ ದತ್ತಾಂಶಗಳು. ಕುಟುಂಬದ ದೈನಂದಿನ ಆಗುಹೋಗುಗಳಿಗೆ ಸಂಬಂಧಿಸಿದ ನಿರ್ಧಾರ ತೆಗೆದುಕೊಳ್ಳುವಲ್ಲಿ ರಾಜ್ಯದ ಶೇ 65ರಷ್ಟು ವಿವಾಹಿತ ಮಹಿಳೆಯರು ಭಾಗಿಯಾಗುತ್ತಾರೆ. ಆದರೆ ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಪುರುಷರ ಪಾಲ್ಗೊಳ್ಳುವಿಕೆ ಶೇ 93ರಷ್ಟು ಇದೆ.

ಸಂಬಂಧಿಕರ ಮನೆಗೆ ಭೇಟಿ ನೀಡುವುದು, ವೈಯಕ್ತಿಕ ಆರೋಗ್ಯ ಮತ್ತು ಮನೆವಸ್ತುಗಳ ಖರೀದಿಯಂತಹ ವಿಚಾರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಹೆಚ್ಚು ಇದೆ. ತಾವು ಮತ್ತು ಕುಟುಂಬದ ಸದಸ್ಯರು, ಸ್ನೇಹಿತರು ಮತ್ತು ಸಂಬಂಧಿಕರ ಮನೆಗೆ ಭೇಟಿ ನೀಡುವ ಸಂಬಂಧ ನಿರ್ಧಾರ ತೆಗೆದುಕೊಳ್ಳುವ ಮಹಿಳೆಯರ ಪ್ರಮಾಣ ಶೇ 75ರಷ್ಟು ಇದೆ. ಮನೆ ವಸ್ತುಗಳ ಖರೀದಿಗೆ ಸಂಬಂಧಿಸಿದ ನಿರ್ಧಾರ ತೆಗೆದುಕೊಳ್ಳುವಲ್ಲಿ ಭಾಗಿಯಾಗುವ ಮಹಿಳೆಯರ ಪ್ರಮಾಣ ಶೇ 73ರಷ್ಟು ಇದೆ.

ತಮ್ಮ ವೈಯಕ್ತಿಕ ಆರೋಗ್ಯದ ಆಗುಹೋಗುಗಳು ಮತ್ತು ಚಿಕಿತ್ಸೆ ಮತ್ತಿತರ ವಿಚಾರಗಳಲ್ಲಿ ಶೇ 74ರಷ್ಟು ಮಹಿಳೆಯರು ಸ್ವತಃ ನಿರ್ಧಾರ ತೆಗೆದುಕೊಳ್ಳುತ್ತಾರೆ. ಶೇ 26ರಷ್ಟು ಮಹಿಳೆಯರು, ಕುಟುಂಬದ ಮುಖ್ಯಸ್ಥರು ಮತ್ತು ಸದಸ್ಯರು ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧರಾಗಿರುತ್ತಾರೆ. ವೈಯಕ್ತಿಕ ಆರೋಗ್ಯಕ್ಕೆ ಸಂಬಂಧಿಸಿದ ನಿರ್ಧಾರ ತೆಗೆದುಕೊಳ್ಳಲು ಶೇ 26ರಷ್ಟು ಮಹಿಳೆಯರಿಗೆ ಸಾಧ್ಯವಿಲ್ಲದೇ ಇರುವುದು ಕಳವಳಕಾರಿ ಅಂಶ ಎಂದು ವಿಶ್ಲೇಷಿಸಲಾಗಿದೆ.

ಕಾಲುಭಾಗದಷ್ಟು ಜನರಿಗೆ ಆರೋಗ್ಯ ವಿಮೆ



ಧುತ್ತನೆ ಎದುರಾಗುವ ಆರೋಗ್ಯ ಸಮಸ್ಯೆಗಳು ಜನರನ್ನು ಆರ್ಥಿಕ ಸಂಕಷ್ಟಕ್ಕೆ ತಳ್ಳುತ್ತವೆ. ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಆರೋಗ್ಯ ವಿಮೆ ಯೋಜನೆಗಳನ್ನು ಜಾರಿಗೆ ತಂದಿವೆ. ಆದರೆ ರಾಜ್ಯದ ಶೇ 28ರಷ್ಟು ಜನರು ಮಾತ್ರ ಆರೋಗ್ಯ ವಿಮೆ ರಕ್ಷಣೆಗೆ ಒಳಪಟ್ಟಿದ್ದಾರೆ.

ರಾಜ್ಯದ ಶೇ 22ರಷ್ಟು ಮಹಿಳೆಯರು ಆರೋಗ್ಯ ವಿಮೆಗೆ ಒಳಪಟ್ಟಿದ್ದರೆ, ಶೇ 26ರಷ್ಟು ಪುರುಷರು ವಿಮೆ ಮಾಡಿಸಿಕೊಂಡಿದ್ದಾರೆ. ವಿಮೆ ರಕ್ಷಣೆಗೆ ಒಳಪಟ್ಟವರ ಪೈಕಿ, ಯುವಜನರಿಗೆ ಹೋಲಿಸಿದರೆ ವಯಸ್ಸಾದವರೇ ಅಧಿಕ. ವಿಮೆ ಮಾಡಿಸುವ ಪ್ರವೃತ್ತಿಯು 12 ವರ್ಷ ಅಥವಾ ಅದಕ್ಕೂ ಹೆಚ್ಚಿನ ವರ್ಷ ವಿದ್ಯಾಭ್ಯಾಸ ಮಾಡಿದವರಲ್ಲಿ ಅಧಿಕವಾಗಿದೆ.

ಶಾಲೆಯ ಮುಖ ನೋಡದ ಶೇ 20ರಷ್ಟು ಮಹಿಳೆಯರು



ರಾಜ್ಯದ 15ರಿಂದ 49 ವರ್ಷದೊಳಗಿನವರ ಪೈಕಿ ಶೇ 85ರಷ್ಟು ಪುರುಷರು ಹಾಗೂ ಶೇ 73ರಷ್ಟು ಮಹಿಳೆಯರು ಸಾಕ್ಷರರು. 9ನೇ ತರಗತಿ ಉತ್ತೀರ್ಣರಾಗಿರುವವರು ಹಾಗೂ ಸಮೀಕ್ಷೆಗಾಗಿ ನಡೆಸಿದ ಸರಳ ಸಾಕ್ಷರತಾ ಪರೀಕ್ಷೆಯಲ್ಲಿ ತೇರ್ಗಡೆಯಾದವರನ್ನು ಸಾಕ್ಷರರು ಎಂದು ಇಲ್ಲಿ ಪರಿಗಣಿಸಲಾಗಿದೆ.

ಈ ವಯೋಮಾನದವರಲ್ಲಿ ಶೇ 20ರಷ್ಟು ಮಹಿಳೆಯರು ಹಾಗೂ ಶೇ 11ರಷ್ಟು ಪುರುಷರು ಶಾಲೆಯ ಮುಖವನ್ನೇ ನೋಡಿಲ್ಲ. ಶೇ 28ರಷ್ಟು ಮಹಿಳೆಯರು ಹಾಗೂ ಶೇ 34ರಷ್ಟು ಪುರುಷರು ಕನಿಷ್ಠ 12ನೇ ತರಗತಿವರೆಗೆ ಓದಿದ್ದಾರೆ.

ಗಂಡುಮಗು ಬೇಕೇ, ಹೆಣ್ಣುಮಗು ಸಾಕೇ?

ರಾಜ್ಯದ ಜನರಲ್ಲಿ ಗಂಡು ಸಂತಾನಕ್ಕೆ ಆದ್ಯತೆ ನೀಡುವ ಪ್ರವೃತ್ತಿ ಕಂಡುಬಂದಿದೆ. ಮಹಿಳೆಯರಿಗೆ (ಶೇ 14) ಹೋಲಿಸಿದರೆ, ಪುರುಷರಲ್ಲಿ (ಶೇ 16) ಹೆಣ್ಣು ಮಕ್ಕಳಿಗಿಂತ ಗಂಡು ಮಕ್ಕಳ ಬಯಕೆ ಅಧಿಕ. ಆದರೆ ಶೇ 6–7ರಷ್ಟು ಜನರು ಗಂಡುಮಕ್ಕಳಿಗಿಂತ ಹೆಣ್ಣು ಮಕ್ಕಳನ್ನು ಪಡೆಯುವ ಇಚ್ಛೆ ಹೊಂದಿದ್ದಾರೆ. ಶೇ 76ರಷ್ಟು ಮಹಿಳೆಯರು ಹಾಗೂ ಶೇ 77ರಷ್ಟು ಪುರುಷರು ಕನಿಷ್ಠ ಪಕ್ಷ ಒಂದು ಗಂಡು ಮಗುವನ್ನಾದರೂ ಪಡೆಯುವ ಹಂಬಲ ಹೊಂದಿದ್ದರೆ, ಶೇ 73ರಷ್ಟು ಜನರು (ಮಹಿಳೆ–ಪುರುಷ ಸೇರಿ) ಕನಿಷ್ಠ ಒಂದು ಹೆಣ್ಣುಮಗುವನ್ನು ಹೊಂದಲು ಇಚ್ಛಿಸುತ್ತಿದ್ದಾರೆ.

ಮಾಧ್ಯಮಗಳ ಬಳಕೆ

- ರಾಜ್ಯದ ಶೇ 74ರಷ್ಟು ಮಹಿಳೆಯರು ವಾರದಲ್ಲಿ ಒಮ್ಮೆಯಾದರೂ ಟಿ.ವಿ. ವೀಕ್ಷಿಸುತ್ತಾರೆ. ಈ ವಿಚಾರದಲ್ಲಿ ಪುರುಷರ ಪ್ರಮಾಣ ಶೇ 68
- ಮಹಿಳೆಯರಿಗೆ (ಶೇ 29) ಹೋಲಿಸಿದರೆ ಶೇ 43ರಷ್ಟು ಪುರುಷರು ವಾರದಲ್ಲಿ ಒಮ್ಮೆಯಾದರೂ ಪತ್ರಿಕೆ ಅಥವಾ ನಿಯತಕಾಲಿಕಗಳನ್ನು ಓದುತ್ತಾರೆ
- ಶೇ 13ರಷ್ಟು ಪುರುಷರು ಹಾಗೂ ಶೇ 20ರಷ್ಟು ಮಹಿಳೆಯರು ಮುದ್ರಣ ಮಾಧ್ಯಮ ಸೇರಿದಂತೆ, ಯಾವುದೇ ರೀತಿಯ ಮಾಧ್ಯಮಗಳನ್ನು ನಿಯಮಿತವಾಗಿ ಬಳಸುವುದಿಲ್ಲ

ಆಧಾರ: ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ–5ರ ಕರ್ನಾಟಕ ವರದಿ., ವರದಿ: ಜಯಸಿಂಹ ಆರ್., ಅಮೃತ ಕಿರಣ್ ಬಿ.ಎಂ.



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 19

ಬುದ್ಧಿಯಿಂದ ಪಂಥ ಗೆದ್ದ ಗಣೇಶ

ಪಾರ್ವತಿ-ಪರಮೇಶ್ವರರು ಷಣ್ಮುಖ ಮತ್ತು ಗಣಪತಿಯರ ಬಾಲಲೀಲೆಗಳನ್ನು ನೋಡುತ್ತಾ ಸಂತೋಷದಿಂದಿದ್ದರು. ಪುತ್ರರಿಬ್ಬರೂ ತಂದೆತಾಯಿಗಳಲ್ಲಿ ಭಕ್ತಿಯಿಟ್ಟು ಅವರನ್ನು ಪೂಜಿಸುತ್ತಿದ್ದರು. ಒಂದು ದಿನ ಶಿವ ದಂಪತಿ ವಿಚಾರ ವಿಮರ್ಶೆ ಮಾಡುತ್ತಾ ತಮ್ಮ ಮಕ್ಕಳಾದ ಗಣಪತಿ ಷಣ್ಮುಖರು ಪ್ರೌಢರಾಗಿದ್ದಾರೆ. ಈಗ ನಾವು ವಿವಾಹ ಮಾಡಬೇಕು ಎಂದು ಮಾತನಾಡಿಕೊಳ್ಳುತ್ತಿದ್ದರು. ಈ ಮಾತುಗಳನ್ನು ಕೇಳಿದ ಷಣ್ಮುಖ ಮತ್ತು ಗಣಪತಿ ಸಂತೋಷದಿಂದ ವಿವಾಹಕ್ಕೆ ತಮ್ಮ ಒಪ್ಪಿಗೆ ನೀಡಿದರು. ಆದರೆ, ಪರಸ್ಪರ ನಾನು ಮೊದಲು ವಿವಾಹವಾಗಬೇಕೆಂದು ವಿವಾದ ಆರಂಭಿಸಿದರು. ಇದನ್ನು ಕೇಳಿ ಆ ಶಿವದಂಪತಿಗಳು ಯಾರಿಗೆ ಮೊದಲು ವಿವಾಹ ಮಾಡಬೇಕೆಂದು ತೀರ್ಮಾನಿಸಲು ಒಂದು ಪಂಥ ಆಯೋಜಿಸಿದರು.

'ವಿವಾಹಸಂದರ್ಭದಲ್ಲಿ ಒಂದು ಪಂದ್ಯವನ್ನು ರಚಿಸಿದ್ದೇವೆ. ಯಾರು ವೇಗವಾಗಿ ಭೂಪ್ರದಕ್ಷಿಣೆಮಾಡುವರೋ, ಅವರಿಗೆ ಮೊದಲು ಮದುವೆ ಮಾಡಬೇಕೆಂದು ತೀರ್ಮಾನಿಸಿದ್ದೇವೆ' ಎಂದರು. ತಾಯಿತಂದೆಗಳ ಮಾತುಗಳನ್ನು ಕೇಳಿದ ತಕ್ಷಣವೇ, ಷಣ್ಮುಖ ಭೂಪ್ರದಕ್ಷಿಣೆಗಾಗಿ ಹೊರಟುಬಿಟ್ಟ. ಅತ್ಯಂತ ಬುದ್ಧಿಶಾಲಿಯಾಗಿದ್ದ ಗಣಪತಿ ಆತುರಪಡದೆ, ಏನನ್ನೋ ಯೋಚಿಸುತ್ತ ಅಲ್ಲಿಯೇ ಕುಳಿತ್ತಿದ್ದ. 'ಹಾರಲು ತನಗೆ ಶಕ್ತಿಯಿಲ್ಲ. ಒಂದು ಹರಿದಾರಿ ಹೋದರೆ ಹಿಂದಿರುಗಲು ನನ್ನಿಂದ ಸಾಧ್ಯವಾಗುವುದಿಲ್ಲ. ಇಂತಹುದರಲ್ಲಿ ಅಗಾಧವಾದ ಭೂಮಿಯನ್ನು ಸುತ್ತುವುದು ಹೇಗೆ?' ಎಂದು ಯೋಚಿಸಿ, ಕೊನೆಗೆ ಒಂದು ಉಪಾಯವನ್ನು ಮಾಡಿದ. ಗಣಪತಿ ವಿಧಿವತ್ತಾಗಿ ಸ್ನಾನಮಾಡಿ ತಂದೆತಾಯಿಗಳ ಸಮೀಪಕ್ಕೆ ಬಂದು 'ಪೂಜ್ಯರೇ ಇಲ್ಲಿ ಎರಡು ಪೀಠಗಳನ್ನು ನಿಮಗಾಗಿ ಹಾಕಿರುವೆ. ನೀವು ಈ ಪೀಠಗಳಲ್ಲಿ ಕುಳಿತು ನಾನು ಮಾಡುವ ಪೂಜೆಯನ್ನು ಸ್ವೀಕರಿಸಿ, ನನ್ನ ಕೋರಿಕೆಯನ್ನು ನೆರವೇರಿಸಿ' ಎಂದು ಪ್ರಾರ್ಥಿಸಿದ.

ಪಾರ್ವತೀಪರಮೇಶ್ವರರು ಪೂಜಾಸ್ವೀಕಾರಕ್ಕಾಗಿ ಆ ಪೀಠಗಳಲ್ಲಿ ಕುಳಿತರು. ಗಣಪತಿಯು ಮಾತಾಪಿತೃಗಳಿಗೆ ವಿಧಿವತಾಗಿ ಪೂಜಿಸಿ, ಭಕ್ತಿಪುರಸ್ಸರವಾಗಿ ಏಳು ಸಾರಿ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿದ. ಆಮೇಲೆ ಕೈಜೋಡಿಸಿಕೊಂಡು ನಿಂತು ಹೀಗೆ ಹೇಳಿದ, 'ಪೂಜ್ಯ ತಂದೆ-ತಾಯಿಯರೇ, ಈಗ ನಾನು ಮೊದಲಿಗೆ ಭೂಪ್ರದಕ್ಷಿಣೆ ಮಾಡಿರುವೆ. ನೀವು ನನಗೆ ಮೊದಲು ವಿವಾಹ ಮಾಡಬೇಕು' ಎಂದ. ಗಣಪತಿ ಮಾತುಗಳನ್ನು ಕೇಳಿ, ಉಮಾಮಹೇಶ್ವರರು 'ಎಲೈ ವಿಘ್ನೇಶ್ವರನೇ, ನೀನು ಪರ್ವತರಾಣ್ಯಾದಿಗಳಿಂದ ಕೂಡಿರುವ ಈ ಭೂಮಿಯನ್ನು ಪ್ರದಕ್ಷಿಣೆ ಮಾಡಬೇಕು. ಅದಕ್ಕಾಗಿ ಕುಮಾರಸ್ವಾಮಿಯು ಆಗಲೇ ಹೋಗಿದ್ದಾನೆ. ನೀನೂ ಈ ಕೂಡಲೇ ಹೊರಡು' ಎಂದು ಹೇಳಿದರು.

ತಂದೆ-ತಾಯಿ ಮಾತುಗಳನ್ನು ಕೇಳಿ ಗಣಪತಿ 'ಪೂಜ್ಯರಾದ ತಾಯಿತಂದೆಗಳೇ, ನೀವಿಬ್ಬರೂ ಧರ್ಮಸ್ವರೂಪಿಗಳು. ಲೋಕದ ನ್ಯಾಯದಲ್ಲಿ ನುರಿತವರು. ಈಗ ಭೂಮಿಯನ್ನು ಏಳುಸಾರಿ ಪ್ರದಕ್ಷಿಣೆ ಮಾಡಿರುತ್ತೇನೆ. ಇನ್ನೂ ಭೂಮಿಯನ್ನು ಸುತ್ತು ಎಂದು ಹೇಳುತ್ತಿರುವಿರಲ್ಲಾ, ಇದು ನ್ಯಾಯವೇ?' ಎಂದು ಪ್ರಶ್ನೆಮಾಡಿದ. ಮಗನ ಮಾತುಗಳನ್ನು ಕೇಳಿ ಶಿವದಂಪತಿಗಳು ಏನೂ ತಿಳಿಯದೆ, 'ಗಣಪತಿಯೇ ಸಪ್ತದ್ವೀಪಗಳಿಂದಲೂ ಕಾಡುಗಳಿಂದಲೂ ಸಮುದ್ರಪರ್ಯಂತವಾಗಿರುವ ಭೂಮಿಯನ್ನು ನೀನು ಯಾವಾಗ ಪ್ರದಕ್ಷಿಣೆಮಾಡಿದೆ?' ಎಂದು ಪ್ರಶ್ನಿಸಿದರು. ಬುದ್ಧಿಸಾಗರನಾದ ಗಣಪತಿಯು ಮಾತಾಪಿತೃಗಳಿಗೆ ನಮಿಸಿ 'ಪೂಜ್ಯರೇ, ಜಗದೊಡೆಯರಾದ ನಿಮ್ಮ ಪೂಜೆಯನ್ನು ನಾನು ಭಕ್ತಿಯಿಂದ ಮಾಡಿ, ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿರುವೆ. ಯಾವನು ತಾಯಿತಂದೆಯರನ್ನು ಭಕ್ತಿಯಿಂದ ಪ್ರದಕ್ಷಿಣೆ ಮಾಡುವನೋ, ಆತನಿಗೆ ಭೂಪ್ರದಕ್ಷಿಣೆಯ ಫಲವು ಲಭಿಸುವುದು. ಯಾವನು ಮಾತಾಪಿತೃಗಳನ್ನು ಮನೆಯಲ್ಲಿಯೇ ಬಿಟ್ಟು ತೀರ್ಥಯಾತ್ರೆಗೆ ಹೋಗುವನೋ, ಆತನಿಗೆ ಮಾತಾಪಿತೃಗಳನ್ನು ಕೊಂದ ಪಾಪವು ಬರುವುದು. ಮಗನಿಗೆ ಮಾತಪಿತೃಗಳ ಪಾದಪೂಜೆಯೇ ಉತ್ತಮವಾದ ಮಂಗಳಕರವಾದ ತೀರ್ಥವು. ಉಳಿದ ತೀರ್ಥಗಳು ಅಷ್ಟು ಪ್ರಶಸ್ತವಲ್ಲ ಎಂದು ವೇದಶಾಸ್ತ್ರಗ್ರಂಥಗಳು ಹೇಳಿವೆ' ಎಂದ.

ಧರ್ಮಸ್ವರೂಪಿಗಳಾದ ಶಿವದಂಪತಿಗಳು ಮಗನ ಬುದ್ಧಿವಂತಿಕೆಯನ್ನು ಮೆಚ್ಚಿದರು. ಮನುಷ್ಯನಿಗೆ ನಿಜವಾದ ಬಲವೇ ಬುದ್ಧಿ ಎಂದು ಪ್ರಶಂಸಿಸಿ, ಪಂಥದಲ್ಲಿ ಗೆದ್ದ ಗಣೇಶನ ವಿವಾಹವನ್ನು ಮೊದಲು ನಡೆಸಲು ನಿಶ್ಚಯಿಸಿದರು. ●

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೆಹಲಿಯ ಸರ್ಕಾರಿ ಶಾಲೆಯೊಂದನ್ನು ಮದರಸವನ್ನಾಗಿ ಬದಲಾಯಿಸಲಾಗಿದೆ ಎಂದು ಹೇಳುವ ವಿಡಿಯೊ ವೈರಲ್ ಆಗಿದೆ. ಪೊಲೀಸರು ವ್ಯಕ್ತಿಯೊಬ್ಬರ ಜೊತೆ ಶಾಲೆಯ ಕೊಠಡಿಗೆ ತೆರಳುವುದು ಮತ್ತು ಕೊಠಡಿಯಲ್ಲಿ ಮಹಿಳೆಯರು, ಮಕ್ಕಳು ಸೇರಿ ಹಲವರು ಪ್ರಾರ್ಥನೆ ಸಲ್ಲಿಸುವುದು ವಿಡಿಯೊದಲ್ಲಿ ಇದೆ. 'ಮತ ಬ್ಯಾಂಕ್ ಭದ್ರ ಮಾಡಿಕೊಳ್ಳಲು ಎಎಪಿ ರೋಹಿಂಗ್ಯ ಜನಾಂಗವನ್ನು ಓಲೈಸುತ್ತಿದೆ' ಎಂದು ಹಲವರು ಪೋಸ್ಟ್ ಮಾಡಿರುವ ವಿಡಿಯೊದಲ್ಲಿ ಹೇಳಲಾಗಿದೆ.




ಈ ಘಟನೆ ನಡೆದಿರುವುದು ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ಎಂದು ಆಲ್ಟ್ ನ್ಯೂಸ್ ಹೇಳಿದೆ. ಈ ವಿಡಿಯೊವನ್ನು ಗಮನಿಸಿದಾಗ ಅದರಲ್ಲಿ 'ಪ್ರಾಥಮಿಕ ಶಾಲೆ ಮಿರ್ಜಾಪುರ' ಎಂದು ಬರೆದಿರುವುದು ಕಾಣುತ್ತದೆ. ಈ ಕುರಿತು ಅಲ್ಲಿಯ ಪೊಲೀಸರಿಂದ ಮಾಹಿತಿ ಪಡೆಯಲಾಯಿತು. ಶಾಲೆಯ ಸಿಬ್ಬಂದಿಯ ಮಗುವಿಗೆ ಆರೋಗ್ಯ ಸಮಸ್ಯೆ ಆದಾಗ, ಮಕ್ಕಳು ಮತ್ತು ಮಹಿಳೆಯರು ಶಾಲೆಯ ಕೊಠಡಿಯಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಸಿದ್ದಾಗಿ ಪೊಲೀಸರು ತಿಳಿಸಿದರು ಎಂದು ಆಲ್ಟ್ ನ್ಯೂಸ್ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಗೂಢವಾದ ಋಣದ ಮಾರ್ಗ

ನಿನ್ನೇಳು ಬೀಳುಗಳು ನಿನ್ನ ಸೊಗ ಗೋಳುಗಳು |
ನಿನ್ನೊಬ್ಬನೋಸುಗವೆ ನಡೆವ ಯೋಜನೆಯೇಂ? ||
ಇನ್ನದೆನಿಬರ ಜೀವಪಾಕವದರಿಂದಹುದೊ ! |
ಛನ್ನವಾ ಋಣಮಾರ್ಗ – ಮಂಕುತಿಮ್ಮ || 510 ||

ಪದ-ಅರ್ಥ: ನಿನ್ನೇಳು = ನಿನ್ನ + ಏಳು, ಇನ್ನದೆನಿಬರ = ಇನ್ನು + ಅದು + ಎನಿಬರ(ಎಷ್ಟು ಜನರ), ಜೀವಪಾಕವದರಿಂದಹುದೊ = ಜೀವಪಾಕ + ಅದರಿಂದ + ಅಹುದೊ, ಛನ್ನ = ಗೂಢ, ರಹಸ್ಯ

ವಾಚ್ಯಾರ್ಥ: ನಿನ್ನ ಜೀವನದಲ್ಲಿ ಬರುವ ಏಳು ಬೀಳುಗಳು, ನಿನ್ನ ಸುಖ ದುಃಖಗಳು, ನಿನ್ನೊಬ್ಬನಿಗಾಗಿ ಮಾತ್ರ ನಡೆಯುವ ಯೋಜನೆಯೇ? ಅದೆಷ್ಟು ಜನರ ಜೀವಪಾಕ ಅದರಿಂದ ಆಗಿಹುದೊ? ಋಣದ ಮಾರ್ಗ ಒಂದು ರಹಸ್ಯ.

ವಿವರಣೆ: ಪ್ರಪಂಚದಲ್ಲಿ ಸಂಪೂರ್ಣ ಪ್ರತ್ಯೇಕತೆ ಎಂಬುವುದು ಇಲ್ಲ. ಎಲ್ಲವೂ ಪರಸ್ಪರ ಸಂಬಂಧದಿಂದ, ಪರಸ್ಪರ ಪ್ರಭಾವಗಳಿಂದ ಕೂಡಿದೆ. ಜಗತ್ತು ಒಂದು ಚಿತ್ರವಿದ್ದಂತೆ. ಅದರಲ್ಲಿ ಪ್ರತಿಯೊಂದು ಗೆರೆ, ಪ್ರತಿಯೊಂದು ಬಣ್ಣ ಪರಸ್ಪರ ಸಂಬಂಧದಿಂದ ಕೂಡಿದೆ. ಅದನ್ನು ಚಿತ್ರದಿಂದ ಬೇರ್ಪಡಿಸಿದರೆ ಅರ್ಥ ಕಳೆದುಕೊಳ್ಳುತ್ತದೆ. ಮೇಲ್ನೋಟಕ್ಕೆ ಬೇರೆಯೆಂದು ತೋರುವ ವಸ್ತುಗಳು ಆಳದಲ್ಲಿ ಸಂಬಂಧಿಗಳಾಗಿವೆ. ಹೂವು ಮತ್ತು ಗೊಬ್ಬರ ಬೇರೆಯೆಂದು ಕಂಡರೂ, ಗೊಬ್ಬರ ಮರವನ್ನು ಸೇರಿ ಹೂವಾಗುತ್ತದೆ, ಹೂವು ಕೊಳೆತು ಗೊಬ್ಬರವಾಗುತ್ತದೆ. ಅಂತೆಯೇ, ಆಂತರಿಕ, ಪ್ರಾಕೃತಿಕ ಮತ್ತು ಸಾಮಾಜಿಕ ವಾತಾವರಣಗಳು ಮನುಷ್ಯನ ವ್ಯಕ್ತಿತ್ವವನ್ನು ನಿರ್ಮಿಸುತ್ತವೆ. ಅಂದರೆ ನಾನು, ನಾನಾಗಿರುವುದಕ್ಕೆ ಅನೇಕ ಕಾರಣಗಳು. ಆಂತರಿಕವಾಗಿ ನನಗೆ ಬಂದ ವಂಶವಾಹಿನಿಗಳು ನನ್ನ ಸ್ವಭಾವವನ್ನು, ದೇಹಲಕ್ಷಣಗಳನ್ನು ತೀರ್ಮಾನಿಸುತ್ತವೆ. ನಮಗೆ ಅರಿವಿಲ್ಲದಂತೆ ಪ್ರಕೃತಿ ನಮ್ಮ ಮೇಲೆ ಪ್ರಭಾವ ಬೀರುತ್ತದೆ. ಬಾಲ್ಯದಲ್ಲಿಯ ನೈಸರ್ಗಿಕ ಪರಿಸರ, ನೀರು, ಗಾಳಿ, ಹಸಿರು, ಸುತ್ತಮುತ್ತಲಿನ ನೈರ್ಮಲ್ಯ ಇವೆಲ್ಲ ವ್ಯಕ್ತಿತ್ವವನ್ನು ನಿರ್ಮಿಸುತ್ತವೆ. ಕೊನೆಯದಾದ ಸಾಮಾಜಿಕ ಅಥವಾ ಮಾನವೀಯ ವಾತಾವರಣ ನಮ್ಮ ಬದುಕಿನ ಗತಿಯನ್ನು ನಿರ್ಧರಿಸುತ್ತದೆ. ನೆರೆಹೊರೆಯ ಜನರು, ಸ್ನೇಹಿತರು ಮುಂತಾದವರು ವ್ಯಕ್ತಿತ್ವದ ನಿರ್ಧಾರಕ ಅಂಶಗಳಾಗುತ್ತಾರೆ. ಕೆಲವೊಮ್ಮೆ ಆಕಸ್ಮಿಕವಾಗಿಯೋ, ಪ್ರಯತ್ನಪೂರ್ಣವಾಗಿಯೋ ಸಂಧಿಸಿದ ಜನರು ವ್ಯಕ್ತಿತ್ವದ ವಿಕಾಸದಲ್ಲಿ ತಿರುವನ್ನು ತರುತ್ತಾರೆ.

ವಿವೇಕಾನಂದರ ಜೀವನದಲ್ಲಿ ಶ್ರೀ ರಾಮಕೃಷ್ಣರ ಆಗಮನ ತಂದ ಬದಲಾವಣೆ ಅಭೂತಪೂರ್ವವಾದದ್ದು. ನಂತರ ವಿವೇಕಾನಂದರಿಂದ ಪ್ರಭಾವಿತರಾಗಿ ಜೀವನವನ್ನು ಬದಲಿಸಿಕೊಂಡ ಜನರೆಷ್ಟೊ? ಹೀಗೆ ಯಾರಾದರೂ ಬದುಕಿನಲ್ಲಿ ತುಂಬ ಏರಿಳಿತಗಳನ್ನು ಕಂಡಿದ್ದರೆ, ಅನೇಕ ಬಾರಿ, ಅವರಿಗೆ ಅದರ ಗೊತ್ತೇ ಇರುವುದಿಲ್ಲ. ಅದಾವ ಕಾರಣಕೊ, ಯಾವ ಋಣ ಸಂದಾಯಕ್ಕೋ, ಅವರು ಅದರ ಭಾಗವಾಗುತ್ತಾರೆ. ಒಬ್ಬ ಜನಮನ್ನಣೆಯನ್ನು ಗಳಿಸಿದ ವಿಜ್ಞಾನಿ, ಯಾವ ಹುದ್ದೆಯನ್ನೂ ಅಪೇಕ್ಷಿಸದ ವ್ಯಕ್ತಿ, ಮತ್ತಾವ ಕಾರಣಕ್ಕೋ, ರಾಷ್ಟ್ರದ ಅತ್ಯಂತ ಎತ್ತರದ ಹುದ್ದೆಗೆ ಏರಿಬಿಡುತ್ತಾರೆ. ಅದು ಅವರ ಯೋಜನೆಯೇ ಆಗಿರಲಿಲ್ಲ. ಮತ್ತೊಬ್ಬ ವ್ಯಕ್ತಿ ಪ್ರಾಮಾಣಿಕವಾಗಿ, ತನ್ನ ಮನಸ್ಸಿಗೊಪ್ಪಿದ ಕೆಲಸವನ್ನು ಮಾಡುತ್ತ ದಶಕಗಳನ್ನು ಕಳೆದಾಗ, ಯಾವುದೋ ವಿಧಾನಕ್ಕೆ, ಯಾರಿಗೋ ಸೂಕ್ತ ವ್ಯಕ್ತಿಯಾಗಿ ಕಂಡು, ದೇಶದ ಅತ್ಯುನ್ನತ ಪದವಿಗೆ ಭಾಜನರಾಗುತ್ತಾರೆ. ಮತ್ತೆ ಕೆಲವರು ಉನ್ನತ ಹುದ್ದೆಯಲ್ಲಿದ್ದವರು, ಅವರಿಗರಿವಿಲ್ಲದಂತೆ, ಅವರಿಗೆ ಸಂಬಂಧವಿಲ್ಲದ ಮತ್ತಾವುದೋ ಸಂಚಿಗೆ ಸಿಲುಕಿ ಅಧಿಕಾರ ಕಳೆದುಕೊಳ್ಳುತ್ತಾರೆ.

ಕಗ್ಗ ಅದನ್ನು ಚಿತ್ರಿಸುತ್ತದೆ. ನಮ್ಮ ಏಳು ಬೀಳುಗಳು ನಮ್ಮ ಯೋಜನೆಗಳಲ್ಲ. ಅದಾವ ಕಾರಣಕೋ ನಾವು ಅದರ ಭಾಗವಾಗುತ್ತೇವೆ. ಅದರಿಂದ ಎಷ್ಟು ಜನರ ಮೇಲೆ ಪ್ರಭಾವವಾಗುತ್ತದೋ? ಆದ್ದರಿಂದ ಈ ಋಣದ ಮಾರ್ಗ ಗೂಢವಾದದ್ದು. ❖

ದಿನ ಭವಿಷ್ಯ

ಗುರುವಾರ ಡಿಸೆಂಬರ್ 2, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಅನೂರಾಧ ತ್ರಯೋದಶಿ ಗಂ. 28-51 (ಸಾ. 6-04) ಗುರುವಾರ ನಿತ್ಯ ನಕ್ಷತ್ರ ಸ್ವಾತಿ ಗಂ. 20-32 (ಹ. 2-44) ಶೋಭನ ನಾಮ ಯೋಗ ಗಂ. 23-50 ಗರಜ ಕರಣ ಗಂ. 1-16 ಉಪರಿ ವಣಿಜ ಕರಣ ಗಂ.27-35 ವಿಷ ಗಂ. 33-42 ಅಮೃತ ಗಂ 56-15 ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-30 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 2, 6

ಮೇಷ: ಮಕ್ಕಳಿಂದ ನೆಮ್ಮದಿಯ ವಾತಾವರಣ. ದ್ವಿಚಕ್ರವಾಹನದಿಂದ ಕುತ್ತುಂಟಾಗುವ ಸಾಧ್ಯತೆ. ನಿವೇಶನ ಮುಂತಾದ ಸ್ಥಿರಾಸ್ತಿ ಖರೀದಿಯಲ್ಲಿ ವಿಳಂಬ ಸಾಧ್ಯತೆ. ಪ್ರೇಮ ಪ್ರಕರಣಗಳಿಂದಾಗಿ ಮಾನಸಿಕ ಶಾಂತಿ ಕದಡುವ ಸಾಧ್ಯತೆ.

ವೃಷಭ: ಯಂತ್ರೋಪಕರಣಗಳ ಖರೀದಿಯಿಂದ ಖರ್ಚು. ಆತ್ಮೀಯರಿಂದ ಸಹಕಾರ ದೊರೆತು ಉದ್ಯಮದಲ್ಲಿ ಯಶಸ್ಸು. ಕುಶಲತೆಯಿಂದ ಧನಲಾಭ. ಗೃಹನಿರ್ಮಾಣ ಕೆಲಸಗಳನ್ನು ದಿನದಮಟ್ಟಿಗೆ ಮುಂದೂಡುವುದು ಉತ್ತಮ.

ಮಿಥುನ: ಪ್ರಿಯ ವ್ಯಕ್ತಿಗಳ ಆಗಮನ. ಮಾತಿನಿಂದ ಗೌರವ ಲಭ್ಯವಾಗಲಿದೆ. ಸಹೋದರರಿಂದ ಸಹಕಾರ ದೊರೆತು ಹೊಸ ಯೋಜನೆಗಳು ಕಾರ್ಯರೂಪಕ್ಕೆ ಬರಲಿವೆ. ಸೌಂದರ್ಯತಜ್ಞರಿಗೆ ಉತ್ತಮ ಅವಕಾಶಗಳು ದೊರಕಲಿವೆ.

ಕರ್ಕಾಟಕ: ಯೋಜಿತ ಕಾರ್ಯಗಳಲ್ಲಿ ಯಶಸ್ಸು. ಪ್ರಾಪ್ತವಯಸ್ಕರಿಗೆ ವಿವಾಹ ಸಂಬಂಧಗಳು ಕೂಡಿಬರುವ ಸಾಧ್ಯತೆ. ಮಾತಿನಿಂದಾಗಿ ಗೌರವ. ಉದ್ಯೋಗಸ್ಥರಿಗೆ ಮೇಲಧಿಕಾರಿಗಳ ಪ್ರಶಂಸೆ. ನಿರುದ್ಯೋಗಿಗಳಿಗೆ ಉತ್ತಮ ಅವಕಾಶ.

ಸಿಂಹ: ಅಧ್ಯಯನದಲ್ಲಿ ಆಸಕ್ತಿ ಮೂಡುವುದು. ಆಕಸ್ಮಿಕ ಧನಲಾಭ. ವಿನಾ ವಿವಾದದಿಂದ ಪಾರಾಗಲು ಮಾತಿನಲ್ಲಿ ಜಾಗರೂಕತೆ ಅಗತ್ಯ. ಆಂತರಿಕ ಸಮಸ್ಯೆಗಳಿಂದ ಮುಕ್ತರಾಗುವ ಸಾಧ್ಯತೆ. ಬಂಧುಗಳೊಂದಿಗಿನ ಸಂಬಂಧ ವೃದ್ಧಿ.

ಕನ್ಯಾ: ಸಹೋದ್ಯೋಗಿಗಳಿಂದ ಕಿರಿಕಿರಿ ಸಾಧ್ಯತೆ. ಅನಾವಶ್ಯಕ ವ್ಯವಹಾರಗಳಿಂದ ಮುಕ್ತರಾಗುವಿರಿ. ಕುಟುಂಬ ಸಮಸ್ಯೆಗಳು ಪರಿಹಾರ ಕಂಡುಕೊಳ್ಳುವವು. ಮಹಿಳಾ ರಾಜಕಾರಣಿಗಳಿಗೆ ಯಶಸ್ಸಿನ ದಿನ.

ತುಲಾ: ಮಿತ್ರ ಕಾರ್ಯಗಳಲ್ಲಿ ಯಶಸ್ಸು. ಪತ್ರ ವ್ಯವಹಾರ ಹಾಗೂ ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ಜಾಗರೂಕತೆ ಅಗತ್ಯ. ಸಾಮಾಜಿಕ ಗೌರವಾದರಗಳು ಪ್ರಾಪ್ತಿಯಾಗುವ ಸಾಧ್ಯತೆ. ಕೆಲಸ–ಕಾರ್ಯಗಳಲ್ಲಿ ಆಸಕ್ತಿ.

ವೃಶ್ಚಿಕ: ಆರೋಗ್ಯದಲ್ಲಿ ಸುಧಾರಣೆ ಕಂಡುಬಂದು ನೆಮ್ಮದಿ. ಕಳೆದುಕೊಂಡ ವಸ್ತುಗಳು ಪುನಃ ಕೈಸೇರುವ ಸಾಧ್ಯತೆ. ವಿನಾಕಾರಣ ಸಮಸ್ಯೆಗಳಲ್ಲಿ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ. ಹಿತಶತ್ರುಗಳ ಬಗ್ಗೆ ಎಚ್ಚರಿಕೆ ಅಗತ್ಯ.

ಧನು: ಹೊಸ ಉದ್ಯಮದಲ್ಲಿ ಯಶಸ್ಸು. ಪ್ರಿಯ ವ್ಯಕ್ತಿಗಳ ಆಗಮನ ಸಾಧ್ಯತೆ. ವೈಯಕ್ತಿಕ ಜೀವನದಲ್ಲಿ ವಿಶೇಷ ಆಸಕ್ತಿ. ಗೃಹಿಣಿಯರು ಬೆಂಕಿಯ ಸಮೀಪ ಜಾಗ್ರತೆಯಿಂದ ವ್ಯವಹರಿಸುವುದು ಉತ್ತಮ. ಪ್ರಯಾಣ ಯೋಗ.

ಮಕರ: ವೈದ್ಯಕೀಯ ಕ್ಷೇತ್ರದಲ್ಲಿರುವವರಿಗೆ ಉತ್ತಮ ದಿನ. ನೆರೆಹೊರೆಯವರೊಂದಿಗಿನ ಹೊಂದಾಣಿಕೆ ಒಳಿತು. ಸಹೋದರರಿಂದ ಸಹಕಾರ ದೊರೆಯುವ ಸಾಧ್ಯತೆ. ದಾಂಪತ್ಯ ಸಮಸ್ಯೆಗಳಿಂದ ಮುಕ್ತರಾಗಿ ಸಂತೃಪ್ತಿ.

ಕುಂಭ: ವೈಯಕ್ತಿಕ ವಿಚಾರಗಳನ್ನು ಯಾರಲ್ಲೂ ಹೇಳದೆ ಗುಪ್ತವಾಗಿಟ್ಟುಕೊಳ್ಳುವುದು ಉತ್ತಮ. ಆಭರಣ ವಸ್ತ್ರಾದಿಗಳ ಖರೀದಿ. ದೈನಂದಿನ ಕೆಲಸಗಳಲ್ಲಿ ಉತ್ಸಾಹ ಉಂಟಾಗುವುದು. ಸಾಮಾಜಿಕ ಗೌರವ ಪ್ರಾಪ್ತವಾಗುವ ಸಾಧ್ಯತೆ ಇದೆ.

ಮೀನ: ವೃತ್ತಿ ಕ್ಷೇತ್ರದಲ್ಲಿ ಪ್ರಗತಿ ಕಂಡುಬರುವುದು. ತಾಯಿಯ ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ. ನ್ಯಾಯಾಲಯದ ತೀರ್ಪು ತಡವಾಗುವ ಸಾಧ್ಯತೆ. ನೂತನ ಕಾರ್ಯಯೋಜನೆಗಳಲ್ಲಿ ಯಶಸ್ಸು.

ನಿಮ್ಮ ಜನ್ಮದಿನ 2-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಅಚ್ಚುಕಟ್ಟುತನ ಮತ್ತು ಕ್ರಮಬದ್ಧ ಜೀವನ ನಿಮ್ಮದಾಗಿರುವುದು. ಉತ್ತಮ ಅವಕಾಶಗಳಿಂದ ವಂಚಿತರಾಗುವ ಸಾಧ್ಯತೆ. ಗಮನ ವಹಿಸಿ ಕೆಲಸ ನಿರ್ವಹಿಸುವುದರಿಂದಾಗಿ ಯಶಸ್ಸು. ಸ್ನೇಹಜೀವಿಯಾದ ನೀವು ಒಂಟಿಯಾಗಿರಲು ಅಪೇಕ್ಷಿಸುವುದಿಲ್ಲ.

ಪದಬಂಧ 4795


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

4.ತಲೆಕೂದಲಿಗೆ ಹತ್ತುವ ಕ್ರಿಮಿ (2)
5.ಚಂದವಾಗಿ ತೇಯ್ದಿರುವ ಶ್ರೀಗಂಧ (3)
6.ಮಂದಿಗೆಲ್ಲಾ ತಿಳಿದಿರುವುದು (5)
9.ಪಾದರಸವನ್ನು ಹೀಗೂ ಹೇಳುವರು (3)
10.ಶ್ರೋತಾ ಹೀಗೆ ಬಂದಿದೆ (3)
11.ಸಿಹಿಯಲ್ಲದ ಸ್ಮರಣೆ! (5)
14.ಮನಸ್ಸಿನ ಆಶಯ (3)
15.ಪರಾಜಿತನ ಹತ್ತಿರ ಈ ಒಪ್ಪಂದವೇ? (2)

ಮೇಲಿಂದ ಕೆಳಕ್ಕೆ

1.ತನ್ನ ತರುವಾಯ ಹುಟ್ಟಿದವ (3)
2.ಅವನಿರುವ ಭೂಮಿ (3)
3. ಮೆಲುವಾಗಿ ಬೀಸುವ ಗಾಳಿ (5)
7.ನೀರಿನಿಂದಾದ ಅನಿಲ (5)
8.ತಪ್ಪಾಗಿ ಭಾವಿಸುವಿಕೆ (5)
9.ಅತ್ತಿಗೆ ತೋರಿಸಿದ ಚಿಟ್ಟೆ (5)
12.ತಂತ್ರಕ್ಕೊಂದು ಪರ್ಯಾಯ ಪದ (3)
13.ರುಜುವಾತನ್ನು ಹೀಗೆನ್ನಿ (3)



4794ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಕ್ಷರ 3.ಸಂಗ್ರಹ 5.ಸರ 6.ಸಮಯ 7.ರಸ 9.ಕಾಷಾಯ 10.ಸುಸಂಧಿ 11.ನಗ 13.ಹೂದಾನಿ 15.ನರಿ 16.ತರುಣ 17.ನಯನ

ಮೇಲಿಂದ ಕೆಳಕ್ಕೆ:
1.ಅಧರ 2.ರಕ್ಕಸ 3.ಸಂದಾಯ 4.ಹಮ್ಮೀರ 5.ಸಮಕಾಲೀನ 8.ಸರ್ವಾಧಿಕಾರಿ 12.ಗಣಿತ 13.ಹೂಬಾಣ 14.ನಿಧನ 15.ನರ್ತನ

ಸುಡೊಕು 5181

			4		3	9	6	
7		8						5
4			5		8	7		1
		9						7
	3	7	1		6	4	5	
8						2	1	
6		5		2			3	4
3						5		2
	8	2		5			7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5180 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಸಂತಾನೋತ್ಪತ್ತಿ ನೆರವು ತಂತ್ರಜ್ಞಾನ ನಿಯಂತ್ರಣ ಮಸೂದೆ ಮಂಡನೆ

ನವದೆಹಲಿ (ಪಿಟಿಐ): ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು 'ಸಂತಾನೋತ್ಪತ್ತಿ ನೆರವು ತಂತ್ರಜ್ಞಾನ (ನಿಯಂತ್ರಣ) ಮಸೂದೆ'ಯನ್ನು ಬುಧವಾರ ಲೋಕಸಭೆಯಲ್ಲಿ ಮಂಡಿಸಿದರು.

2020ರ ಸೆಪ್ಟೆಂಬರ್‌ನಲ್ಲಿ ಮಸೂದೆಯನ್ನು ಮಂಡಿಸಲಾಗಿತ್ತು. ಆದರೆ ಸ್ಥಾಯಿಸಮಿತಿಯ ಪರಿಶೀಲನೆಗೆ ಕಳುಹಿಸಲಾಗಿತ್ತು. ಸಮಿತಿ ಪ್ರಸ್ತಾಪಿಸಿದ ಸಲಹೆಗಳನ್ನು ಸರ್ಕಾರ ಪರಿಗಣಿಸಿದೆ ಎಂದು ಮಾಂಡವೀಯ ಹೇಳಿದರು.

ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಎಲ್ಲ ವೃತ್ತಿಪರರು ಹಾಗೂ ಕ್ಲಿನಿಕ್‌ಗಳನ್ನು ನೋಂದಣಿ ಮಾಡುವುದಕ್ಕೆ ರಾಷ್ಟ್ರೀಯ ಪ್ರಾಧಿಕಾರ ರಚಿಸುವ ಪ್ರಸ್ತಾವವನ್ನು ಮಸೂದೆ ಒಳಗೊಂಡಿದೆ. ಸಂತಾನೋತ್ಪತ್ತಿ ನೆರವು ತಂತ್ರಜ್ಞಾನ ಕ್ಲಿನಿಕ್, ಸಂತಾನೋತ್ಪತ್ತಿ ನೆರವು ತಂತ್ರಜ್ಞಾನ ಬ್ಯಾಂಕ್‌ಗಳ ಮೇಲೆ ನಿಗಾ ಮತ್ತು ನಿಯಂತ್ರಣ ಇದರ ಉದ್ದೇಶ.

ದೇಶದ ಹಲವು ಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂತಾನೋತ್ಪತ್ತಿ ನೆರವು ಕ್ಲಿನಿಕ್‌ಗಳಿಗೆ ಯಾವುದೇ ನಿಯಂತ್ರಣ ಇಲ್ಲ. ಈ ಪ್ರಕ್ರಿಯೆಗೆ ಒಳಪಡುವ ರೋಗಿಗಳ ಸುರಕ್ಷತೆ ದೃಷ್ಟಿಯಿಂದ ಮಸೂದೆಯನ್ನು ತರಲಾಗಿದೆ ಎಂದು ಸಚಿವರು ತಿಳಿಸಿದರು. ಆದರೆ ಮಸೂದೆಯಲ್ಲಿ ಕೆಲವು ನ್ಯೂನತೆಗಳಿವೆ ಎಂದು ಕಾಂಗ್ರೆಸ್ ಸದಸ್ಯ ಕಾರ್ತಿ ಚಿದಂಬರಂ ದನಿ ಎತ್ತಿದರು. 'ಬಡವರು, ಮಕ್ಕಳಿಲ್ಲದವರಿಗೆ ಸರ್ಕಾರ ಸಹಾಯಹಸ್ತ ನೀಡಬೇಕು. ತೃತೀಯ ಲಿಂಗಿಗಳು, ಸಲಿಂಗಿಗಳನ್ನೂ ಮಸೂದೆ ವ್ಯಾಪ್ತಿಗೆ ತರಬೇಕು' ಎಂದು ಅಭಿಪ್ರಾಯಪಟ್ಟರು.

ವಂಶವಾಹಿ ಸಂರಚನೆ ವಿಶ್ಲೇಷಣೆ: ಸೂಚನೆ

ಬೆಂಗಳೂರು: ಕೋವಿಡ್ ದೃಢಪಟ್ಟ ಪ್ರಕರಣಗಳ ಮಾದರಿಗಳ ವಂಶವಾಹಿ ಸಂರಚನೆ ವಿಶ್ಲೇಷಣೆಯನ್ನು ಭಾರತೀಯ ಸಾರ್ಸ್‌ಕೋವ್–2 ಜೆನೋಮಿಕ್ಸ್ ಕನ್ಸೋರ್ಟಿಯಂ (ಇನ್ಸಾಕಾಗ್) ಮಾನ್ಯತೆ ಹೊಂದಿರುವ ನಿಮ್ಹಾನ್ಸ್ ಮತ್ತು ರಾಷ್ಟ್ರೀಯ ಜೀವ ವಿಜ್ಞಾನಗಳ ಸಂಸ್ಥೆಯ (ಎನ್‌ಸಿಬಿಎಸ್) ಪ್ರಯೋಗಾಲಯಗಳಲ್ಲೇ ನಡೆಸಬೇಕು ಎಂದು ಆರೋಗ್ಯ ಇಲಾಖೆಯ ಆಯುಕ್ತರು ಬುಧವಾರ ಸುತ್ತೋಲೆ ಹೊರಡಿಸಿದ್ದಾರೆ.

ಕೊರೊನಾ ವೈರಾಣುವಿನ ವಂಶವಾಹಿ ಸಂರಚನೆ ವಿಶ್ಲೇಷಣೆಯನ್ನು ಇನ್ಸಾಕಾಗ್ ಪ್ರಮಾಣಿತವಲ್ಲದ ಖಾಸಗಿ ಪ್ರಯೋಗಾಲಯಗಳಲ್ಲಿ ನಡೆಸಲು ಅವಕಾಶವಿಲ್ಲ. ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ, ನಿಮ್ಹಾನ್ಸ್ ಮತ್ತು ಎನ್‌ಸಿಬಿಎಸ್ ಪ್ರಯೋಗಾಲಯಗಳಿಗೆ ಮಾದರಿ ಕಳುಹಿಸಬೇಕು. ಮಾದರಿಗಳನ್ನು ಕಳುಹಿಸಲು ರಾಜ್ಯದ ವಿವಿಧೆಡೆ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಪ್ರಮುಖ ಆಸ್ಪತ್ರೆಗಳನ್ನು ಗುರುತಿಸಲಾಗಿದೆ. ಅವುಗಳ ಮೂಲಕವೇ ಮಾದರಿ ಕಳುಹಿಸಬೇಕು ಎಂದು ಸೂಚಿಸಲಾಗಿದೆ.

ತ್ವರಿತವಾಗಿ ಮಾದರಿಗಳನ್ನು ರವಾನಿಸುವ ಕೆಲಸವನ್ನು ಆಯಾ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ಮಾಡಬೇಕು ಎಂಬುದಾಗಿ ಸ್ಪಷ್ಟ ನಿರ್ದೇಶನ ನೀಡಲಾಗಿದೆ.

ಉ.ಪ್ರ: ಕ್ಷೀಣಿಸಿದ ಬಿಎಸ್‌ಪಿ ಮತ ಗಳಿಕೆ; 2007ರ ತಂತ್ರಗಾರಿಕೆಯನ್ನು ಮತ್ತೆ ನೆಚ್ಚಿಕೊಂಡ ಪಕ್ಷ

ಮಾಯಾವತಿ ಮುಂದಿದೆ ಬಹುದೊಡ್ಡ ಸವಾಲು

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರಪ್ರದೇಶದ 2022ರ ವಿಧಾನಸಭಾ ಚುನಾವಣೆಯು, ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಪಾಲಿಗೆ ಬಹು ದೊಡ್ಡ ಸವಾಲು ಎನಿಸಲಿದೆ.

ಪಕ್ಷದ ಹಲವು ಮುಖಂಡರು ಮಾಯಾವತಿ ಅವರನ್ನು ತೊರೆದಿದ್ದು, ಅತ್ಯಾಪ್ತರಾಗಿದ್ದವರೂ ಅವರ ಸಖ್ಯದಿಂದ ದೂರವಾಗಿದ್ದಾರೆ. ಹೀಗಾಗಿ, ರಾಜ್ಯದಲ್ಲಿ ನಾಲ್ಕು ಸಲ ಮುಖ್ಯಮಂತ್ರಿ ಗದ್ದುಗೆ ಹಿಡಿದಿದ್ದ ಈ ನಾಯಕಿಗೆ ಬರಲಿರುವ ಚುನಾವಣೆಯು ಅವರ ಮೂರು ದಶಕಗಳ ರಾಜಕೀಯ ಜೀವನದಲ್ಲಿ ಎದುರಾದ, ಬಹುಶಃ ಬಹು ದೊಡ್ಡ ಪಂಥಾಹ್ವಾನ.

'ಬ್ರಾಹ್ಮಣರು–ದಲಿತರು–ಮುಸ್ಲಿಮರು' ಎಂಬ ಸೂತ್ರದಡಿ 2007ರ ವಿಧಾನಸಭೆ ಚುನಾವಣೆಯನ್ನು ಎದುರಿಸಿದ್ದ ಬಿಎಸ್‌ಪಿ ನಾಯಕಿ ಮಾಯಾವತಿ, 403ರ ವಿಧಾನಸಭಾ ಕ್ಷೇತ್ರಗಳ ಪೈಕಿ 206 ಸ್ಥಾನಗಳನ್ನು ಗೆಲ್ಲುವ ಮೂಲಕ ಅಧಿಕಾರ ಹಿಡಿದಿದ್ದರು. ಆದರೆ, ಮುಂದಿನ ಚುನಾವಣೆಗಳಲ್ಲೆಲ್ಲ ಅವರ ಪಕ್ಷವು ಮುಗ್ಗರಿಸುತ್ತಲೇ ಬಂದಿದೆ. 2012ರಲ್ಲಿ ಬಿಎಸ್‌ಪಿಗೆ ಕೇವಲ 80 ಸ್ಥಾನಗಳನ್ನು ಪಡೆಯಲು ಸಾಧ್ಯವಾದರೆ, 2017ರಲ್ಲಿ ಆ ಸಂಖ್ಯೆ 19ಕ್ಕೆ ಕುಸಿಯಿತು. ಪಕ್ಷದ 15ಕ್ಕೂ ಹೆಚ್ಚು ಶಾಸಕರು ಪಕ್ಷ ನಿಷ್ಠೆಯನ್ನು ಬದಲಿಸಿದ್ದಾರೆ ಇಲ್ಲವೇ ಪಕ್ಷವಿರೋಧಿ ಚಟುವಟಿಕೆಗಳಿಗಾಗಿ ಉಚ್ಚಾಟನೆಗೊಂಡಿದ್ದರ ಫಲಿತಾಂಶವೇ ಪಕ್ಷದ ಈ ವ್ಯಥೆಗೆ ಕಾರಣವಾಯಿತು.

ಒಂದು ಕಾಲಕ್ಕೆ ಮಾಯಾವತಿ ಅವರ ಆಪ್ತವಲಯದಲ್ಲಿದ್ದ, ಉತ್ತರ ಪ್ರದೇಶ ಬಿಎಸ್‌ಪಿ ಅಧ್ಯಕ್ಷ ರಾಮ್ ಅಚಲ್ ರಾಜಭರ್, ಲಾಲ್‌ಜಿ ವರ್ಮಾ ಅವರಂಥ ನಾಯಕರು ಆರು ಜನ ಬಿಎಸ್‌ಪಿ ಶಾಸಕರೊಂದಿಗೆ ಸಮಾಜವಾದಿ ಪಕ್ಷ (ಎಸ್‌ಪಿ) ಸೇರ್ಪಡೆಯಾದರು. ಅಷ್ಟೇ ಸಂಖ್ಯೆಯ ಶಾಸಕರು ಬಿಜೆಪಿ ಸೇರಿದರು.

ಆದಾಗ್ಯೂ, ರಾಜ್ಯದಲ್ಲಿ ಶೇ 10ರಷ್ಟು ಮತದಾರರನ್ನು ಒಳಗೊಂಡ 'ಜಾಟವ' (ಎಸ್‌ಸಿ) ಸಮುದಾಯದ ಪ್ರಶ್ನಾತೀತ ನಾಯಕಿ ಎಂದು ಈಗಲೂ ಮಾಯಾವತಿ ಅವರನ್ನೇ ಪರಿಗಣಿಸಲಾಗುತ್ತದೆ. ಆದರೆ, ಕಳೆದ ಕೆಲವು ವರ್ಷಗಳಿಂದ ಬಿಎಸ್‌ಪಿಯ ಮತ ಗಳಿಕೆ ಪ್ರಮಾಣ ಗಣನೀಯವಾಗಿ ಕುಸಿಯುತ್ತಲೇ ಬಂದಿದೆ. 2007ರಲ್ಲಿ ಅಧಿಕಾರಕ್ಕೆ ಬಂದಾಗ ಶೇ 30ರಷ್ಟಿದ್ದ ಮತ ಗಳಿಕೆ, 2012ರಲ್ಲಿ ಶೇ 26ಕ್ಕೆ ಕುಸಿಯಿತು. 2017ರಲ್ಲಿ ಶೇ 22ಕ್ಕೆ ಬಂದು ನಿಂತಿತು.

ಜಾಟವ ಸಮುದಾಯವಲ್ಲದೇ, ಮುಸ್ಲಿಂ, ಇತರ ಹಿಂದುಳಿದ ವರ್ಗ ಹಾಗೂ ಇತರ ಎಸ್‌ಸಿ ಸಮುದಾಯಗಳ ಬೆಂಬಲವೂ ಬಿಎಸ್‌ಪಿಗೆ ಇತ್ತು. ಆದರೆ, ಕೆಲ ವರ್ಷಗಳಿಂದ ಅದು ಕ್ಷೀಣಿಸುತ್ತಿದೆ. ಮುಂಬರುವ ದಿನಗಳಲ್ಲಿ ಅದು ಇನ್ನಷ್ಟು ಕಡಿಮೆಯಾದರೂ ಆಶ್ಚರ್ಯವಿಲ್ಲ' ಎನ್ನುತ್ತಾರೆ ಲಖನೌದ ರಾಜಕೀಯ ವಿಶ್ಲೇಷಕರೊಬ್ಬರು.

ಭೀಮ್ ಆರ್ಮಿ (ದಲಿತ ಸಂಘಟನೆ) ಸಂಸ್ಥಾಪಕ ಚಂದ್ರಶೇಖರ್ ಆಜಾದ್ ಅಲಿಯಾಸ್ ರಾವಣ್ ಕೂಡ ಇದೀಗ ಮಾಯಾವತಿ ಅವರಿಗೆ ರಾಜಕೀಯ ಸ್ಪರ್ಧಿಯಾಗಿ ಹೊರಹೊಮ್ಮಿದ್ದಾರೆ. ವಿಶೇಷವಾಗಿ ಉತ್ತರಪ್ರದೇಶದ ಪಶ್ಚಿಮ ಭಾಗದಲ್ಲಿ ಚಂದ್ರಶೇಖರ್ ಪ್ರಾಬಲ್ಯವಿದೆ. ಆದರೆ, ಆ ಪಕ್ಷದಿಂದ ಬಿಎಸ್‌ಪಿಗೆ ಹೊಡೆತ ಬೀಳುವ ಸಾಧ್ಯತೆಯನ್ನು ಮಾಯಾವತಿ ಅಲ್ಲಗಳೆದಿದ್ದಾರೆ.

ಬಿಎಸ್‌ಪಿ ಶಾಸಕ ಷಾ ಆಲಂ ಅಲಿಯಾಸ್ ಗುಡ್ಡು ಜಮಾಲ್ ಕೆಲ ದಿನಗಳ ಹಿಂದಷ್ಟೇ ಸಮಾಜವಾದಿ ಪಕ್ಷ ಸೇರಿದ್ದಾರೆ. ಅವರ ಪ್ರಕಾರ, ಈ ಬಾರಿ ಮುಸ್ಲಿಮರು ಮಾಯಾವತಿ ಅವರನ್ನು ಬೆಂಬಲಿಸುವುದಿಲ್ಲ. 'ಬಿಜೆಪಿಯನ್ನು ಸೋಲಿಸುವ ಸ್ಥಿತಿಯಲ್ಲಿಯೂ ಅವರ ಪಕ್ಷವಿಲ್ಲ. ಆ ಸಾಮರ್ಥ್ಯವೇನಿದ್ದರೂ ಸಮಾಜವಾದಿ ಪಕ್ಷಕ್ಕಿದೆ' ಎನ್ನುತ್ತಾರೆ ಅವರು.

ಆದರೆ, 2007ರಲ್ಲಿ ಯಶಸ್ಸನ್ನು ತಂದುಕೊಟ್ಟ ತಂತ್ರಗಾರಿಕೆಗೆ ಮರಳಿರುವ ಮಾಯಾವತಿ, ಬ್ರಾಹ್ಮಣ ಸಮುದಾಯವನ್ನು ತಮ್ಮತ್ತ ಸೆಳೆಯಲು ಈಗಾಗಲೇ ರಾಜ್ಯದ ವಿವಿಧೆಡೆ ಬ್ರಾಹ್ಮಣ ಸಮ್ಮೇಳನಗಳನ್ನು ನಡೆಸಿದ್ದಾರೆ.

'ಕುಟುಂಬವಿಲ್ಲದವರಿಗೆ ಜನರ ಕಷ್ಟ ತಿಳಿಯದು'

ಲಖನೌ: ತಮ್ಮ ತಂದೆ ಮುಲಾಯಂ ಸಿಂಗ್ ಯಾದವ್ ಅವರನ್ನು ಗುರಿಯಾಗಿಸಿ, 'ಅಬ್ಬಾಜಾನ್' ಎಂದು ವ್ಯಂಗ್ಯವಾಡಿದ್ದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ತಿರುಗೇಟು ನೀಡಿರುವ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್, 'ಕುಟುಂಬ ಇದ್ದವರಿಗೆ ಮಾತ್ರ ಜನರ ನೋವು–ಸಂಕಟ ತಿಳಿಯುತ್ತದೆ; ಇಲ್ಲದವರಿಗೆ, ಜನರ ನೋವೆಂದೂ ಅರ್ಥವಾಗದು' ಎಂದು ಬುಧವಾರ ಹೇಳಿದ್ದಾರೆ.

ಲಖನೌದಿಂದ 200 ಕಿ.ಮೀ ದೂರದಲ್ಲಿರುವ ಬಾಂಡಾದಲ್ಲಿನ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅಖಿಲೇಶ್, 'ಲಾಕ್‌ಡೌನ್ ಅವಧಿಯಲ್ಲಿ ಲಕ್ಷಾಂತರ ಜನರು ತಮ್ಮ ತಮ್ಮ ಊರಿಗೆ ನಡೆದುಕೊಂಡೇ ಹೋದರು. ಈ ಸರ್ಕಾರ, ಅವರಿಗೆ ಕನಿಷ್ಠ ಸಾರಿಗೆ ಸೌಕರ್ಯವನ್ನೂ ಕಲ್ಪಿಸಲಿಲ್ಲ. ಅಂಥವರಿಂದರೂ ಇಲ್ಲಿನ ಪೊಲೀಸರು ಹಣ ವಸೂಲಿ ಮಾಡಿದರು' ಎಂದು ಹರಿಹಾಯ್ದರು.

ರೈತರಿಗೆ ರಸಗೊಬ್ಬರ ಪೂರೈಸಲೂ ಯೋಗಿ ನೇತೃತ್ವದ ಸರ್ಕಾರಕ್ಕೆ ಸಾಧ್ಯವಾಗಿಲ್ಲ ಎಂದು ವಾಗ್ದಾಳಿ ನಡೆಸಿದರು.

ತಾವು, ಬಿಜೆಪಿ ಮುಖಂಡರಿಗಿಂತಲೂ ಹೆಚ್ಚು ಹಿಂದೂ ಭಕ್ತ ಎಂದಿದ್ದ ಅಖಿಲೇಶ್ ಹೇಳಿಕೆಯನ್ನು ಅಪಹಾಸ್ಯ ಮಾಡಿದ್ದ ಮುಖ್ಯಮಂತ್ರಿ ಯೋಗಿ, 'ಹಾಗಿದ್ದರೆ, ಅಖಿಲೇಶ್ ಅವರ ಅಬ್ಬಾಜಾನ್ (ಮುಲಾಯಂ ಸಿಂಗ್ ಯಾದವ್), ಒಂದು ಹಕ್ಕಿಯೂ ಅಯೋಧ್ಯೆಯನ್ನು ಪ್ರವೇಶಿಸಲು ಸಾಧ್ಯವಿಲ್ಲ ಎಂದು ಏಕೆ ಹೇಳಿದ್ದರು?' ಎಂದು ಪ್ರಶ್ನಿಸಿದ್ದರು.

1990ರಲ್ಲಿ, ಅಯೋಧ್ಯೆಯಲ್ಲಿನ ಬಾಬರಿ ಮಸೀದಿ ಧ್ವಂಸ ಮಾಡುವುದಾಗಿ ಕರಸೇವಕರು ಬೆದರಿಕೆ ಹಾಕಿದ ಸಂದರ್ಭದಲ್ಲಿ ಮುಲಾಯಂ ಸಿಂಗ್ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು.

ಯೋಗಿ ಹೇಳಿಕೆಯಿಂದ ವ್ಯಗ್ರಗೊಂಡಿದ್ದ ಅಖಿಲೇಶ್, ಬಳಸುವ ಪದಗಳ ಬಗ್ಗೆ ಎಚ್ಚರಿಕೆ ವಹಿಸುವಂತೆ ಎಚ್ಚರಿಸಿದ್ದರು. 'ಮುಖ್ಯಮಂತ್ರಿಗೆ ತಾವಾಡುವ ಪದಗಳ ಬಗ್ಗೆ ನಿಗಾ ಇರಲಿ. ಇಲ್ಲದಿದ್ದಲ್ಲಿ ಅವರ ಬಗ್ಗೆ ನಾನೂ ಹೇಳಬೇಕಾಗುತ್ತದೆ' ಎಂದಿದ್ದರು.

ಪ್ರಜಾ ಮತ
ಜನತಂತ್ರದ ಹಬ್ಬ 2021

ರಾಜ್ಯ ಕೋವಿಡ್ ಅಂಕಿ–ಅಂಶ

29,96,470 ▲	ಒಟ್ಟು ಸೋಂಕಿತರು (29,96,148 ನಿನ್ನೆಯ ವಿವರ)
6,574 ▲	ಸಕ್ರಿಯ ಪ್ರಕರಣಗಳು
29,51,654 ▲	ಗುಣಮುಖರಾದವರು
38,213 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	322 ▲
ಗುಣಮುಖ	162 ▼
ಸಾವು	02 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಓಮೈಕ್ರಾನ್: ಕೇಂದ್ರದ ಮಾರ್ಗಸೂಚಿ ಪಾಲಿಸಲು ಮಹಾರಾಷ್ಟ್ರಕ್ಕೆ ಸೂಚನೆ

ನವದೆಹಲಿ (ಪಿಟಿಐ): ಓಮೈಕ್ರಾನ್ ನಿರ್ವಹಣೆಗೆ ಸಂಬಂಧಿಸಿ ರಾಜ್ಯಗಳು ಕೇಂದ್ರದ ಮಾರ್ಗಸೂಚಿಯನ್ನೇ ಪಾಲಿಸಬೇಕು ಎಂದು ಕೇಂದ್ರವು ಬುಧವಾರ ಹೇಳಿದೆ. ಮಹಾರಾಷ್ಟ್ರ ಸರ್ಕಾರವು ವಿದೇಶದಿಂದ ಬರುವವರ ಪ್ರತ್ಯೇಕವಾಸ ಮಾರ್ಗಸೂಚಿಯನ್ನು ಪರಿಷ್ಕರಿಸಿದ ಬಳಿಕ ಕೇಂದ್ರವು ಹೀಗೆ ಹೇಳಿದೆ.

ಓಮೈಕ್ರಾನ್ ದೃಢಪಟ್ಟ ದೇಶಗಳಿಂದ ಬರುವ ಎಲ್ಲರೂ ಒಂದು ವಾರ ಸಾಂಸ್ಥಿಕ ಪ್ರತ್ಯೇಕವಾಸದಲ್ಲಿ ಇರಬೇಕು ಎಂಬ ನಿಯಮವನ್ನು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು ಮಂಗಳವಾರ ರಾತ್ರಿ ರೂಪಿಸಿತ್ತು. ಈ ಪ್ರಯಾಣಿಕರು ಮಹಾರಾಷ್ಟ್ರಕ್ಕೆ ಬಂದಾಗ, ಬಂದ ನಂತರದ ಎರಡು, ನಾಲ್ಕು ಮತ್ತು ಏಳನೇ ದಿನ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಗಾಗುವುದು ಕಡ್ಡಾಯ. ಕೋವಿಡ್ ದೃಢಪಟ್ಟರೆ ಆಸ್ಪತ್ರೆಗೆ ದಾಖಲಾಗಬೇಕು ಮತ್ತು ದೃಢಪಡದೇ ಇದ್ದರೆ ಏಳು ದಿನ ಸಾಂಸ್ಥಿಕ ಪ್ರತ್ಯೇಕವಾಸದಲ್ಲಿರಬೇಕು ಎಂದೂ ನಿಯಮ ಮಾಡಲಾಗಿದೆ.

ಮಹಾರಾಷ್ಟ್ರ ಸರ್ಕಾರ ಹೊರಡಿಸಿರುವ ಆದೇಶವು ಕೇಂದ್ರವು ಹೊರಡಿಸಿರುವ ಮಾರ್ಗಸೂಚಿಗಿಂತ ವ್ಯತಿರಿಕ್ತವಾಗಿದೆ ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಮಹಾರಾಷ್ಟ್ರ ಸರ್ಕಾರಕ್ಕೆ ಪತ್ರ ಬರೆದು ಹೇಳಿದ್ದಾರೆ.

'ಕೇಂದ್ರ ಆರೋಗ್ಯ ಸಚಿವಾಲಯವು ಸಿದ್ಧಪಡಿಸಿರುವ ಮಾರ್ಗಸೂಚಿಗೆ ಅನುಗುಣವಾಗಿಯೇ ನಿಯಮಗಳನ್ನು ರೂಪಿಸಬೇಕು. ಮಾರ್ಗಸೂಚಿಯು ದೇಶದಾದ್ಯಂತ ಏಕರೂಪದಲ್ಲಿ ಜಾರಿಯಾಗಬೇಕು. ಪ್ರಯಾಣಿಕರಿಗೆ ಆಗುವ ಅನನುಕೂಲ ತಪ್ಪಿಸುವುದಕ್ಕಾಗಿ ಮಾರ್ಗಸೂಚಿಗೆ ವ್ಯಾಪಕ ಪ್ರಚಾರವನ್ನೂ ನೀಡಬೇಕು' ಎಂದು ಮಹಾರಾಷ್ಟ್ರ ಸರ್ಕಾರಕ್ಕೆ ಬರೆದ ಪತ್ರದಲ್ಲಿ ಹೇಳಲಾಗಿದೆ.

ಕೇಂದ್ರದ ಮಾರ್ಗಸೂಚಿ ಪ್ರಕಾರ, ಓಮೈಕ್ರಾನ್ ದೃಢಪಟ್ಟ ದೇಶಗಳಿಂದ ಬಂದ ಪ್ರಯಾಣಿಕರು, ವಿಮಾನ ನಿಲ್ದಾಣದಲ್ಲಿ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಗಾಗಬೇಕು. ಫಲಿತಾಂಶ ಬರುವ ತನಕ ಕಾಯಬೇಕು. ಕೋವಿಡ್ ಇಲ್ಲ ಎಂದು ದೃಢಪಟ್ಟರೆ ವಿಮಾನ ನಿಲ್ದಾಣದಿಂದ ಹೊರ ಹೋಗಬಹುದು.

ಜಪಾನ್: ಬೂಸ್ಟರ್ ಡೋಸ್ ನೀಡಿಕೆ ಶುರು

ಟೋಕಿಯೊ (ಎಪಿ): ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ತಡೆ ಲಸಿಕೆಯ ಬೂಸ್ಟರ್ ಡೋಸ್ ನೀಡಿಕೆಯನ್ನು ಜಪಾನ್‌ನಲ್ಲಿ ಬುಧವಾರ ಆರಂಭಿಸಲಾಗಿದೆ. ಓಮೈಕ್ರಾನ್ ಪ್ರಕರಣಗಳು ಜಪಾನ್‌ನಲ್ಲಿ ದೃಢಪಟ್ಟಿವೆ. ಹಾಗಾಗಿ, ತಕ್ಷಣದಿಂದಲೇ ಬೂಸ್ಟರ್ ಡೋಸ್ ನೀಡಲು ನಿರ್ಧರಿಸಲಾಯಿತು.

ಫೆಬ್ರುವರಿ ಮಧ್ಯ ಭಾಗದಲ್ಲಿ ಜಪಾನ್‌ನಲ್ಲಿ ಲಸಿಕೆ ನೀಡಿಕೆ ಆರಂಭಿಸಲಾಗಿತ್ತು. ಆರೋಗ್ಯ ಕಾರ್ಯಕರ್ತರಲ್ಲಿ ಕೆಲವರು ಲಸಿಕೆ ಹಾಕಿಸಿಕೊಂಡು ಒಂಬತ್ತು ತಿಂಗಳ ಮೇಲಾಯಿತು. ಹೊಸ ರೂಪಾಂತರ ತಳಿ ಕೂಡ ಪತ್ತೆಆಗಿದೆ. ಹಾಗಾಗಿ, ಬೂಸ್ಟರ್ ಬೇಕು ಎಂಬ ಬೇಡಿಕೆಯನ್ನು ಆರೋಗ್ಯ ಕಾರ್ಯಕರ್ತರು ಮುಂದಿಟ್ಟಿದ್ದರು.

ಓಮೈಕ್ರಾನ್ ರೂಪಾಂತರ ತಳಿಯ ವಿರುದ್ಧ ಲಸಿಕೆಯು ಎಷ್ಟು ಪರಿಣಾಮಕಾರಿ ಎಂಬುದು ಈಗ ಸ್ಪಷ್ಟವಿಲ್ಲ. ಆದರೆ, ಡೆಲ್ಟಾ ರೂಪಾಂತರ ತಳಿ ಸೇರಿದಂತೆ ವಿವಿಧ ತಳಿಗಳ ವಿರುದ್ಧ ಲಸಿಕೆ ಪರಿಣಾಮಕಾರಿ ಆಗಿದೆ. ಹಾಗಾಗಿ, ಬೂಸ್ಟರ್ ಡೋಸ್ ಹಾಕಿಸಿಕೊಳ್ಳುವುದು ಅಗತ್ಯ ಎಂದು ಟೋಕಿಯೊ ಮೆಡಿಕಲ್ ಸೆಂಟರ್‌ನ ಮುಖ್ಯಸ್ಥ ಕಝುಹಿರೊ ಅರಕಿ ಹೇಳಿದ್ದಾರೆ. ಜಪಾನ್‌ನ ಶೇ 77ರಷ್ಟು ಮಂದಿ ಲಸಿಕೆಯ ಎರಡೂ ಡೋಸ್ ಹಾಕಿಸಿಕೊಂಡೆ. ಲಸಿಕೆ ಅಭಿಯಾನದ ಆರಂಭದಲ್ಲಿಯೇ ಲಸಿಕೆ ಹಾಕಿಸಿಕೊಂಡ ಹಿರಿಯ ನಾಗರಿಕರಿಗೆ ಬೂಸ್ಟರ್ ಡೋಸ್ ನೀಡಿಕೆ ಜನವರಿಯಿಂದ ಆರಂಭವಾಗುವ ನಿರೀಕ್ಷೆ ಇದೆ.

ಬೂಸ್ಟರ್ ಡೋಸ್ ಏಕೈಕ ರಕ್ಷಣೆ

ನವದೆಹಲಿ (ಪಿಟಿಐ): ಓಮೈಕ್ರಾನ್ ಸೋಂಕನ್ನು ಎದುರಿಸಲು ಇರುವ ಅತ್ಯಂತ ಸುಲಭದ ದಾರಿ ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ಹಾಕಿಸಿಕೊಳ್ಳುವುದು ಎಂದು ಖ್ಯಾತ ವೈರಾಣು ಶಾಸ್ತ್ರಜ್ಞ ಡಾ. ಟಿ. ಜೇಕಬ್ ಜಾನ್ ಹೇಳಿದ್ದಾರೆ. ಹೊಸ ರೂಪಾಂತರ ತಳಿಯು ಸಾಂಕ್ರಾಮಿಕದ ಮೂರನೇ ಅಲೆಗೆ ಕಾರಣ ಆಗದಿರಬಹುದು. ಆದರೆ, ಲಸಿಕೆ ಹಾಕಿಸಿಕೊಂಡವರಲ್ಲಿ ಕೂಡ ಓಮೈಕ್ರಾನ್‌ನಿಂದಾಗಿ ಸೋಂಕು ಕಾಣಿಸಿಕೊಳ್ಳಬಹುದು ಎಂದು ಅವರು ಅಂದಾಜಿಸಿದ್ದಾರೆ. 'ದೇಶದಲ್ಲಿ ಒಟ್ಟು ಜನಸಂಖ್ಯೆಯ ಶೇ 30ರಷ್ಟು ಮಂದಿಗೆ ಮಾತ್ರ ಲಸಿಕೆಯ ಎರಡೂ ಡೋಸ್ ಹಾಕಲಾಗಿದೆ. ಅಂದರೆ, ಲೋಟದ ಮೂರನೇ ಒಂದು ಭಾಗ ಮಾತ್ರ ತುಂಬಿದೆ' ಎಂದು ಅವರು ಹೇಳಿದ್ದಾರೆ.

ಸಾಂಕ್ರಾಮಿಕದ ಮೊದಲ ಎರಡು ಅಲೆಗಳು ವ್ಯಾಪಕವಾಗಿ ಹರಡಿದ್ದರಿಂದ ಜನರಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿದೆ. ಮೊದಲ ಅಲೆಯಲ್ಲಿ ಶೇ 30ರಷ್ಟು ಮಂದಿಗೆ ಸೋಂಕು ತಗಲಿರಬಹುದು. ಎರಡನೇ ಅಲೆಯಲ್ಲಿ, ಬಾಕಿ ಉಳಿದವರಲ್ಲಿ ಶೇ 75ರಿಂದ ಶೇ 80ರಷ್ಟು ಜನರಿಗೆ ಸುಮಾರು 12 ವಾರಗಳಲ್ಲಿ ಸೋಂಕು ತಗುಲಿರಬಹುದು. ಈ ಹಿನ್ನೆಲೆಯಲ್ಲಿ ನೋಡಿದರೆ, ಓಮೈಕ್ರಾನ್ ದೇಶದೊಳಕ್ಕೆ ಪ್ರವೇಶಿಸಿ ವ್ಯಾಪಕವಾಗಿ ಹರಡಬಹುದೇ ಎಂಬುದನ್ನು ಅಂದಾಜಿಸಲಾಗದು. ಆದರೆ, ಜನರು ಹೆದರಿಕೊಂಡ ರೀತಿಯಲ್ಲಿ ಏನೂ ಆಗದು. ಹಾಗಿದ್ದರೂ ಓಮೈಕ್ರಾನ್ ದೇಶದೊಳಕ್ಕೆ ಪ್ರವೇಶಿಸದಂತೆ ನೋಡಿಕೊಳ್ಳಬೇಕು, ಲಸಿಕೆ ಹಾಕಿಸಿಕೊಳ್ಳದವರಿಗೆ ಲಸಿಕೆ ಹಾಕಿಸಬೇಕು ಮತ್ತು ಎರಡೂ ಡೋಸ್ ಲಸಿಕೆ ಹಾಕಿಸಿಕೊಂಡವರಿಗೆ ಬೂಸ್ಟರ್ ಡೋಸ್ ಹಾಕಿಸಬೇಕು ಎಂದು ಅವರು ಸಲಹೆ ಕೊಟ್ಟಿದ್ದಾರೆ.

ಲಸಿಕೆ ಹಾಕಿಸಲು ಮನವೊಲಿಕೆ: ಕಠಿಣ ಕ್ರಮ ಇಲ್ಲ– ಸುಧಾಕರ್

ಬೆಂಗಳೂರು: ಕೋವಿಡ್ ಎರಡನೇ ಡೋಸ್ ಲಸಿಕೆ ಹಾಕಿಸಿಕೊಳ್ಳಲು ಸಾರ್ವಜನಿಕರ ಮನವೊಲಿಸಲಾಗುತ್ತದೆಯೇ ಹೊರತು ಕಠಿಣ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸ್ಪಷ್ಟಪಡಿಸಿದರು.

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಎರಡು ಡೋಸ್ ಲಸಿಕೆ ಪಡೆಯದವರಿಗೆ ಸರ್ಕಾರದಿಂದ ಕೊಡುವ ಸೌಲಭ್ಯಗಳನ್ನು ಕಡಿತ ಮಾಡಬೇಕು ಮತ್ತು ದಂಡ ಹಾಕಬೇಕು ಎಂಬ ಸಲಹೆಗಳನ್ನು ನೀಡಿತ್ತು. ಆದರೆ, ಸರ್ಕಾರ ಹಾಗೆ ಮಾಡುವುದಿಲ್ಲ. ಬದಲಿಗೆ ಲಸಿಕೆ ಪಡೆಯದಿರುವವರ ಮನವೊಲಿಸಿ ಲಸಿಕೆ ಪಡೆಯುವಂತೆ ಮಾಡಲಾಗುವುದು ಎಂದರು.

ಕಳೆದ ಎರಡು ದಿನಗಳಿಂದ ಲಸಿಕೆ ತೆಗೆದುಕೊಳ್ಳುತ್ತಿರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಮನೆ– ಮನೆಗೆ ಲಸಿಕಾ ಮಿತ್ರ ಕಾರ್ಯಕ್ರಮ ಫಲಪ್ರದವಾಗಿದೆ ಎಂದು ಅವರು ಹೇಳಿದರು.

ಕೋವಿಡ್ ಪ್ರಕರಣಗಳು ಹೆಚ್ಚುವುದನ್ನು ತಡೆಯಲು ಟೆಲಿಮೆಡಿಸಿನ್, ಪರೀಕ್ಷೆಗಳ ಸಂಖ್ಯೆ ಹೆಚ್ಚಿಸುವುದು, ಮಾಸ್ಕ್ ಧರಿಸುವುದನ್ನು ಕಡ್ಡಾಯ ಮಾಡಲಾಗುವುದು ಮತ್ತು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುವುದು. ಸಾರ್ವಜನಿಕರು ಸರ್ಕಾರದ ಜತೆಗೆ ಕೈ ಜೋಡಿಸಿದರೆ ಬೇಗನೇ ಆತಂಕದಿಂದ ಹೊರಬರಬಹುದು ಎಂದು ಹೇಳಿದರು.

ಓಮೈಕ್ರಾನ್ ಮಕ್ಕಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಬಗ್ಗೆ ಸ್ಪಷ್ಟತೆ ಇಲ್ಲ. ಆದರೆ, ಅದು ಬಹಳ ವೇಗವಾಗಿ ಹರಡುವ ವೈರಾಣು ಎಂಬುದಾಗಿ ತಿಳಿದು ಬಂದಿದೆ. ಮಕ್ಕಳ ಲಸಿಕೆ ಬಗ್ಗೆ ಕೇಂದ್ರ ಸರ್ಕಾರ ಚರ್ಚೆ ಮಾಡುತ್ತಿದೆ. ಶೀಘ್ರದಲ್ಲಿಯೇ ಮಕ್ಕಳ ಲಸಿಕೆ ಎಲ್ಲಾ ರಾಜ್ಯಗಳಲ್ಲಿ ಲಭ್ಯವಾಗುವ ನಿರೀಕ್ಷೆ ಇದೆ ಎಂದರು.

ವಿಮಾನ ನಿಲ್ದಾಣದಲ್ಲಿ ಪರೀಕ್ಷೆ ಆರಂಭ: ವಿದೇಶಗಳಿಂದ ಬರುವ ಎಲ್ಲಾ ಪ್ರಯಾಣಿಕರಿಗೂ ವಿಮಾನ ನಿಲ್ದಾಣದಲ್ಲಿ ಬುಧವಾರದಿಂದಲೇ ಕಡ್ಡಾಯವಾಗಿ ಆರ್‌ಟಿಪಿಸಿಆರ್ ಪರೀಕ್ಷೆ ಆರಂಭಿಸಲಾಗಿದೆ ಎಂದು ಸುಧಾಕರ್ ಹೇಳಿದರು.

ವಿದೇಶದಿಂದ ಬರುವ ಪ್ರತಿಯೊಬ್ಬರಿಗೂ ಕಡ್ಡಾಯವಾಗಿ ಆರ್‌ಟಿಪಿಸಿಆರ್ ಪರೀಕ್ಷೆ ಮಾಡುವಂತೆ ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ. ವಿಮಾನ ನಿಲ್ದಾಣದಲ್ಲಿ ಮಾಡುವ ಆರ್‌ಟಿಪಿಸಿಆರ್ ಪರೀಕ್ಷೆ ವರದಿ ನೆಗೆಟಿವ್ ಬಂದರೆ ಅವರನ್ನು ಮನೆಗೆ ಕಳುಹಿಸಿ, 7 ದಿನಗಳ ಕಾಲ ಕ್ವಾರಂಟೈನ್‌ಗೆ ಒಳಪಡಿಸಲಾಗುವುದು ಎಂದರು.

ಕೋವಿಡ್: ಮರಣ ಪ್ರಮಾಣ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದ ಸಾವಿಗೀಡಾದವರ ಸಂಖ್ಯೆ ಕಡಿಮೆಯಾಗಿದ್ದು, ಬುಧವಾರ ಬೆಳಗಾವಿ ಮತ್ತು ಬೆಂಗಳೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಹೀಗಾಗಿ, ಸಾವಿಗೀಡಾದವರ ಒಟ್ಟು ಸಂಖ್ಯೆ 38,213ಕ್ಕೆ ಏರಿದ್ದು, ಮರಣ ಪ್ರಮಾಣ ದರವು ಶೇ 0.62ರಷ್ಟಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ತುಸು ಏರಿಕೆಯಾಗಿದೆ. ಒಂದು ದಿನದಲ್ಲಿ 322 ಮಂದಿಗೆ ಸೋಂಕು ತಗುಲಿದ್ದು, ಸೋಂಕಿತರ ಒಟ್ಟು ಸಂಖ್ಯೆ 29.96 ಲಕ್ಷಕ್ಕೆ ಏರಿಕೆಯಾಗಿದೆ. ಆದರೆ, ಸೋಂಕು ದೃಢ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ಶೇ 0.31ರಷ್ಟಿದೆ. ಮಂಗಳವಾರ ಶೇ 0.47ರಷ್ಟಿತ್ತು.

ಬುಧವಾರ 162 ಮಂದಿ ಗುಣಮುಖರಾಗಿದ್ದಾರೆ. ಇದರಿಂದ, ಇದುವರೆಗೆ 29.51 ಲಕ್ಷ ಮಂದಿ ಚೇತರಿಸಿಕೊಂಡಂತಾಗಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 6,574ರಷ್ಟಿದೆ.

ಓಮೈಕ್ರಾನ್ ವೈರಾಣು ತಡೆಗೆ ಮುಂದಾದ ಅಮೆರಿಕ

ಅಂತರರಾಷ್ಟ್ರೀಯ ಪ್ರಯಾಣಿಕರಿಗೆ ನಿರ್ಬಂಧ

ವಾಷಿಂಗ್ಟನ್ (ಎಪಿ/ಎಎಫ್‌ಪಿ): ಕೋವಿಡ್ ಹೊಸ ತಳಿ ಓಮೈಕ್ರಾನ್ ಸೋಂಕು ಹಲವು ರಾಷ್ಟ್ರಗಳಲ್ಲಿ ಹರಡುತ್ತಿರುವ ಕಾರಣ ಅಮೆರಿಕಕ್ಕೆ ಬರುವ ಅಂತರರಾಷ್ಟ್ರೀಯ ಪ್ರಯಾಣಿಕರ ಮೇಲೆ ಕಠಿಣ ನಿರ್ಬಂಧಗಳನ್ನು ಹೇರಲು ಸರ್ಕಾರ ಮುಂದಾಗಿದೆ.

ಅಮೆರಿಕಕ್ಕೆ ಬರುವವರು ವಿಮಾನ ಹತ್ತುವ 24 ಗಂಟೆಗೆ ಮೊದಲು ಕೊರೊನಾ ಸೋಂಕು ಪತ್ತೆ ಪರೀಕ್ಷೆ ಮಾಡಿಸಿ ನೆಗೆಟಿವ್ ವರದಿ ಹೊಂದಿರಬೇಕು ಎಂದು ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರ (ಸಿಡಿಸಿ) ತಿಳಿಸಿದೆ. ಇದುವರೆಗೆ ಪ್ರಯಾಣಕ್ಕೆ ಮೂರು ದಿನ ಮೊದಲು ಪರೀಕ್ಷೆ ಮಾಡಿಸಿ ನೆಗೆಟಿವ್ ವರದಿ ಹೊಂದಿದ್ದರೆ ಸಾಕಾಗಿತ್ತು.

ಲಸಿಕೆ ಪಡೆದಿದ್ದರೂ, ಪಡೆಯದೇ ಇದ್ದರೂ ಕಡ್ಡಾಯವಾಗಿ ಪರೀಕ್ಷೆ ಮಾಡಿಸಬೇಕು. ಓಮೈಕ್ರಾನ್ ವೈರಾಣು ಹೆಚ್ಚು ಅಪಾಯಕಾರಿ ಆಗಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಆಸ್ಟ್ರಿಯಾದಲ್ಲಿ ಲಾಕ್‌ಡೌನ್ ವಿಸ್ತರಣೆ (ಬರ್ಲಿನ್ ವರದಿ): ಕೋವಿಡ್ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಆಸ್ಟ್ರಿಯಾದಲ್ಲಿ ಡಿಸೆಂಬರ್ 11ರವರೆಗೆ ಲಾಕ್‌ಡೌನ್ ಅನ್ನು ವಿಸ್ತರಿಸಲಾಗಿದೆ.

ನೈಜೀರಿಯಾದಲ್ಲಿ ಮೊದಲ ಪ್ರಕರಣ (ಅಬುಜಾ ವರದಿ): ನೈಜೀರಿಯಾದಲ್ಲಿ ಬುಧವಾರ ಓಮೈಕ್ರಾನ್‌ನ ಮೊದಲ ಪ್ರಕರಣ ಪತ್ತೆಯಾಗಿದೆ. ದಕ್ಷಿಣ ಆಫ್ರಿಕಾದಿಂದ ಬಂದ 3 ಪ್ರಯಾಣಿಕರ ಪೈಕಿ ಒಬ್ಬರಿಗೆ ಕೋವಿಡ್ ರೂಪಾಂತರ ತಳಿ ಕಾಣಿಸಿಕೊಂಡಿರುವುದು ದೃಢಪಟ್ಟಿದೆ.

ಸೌದಿ ಅರೇಬಿಯಾದಲ್ಲೂ ಓಮೈಕ್ರಾನ್ ಪ್ರಕರಣ ಪತ್ತೆ (ರಿಯಾದ್ ವರದಿ): ಗಲ್ಫ್ ರಾಷ್ಟ್ರ ಸೌದಿ ಅರೇಬಿಯಾದಲ್ಲಿ ಓಮೈಕ್ರಾನ್‌ನ ಮೊದಲ ಪ್ರಕರಣ ಪತ್ತೆಯಾಗಿದೆ.

ನಾರ್ವೆಯಲ್ಲೂ ಎರಡು ಪ್ರಕರಣ ಪತ್ತೆ: (ಓಸ್ಲೊ ವರದಿ): ನಾರ್ವೆಯಲ್ಲಿ ಓಮೈಕ್ರಾನ್‌ನ ಎರಡು ಪ್ರಕರಣಗಳು ಪತ್ತೆಯಾಗಿವೆ. ಸೋಂಕಿಗೆ ಒಳಗಾದ ಇಬ್ಬರು ವ್ಯಕ್ತಿಗಳು ದಕ್ಷಿಣ ಆಫ್ರಿಕಾದಿಂದ ಪ್ರವಾಸಕ್ಕೆ ಬಂದಿದ್ದರು. ಇಬ್ಬರೂ ಈಗ ಸೋಂಕಿನಿಂದ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಪಾಲಿಕೆಯ ಮೇಯರ್ ಟಾಮ್ ಜಾರ್ಜ್ ಇಂಡ್ರೆವಿಕ್ ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಬಿಎಚ್ ಸರಣಿ ನೋಂದಣಿಗೆ ಸಾರಿಗೆ ಇಲಾಖೆ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವಾಹನಗಳಿಗೆ ಬಿಎಚ್ (ಭಾರತ್) ಸರಣಿಯ ನೋಂದಣಿ ಆರಂಭಿಸಲು ಸಾರಿಗೆ ಇಲಾಖೆ ಮಂಗಳವಾರ ಅಧಿಸೂಚನೆ ಹೊರಡಿಸಿದೆ.

ಮೋಟಾರು ವಾಹನಗಳ ನಿಯಮಗಳನ್ನು ತಿದ್ದುಪಡಿ ಮಾಡಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಆಗಸ್ಟ್ 26ರಂದು ಅಧಿಸೂಚನೆ ಹೊರಡಿಸಿತ್ತು. ಸೆ.15ರಿಂದ ಅದು ಜಾರಿಗೆ ಬಂದಿತ್ತು. ಆದರೆ, ರಾಜ್ಯದಲ್ಲಿ ಬಿಎಚ್ ಸರಣಿಯ ನೋಂದಣಿ ಆರಂಭಿಸಲು ಸಾರಿಗೆ ಇಲಾಖೆ ವಿಳಂಬ ಮಾಡಿತ್ತು.

'ಕೇಂದ್ರದ ಅಧಿಸೂಚನೆಯಂತೆ ಸಾರಿಗೇತರ ವಾಹನಗಳ ನೋಂದಣಿಯನ್ನು ಬಿಎಚ್ ಸರಣಿಯಲ್ಲಿ ನಡೆಸಲು ಅನುಮತಿ ನೀಡಿ ಅಧಿಸೂಚನೆ ಹೊರಡಿಸಲಾಗಿದ್ದು, ಸಾರಿಗೆ ಇಲಾಖೆ ಆಯುಕ್ತರು ಮಾರ್ಗಸೂಚಿ ರೂಪಿಸಲಿದ್ದಾರೆ' ಎಂದು ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ ಹೇಳಿದರು.

ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವಾಹನಗಳನ್ನು ತಡೆರಹಿತವಾಗಿ ವರ್ಗಾವಣೆ ಮಾಡಿಕೊಳ್ಳಲು ಬಿಎಚ್ ಸರಣಿಯ ನೋಂದಣಿ ಅನುಕೂಲ‌ವಾಗುತ್ತದೆ. ಸದ್ಯ ಇರುವ ವಾಹನ ನೋಂದಣಿ ಪದ್ಧತಿಯಲ್ಲಿ ಹೊರ ರಾಜ್ಯದ ವಾಹನಗಳು ಬೇರೆ ರಾಜ್ಯಗಳಲ್ಲಿ 11 ತಿಂಗಳ ತನಕ ಓಡಿಸಲು ಅನುಮತಿ ಇದೆ. ಬಳಿಕ ಆಯಾ ರಾಜ್ಯದಲ್ಲಿ ಹೊಸದಾಗಿ ಮರು ನೋಂದಣಿ ಮಾಡಿಸಬೇಕಾಗಿದೆ.


ಬಿಎಚ್ ಸರಣಿಯಲ್ಲಿ ನೋಂದಣಿಯಾಗುವ ವಾಹನಗಳನ್ನು ಯಾವ ರಾಜ್ಯದಲ್ಲಿ ಬೇಕಿದ್ದರೂ ಚಾಲನೆ ಮಾಡಬಹುದು. ಮರು ನೋಂದಣಿ ಅಗತ್ಯ ಇರುವುದಿಲ್ಲ. ನೋಂದಣಿ ಸಂಖ್ಯೆ 'ಬಿ.ಎಚ್' ಎಂದೇ ಆರಂಭವಾಗುತ್ತದೆ.

ರಾಜ್ಯದಿಂದ ರಾಜ್ಯಕ್ಕೆ ವರ್ಗಾವಣೆಯಾಗುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಉದ್ಯೋಗಿಗಳು, ರಕ್ಷಣಾ ಸಿಬ್ಬಂದಿ, ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ನೌಕರರು, ನಾಲ್ಕು ಅಥವಾ ಅದಕ್ಕೂ ಹೆಚ್ಚಿನ ರಾಜ್ಯಗಳಲ್ಲಿ ಶಾಖೆ ಹೊಂದಿರುವ ಖಾಸಗಿ ಕಂಪನಿಯ ಉದ್ಯೋಗಿಗಳು ಗುರುತಿನ ಚೀಟಿ ಸಲ್ಲಿಸಿ ಬಿಎಚ್ ಸರಣಿಯಲ್ಲಿ ವಾಹನ ನೋಂದಣಿ ಮಾಡಿಸಿಕೊಳ್ಳಬಹುದು. ಒಡಿಶಾ, ಮಹಾರಾಷ್ಟ್ರ ಮತ್ತು ಚಂಡೀಗಡ ಸೇರಿ 15 ರಾಜ್ಯಗಳಲ್ಲಿ ಈಗಾಗಲೇ ಈ ಪದ್ಧತಿ ಜಾರಿಯಲ್ಲಿದೆ.

ಈವರೆಗಿನ ಎರಡನೇಯ ಅತಿ ಹೆಚ್ಚಿನ ಮೊತ್ತ

ಜಿಎಸ್‌ಟಿ ವರಮಾನ ₹ 1.31 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ನವೆಂಬರ್‌ನಲ್ಲಿ ₹ 1.31 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿದೆ. ಜಿಎಸ್‌ಟಿ ವ್ಯವಸ್ಥೆಯು 2017 ಏಪ್ರಿಲ್‌ನಲ್ಲಿ ಅನುಷ್ಠಾನಕ್ಕೆ ಬಂದ ನಂತರ ಸಂಗ್ರಹ ಆಗಿರುವ ಎರಡನೆಯ ಅತಿಹೆಚ್ಚಿನ ಮೊತ್ತ ಇದಾಗಿದೆ. ಆರ್ಥಿಕತೆಯು ಚೇತರಿಸಿಕೊಳ್ಳುತ್ತಿದೆ ಎನ್ನುವುದನ್ನು ಈ ಅಂಕಿ–ಅಂಶವು ಸೂಚಿಸುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಬುಧವಾರ ತಿಳಿಸಿದೆ.



ವಾಣಿಜ್ಯ ಚಟುವಟಿಕೆಗಳಲ್ಲಿ ಸುಧಾರಣೆ ಹಾಗೂ ರಿಟರ್ನ್ಸ್ ಸಲ್ಲಿಕೆ ಹೆಚ್ಚಾಗಿರುವುದರಿಂದ ಈ ಪ್ರಮಾಣದಲ್ಲಿ ತೆರಿಗೆ ಸಂಗ್ರಹ ಆಗಿದೆ ಎಂದು ಸಚಿವಾಲಯವು ಹೇಳಿದೆ.

ಜಿಎಸ್‌ಟಿ ವರಮಾನ ಸಂಗ್ರಹವು ಜುಲೈ ತಿಂಗಳಿನಿಂದಲೂ ₹ 1 ಲಕ್ಷ ಕೋಟಿಗಿಂತಲೂ ಹೆಚ್ಚಿನ ಮಟ್ಟದಲ್ಲಿ ಇದೆ. ನವೆಂಬರ್‌ನಲ್ಲಿ ಆಗಿರುವ ಜಿಎಸ್‌ಟಿ ವರಮಾನ ಸಂಗ್ರಹವು ಕಳೆದ ವರ್ಷದ ನವೆಂಬರ್‌ಗೆ ಹೋಲಿಸಿದರೆ ಶೇ 25ರಷ್ಟು ಏರಿಕೆ ಆಗಿದೆ. 2019ರ ನವೆಂಬರ್‌ಗೆ ಹೋಲಿಸಿದರೆ ಶೇ 27ರಷ್ಟು ಹೆಚ್ಚಾಗಿದೆ. 2021ರ ಏಪ್ರಿಲ್‌ನಲ್ಲಿ ₹ 1.41 ಲಕ್ಷ ಕೋಟಿಗಳಷ್ಟು ಜಿಎಸ್‌ಟಿ ವರಮಾನ ಸಂಗ್ರಹ ಆಗಿದ್ದು, ಇದು ಈವರೆಗಿನ ಅತಿ ಹೆಚ್ಚಿನ ಮೊತ್ತವಾಗಿದೆ.

ನವೆಂಬರ್‌ನಲ್ಲಿ ಸಂಗ್ರಹ ಆಗಿರುವ ಒಟ್ಟಾರೆ ಮೊತ್ತದಲ್ಲಿ ಸಿಜಿಎಸ್‌ಟಿ ₹ 23,978 ಕೋಟಿ, ಎಸ್‌ಜಿಎಸ್‌ಟಿ ₹ 31,127 ಕೋಟಿ, ಐಜಿಎಸ್‌ಟಿ ₹ 66,815 ಕೋಟಿ ಮತ್ತು ಸೆಸ್ ₹ 9,606 ಕೋಟಿಗಳಷ್ಟಾಗಿದೆ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಜಿಎಸ್‌ಟಿಗೆ ಸಂಬಂಧಿಸಿದಂತೆ ತಂದಿರುವ ಆಡಳಿತಾತ್ಮಕ ಬದಲಾವಣೆಗಳು ಮತ್ತು ನೀತಿಯಲ್ಲಿನ ಸುಧಾರಣಾ ಕ್ರಮಗಳಿಂದಾಗಿಯೇ ಈಚಿನ ತಿಂಗಳುಗಳಲ್ಲಿ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿ ಈ ಪ್ರಮಾಣದ ಏರಿಕೆಗೆ ಕಾರಣವಾಗಿದೆ ಎಂದು ಅದು ಹೇಳಿದೆ.

ಸೆನ್ಸೆಕ್ಸ್ 620 ಅಂಶ ಜಿಗಿತ

ಮುಂಬೈ (ಪಿಟಿಐ): ಬ್ಯಾಂಕಿಂಗ್, ಹಣಕಾಸು ಮತ್ತು ಇಂಧನ ವಲಯದ ಷೇರುಗಳಲ್ಲಿ ಉತ್ತಮ ವಹಿವಾಟು ನಡೆದಿದ್ದರಿಂದ ದೇಶದ ಷೇರುಪೇಟೆಗಳ ಸೂಚ್ಯಂಕಗಳು ಬುಧವಾರ ಏರಿಕೆ ಹಾದಿಗೆ ಮರಳಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 620 ಅಂಶ ಜಿಗಿತ ಕಂಡು 57,685 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 183 ಅಂಶ ಹೆಚ್ಚಾಗಿ 17,166 ಅಂಶಗಳಿಗೆ ಏರಿಕೆ ಕಂಡಿತು.

ಜಾಗತಿಕ ಷೇರುಪೇಟೆಗಳ ವಹಿವಾಟು ಚೇತರಿಕೆಯ ಜೊತೆಗೆ ಜಿಡಿಪಿ ಬೆಳವಣಿಗೆ ಹೆಚ್ಚಳ ಆಗಿರುವುದು ದೇಶಿ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆಯುವಂತೆ ಮಾಡಿವೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.


ರೂಪಾಯಿ ಮೌಲ್ಯ ಹೆಚ್ಚಳ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 22 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.91ರಂತೆ ವಿನಿಮಯಗೊಂಡಿತು.

ದೆಹಲಿ; ಪೆಟ್ರೋಲ್ ದರ ಲೀಟರಿಗೆ ₹ 8ರಷ್ಟು ಇಳಿಕೆ

ನವದೆಹಲಿ (ಪಿಟಿಐ): ದೆಹಲಿ ಸರ್ಕಾರವು ಪೆಟ್ರೋಲ್ ಮೇಲಿನ ವ್ಯಾಟ್ ಇಳಿಕೆ ಮಾಡಿದೆ. ಇದರಿಂದಾಗಿ ಪೆಟ್ರೋಲ್‌ನ ಚಿಲ್ಲರೆ ಮಾರಾಟ ದರವು ಬುಧವಾರ ಮಧ್ಯರಾತ್ರಿಯಿಂದಲೇ ಲೀಟರ್ ₹ 8 ರಷ್ಟು ಕಡಿಮೆ ಆಗಿದೆ.

ಶೇ 30ರಷ್ಟು ಇದ್ದ ವ್ಯಾಟ್ ಅನ್ನು ಶೇ 19.4ಕ್ಕೆ ತಗ್ಗಿಸಿದೆ. ಇದರಿಂದಾಗಿ ದೆಹಲಿಯಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 103ರಷ್ಟು ಇದ್ದಿದ್ದು ₹ 95ಕ್ಕೆ ಇಳಿಕೆ ಆಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,983
ಇಂದಿನ ಅಂತ್ಯ	17,166
▲	183
ದಿನದ ಗರಿಷ್ಠ	17,213

ವಿನಿಮಯ ದರ

$ ಡಾಲರ್	74.91
£ ಪೌಂಡ್	99.73
€ ಯುರೊ	84.87
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1295)
ಸೋಯಾ (ರಿಫೈನ್ಡ್)	₹1215 (1215)
ಸೂರ್ಯಕಾಂತಿ (ರಿಫೈನ್ಡ್)	₹1280 (1280)
ಪಾಮೋಲಿನ್	₹1179 (1180)

ಒಂದು ಎಳನೀರು ದರ ₹ 20ರಷ್ಟು ಇಳಿಕೆ • ಏಷ್ಯಾದ ದೊಡ್ಡ ಮಾರುಕಟ್ಟೆಯಲ್ಲಿ ರೈತ ಕಂಗಾಲು

ಮದ್ದೂರು ಎಳನೀರು ಬೆಲೆ ಕುಸಿತ

• ಎಂ.ಎನ್.ಯೋಗೇಶ್

ಮುಖ್ಯಾಂಶಗಳು

- ಎಳನೀರು ವಾಪಸ್ ಕೊಂಡೊಯ್ಯುತ್ತಿರುವ ರೈತರು
- ಎರಡೂವರೆ ದಶಕದಲ್ಲಿ ಕಂಡಿರದ ದರ ಕುಸಿತ

ಮಂಡ್ಯ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಚಳಿ, ಮಳೆ ಹೆಚ್ಚಾಗಿ‌ರುವುದರಿಂದ ಮದ್ದೂರು ಎಪಿಎಂಸಿ ಎಳನೀರು ಮಾರುಕಟ್ಟೆ ವಹಿವಾಟಿನಲ್ಲಿ ತೀವ್ರ ಕುಸಿತ ಕಂಡಿದೆ. ಪ್ರತಿ ಎಳನೀರಿನ ಬೆಲೆಯಲ್ಲಿ ₹ 20 ಕಡಿಮೆಯಾಗಿದ್ದು ರೈತರು ಕಂಗಾಲಾಗಿದ್ದಾರೆ. 25 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಭಾರಿ ಪ್ರಮಾಣದಲ್ಲಿ ಬೆಲೆ ಕುಸಿದಿದೆ.

ಏಷ್ಯಾದ ಅತೀದೊಡ್ಡ ಎಳನೀರು ಮಾರುಕಟ್ಟೆ ಎಂಬ ಕೀರ್ತಿಗೆ ಪಾತ್ರವಾಗಿರುವ ಮದ್ದೂರು ಮಾರುಕಟ್ಟೆಯ ಒಟ್ಟು ವಹಿವಾಟಿನ ಶೇ 90ರಷ್ಟು ಎಳನೀರು ದೆಹಲಿಗೆ ರವಾನೆಯಾಗುತ್ತದೆ. ನಿತ್ಯ 50 ಲಾರಿ (6 ಲಕ್ಷ ಎಳನೀರು) ಹೊರರಾ‌ಜ್ಯಗಳಿಗೆ ತೆರಳುತ್ತವೆ. 40 ಲಾರಿಗಳು ದೆಹಲಿಗೆ ತೆರಳಿದರೆ ಉಳಿದವು ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರ‌ದೇಶಕ್ಕೆ ತೆರಳುತ್ತವೆ.

ತಿಂಗಳ ಹಿಂದೆ ಎಳನೀರಿನ ಬೆಲೆ ₹ 36ವರೆಗೂ ತಲುಪಿತ್ತು, ಬೇಸಿಗೆಯಲ್ಲಿ ₹ 38ಕ್ಕೆ ಏರಿಕೆಯಾಗಿದ್ದೂ ಉಂಟು. ಆದರೆ ವಾಯುಭಾರ ಕುಸಿತದಿಂದ ಶೀತಗಾಳಿ ಹೆಚ್ಚಾದ ನಂತರ ಬೇಡಿಕೆ ಕುಸಿದಿದೆ. ಸದ್ಯ ಉತ್ತಮ ಗುಣಮಟ್ಟದ ಎಳನೀರು ₹ 14–15ಕ್ಕೆ ಮಾರಾಟವಾ‌ಗುತ್ತಿದ್ದು ಪ್ರತಿ ಎಳನೀರಿನ ಬೆಲೆಯಲ್ಲಿ ₹ 20–22 ಕುಸಿತ ಕಂಡಿರುವುದರಿಂದ, ಮಾರುಕಟ್ಟೆಗೆ ತಂದ ಎಳನೀರನ್ನು ನೋವಿನಿಂದ ವಾಪಸ್ ಕೊಂಡೊಯ್ಯು‌ತ್ತಿದ್ದಾರೆ.

ಮದ್ದೂರು ಸಿಹಿ ಎಳನೀರು ದೇಶದೆಲ್ಲೆಡೆ ಪ್ರಸಿದ್ಧಿ ಪಡೆದಿದ್ದು ಚಳಿಗಾಲದಲ್ಲೂ ಬೇಡಿಕೆ ಕಡಿಮೆಯಾಗುತ್ತಿರಲಿಲ್ಲ. ನವೆಂಬರ್–ಡಿಸೆಂಬರ್‌ನಲ್ಲಿ ಹೆಚ್ಚೆಂದರೆ ₹ 8–10 ಕಡಿಮೆಯಾಗುತ್ತಿತ್ತು, ಆದರೆ ಈಗ ದಿಢೀರ್ ₹ 20 ಕುಸಿದಿರುವುದು ರೈತರ ಕಳವಳಕ್ಕೆ ಕಾರಣವಾಗಿವೆ.

'ಕಳೆದ ತಿಂಗಳು ₹ 36ಕ್ಕೆ ಮಾರಾಟ ಮಾಡಿದ್ದೆ, ಈಗ ₹ 14ಕ್ಕೆ ಕೇಳುತ್ತಿದ್ದಾರೆ. ಎಳನೀರು ಕೊಯ್ದ ಖರ್ಚು ಕೂಡ ಬರುವುದಿಲ್ಲ. ಹೀಗಾಗಿ ವಾಪಸ್ ಕೊಂಡೊಯ್ಯುತ್ತೇನೆ. ಸ್ಥಳೀಯ ವರ್ತಕರು ಹೆಚ್ಚು ಬೆಲೆ ಕೊಟ್ಟರೆ ಅವರಿಗೆ ಮಾರುತ್ತೇನೆ' ಎಂದು ಮದ್ದೂರು ತಾಲ್ಲೂಕು ವಳಗೆರೆಹಳ್ಳಿಯ ರೈತ ಯೋಗೇಶ್ ಹೇಳಿದರು.


ಮದ್ದೂರು ಎಪಿಎಂಸಿಗೆ ರೈತರು ತಂದ ಎಳನೀರು ಮಾರಾಟವಾಗದೇ ಉಳಿದಿರುವುದು

ಚಳಿಗಾಳಿ ಕಾರಣ: 'ದೆಹಲಿಯಲ್ಲಿ ಚಳಿಗಾಳಿ ತೀವ್ರಗೊಂಡಿದ್ದು ಜನರು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಹೀಗಾಗಿ ಎಳನೀರು ಬೇಡಿಕೆ ಕಡಿಮೆಯಾಗಿದೆ. ಜೊತೆಗೆ ಡೀಸೆಲ್ ಬೆಲೆ ಏರಿಕೆಯಾದ ನಂತರ ಸಾಗಣೆ ವೆಚ್ಚ ದುಬಾರಿಯಾಗುತ್ತಿದ್ದು ವರ್ತಕರು ಮದ್ದೂರು ಎಳನೀರು ಬದಲಿಗೆ ಗುಜರಾತ್‌ನಿಂದ ಎಳನೀರು ತರಿಸುತ್ತಿದ್ದಾರೆ. ಹೀಗಾಗಿ ಇಲ್ಲಿನ ಎಳನೀರಿನ ಬೆಲೆ ಕುಸಿದಿದೆ' ಎಂದು ವರ್ತಕರು ಹೇಳುತ್ತಾರೆ.

'ಈ ಪರಿ ಬೆಲೆ ಕುಸಿದದ್ದನ್ನು ಎಂದೂ ನೋಡಿಲ್ಲ. ರೈತರಿಗೆ ತೀವ್ರ ನಷ್ಟವಾಗುತ್ತಿದ್ದು ಮಾರುಕಟ್ಟೆಯ ವಹಿವಾಟು ಕೂಡ ಕುಸಿಯುತ್ತಿದೆ' ಎಂದು ವರ್ತಕ ರಾಘವ್ ತಿಳಿಸಿದರು.

'ಚಳಿಗಾಲದಲ್ಲಿ ಬೆಲೆ ಕುಸಿತ ಸಾಮಾನ್ಯ. ಆದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬೆಲೆ ಕುಸಿದಿರುವುದು ಇದೇ ಮೊದಲು. ಕಾರಣಗಳ ಬಗ್ಗೆ ಪರಿ‌ಶೀಲಿಸಲಾಗುವುದು' ಎಂದು ಎಪಿಎಂಸಿ ಕಾರ್ಯದರ್ಶಿ ತಾಸೀನ್ ನಿಕತ್‌ಖಾನ್ ತಿಳಿಸಿದರು.

ಚಿಲ್ಲರೆ ಮಾರುಕಟ್ಟೆ ದರ ₹ 40

ಎಪಿಎಂಸಿ ಮಾರುಕಟ್ಟೆಯಲ್ಲಿ ಎಳನೀರು ಬೆಲೆ ತೀವ್ರ ಕುಸಿದಿದ್ದರೂ ಲಾಭ ಗ್ರಾಹಕರಿಗೆ ದೊರಕುತ್ತಿಲ್ಲ. ಚಿಲ್ಲರೆ ಮಾರು‌ಕಟ್ಟೆಯಲ್ಲಿ ₹ 40ಕ್ಕೇ ಮಾರಾಟ ನಡೆದಿದೆ. 'ಬೆಲೆ ಕುಸಿದಿರುವುದು ಗ್ರಾಹಕರಿಗೆ ಗೊತ್ತಿಲ್ಲ, ಯಾರೂ ಪ್ರಶ್ನಿಸಿಲ್ಲ. ಹೀಗಾಗಿ ಮಾಮೂಲಿ ದರದಲ್ಲೇ ಮಾರುತ್ತಿದ್ದೇವೆ' ಎಂದು ವ್ಯಾಪಾರಿಯೊಬ್ಬರು ತಿಳಿಸಿದರು.

ನವೆಂಬರ್‌ನಲ್ಲಿ ತಯಾರಿಕಾ ವಲಯದ ಚಟುವಟಿಕೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಗಳು ನವೆಂಬರ್‌ನಲ್ಲಿ ಉತ್ತಮ ಬೆಳವಣಿಗೆ ಕಂಡಿವೆ ಎಂದು ಐಎಚ್‌ಎಸ್ ಮರ್ಕಿಟ್ ಇಂಡಿಯಾ ಸಂಸ್ಥೆಯು ಹೇಳಿದೆ. ಮ್ಯಾನುಫ್ಯಾಕ್ಚರಿಂಗ್ ಫರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಅಕ್ಟೋಬರ್‌ನಲ್ಲಿ 55.9ರಷ್ಟು ಇದ್ದಿದ್ದು ನವೆಂಬರ್‌ನಲ್ಲಿ 57.6ಕ್ಕೆ ಏರಿಕೆ ಆಗಿದೆ.

ಮಾರುಕಟ್ಟೆ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡುಬರುತ್ತಿರು‌ವುದರಿಂದ ಕಳೆದ ಫೆಬ್ರುವರಿ‌ಯಿಂದಲೂ ತಯಾರಿಕೆ ಮತ್ತು ಮಾರಾಟವು ಹೆಚ್ಚಾಗುತ್ತಲೇ ಇದೆ. ಈ ವರ್ಷದ ನವೆಂಬರ್‌ನಲ್ಲಿ ಸೂಚ್ಯಂಕ ಕಂಡಿರುವ ಏರಿಕೆಯು ದೀರ್ಘಾವಧಿಯ ಸರಾಸರಿ ಮಟ್ಟವನ್ನು ಮೀರಿದೆ ಎಂದು ಅದು ಹೇಳಿದೆ.

ನೇಮಕಾತಿ ಚಟುವಟಿಕೆಯ‌ಲ್ಲಿಯೂ ಸುಧಾರಣೆ ಆಗುತ್ತಿದೆ ಎನ್ನುವ ಸೂಚನೆಯನ್ನು ನವೆಂಬರ್ ತಿಂಗಳ ತಯಾರಿಕಾ ವಲಯದ ಬೆಳವಣಿಗೆಯು ನೀಡಿದೆ.



'ತಯಾರಿಕಾ ಉದ್ಯಮದ ಬೆಳವಣಿಗೆಯು ನವೆಂಬರ್‌ನಲ್ಲಿ ಇನ್ನಷ್ಟು ಹೆಚ್ಚಾಗಿದೆ. ಮುಂಬರುವ ತಿಂಗಳುಗಳಲ್ಲಿ ಬೆಳವಣಿಗೆಯು ಇನ್ನೂ ಹೆಚ್ಚಿನ ಮಟ್ಟದಲ್ಲಿ ಇರುವ ನಿರೀಕ್ಷೆ' ಇದೆ ಎಂದು ಐಎಚ್‌ಎಸ್ ಮರ್ಕಿಟ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ.ಲಿಮಾ ಹೇಳಿದ್ದಾರೆ.

ಕೋವಿಡ್‌ನ ಹೊಸ ತಳಿ ಮತ್ತು ಹಣದುಬ್ಬರದ ಒತ್ತಡವು ಈ ವಲಯದ ಮುಂಬರುವ ತಿಂಗಳುಗ‌ಳಲ್ಲಿನ ಬೆಳವಣಿಗೆಗೆ ಅಡ್ಡಿಪಡಿಸುವ ಸಾಧ್ಯತೆ ಇದೆ. ಹಣದುಬ್ಬರದ ಒತ್ತಡವು ಬೇಡಿಕೆ ಮತ್ತು ತಯಾರಿಕೆಯ ಮೇಲೆ ಪರಿಣಾಮ ಬೀರಬಹುದು ಎನ್ನುವುದು ಉದ್ಯಮದ ಆತಂಕವಾಗಿದೆ. ವಹಿವಾಟು ನಡೆಸುವ ವಿಶ್ವಾಸವು ಒಂದೂವರೆ ವರ್ಷದಿಂದ ಕನಿಷ್ಠ ಮಟ್ಟದಲ್ಲಿ ಇದೆ ಎಂದು ಲಿಮಾ ತಿಳಿಸಿದ್ದಾರೆ.

ಶಾಲೆಯಲ್ಲಿ ಶೂಟೌಟ್, 3 ವಿದ್ಯಾರ್ಥಿಗಳ ಸಾವು

ವಾಷಿಂಗ್ಟನ್ (ಎಪಿ): ಮಿಚಿಗನ್‌ನ ಆಕ್ಸ್‌ಫರ್ಡ್ ಪ್ರೌಢಶಾಲೆ ಆವರಣದಲ್ಲಿ 15 ವರ್ಷದ ವಿದ್ಯಾರ್ಥಿಯೊಬ್ಬ ಮಂಗಳವಾರ ಗುಂಡು ಹಾರಿಸಿದ ಪರಿಣಾಮ ಮೂವರು ವಿದ್ಯಾರ್ಥಿಗಳು ಸಾವಿಗೀಡಾಗಿದ್ದು, ಗಾಯಗೊಂಡಿರುವ 8ಮಂದಿಯ ಪೈಕಿ ಕೆಲವರ ಸ್ಥಿತಿ ಗಂಭೀರವಾಗಿದೆ.

ಗುಂಡು ಹಾರಿಸಿದ ವಿದ್ಯಾರ್ಥಿಯನ್ನು ವಶಕ್ಕೆ ಪಡೆದಿದ್ದು, ಬಂದೂಕು ಜಪ್ತಿ ಮಾಡಲಾಗಿದೆ. ಘಟನೆಗೆ ನಿಖರವಾಗಿ ಕಾರಣ ಏನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಗಾಯಗೊಂಡವರಲ್ಲಿ ಶಿಕ್ಷ‌ಕರೊಬ್ಬರು ಸೇರಿದ್ದಾರೆ. ವಿದ್ಯಾರ್ಥಿನಿ‌ಯೊಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿಯು ಸೆಮಿ ಆಟೋಮ್ಯಾಟಿಕ್ ಹ್ಯಾಂಡ್‌ಗನ್‌ನಿಂದ 5 ನಿಮಿಷದಲ್ಲಿ 15-20 ಬಾರಿ ಗುಂಡು ಹಾರಿಸಿದ್ದಾನೆ. ಕರೆ ಬಂದ ಐದು ನಿಮಿಷದಲ್ಲೇ ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶುಕ್ರವಾರ ಅಷ್ಟೇ ಬಾಲಕನ ತಂದೆ ಬಂದೂಕು ಖರೀದಿಸಿ ತಂದಿದ್ದರು. ಯಾವ ಕಾರಣಕ್ಕಾಗಿ ಖರೀದಿ ಮಾಡಿದ್ದರು ಎಂಬುದು ಗೊತ್ತಾಗಿಲ್ಲ. ಬಾಲಕ ಶೂಟಿಂಗ್ ಬಗ್ಗೆ ಅಭ್ಯಾಸ ಮಾಡುತ್ತಿದ್ದ ಎಂಬುದು ಗೊತ್ತಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ, ಆ ವಿದ್ಯಾರ್ಥಿಯ ಹೆಸರನ್ನು ಬಹಿರಂಗಪಡಿಸಿಲ್ಲ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-52500
ಕುಮಟ	
ಚಿಪ್ಪು	24509-41019
ಕೋಕ	20169-35089
ಫ್ಯಾಕ್ಟರಿ	12169-18629
ಹಳೆಚಾಲಿ	46509-49599
ಹೊಸಚಾಲಿ	37509-41699
ಪುತ್ತೂರು	
ಹೊಸತು	27500-42500
ಕಾರ್ಕಳ	
ಹೊಸತು	38000-43500
ಹಳತು	45000-51500
ಸಿದ್ದಾಪುರ	
ಬಿಳಿಗೋಟು	34899-41469
ಚಾಲಿ	46899-50299
ಕೋಕ	22699-38099
ಹೊಸಚಾಲಿ	38899-38899
ಕೆಂಪುಗೋಟು	33089-33089
ರಾಶಿ	43099-48301
ತಟ್ಟಬೆಟ್ಟೆ	35099-35099
ಶಿರಸಿ	
ಬೆಟ್ಟೆ	34199-49389
ಬಿಳಿಗೋಟು	24699-44199
ಚಾಲಿ	36099-50698
ರಾಶಿ	28831-50909
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	47689-53689
ಗೊಬರಲು	17009-38340
ರಾಶಿ	42509-46809
ಸರಕು	49199-73050
ರಾಮನಗರ ರೇಷ್ಮೆ	
ಮಿಶ್ರತಳಿ	330-552
ದ್ವಿತಳಿ	195-682

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟೇಷನ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	14600	14300	232.20ಸೆಂಟ್ಸ್
ಎಸಿ	---	5500	6150	
ಆರ್‌ಪಿ	---	---	---	ಲಂಡನ್
ಆರ್‌ಸಿ	---	---	---	2260 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

1-12-2021

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9950-10000
ದಪ್ಪ ಮಧ್ಯಪ್ರದೇಶ(ಹೊಸ)	9800-9850
ದಪ್ಪ ಗುಜರಾತ್(ಹೊಸ)	9400-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1305)
ಒಂದು ವಾರದ ಡೆಲಿವರಿ	1315 (1300)
ಸೋಯಾ ಕಚ್ಚಾ	1155 (1157)
ಪಾಮ್ ವಾರದ ಡೆಲಿವರಿ	1177 (1178)
ಸೂರ್ಯಕಾಂತಿ ಎಣ್ಣೆ ಕಚ್ಚಾ	1190 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,700 (47,950)
ಬೆಳ್ಳಿ ಕೆ.ಜಿ	62,000 (62,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೊಹ್ಲಿ ಏಕದಿನ ತಂಡದ ನಾಯಕತ್ವಕ್ಕೆ ಕುತ್ತು?

ಮುಂಬೈ (ಪಿಟಿಐ): ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳುವ ಭಾರತ ಕ್ರಿಕೆಟ್ ತಂಡದ ತಂಡದ ಆಯ್ಕೆ ಈ ವಾರದಲ್ಲಿ ನಡೆಯಲಿದ್ದು ವಿರಾಟ್ ಕೊಹ್ಲಿ ಅವರ ಏಕದಿನ ತಂಡದ ನಾಯಕತ್ವದ ಅಳಿವು ಮತ್ತು ಉಳಿವು ನಿರ್ಧಾರವಾಗಲಿದೆ.

ಮುಂದಿನ ವರ್ಷ ಟ್ವೆಂಟಿ20 ವಿಶ್ವಕಪ್ ಟೂರ್ನಿ ನಡೆಯಲಿರುವುದ‌ರಿಂದ ಚೇತನ್ ಶರ್ಮಾ ನೇತೃತ್ವದ ಆಯ್ಕೆ ಸಮಿತಿ ಚುಟುಕು ಕ್ರಿಕೆಟ್ ಮೇಲೆ ಹೆಚ್ಚು ಗಮನ ಹರಿಸಿದೆ. ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್ ಪ್ರವಾಸದ ವೇಳೆ ಆಡುವ ಒಟ್ಟು 6 ಪಂದ್ಯ ಸೇರಿದಂತೆ ಮುಂದಿನ ಏಳು ತಿಂಗಳಲ್ಲಿ ಒಂಬತ್ತು ಏಕದಿನ ಪಂದ್ಯಗಳನ್ನು ಮಾತ್ರ ಭಾರತ ಆಡಲಿದೆ.

ದಕ್ಷಿಣ ಆಫ್ರಿಕಾದಲ್ಲಿ ಏಕೈಕ ಬಯೊಬಬಲ್ ಇರುವುದರಿಂದ 20ರಿಂದ 23 ಮಂದಿಯ ತಂಡವನ್ನು ಕಳುಹಿಸುವ ಸಾಧ್ಯತೆ ಇದೆ. ಆದ್ದರಿಂದ ಟ್ವೆಂಟಿ20 ತಂಡದ ನಾಯಕನಿಗೇ ಏಕದಿನ ತಂಡವನ್ನೂ ಮುನ್ನಡೆಸುವ ಹೊಣೆ ನೀಡುವ ಚಿಂತನೆ ಇದೆ. ಹೀಗಾಗಿ ಕೊಹ್ಲಿ ಅವರನ್ನು ನಾಯಕತ್ವದಿಂದ ಬಿಡಬೇಕೇ ಅಥವಾ ಉಳಿಸಿಕೊಳ್ಳಬೇಕೇ ಎಂಬುದರ ಬಗ್ಗೆ ಚರ್ಚೆಗಳು ನಡೆದಿವೆ.


ವಿರಾಟ್ ಕೊಹ್ಲಿ– ಎಎಫ್‌ಪಿ ಚಿತ್ರ

ಭಾರತ–ನ್ಯೂಜಿಲೆಂಡ್ ಅಭ್ಯಾಸ ರದ್ದು

ಭಾರತ ಮತ್ತು ನ್ಯೂಜಿಲೆಂಡ್ ತಂಡಗಳ ನಡುವಿನ ಎರಡನೇ ಮತ್ತು ಅಂತಿಮ ಟೆಸ್ಟ್ ಪಂದ್ಯ ಇದೇ ಮೂರರಿಂದ ಮುಂಬೈಯಲ್ಲಿ ನಡೆಯಲಿದೆ. ದಿನವಿಡೀ ಮಳೆ ಸುರಿದ ಕಾರಣ ಬುಧವಾರ ಎರಡೂ ತಂಡಗಳು ಅಭ್ಯಾಸವನ್ನು ರದ್ದು ಮಾಡಿದ್ದವು. ಪಂದ್ಯಕ್ಕೂ ಮಳೆ ಅಡ್ಡಿಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ವಿಶ್ರಾಂತಿಯಲ್ಲಿದ್ದ ವಿರಾಟ್ ಕೊಹ್ಲಿ ತಂಡಕ್ಕೆ ಮರಳುವುದರಿಂದ ಮಯಂಕ್ ಅಗರವಾಲ್ ಅವರ ಸ್ಥಾನಕ್ಕೆ ಕುತ್ತು ಬರುವ ಸಾಧ್ಯತೆ ಇದೆ ಎನ್ನಲಾಗಿದೆ.

ಟೆಸ್ಟ್: ಉತ್ತಮ ಮೊತ್ತದತ್ತ ಭಾರತ 'ಎ' ತಂಡ

ಬ್ಲೂಮ್‌ಫೌಂಟೇನ್: ಆತಿಥೇಯ ದಕ್ಷಿಣ ಆಫ್ರಿಕಾ 'ಎ' ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದ ಭಾರತ 'ಎ' ತಂಡ ಎರಡನೇ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮೊತ್ತದತ್ತ ಹೆಜ್ಜೆ ಇರಿಸಿದೆ. ಎದು‌ರಾಳಿಗಳನ್ನು ಮೊದಲ ಇನಿಂಗ್ಸ್‌ನಲ್ಲಿ 297 ರನ್‌ಗಳಿಗೆ ಆಲೌಟ್ ಮಾಡಿದ ಭಾರತ 'ಎ' ತಂಡ ಎರಡನೇ ದಿನ 59 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 198 ರನ್ ಗಳಿಸಿದ್ದು 99 ರನ್‌ಗಳಿಂದ ಹಿಂದೆ ಉಳಿದಿದೆ.

ಪೃಥ್ವಿ ಶಾ (42; 54 ಎಸೆತ, 6 ಬೌಂಡರಿ) ನಾಯಕ ಪ್ರಿಯಾಂಕ್ ಪಾಂಚಾಲ್ ಜೊತೆಗೂಡಿ ಮೊದಲ ವಿಕೆಟ್‌ಗೆ ಉತ್ತಮ ಆಟವಾಡಿದರು. ಇವರಿಬ್ಬರು 57 ರನ್ ಕಲೆ ಹಾಕಿದರು. ಪ್ರಿಯಾಂಕ್ ಔಟಾದ ನಂತರ ಅಭಿಮನ್ಯು ಈಶ್ವರನ್ ಶೂನ್ಯಕ್ಕೆ ಮರಳಿದರು. ಪೃಥ್ವಿ ಶಾ ಬೆನ್ನಲ್ಲೇ ಬಾಬಾ ಅಪರಾಜಿತ್ ಕೂಡ ಖಾತೆ ತೆರೆಯದೆ ಮರಳಿದರು.

ನಂತರ ಹನುಮ ವಿಹಾರಿ (ಬ್ಯಾಟಿಂಗ್ 45; 146 ಎ, 6 ಬೌಂ) ಮತ್ತು ಇಶಾನ್ ಕಿಶನ್ (49; 71 ಎ, 9 ಬೌಂ) ಅವರ ಆಟ ರಂಗೇರಿತು. ಐದನೇ ವಿಕೆಟ್‌ಗೆ ಇವಿರಬ್ಬರು 78 ರನ್ ಸೇರಿಸಿದರು. ಸರ್ಫರಾಜ್ ಖಾನ್ ಮೂರು ಬೌಂಡರಿಗಳೊಂದಿಗೆ 30 ರನ್ ಗಳಿಸಿ ಅಜೇಯರಾಗಿ ಉಳಿದಿದ್ದಾರೆ.

ಮೊದಲ ದಿನವಾದ ಮಂಗಳವಾರ ಏಳು ವಿಕೆಟ್ ಕಳೆದುಕೊಂಡು 233 ರನ್ ಕಲೆ ಹಾಕಿದ್ದ ಆತಿಥೇಯ ತಂಡದ ಪರ ಬುಧವಾರ ಮಾರ್ಕೊ ಜಾನ್ಸೆನ್ (70; 123ಎ, 8 ಬೌಂ, 1 ಸಿ) ಮಿಂಚಿದರು. ಮೊದಲ ದಿನ ತಲಾ ಎರಡು ವಿಕೆಟ್ ಉರುಳಿಸಿದ್ದ ಸೈನಿ ಮತ್ತು ಪೊರೆಲ್ ಮತ್ತೆ ಒಂದೊಂದು ವಿಕೆಟ್ ಪಡೆದುಕೊಂಡರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ 'ಎ', ಮೊದಲ ಇನಿಂಗ್ಸ್: 105.5 ಓವರ್‌ಗಳಲ್ಲಿ 297 (ಮಂಗಳವಾರ 85 ಓವರ್‌ಗಳಲ್ಲಿ 7ಕ್ಕೆ 233 (ಮಾರ್ಕೊ ಜಾನ್ಸೆನ್ ಔಟಾಗದೆ 70, ಗ್ಲೆಂಟನ್ ಟರ್ಮನ್ 27; ನವದೀಪ್ ಸೈನಿ 67ಕ್ಕೆ3, ಅರ್ಜಾನ್ ನಾಗಸ್ವಾಲ 60ಕ್ಕೆ1, ಇಶಾನ್ ಪೊರೆಲ್ 49ಕ್ಕೆ3, ಸೌರಭ್ ಕುಮಾರ್ 75ಕ್ಕೆ1, ಬಾಬಾ ಅಪರಾಜಿತ್ 34ಕ್ಕೆ1); ಭಾರತ 'ಎ': 59 ಓವರ್‌ಗಳಲ್ಲಿ 5ಕ್ಕೆ 198 (ಪೃಥ್ವಿ ಶಾ 42, ಪ್ರಿಯಾಂಕ್ ಪಾಂಚಾಲ್ 24, ಹನುಮ ವಿಹಾರಿ ಬ್ಯಾಟಿಂಗ್ 45, ಇಶಾನ್ ಕಿಶನ್ 49, ಸರ್ಫರಾಜ್ ಖಾನ್ ಬ್ಯಾಟಿಂಗ್ 30; ಗ್ಲೆಂಟನ್ ಟುರ್‌ಮನ್ 46ಕ್ಕೆ2, ಲೂಥೊ ಸಿಪಾಮ್ಲ 44ಕ್ಕೆ1, ಮಾರ್ಕೊ ಜಾನ್ಸೆನ್ 20ಕ್ಕೆ2).


ಹನುಮ ವಿಹಾರಿ –ಎಎಫ್‌ಪಿ ಚಿತ್ರ

ರಾಹುಲ್ ನಡೆಗೆ ಕಿಂಗ್ಸ್ ಅಸಮಾಧಾನ

ನವದೆಹಲಿ (ಪಿಟಿಐ): ತಂಡದ ನಾಯಕನಾಗಿ ಎಲ್ಲ ಸ್ವಾತಂತ್ರ್ಯ ಹೊಂದಿದ್ದರೂ ಕೆ.ಎಲ್.ರಾಹುಲ್ ಅವರು ಫ್ರಾಂಚೈಸ್ ತೊರೆದಿರುವುದ‌ಕ್ಕೆ ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) ಪಂಜಾಬ್ ಕಿಂಗ್ಸ್ ಫ್ರಾಂಚೈಸ್ ಅಸಮಾಧಾನ ವ್ಯಕ್ತಪಡಿ‌ಸಿದೆ. ಅವರು ಈ ಹಿಂದೆಯೇ ಬೇರೆ ಫ್ರಾಂಚೈಸಿಗಳನ್ನು ಸಂಪರ್ಕಿಸಿದ್ದಲ್ಲಿ ಅದು ನಿಯಮಗಳಿಗೆ ವಿರುದ್ಧವಾದದ್ದು ಎಂದು ಹೇಳಿದೆ.

2020ರಲ್ಲಿ ರಾಹುಲ್ ಅವರನ್ನು ಪಂಜಾಬ್, ನಾಯಕನನ್ನಾಗಿ ಮಾಡಿತ್ತು. ಬಳಿಕ ಅವರು ಉತ್ತಮ ಸಾಮರ್ಥ್ಯ ತೋರಿದ್ದರೂ ತಂಡವನ್ನು ಪ್ಲೇ–ಆಫ್ ಪ್ರವೇಶಿಸುವಂತೆ ಮಾಡುವುದು ಸಾಧ್ಯವಾಗಿರಲಿಲ್ಲ. ಅವರೀಗ ಹೊಸದಾಗಿ ಸೇರಲಿರುವ ಲಖನೌ ಫ್ರಾಂಚೈಸ್ ಜತೆ ಸಂಪರ್ಕ ಹೊಂದಿದ್ದು, ಮುಂದಿನ ಆವೃತ್ತಿಯಲ್ಲಿ ಆ ತಂಡವನ್ನು ಮುನ್ನಡೆಸಲಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

'ರಾಹುಲ್ ಉಳಿಸಿಕೊಳ್ಳಲು ಬಯಸಿದ್ದೆವು. ಆದರೆ, ಅವರು ಹರಾಜು ಪ್ರಕ್ರಿಯೆಗೆ ಒಳಪಡಲು ನಿರ್ಧರಿಸಿದರು. ಅವರು ಒಂದು ವೇಳೆ ಈ ಹಿಂದೆಯೇ ಬೇರೆ ಫ್ರಾಂಚೈಸ್ ಸಂಪರ್ಕಿಸಿದ್ದಲ್ಲಿ ಅದು ನಿಯಮಬಾಹಿರ' ಎಂದು ಪಂಜಾಬ್ ಸಹ ಮಾಲೀಕ ನೆಸ್ ವಾಡಿಯಾ ಹೇಳಿದ್ದಾರೆ.

ರ‍್ಯಾಂಕಿಂಗ್: ರೋಹಿತ್, ಕೊಹ್ಲಿ ಸ್ಥಾನ ಸ್ಥಿರ

ದುಬೈ (ಪಿಟಿಐ): ಭಾರತದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ಬ್ಯಾಟರ್‌ಗಳ ಪಟ್ಟಿಯಲ್ಲಿ ಕ್ರಮವಾಗಿ ಐದು ಮತ್ತು ಆರನೇ ಸ್ಥಾನಗಳಲ್ಲಿ ಮುಂದುವರಿದಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ರವಿಚಂದ್ರನ್ ಅಶ್ವಿನ್ ಸ್ಥಾನ ಕೂಡ ಸ್ಥಿರವಾಗಿದೆ.

ಅಶ್ವಿನ್ 2ನೇ ಸ್ಥಾನದಲ್ಲಿದ್ದು, ವೇಗಿ ಜಸ್‌ಪ್ರೀತ್ ಬೂಮ್ರಾ 10ನೇ ಕ್ರಮಾಂ‌ಕದಲ್ಲಿದ್ದಾರೆ.

ಶ್ರೇಯಸ್ ಅಯ್ಯರ್ (ಎರಡೂ ಇನಿಂಗ್ಸ್‌ಗಳಲ್ಲಿ ಕ್ರಮವಾಗಿ 105 ಮತ್ತು 65 ರನ್) ಬ್ಯಾಟಿಂಗ್ ಪಟ್ಟಿಗೆ ಪ್ರವೇಶಿಸಿದ್ದು, ಸದ್ಯ 74ನೇ ಸ್ಥಾನದಲ್ಲಿ‌ದ್ದಾರೆ. ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಕ್ರಮವಾಗಿ 66 ಮತ್ತು 99ನೇ ಸ್ಥಾ‌ನಗಳಲ್ಲಿದ್ದಾರೆ.

ಸಂಕ್ಷಿಪ್ತ ಸುದ್ದಿ

11ರಿಂದ ರಾಷ್ಟ್ರೀಯ ಹಾಕಿ

ಪುಣೆ (ಪಿಟಿಐ): ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್ ಡಿಸೆಂಬರ್ 11ರಿಂದ ಇಲ್ಲಿಗೆ ಸಮೀಪದ ಪಿಂಪ್ರಿ ಚಿಂಚವಾಡದಲ್ಲಿರುವ ಮೇಜರ್ ಧ್ಯಾನ್‌ಚಂದ್ ಹಾಕಿ ಕ್ರೀಡಾಂಗಣದಲ್ಲಿ ನಿಗದಿಯಾಗಿದೆ.

30 ರಾಜ್ಯ ತಂಡಗಳು ಸ್ಪರ್ಧಿಸಲಿರುವ ಚಾಂಪಿಯನ್‌ಷಿಪ್ 10 ದಿನಗಳ ಕಾಲ ನಡೆಯಲಿದೆ. ಈ ಬಾರಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ಹೊಸ ಮಾದರಿಯಲ್ಲಿ ನಡೆಯಲಿದ್ದು, ರಾಜ್ಯ ಘಟಕಗಳು ಮಾತ್ರ ಭಾಗವಹಿಸಲಿವೆ.

ಬಿಟಿಸಿ ಅಧ್ಯಕ್ಷರಾಗಿ ಈಶ್ವರನ್ ಆಯ್ಕೆ


ಕೆ. ಉದಯ್ ಈಶ್ವರನ್

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್‌ನ (ಬಿಟಿಸಿ) ಅಧ್ಯಕ್ಷ ಹಾಗೂ ಸೀನಿಯರ್ ಸ್ಟೂವರ್ಡ್ ಆಗಿ ಕೆ. ಉದಯ್ ಈಶ್ವರನ್ ಆಯ್ಕೆಯಾಗಿದ್ದಾರೆ.

ಬುಧವಾರ ನಡೆದ ವ್ಯವಸ್ಥಾಪನಾ ಸಮಿತಿ ಸಭೆಯಲ್ಲಿ 2021–22ರ ಸಾಲಿಗೆ ಈಶ್ವರನ್ ಅವರನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು ಎಂದು ಪ್ರಕಟಣೆ ತಿಳಿಸಿದೆ. ಸೋಮವಾರ ನಡೆದ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಕೆ.ಎನ್. ಶಾಂತಕುಮಾರ್, ಅರವಿಂದ್ ರಾಘವನ್ ಹಾಗೂ ಎ.ಸಿ. ಸತೀಶಚಂದ್ರ ಅವರು ಸ್ಟೂವರ್ಡ್‌ಗಳಾಗಿ ಆಯ್ಕೆಯಾಗಿದ್ದರು.

ಕಿಕ್ ಬಾಕ್ಸಿಂಗ್: ಚಿನ್ನ ಗೆದ್ದ ಪ್ರಿಯಾಂಕಾ


ಪ್ರಿಯಾಂಕಾ ರೆಡ್ಡಿ

ಬೆಂಗಳೂರು: ನಗರದ ಸಿಎಂಆರ್‌ಐಟಿಯ ವಿದ್ಯಾರ್ಥಿನಿ ಎಲ್. ಪ್ರಿಯಾಂಕಾ ರೆಡ್ಡಿ ಅವರು ಚೆನ್ನೈನಲ್ಲಿ ನಡೆದ ಫೈಟ್ ಲೀಗ್ ಚಾಂಪಿಯನ್‌ಷಿಪ್‌ನ ಕಿಕ್ ಬಾಕ್ಸಿಂಗ್‌ನಲ್ಲಿ ಚಿನ್ನ ಮತ್ತು ಟೈಟಲ್ ಬೆಲ್ಟ್ ತಮ್ಮದಾಗಿಸಿಕೊಂಡಿದ್ದಾರೆ.

ಭಾರತ ಮುಯ್‌ಥಾಯ್ ಸಂಸ್ಥೆ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಇಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ಪ್ರಿಯಾಂಕಾ, ಚೆನ್ನೈನ ಎದುರಾಳಿಯನ್ನು ಎಲ್ಲ ಸುತ್ತುಗಳಲ್ಲೂ ಮಣಿಸಿದರು ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಪ್ಯಾರಾ ಈಜುಪಟು ಪುನೀತ್‌ಗೆ ಪ್ರಶಸ್ತಿ


ಪುನೀತ್

ಬೆಂಗಳೂರು: ಕರ್ನಾಟಕದ ಪ್ಯಾರಾ ಈಜುಪಟು ಪುನೀತ್ ನಂದಕುಮಾರ್ ಅವರು 'ಶ್ರೇಷ್ಠ ಅಂಗವಿಕಲ ಕ್ರೀಡಾಪಟು' ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ದೇಶದ ಏಳು ಮಂದಿ ಕ್ರೀಡಾಪಟುಗಳಿಗೆ ಈ ಪ್ರಶಸ್ತಿ ನೀಡಿದೆ. ಪ್ರಶಸ್ತಿ ಪ್ರದಾನ ಸಮಾರಂಭವು ಶುಕ್ರವಾರ ನಡೆಯಲಿದೆ.

ಪುನೀತ್ ಅವರಿಗೆ 2019ರ ಸಾಲಿನ ಏಕಲವ್ಯ ಪುರಸ್ಕಾರ ಸಂದಿದೆ.

ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿ: ಜರ್ಮನಿ, ಅರ್ಜೆಂಟೀನಾಗೆ ಜಯ

ನಾಲ್ಕರ ಘಟ್ಟಕ್ಕೆ ಭಾರತ ಲಗ್ಗೆ


ಬೆಲ್ಜಿಯಂ ಆಟಗಾರರಿಂದ ಚೆಂಡು ಕಸಿದುಕೊಂಡು ಮುನ್ನುಗ್ಗಿದ ಭಾರತದ ಆಟಗಾರರು –ಟ್ವಿಟರ್ ಚಿತ್ರ

ಭುವನೇಶ್ವರ (ಪಿಟಿಐ): ಮೊದಲಾರ್ಧದಲ್ಲಿ ಗಳಿಸಿದ ಏಕೈಕ ಗೋಲಿನ ಬಲದಿಂದ ಭಾರತ ತಂಡ ಎಫ್‌ಐಎಚ್ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು. ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಬೆಲ್ಜಿಯಂ ವಿರುದ್ಧ ಆತಿಥೇಯರು 1-0 ಅಂತರದಲ್ಲಿ ಜಯ ಗಳಿಸಿದರು.

21ನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ನಲ್ಲಿ ಶ್ರದ್ಧಾನಂದ ತಿವಾರಿ ಚೆಂಡನ್ನು ಗುರಿ ಮುಟ್ಟಿಸಿದರು. ನಂತರ ಉಭಯ ತಂಡಗಳ ನಡುವೆ ಜಿದ್ದಾಜಿದ್ದಿಯ ಹೋರಾಟ ನಡೆಯಿತು. ಆದರೆ ಭಾರತ ಛಲದಿಂದ ಆಡಿ ಗೆಲುವು ತನ್ನದಾಗಿಸಿಕೊಂಡಿತು. ಸೆಮಿಫೈನಲ್‌ನಲ್ಲಿ ಭಾರತ ತಂಡ ಜರ್ಮನಿಯನ್ನು ಎದುರಿಸಲಿದೆ.

ಜರ್ಮನಿ, ಅರ್ಜೆಂಟೀನಾ ಸೆಮಿಫೈನಲ್‌ಗೆ: ಅರ್ಜೆಂಟೀನಾ ಮತ್ತು ಆರು ಬಾರಿಯ ಚಾಂಪಿಯನ್ ಜರ್ಮನಿ ತಂಡಗಳು ಪ್ರಯಾಸದ ಜಯ ಗಳಿಸಿ ಸೆಮಿಫೈನಲ್ ಪ್ರವೇಶಿಸಿದವು. ಜರ್ಮನಿ 3-1ರಲ್ಲಿ ಸ್ಪೇನ್ ವಿರುದ್ಧ ಮತ್ತು ಅರ್ಜೆಂಟೀನಾ 2-1ರಲ್ಲಿ ನೆದರ್ಲೆಂಡ್ಸ್ ವಿರುದ್ಧ ಜಯ ಗಳಿಸಿತು.

ಎಂಟರ ಘಟ್ಟದ ಮೊದಲ ಪಂದ್ಯದ ನಿಗದಿತ ಅವಧಿಯಲ್ಲಿ ಜರ್ಮನಿ ಮತ್ತು ಸ್ಪೇನ್ 2-2ರಲ್ಲಿ ಡ್ರಾ ಸಾಧಿಸಿದ್ದವು. ಹೀಗಾಗಿ ಶೂಟೌಟ್‌ನಲ್ಲಿ ಫಲಿತಾಂಶ ನಿರ್ಧರಿಸಲಾಯಿತು.

ಐದನೇ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಸ್ಟ್ರೋಕ್‌ನಲ್ಲಿ ಕ್ರಿಸ್ಟೋಫರ್ ಕುಟರ್ ಗಳಿಸಿದ ಗೋಲಿನ ಮೂಲಕ ಜರ್ಮನಿ ಮುನ್ನಡೆ ಸಾಧಿಸಿತ್ತು. ಆರು ನಿಮಿಷಗಳ ನಂತರ ಪೆನಾಲ್ಟಿ ಸ್ಟ್ರೋಕ್‌ನಲ್ಲಿ ಇಗ್ನೇಷಿಯೊ ಅಬಜೊ ಗೋಲು ಗಳಿಸಿ ಸ್ಪೇನ್‌ಗೆ ಸಮಬಲ ತಂದುಕೊಟ್ಟರು. ನಂತರದ ಎರಡು ಕ್ವಾರ್ಟರ್‌ಗಳಲ್ಲಿ ಉಭಯ ತಂಡಗಳು ಗೋಲು ಗಳಿಸಲು ನಡೆಸಿದ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

59ನೇ ನಿಮಿಷದಲ್ಲಿ ಎಡ್ವರ್ಡ್ ಡಿ ಇಗ್ನೇಷಿಯೊ ಸಿಮೊ ಚೆಂಡನ್ನು ಗುರಿ ಮುಟ್ಟಿಸಿ ಸ್ಪೇನ್‌ಗೆ ಮತ್ತೆ ಮುನ್ನಡೆ ಗಳಿಸಿಕೊಟ್ಟರು. ಆದರೆ ಪಟ್ಟು ಬಿಡದ ಜರ್ಮನಿ ಕೊನೆಯ ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸಿತು. ಮಾಸಿ ಫ್ಯಾಂಡಿಟ್ ಯಶಸ್ಸು ಸಾಧಿಸಿದರು.

ಶೂಟೌಟ್‌ನಲ್ಲಿ ಪಾಲ್ ಸ್ಮಿತ್, ಮೈಕೆಲ್ ಸ್ಟ್ರೂಥ್‌ಆಫ್ ಮತ್ತು ಹೇನ್ಸ್ ಮುಲ್ಲರ್ ಚೆಂಡನ್ನು ಗುರಿ ಮುಟ್ಟಿಸಿದರು. ಸ್ಪೇನ್ ಪರ ಜೆರಾರ್ಡ್ ಕ್ಲ್ಯಾಪ್ಸ್ ಮಾತ್ರ ಗೋಲು ಗಳಿಸಿದರು. 2ನೇ ಪಂದ್ಯದ 24 ನಿಮಿಷದಲ್ಲಿ ಮೊದಲ ಗೋಲು ಗಳಿಸಿ ಅರ್ಜೆಂಟೀನಾ ಮುನ್ನಡೆ ಗಳಿಸಿತು. ಜೊಕಿನ್ ಕ್ರುಗರ್ ಗೋಲು ಗಳಿಸಿದರು. ಮರು ನಿಮಿಷದಲ್ಲಿ ಲಭಿಸಿದ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸಿ ಮೈಲ್ಸ್ ಬುಕೆನ್ಸ್ ಸಮಬಲ ತಂದುಕೊಟ್ಟರು. ಆದರೆ 59ನೇ ನಿಮಿಷದಲ್ಲಿ ಶೆಲ್ಡನ್ ಶೋಟೆನ್ 'ಉಡುಗೊರೆ' ಗೋಲು ನೀಡಿ ನೆದರ್ಲೆಂಡ್ಸ್‌ನ ಕನಸು ಭಗ್ನಗೊಳಿಸಿದರು.

ಫ್ರಾನ್ಸ್ 4-0ಯಿಂದ ಮಲೇಷ್ಯಾವನ್ನು ಮಣಿಸಿತು.

ಪೊಲೀಸ್ ಹಾಕಿ ಇಂದಿನಿಂದ

ಪ್ರಜಾವಾಣಿ ವಾರ್ತೆ



ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಷಿಪ್ ಲಾಂಛನವನ್ನು ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಮತ್ತು ಡಿಜಿಪಿ ಪ್ರವೀಣ್ ಸೂದ್ ಬಿಡುಗಡೆ ಮಾಡಿದರು

ಬೆಂಗಳೂರು: ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಷಿಪ್ ಗುರುವಾರದಿಂದ ಡಿಸೆಂಬರ್ 11ರ ವರೆಗೆ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಕಿ ಕ್ರೀಡಾಂಗಣದಲ್ಲಿ ನಡೆಯಲಿದೆ.

ರಾಜ್ಯ ಪೊಲೀಸ್ ಆತಿಥ್ಯ ವಹಿಸಿರುವ ಚಾಂಪಿಯನ್‌ಷಿಪ್‌ನ ಲಾಂಛನವನ್ನು ಡಿಜಿಪಿ ಪ್ರವೀಣ್ ಸೂದ್ ಬುಧವಾರ ಬಿಡುಗಡೆ ಮಾಡಿದರು. ಆರು ಮಹಿಳಾ ತಂಡಗಳು ಸೇರಿದಂತೆ ಒಟ್ಟು 30 ತಂಡಗಳು ಪಾಲ್ಗೊಳ್ಳುತ್ತಿವೆ.

'ಎ' ಗುಂಪಿನಲ್ಲಿ ದೆಹಲಿಯ ಸಿಆರ್‌ಪಿಎಫ್, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಡ ಪೊಲೀಸ್ ಇದ್ದು ಜಲಂಧರ್‌ನ ಬಿಎಸ್‌ಎಫ್, ಉತ್ತರಾಖಂಡ ಮತ್ತು ಪಂಜಾಬ್ ಪೊಲೀಸ್ ತಂಡಗಳು 'ಬಿ' ಗುಂಪಿನಲ್ಲಿವೆ. ಒಡಿಶಾ ಪೊಲೀಸ್, ಎಸ್‌ಎಸ್‌ಬಿ ಮತ್ತು ಗುಜರಾತ್ 'ಸಿ' ಗುಂಪಿನಲ್ಲಿದ್ದು ಹರಿಯಾಣ ಪೊಲೀಸ್, ಕರ್ನಾಟಕ ಮತ್ತು ಉತ್ತರ ಪ್ರದೇಶ ತಂಡಗಳು 'ಡಿ' ಗುಂಪಿನಲ್ಲಿ, ಛತ್ತೀಸ್‌ಗಡ, ಪುದುಚೇರಿ ಮತ್ತು ಜಾರ್ಖಂಡ್ 'ಇ' ಗುಂಪಿನಲ್ಲಿ, ಮಹಾರಾಷ್ಟ್ರ, ತಮಿಳುನಾಡು ಮತ್ತು ಮಣಿಪುರ 'ಎಫ್' ಗುಂಪಿನಲ್ಲಿ, ಸಿಐಎಸ್‌ಎಫ್, ಪಶ್ಚಿಮ ಬಂಗಾಳ ಮತ್ತು ಜಮ್ಮು–ಕಾಶ್ಮೀರ 'ಜಿ' ಗುಂಪಿನಲ್ಲಿ, ಐಟಿಬಿಪಿ, ರಾಜಸ್ಥಾನ ಮತ್ತು ಕೇರಳ 'ಎಚ್' ಗುಂಪಿನಲ್ಲಿವೆ.

ಮಹಿಳೆಯರ ವಿಭಾಗದಲ್ಲಿ ಛತ್ತೀಸ್‌ಗಡ, ಒಡಿಶಾ ಮತ್ತು ಸಿಆರ್‌ಪಿಎಫ್ 'ಎ' ಗುಂಪಿನಲ್ಲೂ ತಮಿಳುನಾಡು, ಮಹಾರಾಷ್ಟ್ರ ಮತ್ತು ಎಸ್‌ಎಸ್‌ಬಿ 'ಬಿ' ಗುಂಪಿನಲ್ಲೂ ಇವೆ.

ಸಿಂಧು, ಶ್ರೀಕಾಂತ್ ಶುಭಾರಂಭ

ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್: ಅಶ್ವಿನಿ–ಸಿಕ್ಕಿಗೆ ನಿರಾಸೆ


ಪಿ.ವಿ.ಸಿಂಧು

ಬಾಲಿ, ಇಂಡೊನೇಷ್ಯಾ (ಪಿಟಿಐ): ಭಾರತದ ಅಗ್ರ ಬ್ಯಾಡ್ಮಿಂಟನ್ ಪಟುಗಳಾದ ಪಿ.ವಿ.ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವರು ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಟೂರ್ನಿಯಲ್ಲಿ ಬುಧವಾರ ಗೆಲುವಿನ ಆರಂಭ ಮಾಡಿದ್ದಾರೆ.

ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು, 'ಎ' ಗುಂಪಿನ ಮಹಿಳಾ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ 21-14, 21-16ರಿಂದ ಡೆನ್ಮಾರ್ಕ್‌ನ ಲಿನೆ ಕ್ರಿಸ್ಟೊಪರ್ಸನ್ ಅವರನ್ನು ಪರಾಭವಗೊಳಿಸಿದರು.

ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸಿಂಧು ಮುಂದಿನ ಪಂದ್ಯದಲ್ಲಿ ಜರ್ಮನಿಯ ಯುವೊನ್ ಲಿ ಅವರಿಗೆ ಮುಖಾಮುಖಿಯಾಗುವರು.

'ಬಿ' ಗುಂಪಿನ ಪುರುಷರ ಸಿಂಗಲ್ಸ್ ಸೆಣಸಾಟದಲ್ಲಿ ಮಾಜಿ ವಿಶ್ವ ಅಗ್ರಕ್ರಮಾಂಕದ ಆಟಗಾರ ಶ್ರೀಕಾಂತ್ 21-14, 21-16ರಿಂದ ಫ್ರಾನ್ಸ್‌ನ ತೋಮಾ ಜೂನಿಯರ್ ಪೊಪೊವ್ ಅವರನ್ನು ಮಣಿಸಿದರು. ಕೇವಲ 42 ನಿಮಿಷಗಳಲ್ಲಿ ಈ ಪಂದ್ಯ ಮುಗಿಯಿತು.

ಮಹಿಳಾ ಡಬಲ್ಸ್‌ನಲ್ಲಿ ಕಣಕ್ಕಿಳಿದಿರುವ ಕರ್ನಾಟಕದ ಅಶ್ವಿನಿ ಪೊನ್ನಪ್ಪ ಮತ್ತು ಎನ್. ಸಿಕ್ಕಿರೆಡ್ಡಿ 14-2,1 18-21ರಿಂದ ಜಪಾನ್‌ನ ನಮಿ ಮತ್ಸುಯಾಮ ಮತ್ತು ಚಿಹಾರು ಶಿದಾ ಎದುರು ಎಡವಿದರು. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ 16-21, 5-21ರಿಂದ ಡೆನ್ಮಾರ್ಕ್‌ನ ಕಿಮ್ ಅಸ್ಟ್ರುಪ್ ಮತ್ತು ಆ್ಯಂಡರ್ಸ್ ರಾಸ್ಮಸನ್ ಎದುರು ಎಡವಿದರು.

ಜೀಲ್ ಎದುರು ಗೆದ್ದ ಶ್ರೀವಲ್ಲಿ

ಮಹಿಳೆಯರ ವಿಶ್ವ ಟೆನಿಸ್ ಟೂರ್: ಋತುಜಾಗೆ ಜಯ

ಪ್ರಜಾವಾಣಿ ವಾರ್ತೆ


ಋತುಜಾ ಭೋಸಲೆ ಅವರು ಚೆಂಡನ್ನು ರಿಟರ್ನ್ ಮಾಡಿದ ಪರಿ –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌ಜಿ

ಬೆಂಗಳೂರು: ಅರ್ಹತಾ ಸುತ್ತಿನಲ್ಲಿ ಗೆದ್ದು ಬಂದಿದ್ದ ಭಾರತದ ಶ್ರೀವಲ್ಲಿ ರಶ್ಮಿಕಾ ಅವರು ಮಹಿಳೆಯರ ಐಟಿಎಫ್ ಅಂತರರಾಷ್ಟ್ರೀಯ ಟೆನಿಸ್ ಟೂರ್ ಚಾಂಪಿಯನ್‌ಷಿಪ್‌ನ ಎರಡನೇ ದಿನ ಮಿಂಚಿದರು.

ಕೆಎಸ್‌ಎಲ್‌ಟಿಎ ಅಂಗಣದಲ್ಲಿ ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಅವರು ಎರಡನೇ ಶ್ರೇಯಾಂಕದ ಜೀಲ್ ದೇಸಾಯಿ ವಿರುದ್ಧ 6-3, 7-5ರಲ್ಲಿ ಜಯ ಗಳಿಸಿದರು. ದಿನದ ಕೊನೆಯ ಪಂದ್ಯದಲ್ಲಿ ಗಳಿಸಿದ ಈ ಜಯದ ಮೂಲಕ ಅವರು ಪ್ರೀ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇರಿಸಿದರು.

ಅಗ್ರ ಶ್ರೇಯಾಂಕದ ಋತುಜಾ ಭೋಸಲೆ ಅವರಿಗೆ ಅರ್ಹತಾ ಸುತ್ತಿನಿಂದ ಬಂದಿದ್ದ ಶ್ರೇಯಾ ತಟವರ್ತಿ ಸವಾಲೊಡ್ಡಿದರು. ಆದರೆ ಋತುಜಾ 6-4, 6-3ರಲ್ಲಿ ಗೆದ್ದು 16ರ ಘಟ್ಟ ಪ್ರವೇಶಿಸಿದರು. ಮೂರನೇ ಶ್ರೇಯಾಂಕದ ಸೌಜನ್ಯ ಬಾವಿಸೆಟ್ಟಿ ಕೂಡ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಆಡಲು ಅರ್ಹತೆ ಗಳಿಸಿದರು.

ಮೂರು ವಾರಗಳ ಹಿಂದೆ ನಡೆದಿದ್ದ ಫೆನೆಸ್ಟಾ ನ್ಯಾಷನಲ್ಸ್‌ನಲ್ಲಿ ಜೀಲ್ ವಿರುದ್ಧ ಸೋತಿದ್ದ ಶ್ರೀವಲ್ಲಿ ಇಲ್ಲಿ ಸೇಡು ತೀರಿಸಿಕೊಂಡರು. ಪ್ರಭಾವಿ ಸರ್ವ್‌ಗಳೊಂದಿಗೆ ಅಮೋಘ ಆಟವಾಡಿದ ಅವರು ಪಂದ್ಯದಲ್ಲಿ ಪೂರ್ಣ ಆಧಿಪತ್ಯ ಸ್ಥಾಪಿಸಿದರು.

ಸ್ನೇಹಲ್ ಮಾನೆ ಎದುರಿನ ಪಂದ್ಯದಲ್ಲಿ ಅವರು 6-1, 6-2ರಲ್ಲಿ ಗೆಲುವು ಸಾಧಿಸಿದರು. ಈ ಪಂದ್ಯ ಕೇವಲ 55 ನಿಮಿಷದಲ್ಲಿ ಮುಕ್ತಾಯ ಕಂಡಿತ್ತು. ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಿದ ಶರ್ಮಡಾ ಬಾಲು ಅವರ ಪ್ರತಿರೋಧವನ್ನು ಮೆಟ್ಟಿನಿಂತ ನಾಲ್ಕನೇ ಶ್ರೇಯಾಂಕಿತೆ ಪ್ರಾಂಜಲ ಯೆಡ್ಲಪಲ್ಲಿ 6-0, 7-5ರಲ್ಲಿ ಗೆಲುವು ಸಾಧಿಸಿದರು.

ಫಲಿತಾಂಶಗಳು: ರಷ್ಯಾದ ಜ್ಲಾಟ ಯಂಕೊವ್‌ಸ್ಕಾಯಗೆ 7-5, 7-5ರಲ್ಲಿ ಸೌಮ್ಯಾ ವಿರುದ್ಧ, ರೇಷ್ಮಾ ಮುರಾರಿಗೆ 6-1, 6-3ರಲ್ಲಿ ಅಶ್ಮಿತಾ ಈಶ್ವರಮೂರ್ತಿ ವಿರುದ್ಧ, ಸಾಯಿ ಸಂಹಿತಾಗೆ ಡೆನ್ಮಾರ್ಕ್‌ನ ಎಲಿನಾ ಜಮ್ಮಿದಿ ವಿರುದ್ಧ 6-2, 6-2ರಲ್ಲಿ, ಸೌಜನ್ಯಾ ಬಾವಿಸೆಟ್ಟಿಗೆ 6-1, 6-2ರಲ್ಲಿ ಸ್ನೇಹಲ್ ಮಾನೆ ವಿರುದ್ಧ, ಋತುಜಾ ಭೋಸಲೆಗೆ 6-4, 6-3ರಲ್ಲಿ ಶ್ರೇಯಾ ತಟವರ್ತಿ ವಿರುದ್ಧ, ಪ್ರತ್ಯೂಷಾ ರಚಪುಡಿಗೆ 6-2, 6-7 (6), 6-3ರಲ್ಲಿ ರೆನಿ ಸಿಂಗ್ಲಾ ವಿರುದ್ಧ, ಯುವರಾಣಿ ಬ್ಯಾನರ್ಜಿಗೆ 6-3, 6-0ರಲ್ಲಿ ಆರತಿ ಮುನಿಯನ್ ವಿರುದ್ಧ, ಪ್ರಾಂಜಲ ಯಡಪಲ್ಲಿಗೆ 6-0, 7-5ರಲ್ಲಿ ಶರ್ಮಡಾ ಬಾಲು ವಿರುದ್ಧ, ಸಾತ್ವಿಕಾ ಸಮಾಗೆ 3-6, 6-3, 6-2ರಲ್ಲಿ ಶ್ರವ್ಯಾ ಶಿವಾನಿ ವಿರುದ್ಧ, ಆಕಾಂಕ್ಷ ದಿಲೀಪ್‌ಗೆ 6-1, 6-1ರಲ್ಲಿ ಹುಮೇರ ವಿರುದ್ಧ, ಶ್ರೀವಲ್ಲಿ ರಶ್ಮಿಕಾಗೆ 6-3, 7-5ರಲ್ಲಿ ಜೀಲ್ ದೇಸಾಯಿ ವಿರುದ್ಧ, ಪ್ರತಿಭಾ ನಾರಾಯಣನ್‌ಗೆ 6-3, 7-5ರಲ್ಲಿ ಸಾಯಿ ದೀಪಾ ಯಡುಲ್ಲ ವಿರುದ್ಧ ಜಯ.

ವಿಶ್ವ ಚಾಂಪಿಯನ್‌ಷಿಪ್‌ಗೆ ಸೈನಾ ನೆಹ್ವಾಲ್ ಅಲಭ್ಯ

ನವದೆಹಲಿ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಸೈನಾ ನೆಹ್ವಾಲ್ ಗಾಯದಿಂದ ಚೇತರಿಸಿಕೊಳ್ಳುತ್ತಿದ್ದು, ಮುಂಬರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಲಭ್ಯರಿಲ್ಲ. 2006ರಿಂದ ಆರಂಭವಾಗಿರುವ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಅವರು ಆಡುತ್ತಿಲ್ಲ.

ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ, ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಗೆದ್ದಿದ್ದಾರೆ. ಎಂಟು ಬಾರಿ ಕ್ವಾರ್ಟರ್‌ಫೈನಲ್ ತಲುಪಿದ್ದ ಅವರು, ಸದ್ಯ ತೊಡೆ ಮತ್ತು ಮೊಣಕಾಲಿನ ಗಾಯದಿಂದ ಚೇತರಿಸಿಕೊಳ್ಳುತ್ತಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್ ಸ್ಪೇನ್‌ನ ಹುಯೆಲ್ವಾದಲ್ಲಿ ಇದೇ ತಿಂಗಳ 12ರಿಂದ 19ರವರೆಗೆ ನಿಗದಿಯಾಗಿದೆ.

'ತೊಡೆ ಹಾಗೂ ಮೊಣಕಾಲು ನೋವಿನಿಂದ ಚೇತರಿಸಿಕೊಳ್ಳುತ್ತಿರುವ ಸೈನಾ ವಿಶ್ವಚಾಂಪಿಯನ್‌ಷಿಪ್‌ನಿಂದ ಹಿಂದೆ ಸರಿದಿದ್ದಾರೆ. ಟೂರ್ನಿಯಲ್ಲಿ ಆಡುವಷ್ಟು ಅವರು ಇನ್ನೂ ಫಿಟ್ ಆಗಿಲ್ಲ' ಎಂದು ಸೈನಾ ಅವರ ಪತಿ, ಬ್ಯಾಡ್ಮಿಂಟನ್ ಆಟಗಾರ ಪರುಪಳ್ಳಿ ಕಶ್ಯಪ್ ಹೇಳಿದ್ದಾರೆ.

ಸಿಂಧುಗೆ ಮೊದಲ ಸುತ್ತಿನಲ್ಲಿ ಬೈ: ಹಾಲಿ ಚಾಂಪಿಯನ್, ಭಾರತದ ಪಿ.ವಿ.ಸಿಂಧು ಅವರಿಗೆ ಮೊದಲ ಸುತ್ತಿನಲ್ಲಿ ಬೈ ಸಿಕ್ಕಿದೆ. ಚಾಂಪಿಯನ್‌ಷಿಪ್‌ನಲ್ಲಿ ಅವರಿಗೆ ಆರನೇ ಶ್ರೇಯಾಂಕ ನೀಡಲಾಗಿದೆ.

ಕುಸ್ತಿ: ರಾಷ್ಟ್ರ ಮಟ್ಟಕ್ಕೆ ಇರ್ಫಾನ್ ಆಯ್ಕೆ

ಹಳಿಯಾಳ: ಇಲ್ಲಿನ ಕ್ರೀಡಾ ವಸತಿ ನಿಲಯದ ಮಹಿಳಾ ಕುಸ್ತಿಪಟುಗಳು ಇದೇ 15ರಿಂದ ಜಾರ್ಖಂಡ್‌ನಲ್ಲಿ ನಡೆಯಲಿರುವ ರಾಷ್ಟ್ರೀಯ ಕುಸ್ತಿ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಗದುಗಿನಲ್ಲಿ ಇತ್ತೀಚೆಗೆ ನಡೆದ 15 ವರ್ಷದ ಒಳಗಿನವರ ವಿಭಾಗದ ಟ್ರಯಲ್ಸ್‌ನಲ್ಲಿ ಆಯ್ಕೆ ನಡೆದಿತ್ತು. ಯುವ ಸಬಲೀಕರಣ ಮತ್ತು ಕ್ರೀಡಾನಿಲಯದ ಪೈಲ್ವಾನರಾದ ಪ್ರಿನ್ಸಿಟಾ ಪೆದ್ರು ಸಿದ್ದಿ (58 ಕೆ.ಜಿ. ವಿಭಾಗ), ಪ್ರತೀಕ್ಷಾ ಭೋವಿ (62 ಕೆ.ಜಿ), ಹಳಿಯಾಳ ಕುಸ್ತಿ ಅಖಾಡದ ಮನೀಷಾ ಸಿದ್ದಿ (66 ಕೆ.ಜಿ.) ಮತ್ತು ಇರ್ಫಾನ್ ವಾಲೀಕಾರ (41 ಕೆ.ಜಿ.) ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ.

ಪ್ರೊ ಕಬಡ್ಡಿ: ಮೊದಲ ಹಂತದ ವೇಳಾಪಟ್ಟಿ ಬಿಡುಗಡೆ

ಹೋಟೆಲ್ ಸಭಾಂಗಣ; ಕಬಡ್ಡಿ ಅಂಗಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಷಾಲ್ ಸ್ಪೋರ್ಟ್ಸ್ ಆಯೋಜಿಸುತ್ತಿರುವ ಪ್ರೊ ಕಬಡ್ಡಿ ಟೂರ್ನಿಯ ಎಂಟನೇ ಆವೃತ್ತಿಯ ಪಂದ್ಯಗಳು ಹೋಟೆಲ್‌ನಲ್ಲಿ ನಡೆಯಲಿವೆ.

ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನ ಸಭಾಂಗಣವನ್ನೇ ಕ್ರೀಡಾಂಗಣದ ಮಾದರಿಯಲ್ಲಿ ಸಿದ್ಧಗೊಳಿಸಿ ಟೂರ್ನಿ ಆಯೋಜಿಸಲು ಸಿದ್ಧತೆ ನಡೆದಿದೆ. ಕೋವಿಡ್–19ರ ಆತಂಕದಿಂದಾಗಿ ಈ ಕ್ರಮಕ್ಕೆ ಆಯೋಜಕರು ಮುಂದಾಗಿದ್ದಾರೆ. ಪ್ರೇಕ್ಷಕರಿಗೆ ಪ್ರವೇಶ ನೀಡದೇ ಇರಲು ನಿರ್ಧರಿಸಲಾಗಿದೆ.

ಇದೇ ತಿಂಗಳ 22ರಂದು ಟೂರ್ನಿ ಆರಂಭವಾಗಲಿದ್ದು ಮೊದಲ ಹಂತದ ಪಂದ್ಯಗಳ ವೇಳಾಪಟ್ಟಿಯನ್ನು ಬುಧವಾರ ಬಿಡುಗಡೆ ಮಾಡಲಾಗಿದೆ. ಮೊದಲ ನಾಲ್ಕು ದಿನ ಟ್ರಿಪಲ್ ಹೆಡರ್ಸ್ (ಪ್ರತಿ ದಿನ ಮೂರು ಪಂದ್ಯ) ಮತ್ತು ಶನಿವಾರಗಳಲ್ಲಿ ಟ್ರಿಪಲ್ ಪಂಗಾ (ಮೂರು ಪಂದ್ಯ) ಈ ಬಾರಿಯ ವೈಶಿಷ್ಟ್ಯ.

ಮೂರು ಪಂದ್ಯಗಳು ಇರುವ ದಿನಗಳಲ್ಲಿ ಮೊದಲ ಹಣಾಹಣಿ ರಾತ್ರಿ 7.30ಕ್ಕೆ ಆರಂಭವಾಗಲಿದೆ. ಎರಡನೇ ಪಂದ್ಯ 8.30ಕ್ಕೆ ಮತ್ತು ಕೊನೆಯ ಪಂದ್ಯ 9.30ಕ್ಕೆ ಆರಂಭವಾಗಲಿದೆ. ಎಂಟನೇ ಆವೃತ್ತಿಯ ಮೊದಲ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ಮತ್ತು ಯು ಮುಂಬಾ ತಂಡಗಳು ಸೆಣಸಲಿವೆ.

'ದಕ್ಷಿಣ ಡರ್ಬಿ' ಎರಡನೇ ಪಂದ್ಯದಲ್ಲಿ ತೆಲುಗು ಟೈಟಾನ್ಸ್ ಮತ್ತು ತಮಿಳ್ ತಲೈವಾಸ್ ಹಣಾಹಣಿ ನಡೆಯಲಿದೆ. ಯುಪಿ ಯೋಧಾ ಮತ್ತು ಹಾಲಿ ಚಾಂಪಿಯನ್ ಬೆಂಗಾಲ್ ವಾರಿಯರ್ಸ್ ಕೊನೆಯ ಪಂದ್ಯದಲ್ಲಿ ಮುಖಾಮುಖಿ ಆಗಲಿವೆ. ಎರಡನೇ ಹಂತದ ವೇಳಾಪಟ್ಟಿ ಜನವರಿ ಎರಡನೇ ವಾರದಲ್ಲಿ ಬಿಡುಗಡೆಯಾಗುವ ನಿರೀಕ್ಷೆ ಇದೆ.

'ದೇಶಿ ಸೊಬಗಿನ ಕಬಡ್ಡಿಯನ್ನು ಹೆಚ್ಚು ರೋಮಾಂಚಕವಾಗಿಸುವುದಕ್ಕಾಗಿ ಹೊಸ ಮಾದರಿಯನ್ನು ಜಾರಿಗೆ ತರಲಾಗಿದೆ. 'ಟ್ರಿಪಲ್' ಪಂದ್ಯಗಳು ಪ್ರೇಕ್ಷಕರಲ್ಲಿ ಇನ್ನಷ್ಟು ಕುತೂಹಲ ಹೆಚ್ಚಿಸಲು ನೆರವಾಗಲಿದೆ. ಎರಡು ಹಂತಗಳಲ್ಲಿ ವೇಳಾಪಟ್ಟಿ ಬಿಡುಗಡೆ ಮಾಡುವುದರಿಂದ ತಂಡಗಳಿಗೆ ರಣತಂತ್ರಗಳನ್ನು ಹೆಣೆಯುವುದು ಸುಲಭವಾಗಲಿದೆ' ಎಂದು ಲೀಗ್ ಕಮಿಷನರ್ ಅನುಪಮ್ ಗೋಸ್ವಾಮಿ ಅಭಿಪ್ರಾಯಪಟ್ಟರು.

ಮೊದಲ ಹಂತದಲ್ಲಿ ಬೆಂಗಳೂರು ಬುಲ್ಸ್ ಪಂದ್ಯಗಳು

ದಿನಾಂಕ	ಎದುರಾಳಿ	ಸಮಯ
ಡಿ.22	ಯು ಮುಂಬಾ	7.30
ಡಿ.24	ತಮಿಳ್ ತಲೈವಾಸ್	8.30
ಡಿ.26	ಬೆಂಗಾಲ್ ವಾರಿಯರ್ಸ್	8.30
ಡಿ.30	ಹರಿಯಾಣ ಸ್ಟೀಲರ್ಸ್	8.30
ಜ.1	ತೆಲುಗು ಟೈಟಾನ್ಸ್	8.30
ಜ.2	ಪುಣೇರಿ ಪಲ್ಟನ್	8.30
ಜ.6	ಜೈಪುರ್ ಪಿಂಕ್ ಪ್ಯಾಂಥರ್ಸ್	8.30
ಜ.9	ಯು.ಪಿ.ಯೋಧಾ	8.30
ಜ.12	ದಬಾಂಗ್ ಡೆಲ್ಲಿ	8.30
ಜ.14	ಗುಜರಾತ್ ಜೈಂಟ್ಸ್	8.30
ಜ.16	ಪಟ್ನಾ ಪೈರೇಟ್ಸ್	8.30

ಗಳಗಿ ಹುಲಕೊಪ್ಪ: ಕ್ರಾಸ್ ಕಂಟ್ರಿ 5ರಂದು

ಹುಬ್ಬಳ್ಳಿ: ಧಾರವಾಡ ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಇದೇ 5ರಂದು ಕಲಘಟಗಿ ತಾಲ್ಲೂಕಿನ ಗಳಗಿ ಹುಲಕೊಪ್ಪ ಗ್ರಾಮದಲ್ಲಿ ರಾಜ್ಯ ಕ್ರಾಸ್ ಕಂಟ್ರಿ ಸ್ಪರ್ಧೆ ಹಮ್ಮಿಕೊಂಡಿದೆ.

16, 18, 20 ವರ್ಷದ ಒಳಗಿನವರ ವಿಭಾಗ, ಪುರುಷರ ಮತ್ತು ಮಹಿಳಾ ವಿಭಾಗದಲ್ಲಿ ಪ್ರತ್ಯೇಕ ಸ್ಪರ್ಧೆಗಳು ನಡೆಯಲಿವೆ. ಇಲ್ಲಿ ಉತ್ತಮ ಸಾಮರ್ಥ್ಯ ತೋರಿದವರು ಜನವರಿ 15ರಂದು ನಾಗಾಲ್ಯಾಂಡ್‌ನ ಕೊಹಿಮಾದಲ್ಲಿ ಆಯೋಜನೆಯಾಗಿರುವ ರಾಷ್ಟ್ರೀಯ ಕ್ರಾಸ್ ಕಂಟ್ರಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅರ್ಹತೆ ಪಡೆದುಕೊಳ್ಳಲಿದ್ದಾರೆ.

ಹೆಚ್ಚಿನ ಮಾಹಿತಿಗೆ ಪುಂಡಲೀಕ ಗಾಯಕವಾಡ (7259202177) ಅಥವಾ ಮಣಿಕಂಠ ಗುಮ್ಮಗೋಳ (9353429540) ಅವರನ್ನು ಸಂಪರ್ಕಿಸುವಂತೆ ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಕಾರ್ಯದರ್ಶಿ ವಿಲಾಸ ನೀಲಗುಂದ ತಿಳಿಸಿದ್ದಾರೆ.


ಗೋಲು ಗಳಿಸಿದ ವಿಕ್ರಂ ಪ್ರತಾಪ್ ಸಿಂಗ್ (ಮಧ್ಯ) ಸಂಭ್ರಮ –ಐಎಸ್‌ಎಲ್ ಚಿತ್ರ

ಮುಂಬೈಗೆ ಭರ್ಜರಿ ಜಯ

ಫತೋರ್ಡ (ಪಿಟಿಐ): ಹೈದರಾಬಾದ್ ಎಫ್‌ಸಿ ಎದುರು ಕಳೆದ ಪಂದ್ಯದಲ್ಲಿ ಅನುಭವಿಸಿದ ಸೋಲಿನಿಂದ ಚೇತರಿಸಿಕೊಂಡ ಮುಂಬೈ ಸಿಟಿ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಸಾಧಿಸಿತು.

ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಎಟಿಕೆಎಂಬಿಯನ್ನು ಮುಂಬೈ 5–1ರಲ್ಲಿ ಮಣಿಸಿತು. ನಾಲ್ಕನೇ ನಿಮಿಷದಲ್ಲಿ ವಿಕ್ರಂ ಸಿಂಗ್ ಗಳಿಸಿದ ಗೋಲಿನೊಂದಿಗೆ ಮುನ್ನಡೆ ಸಾಧಿಸಿದ ಮುಂಬೈ ಮೊದಲಾರ್ಧದಲ್ಲೇ ಮೂರು ಗೋಲು ದಾಖಲಿಸಿತು.

25ನೇ ನಿಮಿಷದಲ್ಲಿ ವಿಕ್ರಂ ಸಿಂಗ್ ಮತ್ತೊಂದು ಗೋಲು ಗಳಿಸಿದರು. 38ನೇ ನಿಮಿಷದಲ್ಲಿ ಇಗರ್ ಆಂಗುಲೊ ಚೆಂಡನ್ನು ಗುರಿ ಮುಟ್ಟಿಸಿದರು. ದ್ವಿತೀಯಾರ್ಧದಲ್ಲಿ ಮುರ್ತಜಾ ಫಾಲ್ (47ನೇ ನಿ) ಮತ್ತು ಬಿಪಿನ್ ಸಿಂಗ್ (52ನೇ ನಿ) ಗೋಲು ಗಳಿಸಿದರು. ಎಟಿಕೆಎಂಬಿ ಸೋಲಿನ ಅಂತರವನ್ನು ವಿಲಿಯಮ್ಸ್ (60ನೇ ನಿ) ಕಡಿಮೆ ಮಾಡಿದರು.

ಭರವಸೆಯಲ್ಲಿ ಹೈದರಾಬಾದ್ ಎಫ್‌ಸಿ: ಬ್ಯಾಂಬೊಲಿಮ್‌ನಲ್ಲಿ ಗುರುವಾರ ಹೈದರಾಬಾದ್ ಎಫ್‌ಸಿ ಮತ್ತು ಜೆಮ್ಶೆಡ್‌ಪುರ ಎಫ್‌ಸಿ ತಂಡಗಳು ಸೆಣಸಲಿವೆ. ಹಾಲಿ ಚಾಂಪಿಯನ್ ಮುಂಬೈ ಸಿಟಿ ಎಫ್‌ಸಿಯನ್ನು ಮಣಿಸಿ ಆತ್ಮವಿಶ್ವಾದಲ್ಲಿರುವ ಹೈದರಾಬಾದ್ ತಂಡ ಮತ್ತೊಂದು ಗೆಲುವಿನ ಕನಸು ಹೊತ್ತುಕೊಂಡು ಕಣಕ್ಕೆ ಇಳಿಯಲಿದೆ.

ಡಿಸೆಂಬರ್‌ನಲ್ಲಿ ಹೈದರಾಬಾದ್ ತಂಡ ಒಟ್ಟು ಆರು ಪಂದ್ಯಗಳನ್ನು ಆಡಲಿದೆ. ಎಲ್ಲವೂ ಕಠಿಣ ಹಣಾಹಣಿಯಾಗಿದ್ದು ಒಂದೇ ಅಂಗಣದಲ್ಲಿ ನಡೆಯಲಿವೆ. ಓವೆನ್ ಕೊಯ್ಲೆ ಅವರ ಜೆಮ್ಶೆಡ್‌ಪುರ ಎಫ್‌ಸಿ ಹಿಂದಿನ ಪಂದ್ಯದಲ್ಲಿ ಎಫ್‌ಸಿ ಗೋವಾ ಎದುರು 3–1ರ ಜಯ ಗಳಿಸಿತ್ತು. ಆದ್ದರಿಂದ ಆ ತಂಡವೂ ಭರವಸೆಯಲ್ಲಿದೆ.

ನೆರಿಜಸ್ ವಲ್ಕಿಸ್ ಮತ್ತು ಜೋರ್ಡಾನ್ ಮರೆ ಅವರು ಜೆಮ್ಶೆಡ್‌ಪುರ ಎಫ್‌ಸಿ ಆಕ್ರಮಣ ವಿಭಾಗಕ್ಕೆ ಬಲ ತುಂಬಿದ್ದಾರೆ. ಅಲೆಕ್ಸ್ ಲೀಮಾ ಅವರ ಅನುಭವವೂ ತಂಡದ ಜೊತೆಗಿದೆ.